MICRO FILMED

BY

KARNATAKA STATE

ARCHIVES

1991

HRS. 15. APP. 90

Continuation of Jeevana
Seekshana - Kannada
Shala Pathrike - From Pg 264
of November 1890.

ದು, ಕಾರ್ಯಕ್ಕೆ, ಘಟಕಾವಯವ, ಲಬ್ಧಪ್ರಣಾಶ, ಘನೀಭವನಕ್ರಮ, ತ್ರಿಗುಣಾತೀತವಾದ, ಈ ಪದಗಳ ಅರ್ಥವನ್ನು ಪೂರ್ಣವಾಗಿ ವಿವರಿಸಿ ಹೇಳು.

೪. ಕೆಳಗೆ ಕಾಣಿಸಿದ ಶಬ್ದಗಳು ತಿಳಿಯುವಂತೆ ಟಿಪ್ಪಣಿಗಳನ್ನು ಬರಿ.

೧ ಸಂಯೋಜಕ ಪ್ರಮಾಣ, ೨ ಹರಿತ್ಪೀತವು, ೩ ನವರತ್ನ ಗಳು ಯಾವವು? ೪ ಕಿರಣ ವಕ್ರೀಭವನ, ೫ ಭೇರುಂಡನಾಗಿ ತುಂಡಿಸಿದನು, ೬ ಮಾಯೆಯಲ್ಲಿ ಕಂಬರನೋ? ಮಾರೀಚನೋ? ವಿದ್ಯುಜ್ಜಿಹ್ವನೋ? ೭ ಬಾಹ್ಯಪದಾರ್ಥಗಳನ್ನು ಮನಸ್ಸಿಗೆ ತಿಳಿಸುವ ದ್ವಾರಗಳು ಯಾವವು? ೮ ಬರ್ಹವೆಂದೆ, ೯ ಶ್ವಾಸೋಚ್ಛ್ವಾಸವು ಆಗುವಕ್ರಮ, ೧೦ ಪೂಜಕಾವಯವಗಳು ಯಾವವು; ಅವುಗಳವ್ಯಾಪಾರಗಳೇನು?

೯. ಕೆಳಗಿನ ಪದ್ಯಗಳ ಪದಬಿಚ್ಚಿಸಿ ಅನ್ವಯಿಸಿದಂತೆ ಭಾವಾರ್ಥ ಬರೀರಿ.

ಅಸಮಸಾಯಕನೆಂದು ಬಂಣಿಸರ್ನಿನ್ನನಿಂ ।
ಪಸಮಸಾಯಕನಾನೊ ನೀನೊನೋಡೆನುತ ಪ್ರೌಸ ।
ಮಸೆದು ವಿಕ್ಕಿಖಂಗಳಂಸುರಿದಂ ಸುಧನ್ವನಾತನ ಕಣೆಗಳಂಖಂಡಿಸಿ ॥
ಮಸು ಮತಿಗೆ ವೀರನೀನಸಮಸಾಯಕನಾದೊ ।
ಮುಸುರಿನಗೆಯ ಸಮಸಾಯಕ ರಾತ್ರಿಲೋಕದೋ ।
ಳ್ಪಸಿಯ ಬೇಡಿನುತ ಕೂರಂಬುಗಳ ನಂಬರಕೆ ತುಂಬಿದಂ ಕಂಬಿ
ರಾರಿ ॥೧೧॥

ಮೇಲಿನ ಪದ್ಯದಲ್ಲಿ ಇರುವ ಯಾವತ್ತು ಅವ್ಯಯಗಳನ್ನು ಬರಿ. ೧೦ ಕೆಳಗೆ ಗೆರೆಹಾಕಿದ ಶಬ್ದಗಳ ವ್ಯಾಕರಣಮಾಡು.

೧೦. ಜಗದಂತರಾತ್ಮ, ಜೂಡಬರ್ಹಶೋಭಿತ, ಚೇತನಸ್ವರೂಪ, ಬ ೪ ಯಲಭಂಜನೆ, ಪೆಟ್ಟುಮಂ ಕೊಡೆನಿಡಿದು, ಕಪೀಶ್ವರಂ ಪಲ್ಗರಿದು ಚೀರಲ್ಕ, ಮಣಿಕರ್ಣಕಾಸಲಿಲ, ಖಗೇಶ್ವರ, ತ್ರಿಸರಕೌಸ್ತುಭಕೇಯೂರಹಾರವಿಂ, ಇವುಗಳ ಅರ್ಥವನ್ನು ವಿಶೇಷವಾಗಿ ವಿವರಿಸು.

೧೧. ಟೆಂಟಣಿಸು, ಉದ್ಧತ, ಸವ್ಯಸಾಚಿ, ಪಾವಕ, ತಿಮಿರಸಾ ೪ ಯಕ. ಅಂದರೇನು? ೧೦, ೧೩, ೧೪ನೇ ಸಂಧಿಗಳಲ್ಲಿ ಕೃಷ್ಣನ ವಿಶೇಷಣಗಳೂ ಹೆಸರುಗಳೂ ನಿನಗೆ ಗೊತ್ತಿದ್ದಷ್ಟು ಬರಿ.

ವರ್ಗಣಿ ವಸೂಲು.*

				ರೂ.	ಆ.	ಪೈ.
ಬಾಗಲಕೋಟ	ತಾಲೂಕ	ಮಾಸ್ತರರಿಂದ	...	೪	೫	೬
ಹಾನಗಲ್ಲ	,,	,,	...	೬	೧೫	೦
ಹುಕ್ಕೇರಿ	,,	,,	...	೫	೪	೦
ಸಿಗ್ಗಾಂವ	,,	,,	...	೭	೧೫	೦
ಕುಮಠಾ	,,	,,	...	೧೪	೧	೦
ಇಂಡಿ	,,	,,	...	೭	೧೧	೦
ಬಾಗೇವಾಡಿ	,,	,,	...	೪	೧೦	೬
ಮುದ್ದೇಬಿಹಾಳ	,,	,,	...	೬	೪	೦
ಹೊನ್ನಾವರ	,,	,,	...	೭	೫	೦
ಇಂಗಳಗಿ ಖಾಸಗಿ ಶಾಳಾ ಮಾಸ್ತರ		ರೇವಣಸಿದ್ದಯ್ಯಾ				
ಚನವೀರಯ್ಯಾ	,,	,,	...	೦	೧೫	೦
ಸಂಪಗಾವ	,,	,,	...	೧೭	೧೫	೦
ಬಾದಾಮಿ	,,	,,	...	೬	೪	೦
ಹಿರೇಕೇರೂರ	,,	,,	...	೬	೫	೦
ಶಿರಸಿ	,,	,,	...	೮	೫	೦

---

*. ಇದರೊಳಗೇನಾದರೂ ತಪ್ಪು ಇದ್ದರೆ ಮಾಸ್ತರ ಜನರು ಅಗತ್ಯವಾಗಿ ತಿಳಿಸಬೇಕು.

ದು, ಕಾಬೊಗೆ, ಘಟಕಾವಯವ, ಲಬ್ಧಪ್ರಣಾಶ, ಭೌತೀಭವನಕ್ರಮ, ತ್ರಿಗುಣಾತೀತವಾದ, ಈ ಪದಗಳ ಅರ್ಥವನ್ನು ಪೂರ್ಣವಾಗಿ ವಿವರಿಸಿ ಬರೆಯಿರಿ.

೪. ಕೆಳಗೆ ಕಾಣಿಸಿದ ಶಬ್ದಗಳು ತಿಳಿಯುವಂತೆ ವಾಕ್ಯಗಳನ್ನು ಬರೆಯಿರಿ.

೧ ಸಂಯೋಜಕ ಪ್ರಮಾಣ, ೨ ಪರಿತ್ಯೇತವ್ಯ, ೩ ಸವರಣ ಇವುಗಳು ಯಾವವು? ೪ ಕಿರಣ ವಕ್ರೀಭವನ, ೫ ಭೇರುಂಡನಾಗಿ ತುಂಬಿಸಿದನು, ೬ ಪಾಯಿಯಲ್ಲಿರಂಬರಸೋ? ಮಾರೀಚನೋ? ವಿದ್ಯುಜ್ಜಿಹ್ವನೋ? ೭ ಬಾಹ್ಯಸಮಾರ್ಥಗಳನ್ನು ಮನಸ್ಸಿಗೆ ತಿಳಿಸುವ ದ್ವಾರಗಳು ಯಾವವು? ೮ ಬಿರ್ದಡುಂಬೆ, ೯ ವ್ಯಾಸೋಚ್ಛಿಷ್ಟವಪ್ರ ಆಗುವಕ್ರಮ, ೧೦ ಪಾಚಕ ಕಾವಯವಗಳು ಯಾವವು; ಅವುಗಳ ವ್ಯಾಪಾರಗಳೇನು?

೯. ಕೆಳಗಿನ ಪದ್ಯಗಳ ಪದ ಬಿಡಿಸಿ ಅನ್ವಯಿಸಿದಂತೆ ಭಾವಾರ್ಥ ಬರೆಯಿರಿ.

ಅಸಮಸಾಯಕನೆಂದು ಬಂಣಿಸರ್ನಿನ್ನನಿಂ |
ವಸಮಸಾಯಕನಾನೊ ನೀನೊನೋಡೆನುತ ಬೈಸ |
ಮುನೆಯು ವಿಭಿಖಂಗಳಂಸುರಿವಂ ಸುಧನ್ವನಾತನ ಕಣೆಗಳಂಬಿಂಡಿಸು ||
ಮುಸುಮುತಿಗೆ ವೀರನೀನಸಮಸಾಯಕನಾಬೊ |
ಮುಸುರೆನಗೆಯು ಸಹಸಸಾಯಕ ರಾತ್ರಿಂಚರೋಕ್ತಬೋ |
ಳ್ವಸಿಯ ಬೇಡೆನುತ ಕೂರಂಬುಗಳ ನಂಬರಕೆ ತುಂಬಿದಂ ಶಂಬ
ರಾರಿ ||೧||

ಮೇಲಿನ ಪದ್ಯದಲ್ಲಿ ಇರುವ ಯಾವತ್ತು ಅವ್ಯಯಗಳನ್ನು ಬರೆ. ೧೦ ಕೆಳಗೆ ಗೆರೆಹಾಕಿದ ಶಬ್ದಗಳ ವ್ಯಾಕರಣಮಾಡು.

೧೦. ಜಗದಂತರಾತ್ಮ, ಜಗೂಡಬರ್ಹಕೋಭಿತ, ಚೇತನಸ್ವರೂಪ, ಬ ೪
ಯಲಿಗೆಜನೆ, ಪೆಟ್ಟಮಂ ಕೊಡಿನಿಡಿದು, ಕಪೀಶ್ವರಂ ಕಲ್ಲಿರಿದು ಚೀರ
ಲ್ಕೆ, ಮಣಿಕರ್ಣಿಕಾಸಲಿಲ, ಖಗೇಶ್ವನ, ಶ್ರೀಸರಕೌಸ್ತುಭಕೇಯೂರ
ಹಾರಣಿಂ, ಇವುಗಳ ಅರ್ಥವನ್ನು ವಿಶೇಷವಾಗಿ ವಿವರಿಸು.

೧೧. ಟೆಂಟಣಿಸು, ಉದ್ಧತ, ಸವ್ಯನಾಚಿ, ಪಾವಕ, ತಿಮಿರಸು ೪
ಯಕ. ಅಂದರೇನು? ೧೦, ೧೪, ೧೭ನೇ ಸಂಧಿಗಳಲ್ಲಿ ಕೃಷ್ಣನ ವಿಶೇಷಣ
ಗಳೂ ಹೆಸರುಗಳೂ ನಿನಗೆ ಗೊತ್ತಿದ್ದಷ್ಟು ಬರೆ.

ವರ್ಗಣಿ ವಸೂಲು.

				ರೂ.	ಆ.	ಪೈ.
ಬಾಗಲಕೋಟ	ತಾಲೂಕ	ಮಾಸ್ತರಿಂದ	...	೪	೫	೬
ಹಾನಗಲ್ಲ	,,	,,	...	೬	೧೫	೦
ಹುಕ್ಕೇರಿ	,,	,,	...	೫	೪	೦
ಸಿಗ್ಗಾಂವ	,,	,,	...	೬	೧೫	೦
ಕುಮಟಾ	,,	,,	...	೧೪	೧	೦
ಇಂಡಿ	,,	,,	...	೩	೧೧	೦
ಬಾಗೇವಾಡಿ	,,	,,	...	೪	೧೦	೬
ಮುದ್ದೇಬಿಹಾಳ	,,	,,	...	೬	೪	೦
ಹೊನ್ನಾವರ	,,	,,	...	೬	೫	೦
ಇಂಗಳಗಿ ಖಾಸಗಿ ಶಾಲಾ ಮಾಸ್ತರ ದೇವಣಸಿದ್ದಯ್ಯಾ						
ಚನವೀರಯ್ಯಾ	,,	,,	...	೦	೧೫	೦
ಸಂಪಗಾವ	,,	,,	...	೧೬	೧೫	೦
ಬಾದಾಮಿ	,,	,,	...	೬	೪	೦
ಹಿರೇಕೇರೂರ	,,	,,	...	೬	೫	೦
ಶಿರಸಿ	,,	,,	...	೮	೪	೦

---

* ಇದರೊಳಗೇನಾದರೂ ತಪ್ಪು ಇದ್ದರೆ ಮಾಸ್ತರ ಜನರು ಅಗತ್ಯವಾಗಿ ತಿಳಿಸಬೇಕು.

ಕನ್ನಡ ಕಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ.....೧೫ ಆಣೆ.
ಒಂದು ಸಂಚಿಕೆಗೆ..... ೩ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ.	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಕಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಜಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವವಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಿಸಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

ವ್ಯವಸ್ಥಾಪಕ,
ಕನ್ನಡ ಕಾಲಾಪತ್ರಕ.

ನೋಟೀಸು.

ಈ ವರ್ಷದ ಕಾಲಾಪತ್ರಕದ ವರ್ಗಣಿ ಯಾರ ಕಡೆಗೆ ಉಳಿದಿರುವದೋ ಅವರು ನವೆಂಬರ ತಿಂಗಳ ಒಳಗಾಗಿ ತಿಲಸ್ಯ ಮಾಡದೆ ಕಳಿಸಿಕೊಡಬೇಕು.

ವ್ಯವಸ್ಥಾಪಕ,
ಕನ್ನಡ ಕಾಲಾಪತ್ರಕ.

ಶಿಕ್ಷಕರ ಪತ್ರಿಕೆ.

KANARESE
SCHOOL PAPER.

ಪುಸ್ತಕ ೭೫೫.] ವಿಜಾಪುರ ೧೮೯೯. [ಸಂಚಿಕೆ ೧೨.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು... ... ೨೬೨
೨. ಫ್ರೇಬೆಲನ ಶಿಶು-ಶಿಕ್ಷಣಪದ್ಧತಿ ೨೬೬
೩. ಶಾರದಾಸದನ ೨೭೪
೪ ಪತ್ರವ್ಯವಹಾರ ೨೮೩
೫. ಧಾರವಾಡ ಟ್ರೇನಿಂಗ ಕಾಲೇಜಿದ ಸರ್ಟಿಫಿಕೇಟು ಪರೀಕ್ಷೆಯ ಪ್ರಶ್ನೆಗಳು. ೧೮೯೦–ಕನ್ನಡ ವಿಷಯ ೨೮೬

CONTENTS.

1 Educational Intelligence and Useful Notes... ...
2. Froebel's Kinder-garten system ... ...
3. Sharada-Sadan ... ...
4. Correspondence ... ...
5. Dharwar Training College Certificate Examination, Question Papers 1890.–Kanarese ... ...

DHARWAR:
PRINTED AT THE KARNATIC BOOK DEPOT ...
1890.

ಪ್ರಕಟಣೆ.

ವಾಕ್ ಸಂಜೀವನೀ ಗುಳಿಗೆಗಳು.

ಅನೇಕ ಜನರು ಈ ಗುಳಿಗೆಗಳಿಂದ ಗುಣಹೊಂದಿದ್ದಾರೆ. "ಕಕ ಕಕಳ್ಳಕನ ನು ನು ನು ಮೂಕಬಾರದು" ಇಂಥಾ ವಾಚಾ ದೋಷವಿರಲಿ ಅದು ನಟ್ಟಗಾಗಲಿಕ್ಕೆ ಈ ಗುಳಿಗೆ ನಾಲ್ಕಾರು ದಿವಸ ಸೇವಿಸಬೇಕು. ಕ್ರಯ ೦ ರೂ. ೪ ಆ. ಬಾಂಗಿನಾಟಪೋಡು ವ್ಯಾಲ್ಯುಪೇಯಬಲ್ ಮೂಲಕ ಕ್ರಯದ್ರಾಗು ಬಿಟ್ಟೂ ಕೂಡಿ ೦ ರೂ. ೧೦ ಆ. ಗುಳಿಗೆ ಸೇವಿಸುವವರ ವಯಸ್ಸನ್ನು ತಿಳಿಸಬೇಕು. ಪಿರಿ, ಕೊಲ್ಲಾಪೂರ, ಬಸೋಬಿ, ಸೊಲ್ಲಾಪೂರ, ಮುಂತಾದ ಕಡೆಯ ಪ್ರಾಯುವರ್ಷ ೧೦ | ೨೯ | ೩೪ | ೪೦ | ಈ ಪ್ರಕಾರ ಬೇರೆ ಬೇರೆ ವಯಸ್ಸಿನವರು ಇದರಿಂದ ಗುಣಹೊಂದಿದ್ದಕ್ಕೆ ನಮಗೆ ಅನೇಕಪತ್ರಗಳು ಬಂದವೆ. ಅವುಗಳಲ್ಲಿ ಒಂದು ಮರಾಠೀ ಕಾರ್ಡಿನ ಅಭಿಪ್ರಾಯವೇನಂದರೆ:--

"ಸಾ. ನ. ವಿ. ವಿ. ಪತ್ರಬರೆಯಲಿಕ್ಕೆ ನಾನು ಅನೇಕ ಪಡು ಪಡೇನೆಂದರೆ, ಇಂದಿಗೆ ಬಹುವರೆ ತಿಂಗಳ ಮೊದಲು ನೀವು ಕಳುಹಿಸಿದ ವಾಕ್ಸಂಜೀವನೀ ಗುಳಿಗೆಯಿಂದ ಎಷ್ಟೋ ಗುಣವಾಗಿದೆ. ಆದಕಾರಣ, ಇನ್ನೊಂದು ಬಾಟ್ಲಿ ಗುಳಿಗೆ ವಿಪಿಮಾಡಿ ಕಳುಹಿಸಬೇಕು. ಇಂಥ ಔಷಧಗಳನ್ನು ತಯಾರಿಸಿ ಜನರ ಮೇಲೆ ಉಪಕಾರ ಮಾಡುವ ನಿಮಗೆ ದೇವರು ಕಲ್ಯಾಣ ಮಾಡಲಿ ಇಂತಿ ವಿಜ್ಞಾಪನೆ.

ನಾನೋ ನಾವಳರಾವುದೇವ, ಪೈಸ್ಕೂಲು ಅಪಮ್ಮನವನಗರ."

ಈ ಗುಳಿಗೆಗಳನ್ನು ತಯಾರು ಮಾಡಿ ಕಳುಹಿಸಿಕೊಡುವವರ ವಿಳಾಸ:—

ಬೀಳಗಿ
ಜಿ. ಬೀ—ಎ—೯೦. } ರಾಮಕೃಷ್ಣ ಸುಂದರಂಗ ಮಾಜೀಸ್ಕೂಲ ಪಾಸ್ಟರ ಬೀಳಗಿ, ತಾಲೂಕ ಸಿದ್ದಾಪುರ, ಜಿಲ್ಲಾ ಉತ್ತರ ಕನಾಡ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತುಂ ಪ್ರತಿವಾಸದಾಮಗೊಲವಿಂವೀಪತ್ರಮಂ ಮುನ್ನಿಸಿ ॥
ನಯವಿಂವಿತ್ತಪಿವೋದುವರ್ಗೆ ಸುಗುಣಂ ತೋರಲ್ಕ್ಕಿಕೈಕೊಂಬುದೈ ।
ಪಯಿಯಿಂ ದೋಷವತಿದ್ದನೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೩೫.] ಡಿಸೆಂಬರ ೧೮೯೦. [ಸಂಚಿಕೆ ೧೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಸನ ೧೮೮೯ । ೯೦ನೇ ಇಸ್ವಿಯ ನಮ್ಮ ಇಲಾಖೆಯ ವಿದ್ಯಾ ಖಾತೆಯ ರಿಪೋರ್ಟು ಪ್ರಸಿದ್ಧವಾಗಿದೆ. ಈ ರಿಪೋರ್ಟಿನಿಂದ ತಿಳಿಯುವ ಸಂಗತಿಗಳು ಕೆಳಗಿನ ಕೋಷ್ಟಕದಲ್ಲಿ ಕಾಣಿಸಿವೆ.

	೧೮೮೮,೮೯	೧೮೮೯,೯೦
ಒಟ್ಟು ಶಾಲೆಗಳು.	೧೧,೬೩೨	೧೧,೬೧೬
ಗಂಡು ಹುಡುಗರು.	೫,೭೬,೦೪೯	೫೩೦,೭೪೦
ಹೆಣ್ಣು ಹುಡುಗರು.	೬೦,೪೦೪	೬೧,೪೪೭
ಒಂಟೂ ಮಂಡುಗರು.	೫,೪೭,೪೩೨	೫೯೧,೬೭೭
ಶೇ ಹುಚ್ಚನ್ನ.	೧೧,೫೪,೭೪೩	೧೭,೧೬,೪೫೯
ಸರಕಾರದವರಿಂದಾದ ಖರ್ಚು.	೫೪,೫೬,೬೭೪	೫೬,೬೭,೪೫೦

ಇತ್ತೀಚಿಗೆ ಎಜ್ಯುಕೇಶನ್ ಕಮಿಶನ್ನವರು ಸಿಫಾರಸ್ಸು ಮಾಡಿದಂತೆ ಹಾಸಗೀ ಶಾಲೆಗಳಿಗೆ ಸರಕಾರದಿಂದ ಹೆಚ್ಚಿಗೆ ಉತ್ತೇಜನವು ಸಿಗುತ್ತಿರುವದರಿಂದ ಶಾಲೆಗಳ ಸಂಖ್ಯೆಯೂ ಬಹಳ ಹೆಚ್ಚಾಗುತ್ತನಪೆದದೆ. ಶಾಲೆಗೆ ಹೋಗಿ ಕಲಿಯುವ ವಯಸ್ಸಿನ ೧೦೦ ಹುಡುಗರಲ್ಲಿ ೨೯.೬ ಗಂಡು ಹುಡುಗರೂ ೧೦೦ ಹುಡಿಗೆಯರಲ್ಲಿ ೩.೩೪ ಹುಡಿಗೆಯರೂ ಕಲಿಯುತ್ತಾರೆ. ಮತ್ತು ಶಾಲೆಗೆ ಹೋಗುವ ವಯಸ್ಸಿನ ಗಂಡು ಹೆಣ್ಣು ಕೂಡಿ ೧೦೦ ವಿದ್ಯಾರ್ಥಿಗಳಲ್ಲಿ ೧೬.೮೪ ಹುಡುಗರು ಮತ್ತು ಕಲಿಯುತ್ತಾರೆ. ಇನ್ನೂ ಕಲಿಯುವವರ ಸಂಖ್ಯೆಯು ಬಹಳ ಕಡಿಮೆಯಿದೆ. ಇವರ ಕಡಿಗೆ ಯಾವತ್ತು ಸ್ವದೇಶಾಭಿಮಾನಿಗಳು ಲಕ್ಷ್ಯಕೊಡತಕ್ಕದ್ದು.

ಧಾರವಾಡ ಟ್ರೇನಿಂಗಕಾಲೇಜಿನ ಪಾರ್ಸಿಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟು ಕೊಡುವ ಸಮಾರಂಭವು ತಾರೀಖು ೩೦ ನವೆಂಬರ ಸಂ ೧೮೯೦ನೇ ಇಸವಿಯು ದಿವಸ ಸಾಯಂಕಾಲಕ್ಕೆ ಕಾಲೇಜಿನ ಎದುರಿಗಿರುವ ವಿಸ್ತಾರವಾದ ಪಟಾಂಗಣದಲ್ಲಿ ಆಯಿತು. ಆ ಸಮಾರಂಭಕ್ಕೆ ಅಲಿಜಾಬಹಾದ್ದೂರ ಸವಣೂರ ನಬಾಬಸಾಹೇಬರು, ಮಿ. ಪೆಕ್ಸ್ವೆನಫೀಸಾಹೇಬ ಸಿವಿಲ ಸರ್ಜನ, ಮಿ. ಎಜ್ಯುಕೇಶನಲ ಇನಸ್ಪೆಕ್ಟರಸಾಹೇಬ ದಕ್ಷಿಣಭಾಗ, ರಾಮಬಹಾದ್ದೂರ ತ್ರಿಮುಲರಾವ ಇನಾಮದಾರ ಮುಂತಾದ ಅನೇಕ ಸಜ್ಜನ ಗೃಹಸ್ಥರು ಬಂದಿದ್ದರು. ಅಧ್ಯಕ್ಷಸ್ಥಾನವನ್ನು ಅಲಿಜಾಬಹಾದ್ದೂರ ಸವಣೂರ ನಬಾಬ ಸಾಹೇಬರು ಸ್ವೀಕರಿಸಿದ್ದರು.

ಮೊನಚು ಕಾಲೇಜಿನ ಪ್ರಿನ್ಸಿಪಾಲರಾದ ರಾ. ಸಾ. ಕರಂ
ದೀಕರ ಇವರು ಕಾಲೇಜವು ಸ್ಥಾಪನೆಯಾದಂದಿನಿಂದ ಈ ಮೊ
ತ್ತಿನವರೆಗೆ ನಡೆದ ಸಂಗತಿಗಳನ್ನು ಸವಿಸ್ತಾರವಾಗಿ ಹೇಳಿದರು.
ಅವರ ತಾತ್ಪರ್ಯವೇನೆಂದರೆ:—

" ಈ ಕಾಲೇಜವು ಸನ ೧೯೫೬ನೇ ಇಸವಿಯಲ್ಲಿ ನಾರ್ಮ
ಲ್ ಕ್ಲಾಸೆಂಬ ಹೆಸರಿನಿಂದ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು.
ಮುಂದೆ ಸನ ೧೯೬೦ನೇ ಇಸವಿಯಲ್ಲಿ ಅದು ಮೆ. ಎಜ್ಯುಕೇಶ
ನಲ್ ಇನ್‌ಸ್ಪೆಕ್ಟರರ ಸವರ ಸ್ಟೇಶನವಾದ ಬೆಳಗಾವಿಗೆ ಬಯ್ಯಲ್ಪ
ಟ್ಟಿತು. ಸನ ೧೯೬೬ನೇ ಇಸವಿಯಲ್ಲಿ ವಿದ್ಯಾಖಾತೆಯ ಅಧಿ
ಕಾರಿಗಳು ಕಾಲೇಜಿನ ಗೌರವವನ್ನು ಮಹತ್ವವನ್ನೂ ಲ
ಕ್ಷಿಸಿ ಅದರಲ್ಲಿನ್ನ ವಾಸ್ತರಜನರ ಸಂಬಳಗಳನ್ನು ಹೆಚ್ಚು ಮಾ
ಡಿ ಅದರ ಸ್ಥಿತಿಯನ್ನು ಸುಧಾರಿಸಿದರು; ಮತ್ತು ೧೯೭೦ನೇ ವ
ರ್ಷದಲ್ಲಿ ಅದಕ್ಕೆ ಪ್ರ್ಯಾಕ್ಟೀಸಿಂಗಸ್ಕೂಲನ್ನು ಜೋಡಿಸಿದರು.
ಧಾರವಾಡ ಪಟ್ಟಣವು ಮುಂಬಯಿ ಇಲಾಖೆಗೆ ಸೇರಿದ ಕರ್ನಾಟ
ಕ ಪ್ರಾಂತದ ಮಧ್ಯಸ್ಥಳವಾಗಿರುವದರಿಂದ ಉಂಥ ವಿದ್ಯಾಲಯವು
ಇಲ್ಲಿಯೇ ಇರತಕ್ಕದ್ದು ಚಿತವೆಂದು ಗ್ರಹಿಸಿ ಈ ಜಿಲ್ಲೆಯ ಆಗಿನ
ಪೆಸರಾದ ಕಲೆಕ್ಟರ ಮೆ. ರಾಬರ್ಟಸನ್ ಸಾಹೇಬರು ಬಹು ಶ್ರ
ಮಪಟ್ಟು ೫೦,೦೦೦ ರೂಪಾಯಿಗಳನ್ನು ವರ್ಗಣಿಯಿಂದ ಕೂ
ಡಿಸಿ ಈ ಭವ್ಯವಾದ ಇಮಾರತಿಯನ್ನು ಕಟ್ಟಿಸಿದರು; ಮತ್ತು
ಸನ ೧೯೭೫ನೇ ಇಸವಿಯಲ್ಲಿ ಕಾಲೇಜವನ್ನು ಬೆಳಗಾವಿಯಿಂದ
ಧಾರವಾಡಕ್ಕೆ ತಿರಿಗಿ ತರಿಸಿದರು. ಆವರೆ ಹಿಂದಿನ ಎರಡು ಮೂ
ರು ವರ್ಷಗಳ ಲಾಗಾಯಿತು ಕಾಲೇಜದಲ್ಲಿ ಕಲಿತು ಮೇಲ್ತರನ
ಪರ್ಟಿಫಿಕೇಟುಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಅಧೊತ್ತಿಗೆ ಸ್ಥಿ
ಳಗಳು ಸಿಗವ್ದರಿಂದ ಎಷ್ಟೋ ಟ್ರೇನ್ಡ ಜನರು ಕೈಮುಚ್ಚಿ

ಕೊಂಡು ಮುನಿಯುಪ್ಪೆ ಕೂಡ್ಬೇಕಾಗಿತ್ತು: ಇಂಥ ಸ್ಥಿತಿಯನ್ನು ಕಂಡು ಕಾಲೇಜನನ್ನು ತೆಗೆದು ಈ ಅನಾವೃತಿಯನ್ನು ಪುಚ್ಚ ಪ್ರಮಾಣದಲ್ಲಿ ಆಸ್ಪತ್ರೆಯನ್ನೂ ಮಾಡಬೇಕೆಂದು ಆಲೋಚನೆಯು ಅವೇಮೀರೆಗೆ ಪತ್ರವ್ಯವಹಾರವು ನಡೆಯಿತ್ತು. ಆಷ್ಟರಲ್ಲಿ ನಮ್ಮ ಸುದೈವದಿಂದ ಸರ್ ಗಿಲ್ಬರ್ಟ್‌ರೇ ಇಸವಿಯಲ್ಲಿ ರಾಜಬಹಾದೂರ ಪಟವರ್ಧನ ಸಾಹೇಬರವರು ಆಕ್ಟಿಂಗ ಜನರಲ್ ಕ್ವರರಾಗಿ ಇಲ್ಲಿಗೆ ಬಂದು ನಡೆದಿರುವ ಆಲೋಚನೆಯನ್ನು ನೋಡಿ ದಕ್ಷಿಣ ಭಾಗದ ದುರ್ದೈವಕ್ಕೆ ಕಳವಳಗೊಂಡು ಈ ಕಾಲೇಜವನ್ನು ತೆಗೆದು ಮಾಕುವದು ಸರಿಯಲ್ಲಿಂತಲೂ ದಕ್ಷಿಣ ಭಾಗದಲ್ಲಿ ಟ್ರೇನ್ಡ ಜನರ ಅವಶ್ಯಕತೆಯು ಬಹಳವಾಗಿರುತ್ತದೆಂತಲೂ ಸಿದ್ಧಮಾಡಿ ಕೊಟ್ಟದ್ದಲ್ಲದೆ ಇದ್ದ ಹಣವಲ್ಲಿಯೇ ಕೆಲಸವಿಲ್ಲದೆ ಕೂತಿರುವ ಟ್ರೇನ್ಡ ಜನರ ಹೊರ್ತು ಎಷ್ಟೇ ಟ್ರೇನ್ಡ ಜನರನ್ನು ದಕ್ಷಿಣ ಭಾಗವಲ್ಲಿ ಕೆಲಸಕ್ಕೆ ಹಚ್ಚಬಹುದೆಂತಲೂ ಮೇಲಧಿಕಾರಿಗಳಿಗೆ ಮನಗಾಣಿಸಿಕೊಟ್ಟು ಈ ಕಾಲೇಜವನ್ನು ಸ್ಥಿರಗೊಳಿಸಿದರು.

ಕಂತಕ್ಕೆ ಪ್ರಾಣಬಂದಂಥ ಈ ಕಾಲೇಜಕ್ಕೆ ಮೆ. ಪಟವರ್ಧನ ಸಾಹೇಬರು ಅಮೃತ ಸಂಜೀವನಿ ಗುಳಿಗೆಗಳನ್ನು ಕೊಟ್ಟು ಬದುಕಿಸಿಕೊಂಡವರಿಂದ ಈ ಸಮಾರಂಭವನ್ನು ಈ ಹೊತ್ತು ನಾವು ಕಂಡೆವು. ಇಲ್ಲದಿದ್ದರೆ ಇಲ್ಲಿ ನಾವು ಪುಚ್ಚರನ್ನೂ ಬೇನೆಯವರನ್ನೂ ಮಾತ್ರ ಕಾಣುತ್ತಿದ್ದೆವು. ಈ ಕಾಲೇಜವನ್ನು ಸ್ಥಿರ ಪಡಿಸಿದ್ದಕ್ಕಾಗಿ ರಾವಬಹಾದ್ದೂರ ಪಟವರ್ಧನ ಸಾಹೇಬರ ಉಪಕಾರವನ್ನು ನಾವೆಲ್ಲರು ನೆನಿಸುವದು ತಕ್ಕದಾಗಿದೆ. ಕಾಲೇಜವು ಸ್ಥಾಪನವಾದಾರಭ್ಯ ಈ ಹೊತ್ತಿನವರೆಗೆ ಪಾಸಾದ ಟ್ರೇನ್ಡ ಜನರ ಸಂಖ್ಯೆ ೩೬೪ ಇರುತ್ತದೆ. ನಡದ ವರ್ಷ

ಬಳ್ಳಿ ನೇಕನಾಮದಾರ ಗವರ್ನರ ಸಾ॥ರು ಈ ಪಟ್ಟಣಕ್ಕೆ ಬಂದಾಗ್ಗೆ ಕಾಲೇಜಿನ ವ್ಯವಸ್ಥೆಯನ್ನು ನೋಡಿ ಸಮಾಧಾನ ಪಟ್ಟರು. ಅವರ ಆಗಮನದ ಸಂಧಿಗೆ ನಮ್ಮ ಜಿಲ್ಲೆಯ ಕಲೆಕ್ಟರ ಮಿ. ವುಮಿಂಟರ ಸಾ॥ರವರ ಪ್ರೋತ್ಸಾಹನದಿಂದ ಬಂದು ವರ್ಕಶಾಪ್ಪವು ಸ್ಥಾಪಿಸಲ್ಪಟ್ಟಿತು. ಆ ಸಾ॥ರೇ ಈ ವರ್ಕಶಾಪ್ಪಿನ ಮೂಲ ಉತ್ಪಾದಕರು; ಅವರು ಹಚ್ಚಿದ ಸಸಿಯು ಮಿ. ಕ್ಯಾಲಿಬೋವೆ ಸಾ॥ರವರ ದಯಾವೃಷ್ಟಿಯಿಂದ ಬೆಳೆಯುತ್ತಲಿದೆ. ವರ್ಕಶಾಪ್ಪಿನಲ್ಲಿ ಕಮ್ಮಾರ ಬಡಿಗರ ಕೆಲಸಗಳನ್ನು ಕಲಿಸುವ ಎರಡು ವರ್ಗಗಳುಂಟು, ಅವುಗಳಲ್ಲಿ ಸವ್ಯಕ್ಕೆ ೨೫ ಜನ ವಿದ್ಯಾರ್ಥಿಗಳು ಕಲಿಯುತ್ತಾರೆ. ಅವರು ಮಾಡಿದ ಕೆಲಸವು ತಪ್ಪಿಲ್ಲರ ಕಣ್ಣಿಗೆ ಹಾಕುವ ಸಲುವಾಗಿ ಇಲ್ಲಿ ಇಟ್ಟಿದೆ. ಈ ವರ್ಷ ಪರೀಕ್ಷೆಗೆ ನಿಂತ ೭೫ ಹುಡುಗರಲ್ಲಿ ೬೯ ಜನ ವಿದ್ಯಾರ್ಥಿಗಳು ಪಾಸಾಗಿರುತ್ತಾರೆ."

ಈ ಮೇರೆಗೆ ಭಾಷಣವಾದ ಮೇಲೆ ಪ್ರಸಂಗಕ್ಕೆ ಸರಿಯಾಗಿ ರಚಿಸಲ್ಪಟ್ಟ ಕನ್ನಡ, ಸಂಸ್ಕೃತ ಶ್ಲೋಕಗಳನ್ನು ಕಾಲೇಜಿನ ಕೆಲವು ವಿದ್ಯಾರ್ಥಿಗಳು ಅಂದರು. ಇಬ್ಬರು ವಿದ್ಯಾರ್ಥಿಗಳು ಗರಡೀ ಸಾಧಕವನ್ನು ಬಳ್ಳೇ ಚಪಲತೆಯಿಂದ ಮಾಡಿ ತೋರಿಸಿದರು. ಈ ಸಮಾರಂಭಕ್ಕೆ ಬಂದ ಎಲ್ಲ ಸಭ್ಯಗೃಹಸ್ಥರು ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕಂಡುಬಂದ ಸಭ್ಯತನವನ್ನೂ, ಆರೋಗ್ಯವನ್ನೂ ಉತ್ಸುಕತೆಯನ್ನೂ, ಬಡಿಗತನ ಕಮ್ಮಾರಕಿ ಚಿತ್ರಕಲಾ ಇವುಗಳನ್ನು ಕೈಕೊಂಡ ವಿದ್ಯಾರ್ಥಿಗಳು ಮಾಡಿದಂಥ ತರತರದ ಬಡಿವಿಗಳನ್ನೂ ಮನೋಹರವಾದ ಚಿತ್ರಗಳನ್ನೂ, ಕಾಲೇಜಿನ ಪಟಾಂಗಣದಲ್ಲಿ ಕಂಡುಬಂದ ಮೇಲಾದ ವ್ಯವಸ್ಥೆಯನ್ನೂ ಸ್ವಚ್ಛತೆಯನ್ನೂ ಮೆಚ್ಚಿಕೊಂಡರು ಸೊಬಗ

ನ್ನು ನೋಡಿ ಬಹು ಸಂತೋಷಪಟ್ಟರು. ತದನಂತರ ಪರೀಕ್ಷೆಯಲ್ಲಿ ಪಾಸಾಗಿ ಕೆಲಸದ ಮೇಲೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟು ಕೊಡುವ ಕೆಲಸವು ಸಾಗಿತು. ಅಷ್ಟರಲ್ಲಿಯೇ ಮಳೆ ಬರುವ ಚಿನ್ಹವು ತೋರಿದ್ದರಿಂದ ನೆರೆದ ಜನರಿಗೆ ಹಾರತುರಾಯಿ ವೀಳ್ಯ ಮುಂತಾದವುಗಳನ್ನು ಕೊಟ್ಟು ಸಮಾರಂಭವನ್ನು ಮುಗಿಸಿದರು.

ಮುಂಬಯಿಗೆ ಇಂದೂರಿಂದ ರಾ. ರಾ. ನಾರಾಯಣ ಗೋಪಳರಾವ ಎಂಬ ಹೆಸರಿನ ಗೃಹಸ್ಥರು ಬಂದಿರುತ್ತಾರೆ. ಅವರು ಕಾಜನ್ನು ಹಲ್ಲಿನಿಂದ ಕಡಿದು ತರ ತರದ ಆಕೃತಿಗಳನ್ನು ಪುಟ್ಟಿಸುವದು, ಮಾವಿನ ಹಣ್ಣನ್ನು ಇದ್ದ ಹಾಗೆಯೇ ಇಟ್ಟು ಅದರೊಳಗಿನ ಕೋವಿಗೆ ದಾರವನ್ನು ಕಟ್ಟುವದು, ಕಲ್ಲಿಣ್ಣೆಯ ದೀವಿಗೆಯು ಉರಿಯುತ್ತಿರುವಾಗ್ಗೆ ಅದರೊಳಗಿಂದ ಕಾರಂಜಿಯನ್ನು ಪುಟಿಸುವದು ಮುಂತಾದ ಅನೇಕ ಚಮತ್ಕಾರಗಳನ್ನು ಮಾಡಿತೋರಿಸಿದರು.

ಎಡಿಸನ್ ಎಂಬ ಗೃಹಸ್ಥನು ಬಂದು ಮಾತಾಡುವ ಗೊಂಬೆಯನ್ನು ಮಾಡಿ ಅದರ ಹೊಟ್ಟೆಯಲ್ಲಿ ಫೋನೋಗ್ರಾಫ ಎಂಬ ಯಂತ್ರವನ್ನು ಇಟ್ಟಿದ್ದಾನೆ. ಈ ಯಂತ್ರಕ್ಕೆ ಕೀಲಿಕೊಟ್ಟ ಕೂಡಲೆ ಅದರಲ್ಲಿ ಸಂಗ್ರಹಿಸಲ್ಪಟ್ಟ ಎಲ್ಲ ಮಾತುಗಳನ್ನು ಆ ಗೊಂಬೆಯು ಉಸುರುವದು. ಆಗ್ಗೆ ಆ ಗೊಂಬೆಯು ಬಂದು ಸಜೀವ ಪ್ರಾಣಿಯು ಮಾತಾಡುವಂತೆ ತೋರುವದು.

ಅಮೇರಿಕ ಖಂಡದಲ್ಲಿರುವ ವಾಷಿಂಗಟನ್ನ ಎಂಬ ಪಟ್ಟಣದಲ್ಲಿ ಕೆಳಗೆ ಬರೆವ ಹೊಸ ಯುಕ್ತಿಗಳನ್ನು ಹುಡಿಕಿ ತೆಗೆದಿದ್ದಾರೆ:—

ಬೂದು ಗೊಂಬೆಯು ಇರುತ್ತದೆ. ವಿಶುಪ್ರೋಷಣವ ವಿಸೆಯ ಲ್ಲಿ ಹಾಲನ್ನು ಹಾಕಿ ಅವರ ರಬ್ಬರಿನ ಕೊಳವೆಯ ತುದಿಯನ್ನು ಆ ಗೊಂಬೆಯ ಬಾಯಲ್ಲಿ ಕೊಟ್ಟರೆ ಅದು ಪಿಲ್ಲಪಿಲ್ಲಗೆ ಆ ಹಾಲನ್ನೆಲ್ಲ ಜುರುಜುರು ಸೀಪಿಕೊಂಡು ಬಿಡುತ್ತದೆ.

ಬೂದು ಆಕಳು ಅದೆ. ಅವರ ಮುಂದೆ ಹುಲ್ಲು ನುರುಗು ಮುಂತಾದವುಗಳನ್ನು ಇಟ್ಟರೆ ಅದು ತಿನ್ನುತ್ತದೆ. ಅವರ ಹೊ ಲೆಯನ್ನು ಹಿಂಡಿದರೆ ಹಾಲು ಬರುತ್ತದೆ. ಅದು ಕಣ್ಣಿಗೆ ಒಹು ಚಂದ ಕಾಣಿಸುವದು.

ಬೂದು ಬೆಕ್ಕು ಅದೆ. ಅದು ಸಜೀವ ಪ್ರಾಣಿಯಂತೆ 'ಮ್ಯಾ ವ, ಮ್ಯಾವ' ಎಂದು ಬವರುತ್ತ ಅತ್ತಿತ್ತ ಓಡ್ಯಾಡುತ್ತದೆ. ಇದ ರಿಂದ ಮನೆಯೊಳಗಿನ ಇಲಿಗಳ ಕಾಟವು ಕಡಿಮೆಯಾಗುತ್ತದೆ.

ಬೂದು ಕೋಳಿಯನ್ನು ಮಾಡಿದ್ದಾರೆ. ಗೂಡಿನಲ್ಲಿರುವಾಗ್ಗೆ ಯಂತ್ರವನ್ನು ತಿರಿವಿದರೆ, ಅದು ಹೊರಗೆ ಬಂದು ಬೂದು ಕತ್ತಿ ಯನ್ನು ಹಾಕಿ ತಿರಿಗಿ ಒಳಗೆ ಹೋಗುತ್ತದೆ.

ಮೂಗನ್ನು ತಿದ್ದುವ ಬೂದು ಯಂತ್ರವದೆ. ರಾತ್ರಿ ಮಲಗು ವಾಗ್ಗೆ ಮೂಗಿಗೆ ತುಸು ಎಣ್ಣಿ ಹಚ್ಚಿ ಈ ಯಂತ್ರದ ಪ್ರಯೋ ಗ ಮಾಡಿದರೆ, ಕೆಲವು ದಿವಸಗಳಲ್ಲಿಯೇ ಮೂಗು ಸಂಪಿಗೆಯ ನೆನೆಯಂತೆ ಸರಳವಾಗುತ್ತದಂತೆ!!!

ಹೈದರಾಬಾದಿನಲ್ಲಿ ಶ್ರೀಮಂತ ಮನೆತನದ ಹೆಂಗಸರ ಕರಿ ತಾಗಿ ಬೂದು ಶಾಲೆಯು ಸ್ಥಾಪಿಸಲ್ಪಟ್ಟಿದೆ. ಅದರಲ್ಲಿ ಸದ್ಯಕ್ಕೆ ೧೪೫ ವಿದ್ಯಾರ್ಥಿನಿಯರು ಕಲಿಯುತ್ತಾರೆ.

ಚಿತಗಾಂಗವಲ್ಲಿ ಕೆಲವು ಬಂಗಾಲದ ಕಮ್ಮಾರರು ಕೂಡಿ ಮೆ ತ್ತೊಬ್ಬರ ಸಹಾಯವಿಲ್ಲದೆ ಬಂದು ಹಡಗವನ್ನು ಕಟ್ಟಿದ್ದಾರೆ. ಅದಕ್ಕೆ ೫೫,೦೦೦ ರುಪಾಯಿಗಳು ಹಿಡಿದಿರುತ್ತವೆ. ಈ ದೇಶದ ಕಮ್ಮಾರರು ಕಟ್ಟಿದ ಹಡಗವೆಂದರೆ ಇದೇ ಮೊದಲನೇದು.

ಇಂಗ್ಲಂದದ ಉತ್ತರ ಭಾಗದಲ್ಲಿ "ಇಲಾಮಕಿಯರ" ಎಂ ಬ ಜಾತಿಯ ಕಲ್ಲು ಸಿಕ್ಕಿರುತ್ತದೆ. ಅದು ಹವೆಯು ಕೆಟ್ಟಹಾಗೆ ಕಪ್ಪಾಗುತ್ತದೆ, ಶುದ್ಧವಾದ ಹಾಗೆ ಬಿಳೇದಾಗುತ್ತದೆ.

ಹಿಂದುಸ್ತಾನದ ಪ್ರಾಚೀನ ಕಲಾಕೌಶಲ್ಯಗಳ ಸಂರಕ್ಷಣಕ್ಕಾಗಿ ಲಂಡನ್ ಪಟ್ಟಣದಲ್ಲಿ ಒಂದು ಸಂಘವು ಸ್ಥಾಪನೆಯಾಗಿದೆ.

ಹದಿನಾರು ವರ್ಷದ ವಯಸ್ಸು ಆಗದ ಹುಡುಗರು ತಂಬಾಕವನ್ನು ಸೇದಕೂಡದೆಂಬ ಬಗ್ಗೆ ಕಾಯಿದೆಯಾಗಬೇಕೆಂದು ಫ್ರೆಂಚ ಜನರು ತಮ್ಮ ಸರಕಾರಕ್ಕೆ ಬಂದು ಅರ್ಜಿಯನ್ನು ಮಾಡಿದ್ದಾರೆ.

FROEBEL'S KINDER-GARTEN SYSTEM.

ಫ್ರೋಬೆಲನ ಶಿಶು-ಶಿಕ್ಷಣಪದ್ಧತಿ.

(ಎಳಸನೇ ಪುಟದಿಂದ ಮುಂದೆ ಸಾಗಿದ್ದು.)



ನೋಡಿರಿ ಇಲ್ಲಿ ಒಂದು ಪೆಟ್ಟಿಗೆ ಅದೆ. ಇವರಲ್ಲಿ ಆರು ಬೇರೆ ಬೇರೆ ಬಣ್ಣದ ಚೆಂಡುಗಳವೆ. ಇವೇ ಆರು ಬಣ್ಣಗಳು ಇಂದ್ರಧನುಷ್ಯದಲ್ಲಿ ಮುಖ್ಯವಾಗಿ ತೋರುತ್ತವೆ. ಈ ಚೆಂಡು ಒಂದೀ ಬಣ್ಣದ್ದು, ಇದು ನೀಲೀ ಬಣ್ಣದ್ದು, ಇದು ಹಸುರು ಬಣ್ಣದ್ದು,

ಇವು ಹಳದೀ ಬಣ್ಣದ್ದು, ಇದು ಕಿತ್ತಳೀ ಬಣ್ಣದ್ದು, ಇದು ಕೆಂಪು ಬಣ್ಣದ್ದು ಇವರಲ್ಲಿರುವ ಆರು ಹುಡಿಗಳಾದರೂ ಇವೇ ಆರು ಬಣ್ಣವಿರುತ್ತವೆ. ಇವುಗಳ ಹೊರ್ತು ಇವು ನೋಡಿರಿ, ಎರಡು ಕಂಭಗಳೂ ಸಣ್ಣ ಸಣ್ಣ ಆರು ತೂತುಗಳನ್ನು ತೆಗಿದಂಥ ಬುದು ಅಷ್ಟಪಟ್ಟಯೂ ಅವೆ. ಇವುಗಳ ಉಪಯೋಗವನ್ನೂ ಉಪಯೋಗಿಸುವ ಕ್ರಮವನ್ನೂ ಮುಂದೆ ಹೇಳುವೆನು. ಈ ಪೆಟ್ಟಗೆಯೊಳಗಿನ ಬಗೆಬಗೆಯ ಬಿಡಿವೆಗಳನ್ನೆಷ್ಟೇ ಸವ್ಯಕ್ಕೆ ನಿಮಗೆ ತೋರಿಸಿದೇನೆ. ಇವೆಲ್ಲಕ್ಕೂ ಕೂಡಿ ' ಇನೇ ಇನಾಮು ' ಅನ್ನು ತ್ತಾರೆ. ಫ್ರೇಬೆಲನು ತನ್ನ ಶಿಕ್ಷಣಪದ್ಧತಿಯಲ್ಲಿ ಬಿಟ್ಟು ಇಪ್ಪತ್ತು ' ಇನಾಮುಗಳನ್ನು ' ಮಾಡಿದ್ದಾನೆ. ಈ ಇನಾಮುಗಳನ್ನು ಹೊಂದುವವರ ಮನಸಿನಲ್ಲಿ ಧರ್ಮನಿಷ್ಠೆಯೂ ಕೃತಜ್ಞತೆಯೂ ಹುಟ್ಟಬೇಕೆಂಬ ಉದ್ದೇಶದಿಂದ ಅವಕ್ಕೆ ' ಇನಾಮು ' ಎಂಬ ಹೆಸರನ್ನು ಕೊಟ್ಟದ್ದಾನೆ. ಇನಾಮು ಅಂದಕೂಡಲೆ ಅದನ್ನು ಕೊಡುವವನೊಬ್ಬನಿರಲಿಕ್ಕೆ ಬೇಕೆಂಬ ಮಾತು ವ್ಯಕ್ತವಾಗುತ್ತದೆ. ಎಲ್ಲರಿಗೂ ಬೇಕಾದ ಬಿಡಿವೆಗಳನ್ನೆಲ್ಲ ಕೊಡುವವನ ವಿಷಯವಾಗಿ ಅಂದರೆ ದೇವರ ವಿಷಯವಾಗಿ ಹುಡುಗರಿಗೆ ತಿಳಿಸಿಕೊಟ್ಟು ಅವರ ಮನಸಿನಲ್ಲಿ ಅವನ ಬಗ್ಗೆ ನಿಷ್ಠೆಯನ್ನುಂಟು ಮಾಡಲಿಕ್ಕೆ ಇವುಗಳಿಂದ ಅನುಕೂಲವಾಗುತ್ತದೆ. ಅದೇಮೇರೆಗೆ ಆಡಲಿಕ್ಕೆ ಬೇಕಾಗುವ ಚಲೋಚಲೋ ಬಿಡಿವೆಗಳನ್ನು ಕೊಡುವಂಥ ತಾಯಿತಂದೆಗಳ ಬಗ್ಗೆ ಹುಡುಗರಲ್ಲಿ ಪೂಜ್ಯಬುದ್ಧಿಯು ತನಗೆ ತಾನೇ ಹುಟ್ಟುತ್ತದೆ. ಫ್ರೇಬೆಲನು ಹುಡುಗರ ಮನಸನ್ನು ತನ್ನ ಡಿಗೆಗೆ ಒಲಿಸಿಕೊಳ್ಳುವವಕ್ಕೆ ಮೊದಲು ಚಂಡುಗಳನ್ನೇ ಉಪಯೋಗಿಸಿದ ಕಾರಣವೇನಂದರೆ:—ಅವನು ತನ್ನ ಶಿಕ್ಷಣಸಂಬಂಧದ ಆಟಗಳನ್ನೆಲ್ಲ ಗಣಿತಶಾಸ್ತ್ರದ ಮೂಲತತ್ವಗಳನ್ನನುಸರಿಸಿ ರಚಿಸಿದ್ದಾನೆ. ಗೋಲಾಕಾರವು (ಚಂಡು) ಸೃಷ್ಟಿಯೊಳ

ಗಿನ ಎಲ್ಲ ಆಕೃತಿಗಳಲ್ಲಿ ಹೆಚ್ಚಿನವೂ ಪೂರ್ಣವಾದವೂ ಇರುತ್ತದೆ. ಅವು ಬೇಗ ಲಕ್ಷ್ಯದಲ್ಲಿ ಬರುವಂಥಾದಿದ್ದು ಅದರಲ್ಲಿ ಉಳಿದ ಎಲ್ಲ ವಿಧದ ಆಕೃತಿಗಳು ಸಮಾವೇಶವಾಗುತ್ತವೆ. ಸಣ್ಣ ದೊಡ ಹುಡುಗರು ಚಂಡಂದರೆ ಹಿಗ್ಗುತ್ತಾರೆ. ಹುಡುಗರಿಗೆ ತು ಸುತುಸು ತಿಳಿಯಲಿಕ್ಕೆ ಹತ್ತಿದ ಕೂಡಲೆ ಅವರು ತಮಗೆ ಆಡಲಿಕ್ಕೆ ಚಂಡು ಬೇಕೆಂದು ರಂಬಾಟ ಮಾಡಿ ಅದನ್ನು ತಾಯಿಯಿಂದ ಇಸುಕೊಳ್ಳುತ್ತಾರೆ. ತೊಟ್ಟಿಲದ ಮೇಲೆ ಚಂಡುಗಳನ್ನೂ ಗೋಲಕಗಳನ್ನೂ ತೂಗಗಟ್ಟುವ ನಡತೆಯು ಇರುತ್ತದೆ. ಹುಡುಗರಿಗೆ ಚಂಡು ಬಂದಾವರೆ ಆಯಿತು; ಅದು ಮೆತ್ತಗೂ ಹಗುರೂ ಚಂದವೂ ಇರುವದಲ್ಲದೆ ಅದನ್ನು ಹಿಡಕೊಳ್ಳುವದಕ್ಕೆ ಆಯಾಸವಾಗುವದಿಲ್ಲ; ಅವರಿಂದ ಅವರು ಅದನ್ನು ಪ್ರೀತಿಯಿಂದ ಕೈಯಲ್ಲಿ ಹಿಡಕೊಂಡು ಚಕ್ಕಂದದಿಂದ ಆಡುತ್ತಾರೆ.

ಬೇರೆ ಬೇರೆ ಬಣ್ಣದ ಚಂಡುಗಳನ್ನು ಹುಡುಗರ ಕೈಯಲ್ಲಿ ಕೊಡುವದರಿಂದ ಅವನಿಗೆ 'ಲಕ್ಷ್ಯಕೊಟ್ಟು ನೋಡುವ' 'ತುಲನಾಮಾಡುವ' ಶಿಕ್ಷಣವು ನಿರಾಯಾಸವಾಗಿ ದೊರಿಯುತ್ತದೆ. ಆಕಾರ, ಬಣ್ಣ, ಗತಿ ಈ ಮೂರು ತರಾತಿನ ತಿಳುವಳಿಕೆಯು ಚೆಂಡಿನಿಂದ ಆಗುತ್ತದೆ. ಚಂಡನ್ನು ನೋಡಿದ ಕೂಡಲೆ ಅವರಿಗೆ ಆಕೃತಿಯ ಜ್ಞಾನವಾಗುತ್ತದೆ. ತರುವಾಯ ಬಣ್ಣ ಗತಿಗಳ ಜ್ಞಾನವು ಕ್ರಮದಿಂದ ಆಗುತ್ತದೆ. ಒಂದು ಚಂಡನ್ನು ಹುಡುಗನು ಹಿಡಕೊಂಡಿರುವಾಗ್ಗೆ ಮತ್ತೊಂದು ಚಂಡನ್ನಾಗಲಿ ಬೇರೆ ಯಾವದೊಂದು ಬಡಿವೆಯನ್ನಾಗಲಿ ಅವನಿಗೆ ತೋರಿಸಿದರೆ ಅವನು ಕೂಡಲೆ ಅವಕ್ಕೂ ಇವಕ್ಕೂ ಹೋಲಿಸಿ ನೋಡಹತ್ತುವನು; ಅವರಿಂದ ಅವನ ಸಂಖ್ಯಾ, ಬಣ್ಣಗಳ ಜ್ಞಾನವು ಬೆಳೆಯುವದು. ಈ ಮೇರೆಗೆ ಮೊದಲನೇ ಇನಾಮಿನಿಂ

ದ ಪದಾರ್ಥಗಳ ಪರಿಮಾಣ, ಆಕೃತಿ, ಬಣ್ಣ, ಗತಿ ಇಷ್ಟೆ ಮಾತಿನ ತಿಳುವಳಿಕೆಯು ಹುಡುಗನಿಗೆ ಸುಲಭವಾಗಿ ಆಗುತ್ತದೆ.

ಚೆಂಡನ್ನು ನೋಡುವದರಿಂದ ಅವನು 'ಗೋಲರೂಪ' ಅಂದರೇನೆಂಬದನ್ನು ಗ್ರಹಿಸುತ್ತಾನೆ. ಅದನ್ನು ಯಾವ ಬಗೆಯಿಂದ ನೋಡಿದರೂ ಅದರಲ್ಲಿ ರೇಖೆ, ಮೂಲೆ, ಬಿಂದು ಇವುಗಳಲ್ಲಿ ಬಾದಾದರೂ ಅವನ ಕಣ್ಣಿಗೆ ಬೀಳುವದಿಲ್ಲ. ಪೃಥ್ವಿಯು ಆಕಾರವು ಸಹ ಇದರಂತೆ ಇರುತ್ತದೆಂದು ಹೇಳಿ ಅವನಿಗೆ ತಿಳಿಸಿಕೊಡಲಿಕ್ಕೆ ಸುಲಭವಾಗುತ್ತದೆ ಇವರ ಹೊರ್ತು ಪೃಥ್ವಿಯಲ್ಲಿ ಹಣ್ಣು, ಕಾಯಿ, ಬೀಜ, ಮಗ್ಗಿ, ಹೂವು ಮುಂತಾವವುಗಳಲ್ಲಿ ಇದೇ ಆಕಾರವು ವಿಶೇಷವಾಗಿ ಕಾಣಿಸುತ್ತದೆ.

ಈ ಆರು ಚೆಂಡುಗಳಿಂದ ಬಣ್ಣಗಳ ತಿಳುವಳಿಕೆಯಾದರೂ ಆಗುತ್ತದೆ. ನೀಲಿ, ಹಳದಿ, ಕೆಂಪು ಎಂಬಿವು ಮೂರು ಮುಖ್ಯ ಬಣ್ಣಗಳು ಮತ್ತು ಮಿಕ್ಕವು ಮೂರು ಮಿಶ್ರ ಬಣ್ಣಗಳು ಎಂಬ ಜ್ಞಾನವು ವಿದ್ಯಾರ್ಥಿಗಳಿಗೆ ಅನಾಯಾಸವಾಗಿ ಆಗುತ್ತದೆ. ಶಿಕ್ಷಕನು ಸ್ವಲ್ಪ ಸಹಾಯಮಾಡಿದರೆ, ಹಸುರು ಬಣ್ಣವು ನೀಲಿ ಹಳದಿ ಬಣ್ಣಗಳಿಂದ, ಊದೀ ಬಣ್ಣವು ನೀಲಿ ಕೆಂಪು ಬಣ್ಣಗಳಿಂದ, ಕಿತ್ತಳೆ ಬಣ್ಣವು ಹಳದಿ ಕೆಂಪು ಬಣ್ಣಗಳಿಂದ ಉಂಟಾಗಿವೆಂದು ಅವರು ಮನಗಾಣುವರು. ಈ ಮಿಶ್ರ ಬಣ್ಣಗಳನ್ನು ಕುರಿತು ವಿವರವಾಗಿ ಹೇಳುವದರಿಂದ, ಭಿನ್ನ ಭಿನ್ನ ಜಾತಿಯ ಪದಾರ್ಥಗಳನ್ನು ನಿಯಮಿತ ಪ್ರಮಾಣದಿಂದ ಕೂಡಿಸಲಾಗಿ ಮನೋಹರವಾದ ಹೊಸ ಪದಾರ್ಥಗಳು ಹುಟ್ಟುತ್ತವೆಂಬದೂ ಅವರಿಗೆ ತಿಳಿದು ಬಹುದು.

ನಮ್ಮ ಜೀವಿತಾರ್ಥವು ಸುಖದಿಂದ ಸಾಗಬೇಕಾದರೆ ನಮ್ಮ ಶಕ್ತಿ ಪ್ರವೃತ್ತಿಗಳು ಬಾವಕ್ಕೊಂದು ಹೊಂದಿಕೆಯಾಗಿರಲಿಕ್ಕೆ

ಬೇಕು. ಆ ಹೊಂದಿಕೆಯ ಹೊತ್ತು ಸುಖವು ಎಂದಿಗೂ ದೊರೆಯಲಾರದು. ಗಾಯನ ಚಿತ್ರಕಲೆಗಳಲ್ಲಿ ಸಹ ಈ ಮಾತಿನ ನಿಜತ್ವವು ಸ್ಪಷ್ಟವಾಗಿ ತೋರುತ್ತದೆ. ತಾಲಸ್ವರಗಳ ಮೇಳವು ಇಲ್ಲದಂಥ ಗಾಯನವು ಯಾರಿಗೂ ಸೇರದು. ಬಣ್ಣ ಪ್ರಮಾಣಗಳ ಸಮತ್ವವಿಲ್ಲದಂಥ ಚಿತ್ರವು ಅಸಡ್ಡಾಳವಾಗಿ ತೋರುವದು. ಅದರೆ ತಾಲಸ್ವರಗಳ ಮೇಳವಿದ್ದಂಥ ಗಾಯನವು ಎಲ್ಲರಿಗೂ ಸೇರುವದು. ಇಂಥ ಗಾಯನಕ್ಕೆ ಲುಬ್ಧವಾಗಿ ಹುಟ್ಟಿದ್ವೇಷವನ್ನು ಮೆರೆತು ಪಶುಗಳು ಸಹ ಒತ್ತಟ್ಟಿಗೆ ಕೂಡುವವೆಂದು ಹೇಳುತ್ತಾರೆ. ತಕ್ಕ ಮಿಶ್ರಣದಿಂದ ಸಾಂವರ್ಯವು ಹ್ಯಾಗೆ ಹುಟ್ಟುತ್ತದೆಂಬದನ್ನು ತಿಳಿಸಿಕೊಡಲಿಕ್ಕೆ ಬಣ್ಣದ ಚಂಡುಗಳು ಬಹು ಪ್ರಯೋಜನಕರವಾಗಿರುತ್ತವೆ.

ಬೇರೆ ಬೇರೆ ಪ್ರಕಾರದ ಗತಿಗಳನ್ನು ತಿಳಿಸಿಕೊಡಲಿಕ್ಕಿಂತು ಚಂಡಿನಷ್ಟು ಯೋಗ್ಯವಾದ ಸಾಧನವು ಮತ್ತೊಂದಿಲ್ಲ. ಯಾಕಂದರೆ, ಅದರಲ್ಲಿ ಎಲ್ಲ ಬಗೆಯ ಗತಿಗಳು ಇರುತ್ತವೆ, ಅವುಗಳನ್ನು ತೋರಿಸುವ ಕ್ರಮ ಹ್ಯಾಗಂದರೆ:—

೧ ಕೈ, ಮೇಜು, ಖುರ್ಚಿ ಮುಂತಾದ ಸ್ಥಿರ ಪದಾರ್ಥಗಳ ಮೇಲಿಟ್ಟು ತೋರಿಸಬೇಕು. ೨ ಚರ ಪದಾರ್ಥಗಳ ಮೇಲಿಟ್ಟು ತೋರಿಸಬೇಕು. ೩ ನಿಂತಿರುವ, ಅಡ್ಡಾಗಿರುವ, ಬಲಿದಿರುವ ಸ್ಥಿರ ಪದಾರ್ಥಗಳ ಮೇಲಿಟ್ಟರೆ ಅದರ ಗತಿ ಹ್ಯಾಗಾಗುತ್ತದೆಂಬವನ್ನು ತೋರಿಸಬೇಕು. ೪ ಚರ ಪದಾರ್ಥಗಳ ಮೇಲೆ ಅದರ ಗತಿ ಹ್ಯಾಗಾಗುತ್ತದೆಂಬವನ್ನು ತೋರಿಸಬೇಕು. ೫ ಯಾವದೊಂದು ಚರಪದಾರ್ಥವ ಮೇಲಾಗಲಿ, ಅದಕ್ಕೆ ಹತ್ತಿಯಾಗಲಿ, ಅವರ ಬಳಗಾಗಲಿ ಇಟ್ಟರೆ ಅದರ ಗತಿಯು ಹ್ಯಾಗಾಗುತ್ತದೆಂಬದನ್ನು ತೋರಿಸಬೇಕು.

ಚಂಡಿಗೆ ದಾರವನ್ನು ಕಟ್ಟಿದರೆ ಅದರಲ್ಲಿ ಹುಟ್ಟುವ ಗತಿಗಳು ಯಾವವಂದರೆ:—೧ ತೂಗ್ಯಾಡುವ ಗತಿಯು ಅಂದರೆ ಘಡಿಯಾರದೊಳಗಿನ ತೂಗಬಟ್ಟಲವಂತೆ ಎಡಕ್ಕೂ ಬಲಕ್ಕೂ ಬಲಿಯುವ ಗತಿಯು. ೨ ಗರಗರ ತಿರಗುವ ಗತಿಯು. ೩ ಮುಂದಕ್ಕೂ ಹಿಂದಕ್ಕೂ ಸರಿದಾಡುವ ಗತಿಯು. ೪ ಟಣಟಣ ಹಾರುವ ಗತಿಯು ಅಂದರೆ ಆಘಾತ ಪ್ರತ್ಯಾಘಾತ ಮುಂತಾದವು. ಚಂಡಿನಿಂದ ಹುಡುಗರಿಗೆ ವ್ಯಾಯಾಮವಾಗುತ್ತದೆ. ಚಂಡನ್ನು ಹಿಡಿಯುವದಕ್ಕೆ ತವಕಿಸಿ ಓಡ್ಯಾಡುವದರಿಂದ ಅಥವಾ ಅದನ್ನು ಬಗೆದಾಡುವದರಿಂದ ಕೈಕಾಲುಗಳ ಸ್ನಾಯುಶಕ್ತಿಗಳು ಬೆಳೆದು ಬಲಪಡುತ್ತವೆ; ಮತ್ತು ಅವುಗಳಿಗೆ ಚನ್ನಾಗಿ ವ್ಯಾಯಾಮವಾಗುತ್ತದೆ. ಚಂಡಿಗೆ ಕಟ್ಟಿದ ದಾರದ ತುದಿಯನ್ನು ಹಿಡಿದು ಹುಡುಗರ ಕಣ್ಣು ಮುಂದೆ ಬಂದೇ ಸವನೆ ಚಕ್ರಾಕಾರವಾಗಿ ತಿರುವಿದರೆ, ಅವರ ದೃಷ್ಟಿಯು ಬಂದೇ ಕೇಂದ್ರದಲ್ಲಿ ಇಲ್ಲವೆ ಬಂದೇ ಬಿಂದುವಿನಲ್ಲಿ ಸ್ಥಿರವಾಗಿ ನಿಲ್ಲಹತ್ತುತ್ತದೆ. ಇದನ್ನು ಬೈಲೊಳಗೆ ಮಾಡಿದರೆ ಹುಡುಗರಿಗೆ ಬಹು ಉಲ್ಲಾಸವಾಗುತ್ತದೆ. ಚಂಡು ಪುಟಿವ ಹಾಗೆ ಅವರೂ ಹಾರಹತ್ತುತ್ತಾರೆ. ಚಂಡಿನ ಆಟದಿಂದ ಅವರು ತಮ್ಮ ಮೈಜೋಲಿಯನ್ನು ಸಂಭಾಳಿಸಿಕೊಳ್ಳುವದಕ್ಕೆ ಬೇಕಾಗುವ ಶಕ್ತಿಯನ್ನು ಪಡಕೊಳ್ಳುತ್ತಾರೆ.

ಈ ಮೇರೆಗೆ ೧ನೇ ಇನಾಮಿನಿಂದ ಅಂದರೆ ಅರು ಬಣ್ಣದ ಅರು ಚಂಡುಗಳಿಂದ ಎಷ್ಟೋ ತರದ ಶಿಕ್ಷಣವನ್ನು ಹುಡುಗರಿಗೆ ಕೊಡಲಿಕ್ಕೆ ಅನುಕೂಲವಾಗುತ್ತದೆ.

ಇಲ್ಲಿಯವರೆಗೆ ೧ನೇ ಇನಾಮಿನಿಂದ ಹುಡುಗರಿಗೆ ವಾಡಿಕೆಯಾಗಿ ಯಾವ ಯಾವ ತರದ ಶಿಕ್ಷಣ ಕೊಡಲಿಕ್ಕೆ ಬರುತ್ತದೆಂಬವನ್ನು ಹೇಳಿದೆನು. ಇನ್ನು ಮೇಲೆ ಅವನ್ನು ಹ್ಯಾಗೆ ಕೊ

ಡಬೇಕೆಂಬವನ್ನು ಕುರಿತು ತುಸು ಪ್ರತ್ಯಕ್ಷವಾಗಿ ತಿಳಿಸಿಕೊಡುತ್ತೇನೆ. ಅದರೆ ಮೇಲೆ ಹೇಳಿವ ಸಂಗತಿಗಳ ಜ್ಞಾನವನ್ನು ಮಾಡಿಕೊಡುವದು ಶಿಕ್ಷಕನ ಬುದ್ಧಿಯನ್ನೂ ಚಾತುರ್ಯವನ್ನೂ ಅವಲಂಬಿಸಿರುತ್ತದೆ. ಬೇರೆ ಬೇರೆ ಪ್ರಸಂಗಗಳಲ್ಲಿ ಬುದ್ಧಿಯನ್ನು ಬೆಳಿಸುವವಕ್ಕೆ ಅನುಕೂಲಿಸುವಂಥ ತರತರವ ಆಟಗಳನ್ನು ಶಿಕ್ಷಕರು ತಾವೇ ಹುಡಿಕಿ ಹುಡುಗರಿಗೆ ಮೇಲಾವ ಶಿಕ್ಷಣವನ್ನು ಕೊಡಬೇಕು. ನಾನು ಇಲ್ಲಿ ಹೇಳುವ ಸಂಗತಿಯು ಶಿಕ್ಷಕರು ಯಾವ ಮಾರ್ಗವನ್ನು ಹಿಡಿಯಬೇಕು, ಹ್ಯಾಗೆ ನಡಿಯಬೇಕು ಎಂಬವನ್ನು ಮಾತ್ರ ತೋರಿಸುವದು.

SHARADA-SADAN.
ಶಾರದಾಸದನ.

ಅಮೇರಿಕ ಖಿಂಡವ ಕೆಲವು ಸದ್ಗೃಹಸ್ಥರ ಸಹಾಯದಿಂವ ತುಸು ದಿವಸಗಳ ಹಿಂದೆ ಪಂಡಿತಾ ರಮಾಬಾಯಿಯವರು ಶಾರದಾ-ಸದನವೆಂಬವೊಂದು ಬೋರ್ಡಿಂಗ ಶಾಲೆಯನ್ನು ಮುಂಬಯಿಯಲ್ಲಿ ಸ್ಥಾಪಿಸಿದ್ದು ನಮ್ಮ ವಾಚಕರಿಗೆ ಗೊತ್ತಿರಬಹುದು. ಆ ಶಾಲೆಯಲ್ಲಿ ಹಿಂದು ಉಚ್ಚ ಜಾತಿಯ ವಿಧವೆಯರನ್ನು ಇರಿಸಿಕೊಂಡು ಅವರಿಗೆ ಅನ್ನವಸ್ತ್ರಾದಿಗಳನ್ನು ಕೊಟ್ಟು ವಿದ್ಯಾ ಕಲಿಸುವಕ್ರಮವು ನಡೆಯಿರುತ್ತದೆ. ಅಲ್ಲಿ ಈಗ ಸುಮಾರು ೫೦ ಜನ ವಿಧವಾ ವಿದ್ಯಾರ್ಥಿನಿಯರು ಇರುತ್ತಾರೆಂದು ಕೇಳುತ್ತೇವೆ. ಪಂಡಿತಾ ರಮಾಬಾಯಿಯವರು ಧರ್ಮಾಂತರವನ್ನು ಮಾಡಿರುವ ಕಾರಣ ಈ ಶಾಲೆಯ ಉದ್ದೇಶದ ಸಂಬಂಧದಿಂವ ಜನರ ಮನಿಸಿನಲ್ಲಿ ವಿಪರೀತ ಭಾವವು ಉಂಟಾಗುವದು ಸಹಜವಾದದ್ದು. ಅವರೆ ಆ ಶಾಲೆಯ ಉದ್ದೇಶವನ್ನು ಎಲ್ಲರಿಗೆ ಸ್ಪಷ್ಟವಾಗಿ ತಿಳಿಸಿ ಆ ಸಂಸ್ಥೆಯ ವ್ಯವಸ್ಥೆಯನ್ನು ಪ್ರಕಟವಾಗಿ ಹೇಳಿ ಜನರ

ಮನಸಿನಲ್ಲಿದ್ದಂಥ ಸಂಶಯಗಳನ್ನು ಹೋಗಲಾಡಿಸಿ ಅದನ್ನು ಊರ್ಜಿತ ಸ್ಥಿತಿಗೆ ತರುವ ಹೇತುವಿನಿಂದ ಮಿಸ್ಸ ಹ್ಯಾಮ್ಲಿನ್ ಎಂಬವರೊಬ್ಬ ಅಮೇರಿಕದ ಧೊರೆಸಾನಿಯವರು ಈ ಇಲಾಖೆಯಲ್ಲಿ ದೊಡ್ಡದೊಡ್ಡ ಪಟ್ಟಣಗಳಿಗೆ ಹೋಗಿ ವ್ಯಾಖ್ಯಾನ ಕೊಡುತ್ತಲಿರುವರು. ಅವರು ಕಳೆದ ಅಕ್ಟೋಬರ ತಿಂಗಳಿನಲ್ಲಿ ಧಾರವಾಡಕ್ಕೆ ಬಂದು ಕೆಲವು ಸಭ್ಯ ಗೃಹಸ್ಥರನ್ನು ಕರಿಸಿ ಆ ಸಂಸ್ಥೆಯ ವ್ಯವಸ್ಥೆಯನ್ನು ತಿಳಿಸಿದ್ದಲ್ಲದೆ ಎಲ್ಲರಿಗೂ ಚಾರಿ—ಸವನವ ಉದ್ದೇಶಗಳು ತಿಳಿಯುವಂತೆ ಬಂದು ಸಾರ್ವಜನಿಕ ವ್ಯಾಖ್ಯಾನವನ್ನು ಕೊಡುವ ಅಪೇಕ್ಷೆಯು ತಮಗದೆಂದು ಅವರಿಗೆ ತಿಳಿಸಿದರು. ಆ ಮೇರೆಗೆ ಅವರ ವ್ಯಾಖ್ಯಾನವು ವಿಕ್ಟೋರಿಯಾ ಥಿಯೆಟರದಲ್ಲಿ ತಾ॥ ೨೬ನೇ ಅಕ್ಟೋಬರ ದಿವಸ ಸಂಜೆಯ ೪½ ಘಂಟೆಗೆ ಆಯಿತು. ವ್ಯಾಖ್ಯಾನ ಕೇಳಲಿಕ್ಕೆ ಬಹು ಜನರು ಕೂಡಿದ್ದರು. ಥಿಯೆಟರದಲ್ಲಿ ಸ್ವಲ್ಪವೂ ಸ್ಥಳವು ತೆರವಿದ್ದಿಲ್ಲ. ಸೋಟಿಸಿನಲ್ಲಿ ಬರೆದ ಹೊತ್ತಿಗೆ ಸರಿಯಾಗಿ ಸಭೆಯ ಕೆಲಸಕ್ಕೆ ಪ್ರಾರಂಭವಾಯಿತು. ನಮ್ಮ ಭಾಗದ ಮೆಹಬ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚನೆಯಾವ ಮೇರೆಗೆ ಅವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿ, ಹ್ಯಾಮ್ಲಿನ್ ಧೊರೆಸಾನಿಯವರ ಸಂಬಂಧದ ಸ್ವಲ್ಪ ವೃತ್ತಾಂತವನ್ನು ಹೇಳಿ ಅವರಿಗೆ ವ್ಯಾಖ್ಯಾನವನ್ನು ಕೂಡಬೇಕೆಂದು ಸೂಚಿಸಿದರು. ಅವರ ವ್ಯಾಖ್ಯಾನವು ಬಹಳ ಸುರಸವಾಗಿಯೂ ಮನೋಹರವಾಗಿಯೂ ಆಯಿತು. ವ್ಯಾಖ್ಯಾನ ನಡಿವ ಸುಮಾರು ಎರಡು ತಾಸಗಳ ವರೆಗೆ ಲೌಕೃತ್ಯ ಸಮಾಜವು ಪಠದೊಳಗಿನ ಚಿತ್ರಗಳಂತೆ ಸ್ಥಬ್ಧವಾಗಿ ಕೂತಿತ್ತು. ಅದರಿಂದ ವಾಖ್ಯಾನವ ಮನೋಹರತ್ವವೂ ಸಾರ್ವತ್ರ

ವೂ ವ್ಯಕ್ತವಾಗುತ್ತವೆ. ಅವರ ಭಾಷಾ ಸರಣಿಯೂ ವಾಕ್ಯಾ ತುರ್ಯವೂ ಬಹು ವರ್ಣನೀಯವಾಗಿದ್ದವು. ಅವರ ವ್ಯಾಖ್ಯಾನದ ಮುಖ್ಯ ಸಂಗತಿಗಳು ಯಾವವಂದರೆ:—

೧. ಪ್ರಪಂಚವೆಂಬ ರಥಕ್ಕೆ ಗಂಡಸು ಹೆಂಗಸು ಎಂಬವೆರಡು ಗಾಲಿಗಳುಂಟು. ಇವೆರಡೂ ಗಾಲಿಗಳು ನೆಟ್ಟಗಿದ್ದರೆ ಆ ರಥವು ಸುಸೂತ್ರವಾಗಿ ನಡಿಯುವದು. ಹೆಂಗಸೆಂಬ ಗಾಲಿಯಲ್ಲಿ ಚಲನವಿಲ್ಲದೋಳಿದ್ದವು ಉಂಟಾದರೆ ರಥವು ಸಾಗುವದು ದುಸ್ತರವು. ಈ ಮಾತಿನ ನಿಜತ್ವವನ್ನು ಅಂಗೀಕರಿಸಿ ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ಕೊಟ್ಟವರಿಂದ ಯುನಾಯಟೆಡ್ ಸ್ಟೇಟ್ಸ್, ಯುನಾಯಟೆಡ್ ಕಿಂಗ್ಡಮ್, ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳು ಬಳ್ಳೀ ಊರ್ಜಿತ ಸ್ಥಿತಿಯನ್ನು ಹೊಂದಿರುವವು. ಅದೇ ಮೇರೆಗೆ ಹಿಂದುಸ್ತಾನ ದೇಶವಾವರೂ ತನ್ನ ಪೂರ್ವದ ಉಚ್ಚ ಸ್ಥಿತಿಯನ್ನು ತಿರಿಗಿ ಹೊಂದುವದು ಅಸಾಧ್ಯವಲ್ಲ. ಆ ಕಾರಣ ಸ್ವದೇಶಾಭಿಮಾನಿಗಳು ಸ್ತ್ರೀ ಶಿಕ್ಷಣವನ್ನು ಕೈ ಕೊಳ್ಳುವದು ಉಚಿತವು.

೨. ಹಿಂದುಸ್ತಾನದ ಹಿಂದೂಜನರೂ, ಇಂಗ್ಲಂಡದ ಇಂಗ್ಲಿಷ ಜನರೂ, ಜರ್ಮನ್ನರೂ, ಅಮೇರಿಕದವರೂ ಬಂದೇ ಕುಲದವರು. ಅವರ ಮೂಲ ಭಾಷೆಯು ಒಂದೇ. ಆದವರಿಂದ ಅವರು ಒಬ್ಬರಿಗೊಬ್ಬರು ನೆರವಾಗುವದೂ ಪರಸ್ಪರರ ಉನ್ನತಿಯನ್ನು ಬಯಿಸುವದೂ ನ್ಯಾಯವಾದದ್ದು. ಈ ಅಭಿಪ್ರಾಯವನ್ನು ಮನಸಿನಲ್ಲಿ ತಂದು ಅಮೇರಿಕದ ಸದ್ಗೃಹಸ್ಥರೂ ಸಭ್ಯಸ್ತ್ರೀಯರೂ ಹಿಂದು ಸ್ತ್ರೀ ಶಿಕ್ಷಣಕ್ಕೆ ಸಹಾಯ ಮಾಡುವದು ತಮ್ಮ ಕರ್ತವ್ಯವೆಂದು ಒಪ್ಪಿಕೊಂಡು ಪ್ರತಿವರ್ಷಕ್ಕೆ ೪ ಸಾವಿರ ರೂಪಾಯಿಯಂತೆ ಹತ್ತು ವರ್ಷಗಳವರೆಗೆ ಹಣ ಕೊಡುವದಕ್ಕೆ ಒಪ್ಪಿಕೊಂಡಿದ್ದಾರೆ.

೩. ಶಾರದಾ ಸದನದಲ್ಲಿ ವಿಧವೆಗಳನ್ನೇ ತೆಗೆದುಕೊಳ್ಳುವ ಕಾರಣ ವೇನೆಂದರೆ ವಿಧವೆಗಳಿಗೆ ಪ್ರಪಂಚದ ಜೊಂಜಾಟವೇನೂ ಇರುವದಿಲ್ಲ. ಅವರು ಬೇಕಾದಷ್ಟು ವರ್ಷಗಳವರೆಗೆ ಅಭ್ಯಾಸ ಮಾಡಬಹುದು. ಅವರು ಸಾಕಷ್ಟು ವಿದ್ಯಾವಂತರಾದ ಮೇಲೆ ಅವರಲ್ಲಿ ಪ್ರತಿಬಬ್ಬರು ಬಂದೊಂದುಶಾಲೆಯನ್ನು ಹಾಕಿದರೆ ಅವರಿಂದ* ಹಿಂದು ಸ್ತ್ರೀ ಶಿಕ್ಷಣಕ್ಕೆ ಬಳ್ಳೀ ಸಹಾಯವಾಗುವದು. ಹೆಣ್ಣು ಮಕ್ಕಳ ಶಾಲೆಯು ಹೆಂಗಸರ ಕೈಯಲ್ಲಿದ್ದರೆ ಆಶಾಲೆಯು ಕೆಲಸವು ಬಹು ಸರಸವಾಗಿ ನಡಿಯುವದು. ಸಭ್ಯ ಗೃಹಸ್ಥರು ತಮ್ಮ ಹೆಣ್ಣು ಮಕ್ಕಳನ್ನು ಇಂಥ ಶಾಲೆಗೆ ಕಳುಹಿಸಿಕೊಡಲಿಕ್ಕೆ ಏನೂ ಸಂಶಯ ತಕ್ಕೊಳ್ಳಲಿಕ್ಕಿಲ್ಲ. ಈ ಮೇರೆಗೆ ಸ್ತ್ರೀಶಿಕ್ಷಣವು ಹಿಂದುಸ್ತಾನದಲ್ಲಿ ಬೇಗನೆ ಹಬ್ಬುಗೊಳ್ಳುವದು. ಇವರ ಹೊರ್ತು ಈಗಿನ ವಿಧವೆಗಳ ಸ್ಥಿತಿಯು ಅತಿಶಯ ಶೋಚನೀಯವಾವದೆ. ಅವರು ಜನ್ಮ ನೀಗುವವರೆಗೆ ಅನ್ಯರನ್ನು ಅವಲಂಬಿಸಿರಬೇಕಾಗುತ್ತದೆ. ಅವರು ವಿದ್ಯಾವಂತರಾದರೆ ಅವರ ಮನಸು ತಿದ್ದಲ್ಪಟ್ಟು ಅವರು ನೀತಿಯಿಂದ ನಡಿಯುವದಲ್ಲದೆ ತಮ್ಮ ಉದರ ಪೋಷಣೆಯನ್ನು ತಾವೇ ಮಾಡಿಕೊಂಡು ಶಿಕ್ಷಣದ ಗೌರವದ ಕೆಲಸವನ್ನು ಮನಮುಟ್ಟಿ ಸಂತೋಷದಿಂದ ಮಾಡಿ, ತಮ್ಮ ಆಯುಷ್ಯವನ್ನು ಸುಖದಿಂದ ಕಳಿಯುವರು. ಸ್ತ್ರೀಯರು ಶಿಕ್ಷಣ ಗ್ರಹಣದಲ್ಲಿ; ಅವರ ಮಿದುಳಿನ ಸಾಮರ್ಥ್ಯವು ಸ್ವಲ್ಪವಿರುತ್ತದೆ; ಇವೇ ಮೊದಲಾದ ಆಕ್ಷೇಪಗಳ ನಿಃಸಾರತ್ವವು ಕೆಲವು ವಿದುಷಿಗಳ ಉದಾಹರಣೆಯಿಂದ ವ್ಯಕ್ತವಾಗಿರುವದು.

೪. ಶಾರದಾ ಸದನದಲ್ಲಿ ಮೇಲಾದವ್ಯವಸ್ಥೆಯುಂಟು. ಪಂಡಿತಾ ರಮಾಬಾಯಿಯವರು ಅದರಮುಖ್ಯ ವ್ಯವಸ್ಥಾಪಕರಿದ್ದಾ

* ತೀರಗಲಿತ ವಿಧವೆಯರು ಮತ್ತೆ ಮದುವೆ ಮಾಡಿಕೊಂಡು ಪ್ರಪಂಚದಲ್ಲಿ ಸೇರುವದು ಅಪರೂಪವೆಂದು ಈ ಸದನದ ಉತ್ಪಾದಕರ ನಂಬಿಕೆಯುಂಟು.

ರೆ, ಅಮೇರಿಕದಿಂದ ಬಂದಂಥ ಮಿಸ್ಸ. ಜೆಮನ್ ಎಂಬವರು ಇಂಗ್ಲಿಷ ಭಾಷೆಯನ್ನು ಕಲಿಸುತ್ತಾರೆ. ಮಿಸ್ಸೆಸ ಡಿ. ಸಿಲ್ವಾ ಎಂಬವರೊಬ್ಬರು ಹೊಲಿಗೆಯ ಕೆಲಸವನ್ನು ಕಲಿಸುತ್ತಾರೆ. ಸಂಸ್ಕೃತ, ಇತಿಹಾಸ ಈ ವಿಷಯಗಳನ್ನು ಪಂಡಿತಾ ರಮಾಬಾಯಿಯವರೇ ಕಲಿಸುತ್ತಾರೆ. ಚಿಕ ಮಕ್ಕಳ ಬಂಮ ವರ್ಗವನ್ನು ಬೇಗನೇ ಈ ಶಾಲೆಗೆ ಜೋಡಿಸತಕ್ಕವರಿದಾರೆ. ಸರಕಾರೀ ಇಯತ್ತೆಗಳಂತೆಯೇ ಅಭ್ಯಾಸವು ಸಾಗುತ್ತದೆ. ಆದರೆ ವರ್ಷಕ್ಕೆ ಬಂದೇ ಇಯತ್ತೇ ಕಲಿಸುವ ನಿರ್ಬಂಧವಿಲ್ಲ. ಈ ಶಾಲೆಯಲ್ಲಿ ಬಬ್ಬ ವಿದ್ಯಾರ್ಥಿನಿಯಾವರೂ ಪೂರಾಬಂಮ ವರ್ಷವವರೆಗೆ ಬಂದೇ ಇಯತ್ತೆಯಲ್ಲಿ ಇರುವಪ್ರಸಂಗ ಬೀಳಲಿಲ್ಲ. ಹೋದವರ್ಷ ಕೆಲವರಂತು ಬಹುತ್ಸಮಮಾಡಿ ಬಂದೇ ವರ್ಷದಲ್ಲಿ ಮರಾಠಿಯ ಮೂರು ಇಯತ್ತೆಗಳನ್ನು ಮುಗಿಸಿದರು!

೫. ಬೋರ್ಡಿಂಗದ ವ್ಯವಸ್ಥೆಯು ಪೂರ್ಣವಾಗಿ ಹಿಂದೂ ಪದ್ಧತಿಯಂತೆಯೇಅದೆ. ಬಬ್ಬ ಸುಶೀಲ ಬ್ರಾಹ್ಮಣ ಸ್ತ್ರೀಯು ಅಡಿಗೆಯನ್ನು ಮಾಡುತ್ತಾಳೆ. ಊಟ, ಉಡತೊಡಿಗೆ, ಸ್ನಾನ, ಮಲಗುವಮ ಮುಂತಾವವುಗಳೆಲ್ಲ ಹಿಂದೂ ಪದ್ಧತಿಯನ್ನೇ ಅನುಸರಿಸುತ್ತವೆ. ಹಿಂದೂ ಜನರ ಆಚಾರವಿಚಾರಗಳಿಗೆ ವಿರೋಧವಾದ ಯಾವ ಸಂಗತಿಯನ್ನಾವರೂ ಈ ಶಾಲೆಯಲ್ಲಿ ನಡಿಸುವದೂ ನಡಿಯಗೊಡುವದೂ ಇವರ ಉತ್ಪಾದಕರ ಮನಸಿನಲ್ಲಿ ಎಳ್ಳಷ್ಟಾದರೂ ಇಲ್ಲ.

೬. ಶಾರದಾ ಸದನದವರು ಪುನರ್ವಿವಾಹಕ್ಕೂ ಮತಾಂತರಕ್ಕೂ ಎಳ್ಳಷ್ಟಾದರೂ ಉತ್ತೇಜನ ಕೊಡುವದಿಲ್ಲ. ಧರ್ಮ ಮತ್ತು ವಿಚಾರ ಇವುಗಳಬಗ್ಗೆ ಎಲ್ಲ ವಿದ್ಯಾರ್ಥಿನಿಯರಿಗೆ ಸ್ವಾತಂತ್ರ್ಯವುಂಟು. ಅವರಬುದ್ಧಿಯನ್ನೂ ನೀತಿಯನ್ನೂ ತಿದ್ದುವ ಕೆಲಸವನ್ನಷ್ಟೇ ಸದನದವರು ಬಹು ಎಚ್ಚರದಿಂದ ಮಾಡುವರು.

ಅಂತ್ಯವಲ್ಲಿ ಅವರು ಹೇಳಿದ್ದೇನಂದರೆ:—ಚಾರದಾ ಸದನಕ್ಕೆ ನೀವು ಬಂದು ಕಾಸುವರೂ ಸದ್ಯಕ್ಕೆ ಕೊಡುವಕಾರಣವಿಲ್ಲ. ಆದರ ಉದ್ದೇಶವನ್ನು ಚನ್ನಾಗಿ ತೂಗಿ ನೋಡಿ ನಿಮ್ಮ ವಿಧವೆಗಳನ್ನು ಅಲ್ಲಿಗೆ ಕಳುಹಿಸಿ ಅವರಿಗೆ ವಿದ್ಯಾಮೃತವನ್ನುಣಿಸಿ ಹಿಂದು ಸ್ತ್ರಾನವನ್ನು ಊರ್ಜಿತ ಸ್ಥಿತಿಗೆ ತರುವದು ನಿಮ್ಮೆಲ್ಲರ ಕೆಲಸವಾಗಿದೆ.

ಮುಂಬಯಿಯಲ್ಲಿ ಖರ್ಚುಬಹಳ ಹಿಡಿಯುವತ್ತಿದ್ದರಿಂದಲೂ ಸ್ಥಳವ ಅತಚಣೆಯು ಸಂಭವಿಸಿವದರಿಂದಲೂ ಉಚ್ಚ ಹಿಂಮೂಜಾತಿಯ ಜನರ ಸಮೂಹವು ಸಾಕಷ್ಟು ಇಲ್ಲದ್ದರಿಂದಲೂ ಚಾರದಾ ಸದನವನ್ನು ನವಂಬರ ೧ನೇ ತಾರೀಖಿಗೆ ಪುಣೆಕ್ಕೆ ತಂದರು. ಈ ಸದನವ ಉತ್ಪಾದಕರಾದ ಪಂಡಿತಾ ರಮಾಬಾಯಿಯವರಿಗೆ ಸನ್ಮಾನಕ್ಕಾಗಿ ಮುಂಬಯಿಯಲ್ಲಿಯು ಆರ್ಯಮಹಿಲಾ (ಸ್ತ್ರೀ) ಸಭೆಯವರು ಬಂದು ಚಿನ್ನದ ಫಡಿಯಾರವನ್ನೂ ಕೆಲವು ಪುಸ್ತಕಳಗನ್ನೂ ಕಾಣಿಕೆಯಾಗಿ ಕೊಟ್ಟರು.

CORRESPONDENCE.

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರರ ಸನ್ನಿಧಾನಕ್ಕೆ—

ವಿ. ವಿ. ತಮ್ಮ ಕರಕಮಲದೊಳು ಉದ್ಭವಿಸುವ ಅಂದವಾದ ಶಾಲಾಪತ್ರಕವ ಅಕ್ಕೊಟ್ಟಬದ ತಿಂಗಳಿನ ೭ನೇ ಪುಟದಲ್ಲಿರುವದೊಂದು ಗಣಿತ ಪ್ರಶ್ನವನ್ನೂ, ಬಗಟನ್ನೂ ಬಿಡಿಸಿ ಕಳಿಸಿದ್ದೇನೆ. ಮುಮ್ಮಾಡಿ ಬರುವ ತಿಂಗಳಿನ ಸಂಚಿಕೆಯಲ್ಲಿ ಪ್ರಕಟಿಸುವಿರೆಂದು ಪೂರಾ ನಂಬಿದ್ದೇನೆ.

ಗಣಿತ.

೧. ಯಾವದೊಂದು ಸಂಖ್ಯೆಯನ್ನು [illegible]ಾಂಕ (ಬಂದ ರವುಂದಿನದೊಂದು ಅಂಕಿ)ಗಳ ಗುಣಾಕಾ[illegible]ವದ ಭಾಗಿಸಿದ ಭಾಗವು, ಅದೇಸಂಖ್ಯೆಯನ್ನು ಆಕ್ರಮಾಂಕದಿಂದ ಭಾಗಿಸಿದ ಭಾಗಾಕಾರಗಳ ವಜಾಬಾಕಿಗೆ ಸರಿ ಇರುತ್ತದೆ. ಉದಾ. ೪೪ ಈ ಸಂಖ್ಯೆಯನ್ನು ೬, ೭ ಈ ಕ್ರಮಾಂಕಗಳ ಗುಣಾಕಾರದಿಂದ ಭಾಗಿಸಲು ಭಾಗ ೨ ಬಂತು; ಮತ್ತು ಪ್ರತ್ಯೇಕವಾಗಿ ಭಾಗಿಸಲು, ೧೪, ೧೨ ಭಾಗಗಳು ಬಂದವು. ಇವುಗಳ ವಜಾಬಾಕಿಗೆ ಸರಿ ಅಂದರೆ—೨ ಬಂತು.

೨. ಕ್ರಮಾಂಕಗಳ ಗುಣಾಕಾರದ ವರ್ಗಮೂಲವನ್ನು ತೆಗೆದರೆ, ಕ್ರಮಾಂಕಗಳಲ್ಲಿ ಸಂಖ್ಯಾ ಅಂಕಿಯು ಬಾಕಿ ಉಳಿಯುತ್ತದೆ.

ಈ ಎರಡು ನೇಮಗಳ ಆಧಾರದಿಂದ ಈ ಲೆಕ್ಕವನ್ನು ಬಿಡಿಸಿದ್ದೇನೆ. ವರಗಳಲ್ಲಿ ೧ ರೂಪಾಯಿ ಅಂತರವುಂಟು. ಅಂ[illegible]ಸೆ ವರಗಳ ರೂಪಾಯಿಗಳು ಕ್ರಮಾಂಕಗಳಾದವು. ಈ ಕ್ರ[illegible]ಾಂಕಗಳಿಂದ ೪೦ ರೂಪಾಯಿಯನ್ನು ಭಾಗಿಸಲು, ಮನುಷ್ಯರು ಬರುವರು. ಈ ಮನುಷ್ಯರಲ್ಲಿ ೨ ಮನುಷ್ಯರ ಅಂತರವಿರುವವರಿಂದ ಆ ಭಾಗಾಕಾರಗಳ ವಜಾಬಾಕಿಯು ೨ ಇದ್ದಂತಾಯಿತು. ಇದು ವರಗಳ ಗುಣಾಕಾರದಿಂದ ಭಾಗಿಸಿದಹಾಗುತ್ತದೆ. ಕಾರಣ ೨ ರಿಂದ ೪೦ ನ್ನು ಭಾಗಿಸಲು, ೨೦ (ವರಗಳ ಗುಣಾಕಾರ) ಬಂತು. ಇದರ ವರ್ಗಮೂಲದ ಬಾಕಿ ೪ ಇರುವವರಿಂದ ೪, ೫ ವರಗಳಾದವು. ಮನುಷ್ಯರು ಹೆಚ್ಚಾಗಿದ್ದರೆ, ಮುಂದಿನವರೆವನ್ನೂ, ಕಡಿಮೆ ಇದ್ದರೆ ಕೆಳಗಿನ (ಸ

೫೫) ದರವನ್ನೊ ಹಿಡಿಯುತಕ್ಕದ್ದು. ∴ ೪ ರೂ. : ೭೦ ರೂ. :: ೧ ಮು. : ೧೦ ಮುಂ; ಉತ್ತರ.—೧೦ ಮುಂದಿ ಮನುಷ್ಯರು.

ಒಗಟು.

ಶ್ಲೋಕ—ಚತುಃಪಂಚ ದ್ವಿತೀಯಾಶ್ಚ । ಏಕತ್ರಿಸ್ಯೋಕ ಏಕ ಯೋಃ ॥ ದ್ವಿದ್ವಿತ್ರಿಶ್ಚೈಕ ದ್ವಿದ್ವಿ ಶ್ಚ ।ಏಕಶ್ಚ ಪರಿಕೀರ್ತಿತಃ ॥೧॥

ಅರ್ಥವುಸ್ಪಷ್ಟವದೆ. ಬಲಕ್ಕೆ ಬರೆವ ಅಕೃತಿಯು ಮೇಲಿಂದ ಮನೆ ನವಾಗಬಹುದು. ಅಂದರೆ ಹೊದಲು ಕಳ್ಳರಿಂದಎಣಿಸತಕ್ಕದ್ದು.



ಮುಕ್ಕಾಮು ಗಂದಿಗವಾಡ ತಾ ಲೂಕ ಜಾನಾಪೂರ ಜಿಲ್ಲಾ ಬೆಳಗಾವ.

ರಾಮಚಂದ್ರ ಹಣಮಂತ ಕುಲಕರ್ಣಿ, ವಿದ್ಯಾರ್ಥಿ ಗಂದಿಗವಾಡ.

ಬಿಡಿಸತಕ್ಕ ಲೆಖ್ಖಿಗಳು.

ಒಬ್ಬನು ೧೫೦೦ ರೂಪಾಯಿ ಸಾಲಾ ತಂದು, ದರವರ್ಷಕ್ಕೆ ೧೫೦ ರೂಪಾಯಿಯಂತೆ ೧೦ ವರ್ಷಕೊಡಲಾಗಿ ಸಾಲವೆಲ್ಲ ಹರಿಯಿತು. ಆವರೆ ೧೫೦ ರೂಪಾಯಿಗಳಲ್ಲಿ ಬಡ್ಡಿ ಯೆಷ್ಟು? ಮುದ್ದಲವೆಷ್ಟು? ಹಾಗೂ ಬಡ್ಡೀ ವರವೇನು?

ರಾಮಚಂದ್ರ ಹಣಮಂತ ಕುಲಕರ್ಣಿ,
ವಿದ್ಯಾರ್ಥಿ ಗಂದಿಗವಾಡ.

---

* ೦ ಕಳ್ಳರು.
| ಬಳ್ಳಿಗೃಹಸ್ಥರು.

೨. ಒಬ್ಬ ಗೌಳಿಗನಿಗೆ ೪ ಮುಂದಿ ಮಕ್ಕಳಿದ್ದರು. ಆತನು ೬೪ ಎಮ್ಮೆಗಳನ್ನು ಕಟ್ಟಿದ್ದನು. ಆ ಎಮ್ಮೆಗಳು ಹಾಲು ಹಿಂಡುವ ಕ್ರಮವು ಹ್ಯಾಗಂದರೆ ೧ನೇದು ೧ ಶೇರು ೨ನೇದು ೨ ಶೇರು ೩ನೇದು ೩ ಶೇರು ಇದರಂತೆ ಹಾಲು ಹಿಂಡುತ್ತ ಕಡೆದು ಎಮ್ಮೆ ೬೪ ಶೇರು ಹಾಲು ಹಿಂಡುತ್ತಿತ್ತು. ಹೀಗಿರಲಾಗಿ ಆ ೪ ಮುಂದಿ ಬೇರೆಯಾಗುವ ನಿಶ್ಚಯ ಮಾಡಿದರು; ಪ್ರತಿಬಿಬ್ಬನಿಗೆ ಅಷ್ಟೆಷ್ಟು ಎಮ್ಮೆ ಅಷ್ಟೆಷ್ಟು ಹಾಲು ಬರುವಂತೆ ಪಾಲುಹಂಚಬೇಕಾಗಿರುತ್ತದೆ, ಅವರೆಯಾವಪ್ರಕಾರ ಹಂಚಬೇಕು?

ಭೀಮಾಜಿ ಗೋಪಾಳ ಸ್ಕೂಲ ಮಾಸ್ತರ,
ಕೋಡಿಹಾಳ.

DHARWAR TRAINING COLLEGE CERTIFICATE EXAMINATION QUESTION-PAPERS 1890.

ಧಾರವಾಡ ಟ್ರೇನಿಂಗಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನಪತ್ರಿಕಾಗಳು—೧೮೯೦.

ಗದ್ಯ ಪದ್ಯ.

೩ನೇ ವರ್ಷದ ವರ್ಗ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ನಂದರು ಚಂದ್ರಗುಪ್ತನ ಹೊರ್ತು ಉಳಿದ ಮೌರ್ಯ ಪುತ್ರರ ೧೦ನ್ನು ಯಾವ ತಂತ್ರವೆಸಗಿ ಕೊಂದರು?

೨. ಸಾಗಕಳುಹಿಸು, ಗತಾನುಗತಿಕವಾಗಿ, ಎದುರು ಕೆಡವಿ ೧೫ ಕೊಳ್ಳು, ಜೀವನವಂ ಕಲ್ಪಿಸಿ, ಧಾಯಾನುವರ್ತಿಗಳಾಗಿ, ವಿಮರ್ಶಪೂರ್ವಕವಾಗಿ, ಪ್ರಾಕಾರಬಹಿರುದ್ಯಾನ, ಸಾಂಖ್ಯ ಯೋಗಗಳ ಫಲಿತಾರ್ಥ, ಬುದ್ಧೀ ಎಂದು ಭಟರುಬಂದು, ನಮ್ಮ ಕವಟವು ಈತನಿಂದ

ಜೈಲಾಗುವದು, ಚಂದ್ರ ಚಂದ್ರಿಕೆಗಳಂತೆ ಆ ಜಗತ್ತಿನವರ ಮನಸ್ಸಿ
ಕೋರಂಗಳಿಗೆ ಆನಂದಕರವಾಗಿರುವದು, ಇದು ಅರಸುಗಳಿಗೆ ದಂಡ
ಮಾತ್ರಸಮಯವು, ಪ್ರಚ್ಛನ್ನನಾಗಿ ನಿಶೆಯಂ ನಿರೀಕ್ಷಿಸುತ್ತಾ, ರಾಯ
ದವರಿಗೆ ಬಕ್ಕಣಿಯಂ ಹೇಳುತ್ತಿದ್ದರು; ಮನಃಪರಿಪಾಕವಂ ತಿಳಿದು;
ಇವುಗಳನ್ನು ಸ್ಪಷ್ಟೀಕರಿಸಿರಿ.

೫. "ಪುರುಷನು ತನ್ನ ಬುದ್ಧಿ ಕೌಶಲ್ಯದಿಂದ ಉಂಟುಮಾಡಿದ ಸಾಮ ೧೦
ಜ್ಞಾನ ಭೇದಗಳಿಂದ ದೂರದಲ್ಲಿ ಶತ್ರುಗಳಂ ತನ್ನ ಸ್ವಾಮಿಯ ಸಮೀಪಕ್ಕೆ
ಬರಾಗದಂತೆ ಮಾಡುತ್ತ ನದಿಗಳು ಸಮುದ್ರವಂ ಸೇರುವಂತೆ ಶತ್ರುಗಳ
ಕ್ಷೇತ್ರಿಯರನ್ನು ತನ್ನ ಸ್ವಾಮಿಯು ಸಾಂಬ್ರಾಜ್ಯ ಲಕ್ಷ್ಮಿಗೆ ಪರಿಚಾರ
ಕೀಯರನ್ನಾಗಿ ಮಾಡುತ್ತಲಿರುವ ಮಂತ್ರಿ ಬಬ್ಬ ಕೂರನು. ಅವನಿಗೆ
ಬುದ್ಧಿಯೇ ನಿಗ್ರಹ ಶಸ್ತ್ರವು ಪ್ರಧಾನ ಶಸ್ತ್ರನೆಂಬುದು ಅಭಿಪ್ರಾ
ಯವಿಷ್ಟನವು."

ಮೇಲಿನವಾಕ್ಯಗಳನ್ನು ಸುಲಭ ಪದ್ಧತಿಯಿಂದ ಬರೆಯಿರಿ.

೪. ಕೆಳಗೆ ಬರೆದ ಶ್ಲೋಕಗಳ ಅರ್ಥವನ್ನು ಅನ್ವಯಸಹಿತ ಬರೆಯಿರಿ. ೩

೧. ಸಂದಣಿಸಿತೀಪರಿಯು ನಾರೀ । ವ್ಯಂಪವಾಜನ ಕಕ್ಷಿತೀನ ।
ನಂವನೆಯ ಬೆಸಿನಲಿ ಬಹಳವಿಶಾಲ ವಿಭವದಲಿ ॥ ಬಂದಿ
ಗಳ ಹೊಗಳಿಕೆಯು ಸರಭಸ । ದಿಂದ ಮುಂಗುಡಿಗಹಳಗಳ
ರವ । ದಿಂದ ರಾಜಕುವಾರಿ ಬಂದಳು ರಾಜವೀಧಿಯಲಿ ॥೧।

೨. ಜನಿತಾ ಮಧುರಾಧರವಿಂ ।
ಹನಿಬಯಿಸಿ ಬೆಳರ್ತುದೆನಿಸ ಪಳ್ಳತಿಪಿಹವೇಂ ॥
ನೆನೆಯಿಸಿದುವೊ ತರುಣೀಜನ ।
ಘನವಿರಹಾ ಪಾಂಡುಗಂಪ ಮುಂಪಲವಿರವಂ ॥ ೧ ॥

೩. ಬೆಕ ಜನಕನ ನಂದನೆಯಹಂ ।
ಬಲವ ಬಿಟ್ಟರು ನೆರವಿಳಾವಂ ।
ಬಲವ ರಾಯರು ಜೈದುಭಂಗಿಸುತಾ ವಿವೇಪಜನ ॥
ಬಲೆಯನೊಡ್ಡಿದ ನಿವನು ಲುಬ್ಧಕ ।

ತಿಲಕನೋ ನೃಪಸಖಪಿಯೊ ಸಾಕಿವ |

ನೊಳಗೆ ಮಾತೇಕೆನುತ ಮಿಗೆ ಮೊರೆದೆದ್ದರಲ್ಲಲ್ಲಿ. ||

೪. ಈನೇ ಶ್ಲೋಕದಲ್ಲಿಯು ಅಲಂಕಾರವು ಯಾವದು? ಮತ್ತು ೫

೫. ಈನೇ ಶ್ಲೋಕಗಳಲ್ಲಿ ಗೆರಹಾಕಿದ್ದ ಕಬ್ದಗಳ ವ್ಯಾಕರಣ ಹೇಳು.

೬. ಕೆಳಗೆ ಬರೆದವುಗಳನ್ನು ಸ್ಪಷ್ಟೀಕರಿಸು. ೪

ಶೀತೋಷ್ಣ ರುಚಿಗಳಿಂದ ಗಗನ ಗತಿಯಂಬಿಟ್ಟು
ಭೂತಲದ ಮೇಲೆ ರವಿಕಿ ಗಳಿಸಿವಂತಪುರು
ಹೂತಸುತ ಕರ್ನಜರತಲೆಗಳೊಪ್ಪಿರೆ ಕಂಡುಲೂಪಿ ಜಿತಾ್ಂ
ಗದೆಯರು
ಕಾತರಿಸಿ ಕರಗಿ ಕಂಬನಿಯೊಳಾಳ್ದಾಗಲೋ |
ಕಾತಿಯದಿಂದ ಪಾಥ ನ ಪಾದದೊಳ್ಪಿರ |
ಳಾತ್ಮತನ ಗುಣಂಗಳಂ ಸಾಲ್ಗೊಳಿಸಿ ಬಿಣಿಸಿ ಪೊರಳ್ದು ಗೋಳಿ
ಡುತಿರ್ದರು.

೭. ಕೆಳಗೆ ಬರೆದವುಗಳ ಅರ್ಥ ಬರೀರಿ.

ವಿಸಲಾಗಿರ್ದ, ಲಲಿತಲಾವಣ್ಯದುರುಗಾಂಗನೆಯರು, ಆಪ
ಭೃತದೋಕುಳಿಯ ವಿಸ್ಮರಣ, ಭಾಗವತಪಕ್ಷಕಗ್ರೇಸರಂ,
ಜೊಡಗಂಡಂಬುಧಿಯ ಹರುಷದಳೆ ತಣಿದಾಲಿ, ಗಾಣಿಕ್ಯ
ಮಾಣಿಕ್ಯ ಪರ್ಯ್ಯಂ ಮಂದಹಾಸದ ಮಂಡಿಗೆ ಳಮುರಿವುಗಳ
ಮುಸುಕಿನಲಿ, ನಿಜರಜೋವಿಭೂತಿಯಂ, ನೈಜರಜೋದ
ಜನೀರಿರಾಜಿತಂ, ಮಣಿಬಂಧುರದಪಾವುಗೆಯಂ
ಮೇಲಿನ ಪದಗಳೊಳಗಿನ ಸಮಾಸಗಳನ್ನು ಬಿಡಿಸಿರಿ.

ಸ್ಮರಣೆ : ೧೯೬೫

1971

ಜೀವನ ಚಕ್ರ ಪತ್ರಿಕೆಯು

ರತ್ನವಾಣಿಯೊಂದಿಗೆ ಜೆಲ್ಲಿ ಮಿಷ್ಟಾನ

ಪುಷ್ಪಕ ಸ್ಮರಣಾರ್ಥ ಗಂಧ

ವಿಜಯ ಪಬ್ಲಿಕೇಷನ್ಸ್ ಮಿಷ್ಟಿ

(ಪಬ್ಲಿಕ್ ಲಿಮಿಟೆಡ್)

ಮಾರ್ಚ್ / ೧೯೭೧

ಶಾಲಾ ಪತ್ರಿಕೆ



ವಿಕ್ಟರಿ ಸಂಚಿಕೆ

ಸರಕಾರಿ ಉನ್ನತಾಧ್ಯಯನ ಶಾಲೆಯ ಶಿಕ್ಷಕ ವಿದ್ಯಾರ್ಥಿಗಳು

ಶೆಟ್ಟಿಪ್ಪಿ ಅಗ್ರಹಾರ ಸ್ಟೇಷನ್, ಮೂಡಬಿದಿರೆ, ದಕ್ಷಿಣ ಕನ್ನಡ

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೩೬.] ಅಕ್ಟೋಬರ ೧೮೯೧. [ಸಂಚಿಕೆ ೧೦.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೨೧೭
೨. ಫ್ರೈಬೆಲನ ಶಿಶು ಶಿಕ್ಷಣಪದ್ಧತಿ ೨೨೫
೩. ಕಲಿಸುವ ಪದ್ಧತಿಗಳು. ೨೩೧
೪. ಪತ್ರವ್ಯವಹಾರ. ೨೩೫
೫. ಕೊಲ್ಹಾಪುರದ ಪ್ರವಾಸವು ೨೩೭

CONTENTS.

1. Educational Intelligence and Useful Notes... 217
2. Froebel's Kinder Garten System 225
3. Methods of teaching 231
4. Correspondance 235
Excursion to Kolhapur 237

DHARWAR:
KARNATIC BOOK DEPOT PRESS.

ಶಾಲಾಪತ್ರಿಕೆ

ಪದ್ಯ೦.

ಪ್ರಿಯವಿದ್ಯಾಗುರುವರ್ಯರುನ್ನತಿಕರಿಯಂ ಸುಶಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸವಾಗೊಲವಿಂದೀಪತ್ರಮಂ ಮುಟ್ಟಿಸಿ ॥
ನಯದಿಂದುತ್ತಮದೆನ್ನೋದುವರ್ಗ ಸುಗುಣಂ ತೋರಲ್ತಕ್ಕೆಕೊಂಬುದೈ ।
ದಯೆಯಿಂದೋಷವತಿದ್ದನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥ ೧॥

ಪುಸಕ ೩೬.] ಅಕ್ಟೋಬರ ೧೮೯೯ [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಇಷ್ಟು ದಿವಸಗಳವರೆಗೆ ಸಿವಿಲ್ ಸರ್ವಿಸ ಪರೀಕ್ಷೆಗೆ ಹೋಗುವವರ ವಯಸ್ಸು ೨೧ ರೊಳಗ ಇರಬೇಕೆಂದು ನಿಯಮವಿತ್ತು; ಆದರೆ ಸರಕಾರದವರು ನಮ್ಮ ಜನರಿಗೆ ಅನುಕೂಲವಾಗಬೇಕೆಂದೆಣಿಸಿ ಆ ವಯಸ್ಸಿನ ಇಯತ್ತೆಯನ್ನು ೨೩ ರವರೆಗೆ ಬೆಳಿಸಿರುತ್ತಾರೆ. ಮುಂದಿನ ವರ್ಷ ಅಂದರೆ ಸರ್ ೧೯೦೦ನೇ ಇಸವೀ ಅಗಷ್ಟ ತಿಂಗಳಲ್ಲಿ ಆಗತಕ್ಕ ಪರೀಕ್ಷೆಯು ಸೊಸ ನಿಯಮಗಳಂತೆ ಆಗುವದು. ಈಗ ನಮ್ಮ ದೇಶದ ೨೦ ತರುಣಗೃಹಸ್ಥರು ವಿಲಾಯತಿದಲ್ಲಿ ಈ ಸಿವಿಲ್ ಸರ್ವಿಸ ಪರೀಕ್ಷೆಯ ಅಭ್ಯಾಸವನ್ನು ಮಾಡುತ್ತಲಿದ್ದಾರೆ. ಅವರ ೨೧ ಜನರು ಬಂಗಾಲೀ ಗೃಹಸ್ಥರುಂಟು; ನಮ್ಮ ಪ್ರಾಂತದ ಯಾರೂ ಇಲ್ಲ. ಇದಕ್ಕೆ ಮೊದಲಿನಿಂದಲೇ ಪ್ರಯತ್ನ ಮಾಡಿಲ್ಲೇದು. ಆ ಪರೀಕ್ಷೆಯ ಸಂಬಂಧದ ಮುಖ್ಯ ವಿಷಯವನ್ನು ನಮ್ಮ ಪಾಚಕರ ಸಲುವಾಗಿ ಕೆಳಗೆ

---

* ಕಲೆಕ್ಟರ, ಅ. ಜಜ್ಜ, ಜಜ್ಜ ಮುಂತಾ
ದ್ದಾದ ಮಾಪಲಿಕ್ಕೆ ತಕ್ಕಂಥ ಜನರನ್ನು

ಶಾಲಾಪತ್ರಕ

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸುಕ್ಷೀಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸವಾಮಿಗೊಲವಿಂವೀಪತ್ರಮಂ ಮುದ್ರಿಸಿ ॥
ನಯದಿಂವಿತ್ತಪೆನೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ಪಯಿಯೊಂದೋಷವಶಿದ್ದನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥ ೧ ॥

ಪುಸಕ ೨೬.] ಅಕ್ಟೋಬರ ೧೮೬೧ [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಇಷ್ಟು ದಿವಸಗಳವರೆಗೆ ಸಿವಿಲ್ ಸರ್ವಿಸ* ಪರೀಕ್ಷೆಗೆ ಹೋಗುವವರ ವಯಸ್ಸು ೨೧ ರೊಳಗೆ ಇರಬೇಕೆಂದು ನಿಯಮವಿತ್ತು; ಆದರೆ ಸರಕಾರದವರು ನಮ್ಮ ಜನರಿಗೆ ಅನುಕೂಲವಾಗಬೇಕೆಂದೆಣಿಸಿ ಆ ವಯಸ್ಸಿನ ಇಯತ್ತೆಯನ್ನು ೨೩ ವರೆಗೆ ಬೆಳಿಸಿರುತ್ತಾರೆ. ಮುಂದಿನ ವರ್ಷ ಅಂದರೆ ಸರ್ ೧೮೬೨ನೇ ಇಸವೀ ಅಗಷ್ಟ ತಿಂಗಳಲ್ಲಿ ಆಗತಕ್ಕ ಪರೀಕ್ಷೆಯು ಹೊಸ ನಿಯಮಗಳಂತೆ ಆಗುವದು. ಈಗ ನಮ್ಮ ದೇಶದ ೨೦ ತರುಣಗೃಹಸ್ಥರು ವಿಲಾಯತಿದಲ್ಲಿ ಈ ಸಿವಿಲ್ ಸರ್ವಿಸ ಪರೀಕ್ಷೆಯ ಅಭ್ಯಾಸವನ್ನು ಮಾಡುತ್ತಲಿದ್ದಾರೆ. ಅವರಲ್ಲಿ ಜನರು ಬಂಗಾಲೀ ಗೃಹಸ್ಥರುಂಟು; ನಮ್ಮ ಪ್ರಾಂತದವರು ಯಾರೂ ಇಲ್ಲ. ಇದಕ್ಕೆ ಮೊದಲಿನಿಂದಲೇ ಪ್ರಯತ್ನ ಮಾಡಿಕೊಳ್ಳಲಿಲ್ಲವೇದು. ಆ ಪರೀಕ್ಷೆಯ ಸಂಬಂಧದ ಮುಖ್ಯ ಸಮಾಚಾರಗಳನ್ನು ನಮ್ಮ ವಾಚಕರ ಸಲುವಾಗಿ ಕೆಳಗೆ

---

* ಕಲೆಕ್ಟರ, ಅ. ಜಡ್ಜ, ಜಡ್ಜ ಮುಂತಾ
PRINTED AT [illegible] ತಕ್ಕಂಥ ಜನರನ್ನು

ಬರೆಯುತ್ತೇವೆ. ಅವುಗಳನ್ನು ಓದಿಕೊಂಡು ಧನಿಕರಾದ ತಮ್ಮ ಮಿತ್ರರಿಗೆ ಉಪದೇಶಿಸಿ ಚುರುಕುಬುದ್ಧಿಯ ಕೆಲವು ಹುಡುಗರನ್ನು ವಿಲಾಯತಿಗೆ ಅಭ್ಯಾಸಕ್ಕೂ ಪರೀಕ್ಷೆಗೂ ಕಳುಹಿಸುವಂತೆ ಮಾಡುವದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವದೆ.

ಪರೀಕ್ಷೆಯ ನಿಯಮಗಳು.

೧. ಈ ಪರೀಕ್ಷೆಯನ್ನು ಕೊಡಲಪೇಕ್ಷಿಸುವ ಉಮೇದವಾರನು ರಾಣೀಸಾಹೇಬರ ಪ್ರಜೆಯೂ ಅವರಿಗೆ ಅಧೀನವಾವ ದೇಶಗಳಲ್ಲಿ ಹುಟ್ಟಿದವನೂ ಆಗಿರಬೇಕು.

೨. ಅವನ ವಯಸ್ಸು ೨೧ ಕ್ಕಿಂತ ಹೆಚ್ಚು ೨೩ ಕ್ಕಿಂತ ಕಡಿಮೆ ಇರಲಿಕ್ಕೆಬೇಕು.

೩. ಅವನು ವ್ಯಂಗರಹಿತನೂ, ಸಶಕ್ತನೂ ಇರಲಿಕ್ಕೆಬೇಕು.

೪. ಅವನು ಒಳ್ಳೆ ನೀತಿವಂತನಾಗಿರಬೇಕು.

೫. ಪರೀಕ್ಷೆಯ ಫೀಯನ್ನು ಐದು ಪೌಂಡು ಕೊಡತಕ್ಕದ್ದು.

ಪರೀಕ್ಷೆಯ ವಿಷಯಗಳು.

ವಿಷಯಗಳು.			ಗುಣಗಳು.
ಫ್ರೆಂಚಭಾಷೆ	...	...	೧೫೦
ಜರ್ಮನಿಭಾಷೆ	...	...	

ಇಂಗ್ಲಿಷಭಾಷೆ, ಆ ಭಾಷೆಯ ಅಭಿವೃದ್ಧಿಯ ಕೆಲ ಪೊಂದು ಅವಧಿಯ ವಿಶೇಷಜ್ಞಾನ

ಸಂಸ್ಕೃತ	...	
ಅರಬೀಭಾಷೆ	...	
ಇಂಗ್ಲಿಷನಿಬಂಧರಚನೆ		
ಗ್ರೀಕಭಾಷೆ		

ಲ್ಯಾಟಿನ್‌ಭಾಷೆ ೩೫೦
ಗಣಿತ ೯೦೦
ಹೆಚ್ಚಿನ ಗಣಿತ ೯೦೦
ರಸಾಯನಶಾಸ್ತ್ರ ಮತ್ತು ಪದಾರ್ಥ ವಿಜ್ಞಾನಶಾಸ್ತ್ರ
ಇವುಗಳ ಮೂಲತತ್ವಗಳು ... ೬೦೦
ರಸಾಯನಶಾಸ್ತ್ರದ ಹೆಚ್ಚಿನ ಮಾಹಿತಿ ... ೬೦೦
ಸೃಷ್ಟಿಪದಾರ್ಥ ಶಾಸ್ತ್ರದ ಹೆಚ್ಚಿನ ಮಾಹಿತಿ ೬೦೦
ಭೂಗರ್ಭಶಾಸ್ತ್ರ ೬೦೦
ವನಸ್ಪತಿಶಾಸ್ತ್ರ ೬೦೦
ಪ್ರಾಣಿಶಾಸ್ತ್ರ ೬೦೦
ಜೀವನೇಂದ್ರಿಯಶಾಸ್ತ್ರ ... ೬೦೦
ಇಂಗ್ಲಂಡದ ಇತಿಹಾಸ ... ೬೦೦
ಗ್ರೀಸದೇಶದ ಪ್ರಾಚೀನ ಇತಿಹಾಸ ಮತ್ತು ರಾಜ್ಯ
ನೀತಿ ೪೦೦
ರೋಮದ ಪ್ರಾಚೀನ ಇತಿಹಾಸ ಮತ್ತು ರಾಜ್ಯರೀತಿ೪೦೦
ಅರ್ವಾಚೀನ ಇತಿಹಾಸದ ನೇಮಿಸಲ್ಪಟ್ಟ ಬಂದು
ಇಗ, ಹಿಂದುಸ್ಥಾನದ ಇತಿಹಾಸವನ್ನು ಬಳಗೊಂಡು ೪೦೦
ಅರ್ಥಶಾಸ್ತ್ರ ೪೦೦
ನ್ಯಾಯ ಮತ್ತು ಮಾನಸ ಶಾಸ್ತ್ರ ... ೪೦೦
ನೀತಿ ಶಾಸ್ತ್ರ ೪೦೦
ರೋಮನ್‌ಲಾ ೪೦೦
ಇಂಗ್ಲಿಷ ಕಾಯದೆಗಳು ...
ಸರಕಾರಿನ ಕಾಯದೆ, ಪೌಜದಾರೀ ಕಾಯದೆ,
ಮಾದೆ, ರಾಜ್ಯರೀತಿಯ ಕಾಯದೆ. ೪೦೦
.. ... ೪೦೦
ಮೇಲಿ ಬೇಕಾದಷ್ಟು ವಿಷಯಗಳ
ಳೀ ಷ ಅವುಗಳಲ್ಲಿ ಪರೀಕ್ಷೆಯು

ನ್ನು ಕೊಡಬಹುದು; ಆದರೆ ಅವರು ತೆಗೆದುಕೊಂಡ ವಿಷಯಗಳಲ್ಲಿ ಯಾವದೊಂದು ವಿಷಯದ ಜ್ಞಾನವು ಸಮಾಧಾನಕರವಾಗಿಲ್ಲೆಂದು ಪರೀಕ್ಷಕರಿಗೆ ತೋರಿದರೆ, ಆ ಸಂಬಂಧದಿಂದ ಕೆಲವು ಗುಣಗಳು ಕಡಿಕೊಳ್ಳಲ್ಪಡುವವು.

ಒಟ್ಟಿಗೆ ಸಿಕ್ಕ ಗುಣಾನುಕ್ರಮದಿಂದ ವಿದ್ಯಾರ್ಥಿಗಳ ನಂಬರುಗಳು ಹಚ್ಚಲ್ಪಡುವವು. ಅವರಲ್ಲಿ ಅವಶ್ಯವಿದ್ದಷ್ಟು ಜನರನ್ನು ಆರಿಸಿ ಸರಕಾರದ ತರ್ಫಿನಿಂದ ಸೆಕ್ರೆಟರಿ ಆಫ ಸ್ಟೇಟ ಧೊರೆಗಳವರು ಹಿಂದುಸ್ತಾನದ ಆಯಾ ಪ್ರಾಂತಕ್ಕೆ ಕಳುಹಿಸುವರು. ಸರ್ ಆರ್ಥರ್ ಹೇ ಇ ॥ ಯಲ್ಲಿ ಆಗುವ ಪರೀಕ್ಷೆಯಲ್ಲಿ ಪಾಸಾದ ಜನರೊಳಗಿನ ಇಪ್ಪತ್ತೊಂದು ಜನರನ್ನು ಬಂಗಾಲ, ಪಂಜಾಬ ಮತ್ತು ಮಧ್ಯಪ್ರಾಂತ ಇವುಗಳಿಗೆ, ಇಬ್ಬರನ್ನು ಬ್ರಹ್ಮದೇಶಕ್ಕೆ, ಐವರನ್ನು ಮದ್ರಾಸಕ್ಕೆ, ನಾಲ್ವರನ್ನು ಮುಂಬಯಿಗೆ ಆರಿಸಿಕೊಳ್ಳುವರು. ಈ ಆರಿಸಲ್ಪಟ್ಟ ಜನರು ಒಂದು ವರ್ಷ ಅಲ್ಲಿನಿಂದ ಮತ್ತೊಂದು ಪರೀಕ್ಷೆಯನ್ನು ಕೊಡಬೇಕಾಗುವದು. ಈ ಪರೀಕ್ಷೆಯ ವಿಷಯಗಳಲ್ಲಿ ಕಾದು ರೆಯುವೋಲೆ ಕೂಡುವದೊಂದು ವಿಷಯವಾಗಿರುತ್ತದೆ. ಅದರಲ್ಲಿ ಪಾಸಾದವರನ್ನು ಆಯಾ ಪ್ರಾಂತಕ್ಕೆ ಕಳುಹಿಸುವರು.

ಟಿಪ್ಪಣಿ:—ಮೇಲಿನ ವಿಷಯಗಳಲ್ಲಿ ಗಣಿತ ಹಾಗು ಸೃಷ್ಟಿ ಪದಾರ್ಥ ವಿಜ್ಞಾನಶಾಸ್ತ್ರ ಇವುಗಳಿಗೆ ಗುಣಗಳು ಹೆಚ್ಚಿರುವದರಿಂದಲೂ ಈ ವಿಷಯಗಳನ್ನು ಕಲಿಯುವದು ನಮ್ಮ ಜನರಿಗೆ ಸುಲಭವಾಗಿರುವದರಿಂದಲೂ ಇವುಗಳ ಕಡೆಗೆ ಚಿಕ್ಕಂದಿಲೆ ಹುಡುಗರು ಹೆಚ್ಚು ಲಕ್ಷಕೊಡುವಂತೆ ಮಾಡತಕ್ಕ

ನಮ್ಮ ದೇಶವನೊಬ್ಬ ವಿದ್ವಾಂಸನು
ನ್ನು ಕುರಿತು ಅನ್ನುವದೇನೆಂದರೆ:—

"ಹೊಲಗಳ್ಳ ಮಾಡ"
ಮೀ ತರವ ಜನದಿಂದಲೂ

ಗುವಂತೆ ಇಲ್ಲ. ಇದೇ ಪ್ರಕಾರ ಶ್ರೀಮಂತ ಜನರಿಂದಲೂ ಅವುಗಳು ಆಗಲಾರವು. ಅಂತೂ ಇಂತೂ ಆ ಕೆಲಸಗಳು ಮಧ್ಯಮಸ್ಥಿತಿಯ ಜನರಿಂದಲೇ ಆಗಲಿಕ್ಕೆಬೇಕು. ಆದರೆ ಪಾಶ್ಚಾತ್ಯರಾಷ್ಟ್ರಗಳೊಳಗಿನ ಮಧ್ಯಮಸ್ಥಿತಿಯ ಜನರಿಗೂ ನಮ್ಮ ದೇಶದ ಮಧ್ಯಮಸ್ಥಿತಿಯ ಜನರಿಗೂ ಹಚ್ಚಿ ನೋಡಿದರೆ ಬಹು ಹೆಚ್ಚು ಕಡಿಮೆ ಕಂಡು ಬರುತ್ತದೆ. ನಮ್ಮಲ್ಲಿಯ ಜನರಿಗೆ ಮಹತ್ವಾಕಾಂಕ್ಷೆಯೆಂಬ ಮಾತೇ ಗೊತ್ತಿಲ್ಲ. ಆದರೆ ಅತ್ಯಕಡಿಯವರಲ್ಲಿ ಅದು ಪರಿಪೂರ್ಣವಾಗಿ ವಾಸ ಮಾಡುತ್ತದೆ. ಇತ್ತಕಡಿಯ ಮಧ್ಯಮಸ್ಥಿತಿಯ ಪ್ರತಿಯೊಬ್ಬ ಮನುಷ್ಯನು, ೮೦ | ೩೦ ರೂಪಾಯಿ ತಲಬುಳ್ಳ ಒಂದು ಸರಕಾರೀ ಉದ್ಯೋಗವನ್ನು ಪಡೆದು ಅದನ್ನು ಸಿಸ್ತರಿಸಿಕೊಂಡರೆ ತಾನು ಧನ್ಯನೆಂತಲೂ, ಹೆಚ್ಚಿನ ಶ್ರಮದ ಕೆಲಸಕ್ಕೆ ಬೀಳುವದು ತಕ್ಕದ್ದಲ್ಲವೆಂತಲೂ ನೆನಸುವನು. ಇಂಥ ತಪ್ಪುತಿಳುವಳಿಕೆಯಿಂದ ಮೈಗಳ್ಳತನವೇ ಸುಖವೆಂದು ಭಾವಿಸಿ ಅವನು ಆ ಸುಖೋಪಭೋಗದ ಪರ್ಯಾಸಕ್ಕೆ ಬೀಳುವನು; ಹಾಗು ದೊಡ್ಡ ದೊಡ್ಡ ಜನರಲ್ಲಿ ತನಗೆ ಮಾನವು ದೊರಕಿದ ಮೇಲೆ ಹೆಚ್ಚಿನ ಶ್ರಮವನ್ನಾದರೂ ಯಾಕೆ ಮಾಡಬೇಕು, ಎಂಬ ಕೀಳಾಲೋಚನೆಯಿಂದಲೇ ಹೊಟ್ಟೆಯ ಕೆಲಸವನ್ನು ಕೂಡಿ ಉಳಿದ ಹೊತ್ತನ್ನೆಲ್ಲ ಹರಟೆ ಕೊಚ್ಚುವದರಲ್ಲಿ ಕಳೆದಾಯಿತೆಂದು ನೆನೆಸುವನು. ಸವ್ಯಕ್ಕೆ ಇಂಥ ಜನರ ಸಂಖ್ಯೆ ವಿಶೇಷವಾಗಿರುತ್ತದೆ. ಇವರಿಗಿಂತ ತುಸು ಹೆಚ್ಚು ತಿಳಿದವರು ಇಂಗ್ರೇಜಿ ಕಾದಂಬರಿ ಅಥವಾ ಬೇರೆತರ ಪುಸ್ತಕಗಳನ್ನು ಓದುವದರಲ್ಲಿ ಹೊತ್ತು

ಮತ್ತೆಗೆ ಗುಸಪೋಗವಿಲ್ಲ. ಮೊ
ಲು ತುಸು ಕಷ್ಟವ

ಟ್ಟರೆ ಹೊಟ್ಟೆತುಂಬ ಅನ್ನವೂ ವಿಶ್ರಾಂತಿಯೂ ದೊರಕುತ್ತಿ
ದ್ದವು; ಆದರೆ ಈಗ್ಗೆ ಅದರ ಎರಡಷ್ಟು ದುಡಿದರೂ ನಿರ್ವಾಹ
ಸಹ ಸಾಗುವದು ದುಸ್ತರವಾಗಿದೆ; ಅಂದಮೇಲೆ ವಿಶ್ರಾಂತಿ
ಯ ಬಗ್ಗೆ ಮಾತು ಸಹ ತೆಗೆಯುವಂತೆ ಇಲ್ಲ. ಇಂಥ ಹೊತ್ತಿ
ನಲ್ಲಿ ನಾವು ಸೋಮಾರಿಗಳಾಗಿ ಕೂಡದೆ ಕೈಕಾಲುಗಳನ್ನು
ಆಲ್ಲಾಡಿಸಿ ವ್ಯವಸಾಯ ಮಾಡಬೇಕು. ಆದರೆ ಆ ವ್ಯವ
ಸಾಯವು ಪ್ರಯೋಜನಕರವಾದದ್ದು ಇರಬೇಕಷ್ಟೆ. ಈ
ಸಂಬಂಧದಿಂದ ನಾವು ಇಂಗ್ಲಿಷ ಜನರ ಕೆತ್ತೆಯನ್ನು ತೆಗೆದು
ಕೊಳ್ಳಬೇಕು. ಅವರಿಗೆ ಸರಕಾರೀ ಉದ್ಯೋಗವಿದ್ದರೂ,
ಅದರಿಂದ ತಮ್ಮ ನಿರ್ವಾಹವು ಉತ್ತಮರೀತಿಯಿಂದ ಸಾಗು
ತ್ತಿದ್ದರೂ ಅವರು ವ್ಯರ್ಥ ಹೊತ್ತುಗಳಿಯದೆ ಸಿಕ್ಕ ವೇಳೆ
ಯನ್ನೆಲ್ಲ ಯೋಗ್ಯ ಕೆಲಸಕ್ಕೆ ಹಚ್ಚಿ ಸುಖವನ್ನೂ ಸಂಪತ್ತಿ
ಯನ್ನೂ ಪಡಕೊಳ್ಳುತ್ತಾರೆ. ವ್ಯಾಪಾರವನ್ನು ಅಥವಾ ಸ
ರಕಾರೀ ಉದ್ಯೋಗವನ್ನು ಕೈಕೊಂಡ ಎಷ್ಟೋ ಜನರು
ತಮ್ಮ ಕೆಲಸಗಳನ್ನು ಮಾಡಿಕೊಂಡು ಉಳಿದ ಹೊತ್ತಿನಲ್ಲಿ
ಕವಮ್ಮಾರಿಕೆ, ಬಡಿಗತನ, ನೇಗೆಯ ಕೆಲಸ, ಚಿತ್ರವಿದ್ಯೆ,
ಮುಂತಾದ ಕೆಲಸಗಳು ಕೀಳ ತರದವುಗಳೆಂದು ಎಣಿಸದೆ ಆ
ವುಗಳನ್ನು ಕಲಿತು ತಾವು ಕೈಕೊಂಡ ಕೆಲಸಗಳಲ್ಲಿ ತಿದು
ಪಾಟ ಮಾಡುತ್ತ ಹೋಗುತ್ತಾರೆ. ಇದಲ್ಲದೆ ಸಾರ್ವಜನಿ
ಕ ಕೆಲಸಗಳನ್ನು ಮಾಡುವದು ಸ್ವಹಿತಸಾಧನೆವಷ್ಟೇ ಗೌ
ರವವಾದದ್ದೆಂದೆಣಿಸಿ ಅವುಗಳಲ್ಲಿಯೂ ಪೂರ್ಣವಾಗಿ ಪ
ಸು ಡಾಕುತ್ತಾರೆ. ಆದದರಿಂದ ಅವರ ರಾಷ್ಟ್ರೀಯ
ಘನತೆಯನ್ನು ಹೊಂದಿರುತ್ತದೆ. ಹೌಸಲಫಕ
ಲ್ಲಿ ಅನುಭವಿಕ, ಕುಶಲ ಹಾಗು ಮಾಕ್ಷಟ್ಟು;
ರನ್ನು ಬೇಕಾದಷ್ಟು ಕಾಣಬಹು
ದೆನುಂತರಾಗಿ ಹೊಳೆಯುತ್ತಿ -

ರೆಗಳು ಮಧ್ಯಮಸ್ಥಿತಿಯ ಜನರಲ್ಲಿ ಜನ್ಮ ತಾಳಿದವರಿರು
ತ್ತಾರೆ. ಆ ದೇಶವಲ್ಲಿ ಹುಟ್ಟಿ ಶ್ರೀಮಂತರು ಸಹಾ ಮೇ
ಲಿನ ಉದ್ಯೋಗಗಳನ್ನು ಅಂದರೆ ಕವ್ಯಾರಿಕೆ ಬಡಿಗತನ,
ಚಿತ್ರಲೇಖನ ಮುಂತಾದ ಹೋರೆಗಳನ್ನು ಮಾಡುವದಕ್ಕೆ
ಬಹು ಆನಂದ ಪಡುತ್ತಾರೆ. ಅಲ್ಲಿಯು ಅರಸುಮನೆತನದೊ
ಳಗಿನವರು ಸಹ ಈ ಉದ್ಯೋಗಗಳಲ್ಲಿ ಜಾಣರಾಗಲಿಕ್ಕೆ
ಮುಂದರಿಯುತ್ತಾರೆ. ಈ ಯಾವತ್ತು ಕೈಗಾರಿಕೆಗಳು ಶಿಕ್ಷ
ಣದ ಒಂದು ಭಾಗವೆಂದು ಎಣಿಸಲ್ಪಡುತ್ತವೆ. ನಮ್ಮ
ವಿಕ್ಟೋರಿಯಾ ಮಹಾರಾಣಿಯವರ ಮಕ್ಕಳು ಇಂಥ
ಎಷ್ಟೋ ಕೈಗಾರಿಕೆಯ ಕೆಲಸಗಳಲ್ಲಿ ಜಾಣರಾಗಿದ್ದಾರೆ. ಸ್ವ
ತಃ ರಾಣೀಸಾಹೇಬರೇ ಚಿತ್ರಗಳನ್ನು ಬಹು ಸರಸಾಗಿ
ತೆಗೆಯುತ್ತಾರೆ. ಮುಂಬಯಿಯ ಹೈಕೋರ್ಟಿನ ಜಜ್ಜರಾದ
ಜಾರ್ಡಾಯಿನ ಸಾಹೇಬರ ಪತ್ನಿಗಳು ಆಯಿಲ್‌ಪೆಂಟಿಂಗ"
ಎಂಬ ಚಿತ್ರಕೆಲಸದಲ್ಲಿ ಬಹು ಪ್ರವೀಣರೆಂದೆಣಿಸಿಕೊಂಡಿದ್ದಾ
ರೆ. ಮುಂಬಯಿಯಲ್ಲಿ ಆಗುವ ಪ್ರತಿ ಪ್ರದರ್ಶನದಲ್ಲಿ ಅವ
ರು ತೆಗೆದ ಚಿತ್ರಗಳು ಮೇಲ್ತರದವುಗಳೆಂದು ನಿರ್ಣಯಿಸಲ್ಪ
ಟ್ಟ ಆ ಫೋರೆಸಾನಿಯವರಿಗೆ ಯಾವಾಗಲು ೪೦೦, ೫೦೦ ರು
ಪಾಯಿಗಳವರೆಗೆ ಇನಾಮುಗಳು ದೊರೆಯುತ್ತವೆ. ಇದರಿಂ
ದ ಕಲಾಕೌಶಲ್ಯಗಳನ್ನು ಕಲಿತು ಕೀರ್ತಿಯನ್ನೂ ಸಂಪ
ತ್ತನ್ನೂ ಗಳಿಸುವದು ಭೂಷಣವಾದದ್ದಲ್ಲವೆಂದು ಯಾರು
ತಿಳಿಯುವರು?

ಇದರಿಂದ ಪಾಶ್ಚಾತ್ಯ ಜನರ ಅನುಕರಣ ಮಾಡಬೇಕಾದ
ಬ ಮೋಹಿನಿಯನ್ನು ಹೊಡೆದು ಹೊರಗಾಕ
ಲಿಗೆ ಬೇಕಾಗುವ ಎಲ್ಲ ಬಡಿವೆಗಳು ಇಂ
ದರೂ ಅಡ್ಡಿ ಇಲ್ಲ. ಉದಾಹರಣೆ—
ಭಾರಗಳು, ಪತ್ರಗಳನ್ನು

ಕಳುಹಿಸುವ ಬಿಳೀ ಲಂಬೋಟಗಳು ಸಹಾ ಪರದೇಶದಿಂದ
ಬರುತ್ತವೆ. ಇವುಗಳನ್ನು ತುಸು ಶ್ರಮದಿಂದ ಇಲ್ಲಿಯೇ
ಮಾಡಬಹುದು. ಲಂಬೋಟಗಳನ್ನು ಮಾಡುವ ಯಂತ್ರಗ
ಳು ಅಯತಾ ಸಿಗುತ್ತವೆ. ಆ ಯಂತ್ರದಿಂದ ಎಂಥ ಮನು
ಷ್ಯನಾದರೂ ಸುಲಭವಾಗಿ ಲಂಬೋಟಗಳನ್ನು ಮಾಡಬಹು
ದು. ನಮ್ಮ ದೇಶದೊಳಗಿನ ಕಸಬುದಾರರು ದಿನೇದಿನೇ ನಲ
ಕ್ಕೆ ಬೀಳುತ್ತ ನಡದಿದ್ದಾರೆ. ಇದರ ಕಾರಣವಾದರೂ ಆಲಸ್ಯ
ವೇ ಇರುತ್ತದೆ."

ಈ ಅಭಿಪ್ರಾಯವು ವಿಚಾರಾರ್ಹವಾಗಿದೆ. ಪ್ರತಿಯೊಬ್ಬ
ಸ್ವದೇಶಾಭಿಮಾನಿಯು ಇವನ್ನು ಕುರಿತು ವಿಚಾರಮಾಡಿ ತ
ನ್ನ ಕೈಲಾದ ಮಟ್ಟಿಗೆ ಕೊರತೆಗಳನ್ನು ಪೂರೈಸಲಿಕ್ಕೆ ಯ
ತ್ನಿಸತಕ್ಕದ್ದು. ಉಪದೇಶಕ್ಕಿಂತ ಆಚರಣದಿಂದ ಜನರನ್ನು
ಸನ್ಮಾರ್ಗಕ್ಕೆ ಹಚ್ಚುವಂಥವರ ಅವಶ್ಯಕತೆಬಹಳ ಉಂಟು.

ಯೇಲವೆಂಬ ವಿದ್ವಾಂಸನ ಜ್ಯೋತಿಷಿಗಳಾದ ಡಾಕ್ಟರ
ಎಲ್ಕಿನ್ ಧೊರೆಗಳು ಅರಿಕ್ಬರನ್ ಎಂಬ ನಕ್ಷತ್ರವನ್ನು ಬಹು
ದಿವಸದಿಂದ ನೋಡಿ ತಿಳಿಸುವದೇನಂದರೆ:—ಈ ನಕ್ಷತ್ರವು
ಸೇಕಂಡಿಗೆ ೩೦ ಮೈಲಿನ ಅತಕರ್ಯವಾದ ಗತಿಯಿಂದ ಗ
ಮಿಸುತ್ತವೆ. ನಮ್ಮ ಪೃಥ್ವಿಯು ತನ್ನ ಕಕ್ಷೆಯಲ್ಲಿ ಸೇಕಂಡಿಗೆ
೧೮ ಮೈಲು ಹೋಗುತ್ತದೆ, ಅವರ ೧೧ ಪಾಲು ಈ ನಕ್ಷತ್ರ
ಕ್ಕೆ ವೇಗವದೆಂಬದು ಸ್ಪಷ್ಟವೇ. ಈ ನಕ್ಷತ್ರಕ್ಕೂ ಪೃಥ್ವಿ
ಗೂ ಇರುವ ಅಂತರವನ್ನು ಸಂಖ್ಯೆಯಿಂದ ತಿಳಿಸುವ
ದ್ಯಾವು. ಸೂರ್ಯನಿಂದ ನಮಗೆ ಪ್ರಕಾಶವು
ಬರುತ್ತದೆ. ಅವರು ಈ ನಕ್ಷತ್ರದ ಪ್ರಕಾ
ಮುಟ್ಟಲು ವೇಕಾದರೆ ೧೮೦ ವರ್ಷ



FROEBEL'S KINDER GARTEN SYSTEM.

ಫ್ರೆಬೆಲನ ಬಾಲೋದ್ಯಾನ-ಶಿಕ್ಷಣಪದ್ಧತಿ.

(೬೦೬ನೇ ಪುಟವಿಂದ ಮುಂದೆ ಸಾಗಿದ್ದು.)

೬ನೇ ಇನಾಮು.

ಘನಾಕೃತಿ ಹಾಗು ಗುಂಡು ಇವುಗಳಿಂದ ಯಾವ ತರದ ಆಟಗಳನ್ನು ಆಡಿಸಬೇಕೆಂಬದನ್ನು ಕುರಿತು ಆಕೃತಿಗಳನ್ನು ಈ ಸಂಚಿಕೆಯಲ್ಲಿ ಕೊಟ್ಟಿದ್ದೀವೆ. ಹಿಂದಿನ ಸಂಚಿಕೆಗಳಲ್ಲಿ ಕೊಟ್ಟ ಮಾದರಿಯ ಪದಪದ್ಯಗಳನ್ನೂ ಬಿಲ್ಲಿಕೊಟ್ಟ ತುಸು ಹೊಸತರದ ಹಾಡುಗಳನ್ನೂ ಹಾಡಿ ಹುಡುಗರ ಮನಸನ್ನು ಆನಂದಗೊಳಿಸಿ ಅವರಿಗೆ ಶಿಕ್ಷಣಕೊಡಬೇಕು.

೬ನೇ ಆಕೃತಿ—ಇವರಲ್ಲಿ ತೋರಿಸಿದಂತೆ ಬಂದು ನಂದುಕ ವಿರುತ್ತದೆ; ಮತ್ತು ಅದರ ಮೇಲೆ ಉದ್ದ ನಿಂದರಿಸಲಿಕ್ಕೆ ಬರುವಂತೆ ಎರಡು ಕಟ್ಟಿಗೆಗಳು ಮತ್ತು ಅವುಗಳ ಮೇಲೆ ಅಡ್ಡ ಹಾಕಲಿಕ್ಕೆ ಬರುವಂತೆ ಮತ್ತೊಂದು ಕಟ್ಟಿಗೆಯು ಹೀಗೆ ಮೂರು ಕಟ್ಟಿಗೆಗಳು ಇರುತ್ತವೆ. ಆಕೃತಿಯಲ್ಲಿ ತೋರಿಸಿ ದಂತೆ ಗುಂಡು, ಉಳಿಗೆ, ಘನಾಕೃತಿ ಇವುಗಳಿಗೆ ಕೂಡಿಸಿ ದಂಥ ಉಂಗರಗಳಲ್ಲಿ ದಾರಪೋಣಿಸಿ ತೂಗಗಟ್ಟಿ ಅವುಗಳ ನ್ನು ಹುಡುಗರಿಗೆ ತೋರಿಸಬೇಕು.

೬ನೇ ಆಕೃತಿ—ಇದರಲ್ಲಿ ತೋರಿಸಿದಂತೆ ಗುಂಡನ್ನು ಕೆಳ ಗೂ ಮೇಲೂ ಸರಿಸ್ಯಾಡಿ ಅದನ್ನು ತಿರುಗಿಸಿ ತೋರಿಸ ಬೇಕು. ಅವನ್ನು ನೋಡಿ ಹುಡುಗರು ಸಂತೋಷಪಡದೆ ಎಂದಿಗೂ ನಿಲ್ಲಲಿಕ್ಕಿಲ್ಲ. ಅದೇ ಮೇರೆಗೆ ಆ ಗುಂಡು ನೆಲದ ಮೇಲೆ ಬೀಳಲು ಅವರಿಂದ ಹುಟ್ಟುವ ಸಪ್ಪಳವನ್ನು ಕೇಳಿ ಆನಂದವಾಗುವದು. ಇಷ್ಟಕ್ಕಾಗಿಯೇ ಆ ಗುಂ
ಮ್ಮಿ ಬೇಕಂತ ಕೆಳಗೆ ಕೆಡವಬೇಕು; ಮ
ಣಿ ಟಣಿಮೆಂಬ ಸಪ್ಪಳವು ಹುಟ್ಟು
ಇಡಬೇಕು. ೬ನೇ ಇನಾಮಿನಲ್ಲಿ

ದ್ದ ಚಂಡು ಹುಡುಗರ ವೃಷ್ಟಿವಿಕಾಸಕ್ಕಷ್ಟೇ ಕಾರಣವಾಗಿ
ತ್ತು; ಅವರೆ ಈ ಇನಾಮಿನೊಳಗಿನ ಗುಂಡು ನಾದಯುಕ್ತವಾ
ವದೂ ಕಠಿಣವಾವದೂ ಇರುವದರಿಂದ, ಕರ್ಣ, ನೇತ್ರಸ್ಪ
ರ್ಶ ಈ ಮೂರು ಇಂದ್ರಿಯಗಳ ವಿಕಾಸಕ್ಕೆ ಕಾರಣವಾಗಿದೆ.

ಬಾಲೋದ್ಯಾನ ಪಾಲಕರು ಚನ್ನಾಗಿ ನೆನಪಿನಲ್ಲಿಡತಕ್ಕ
ಸಂಗತಿ ಏನಂದರೆ:—ಹುಡುಗರು ಈ ಆಟಗಳನ್ನು ಆಡುತ್ತಿ
ರುವಾಗ್ಗೆ, ಪಾಲಕರು ಅವುಗಳಿಗೆ ಚನ್ನಾಗಿ ಲಕ್ಷ್ಯಕೊಡುತ್ತಾ
ರೆಂತಲೂ, ಅವರ ಆಟವಗೆಳೆಯರಲ್ಲಿ ತಾವೊಬ್ಬರಾಗಿರುತ್ತಾ
ರೆಂತಲೂ, ಹುಡುಗರು ತಿಳುಕೊಳ್ಳುವಂತೆ ಮಾಡಬೇಕು.
ಯಾಕೆಂದರೆ ಹೀಗಾದರೆ ಮಾತ್ರ ಆ ಆಟಗಳಿಂದ ಉಪಯೋ
ಗವಾಗುವ ಸಂಭವ ಉಂಟು.

೩ನೇ ಆಕೃತಿಯು ಫೆನವನ್ನು ತೋರಿಸುತ್ತದೆ. ಅದರ
ವಿಷಯವಾಗಿ,

ಕಾಮುದಾ ವೃತ್ತ.

ನೋಡಿಬೀಫನಂ ಸ್ವಸ್ಥನಿಲ್ಲುವದು ।
ರೂಢಿಯುಂಗದೋಳ್ ಚಲಿಸಲಾರದು ॥

೪ನೇ ಆಕೃತಿಯು.

ಏಣಿನೋಳ್ಪನಂ ನಿಲ್ಲಲಾರದು ।
ತಾಣವಲ್ಲಿಯೇ ಜರಿಮಬೀಳ್ವುದು ॥

೫ನೇ ಆಕೃತಿಯು.

ಅನಿಸಿಟ್ಟರೀ ಫೆನವಗೋಡಿಗೇ ।
ಏಣಿನಲ್ಲಿಯೂ ನಿಲ್ಲಬಹುದಿದು ॥

ಅದೇ ಮೇರೆಗೆ ಅವನ್ನು ಬಂದು ಏಣಿನ ಮೇಲಿ
ರ ತಿರುಗಿಸಿ ತೋರಿಸಬೇಕು.

೬ನೇ ಆಕೃತಿ—ದಾರವನ್ನು ಉಂಗರನ
ನ್ನು ಅತ್ತಿತ್ತ ತಿರಿಗ್ಯಾಡುಸುವಾಗೆ
ತೋರಿಸುವ ಪದ್ಯವನ್ನು ರಚಿಸಿ

೩ನೇ ಆಕೃತಿ—ಬಿಂದು ಕಡ್ಡಿಯನ್ನು ನಕ್ಷತ್ರದ ತೂತುಗಳೊಳಗಿಂದ ಅರುಪಾರು ಹಾಯಿಸಿ ಅವನ್ನು ಗರಗರ ತಿರುಗಿಸಿ ತೋರಿಸಬೇಕು.

೪ನೇ ಆಕೃತಿ—ಅದೇ ಕಡ್ಡಿಯನ್ನು ಅದರಲ್ಲೊಂದು ಪೆಟ್ಟಿನಲ್ಲಿರುವ ತೂತಿನೊಳಗಿಂದ ಅದರ ಎದುರಿಗಿರುವ ತೂತಿನೊಳಗೆ ಹಾಕಿ ಆ ಘನಾಕೃತಿಯನ್ನು ತಿರುಗಿಸಿ ತೋರಿಸಬೇಕು. ಈ ಆಟಗಳು ನಡಿದಾಗ್ಗೆ ಹಾಡುತ್ತಿರಬೇಕೆಂಬ ಮಾತನ್ನು ಮರಿಯಲಾಗದು.

ತಾಯಿಯು ಬಾಲೋದ್ಯಾನದ ಪದ್ಧತಿಯಲ್ಲಿ ಜಾಣೆಯು ಇಲ್ಲವೆ ಅಲ್ಪಸ್ವಲ್ಪವಾದರೂ ಅದನ್ನು ಅರಿತವಳು ಇದ್ದರೆ, ಆವಳು ಮನೆಯಲ್ಲಿ ಹುಡುಗರಿಂದ ಮೇಲೆ ಹೇಳಿದಂಥ ಆಟಗಳನ್ನು ಆಡಿಸಬೇಕು. ಬಾಲೋದ್ಯಾನಪಾಲಕರು ಆವೇ ಆಟಗಳನ್ನು ತಮ್ಮ ಉದ್ಯಾನಗಳಲ್ಲಿ ತಿರುಗಿ ಅವರಿಂದ ಸುಲುಭವಾಗಿ ಆಡಿಸಬಹುದು.

ಘನಾಕೃತಿಯ ಎಲ್ಲಭಾಗಗಳು ಹುಡುಗರಿಗೆ ಚನ್ನಾಗಿ ತಿಳಿಯಬೇಕೆಂಬ ಉದ್ದೇಶದಿಂದಲೇ ಅವನ್ನು ೨ನೇ ಆಟದಲ್ಲಿ ಕೇರಿಸಿರುತ್ತೇವೆ. ಅವರ ಎಲ್ಲ ಮೈಗಳು; ಅವರ ಅಂಚುಗಳು; ಅವರ ಕೋನಗಳು; ಅವರ ಪಿಣುಗಳು; ಮತ್ತು ಅವುಗಳ ಪರಸ್ಪರ ಮೇರೆಗಳು; ಇವೆಲ್ಲ ಹುಡುಗರಿಗೆ ಚನ್ನಾಗಿ ತಿಳಿಯಲಿಕ್ಕೆಬೇಕು. ಅಂದರೆ ಅವರಿಂದುಂಟಾದ ಜ್ಞಾನದಿಂದ ಕೆಳಗೆ—ಮೇಲೆ, ಮುಂದೆ—ಹಿಂದೆ, ಬಲ—ಎಡ, ಪ್ಪು—ವಾರಿ, ಕಾಟಕೋನ, ಇಳಿಜಾರು ಮುಂತಾದ ಹೊಹಲ್ಪನೆಗಳು ಅವರಲ್ಲಿ ಅಂಕುರಿಸುವವು.

ವ ಆರಂಭದ ಸಂಗತಿಗಳನ್ನು ಈ ಘನಾಕೃತಿಲಿಸಲಿಕ್ಕೆ ಬರುತ್ತದೆ. ಹುಡುಗನು ಮೇಲೆ ಮಾತು ಅವುಗಳನ್ನು ಕಲಿ

ನಬೇಕು. ಆವೇ ಪೋರೆಗೆ ಅದಕ್ಕೂ ಗುಂಡಿಗೂ ಹಚ್ಚಿ ಸಾವ್ಯೈಷಮ್ಯಗಳನ್ನು ತೋರಿಸಬೇಕು.

ಇನೇ ಆಕೃತಿ—ಇದರಲ್ಲಿ ಘನಾಕೃತಿಯುಳ್ಳಂದು ಮೂಲೆಯಮೇಲೆ ಅವನ್ನು ನಿಲ್ಲಿಸಲಿಕ್ಕೆ ಬರುತ್ತದೆಂಬದನ್ನು ತೋರಿಸಿದುತ್ತದೆ.

ಘನಾಕೃತಿಯು ಮೂರು ಮೈಗಳು ಮಾತ್ರ ಬಮ್ಮೈಲೆ ಕಾಣಿಸುತ್ತವೆ; ಅದರೆ ಹೆಚ್ಚಿಗೆ ಕಾಣಿಸುವದಿಲ್ಲೆಂಬ ಸಂಗತಿಯನ್ನು ಹುಡುಗನು ತಿಳುಕೊಳ್ಳುವನು.

ಗುಂಡಿಗೆ ದಾರ ಕಟ್ಟಿದರೆ ಅದನ್ನು ಅತ್ತಿತ್ತ ತೂಗ್ಯಾಡಿಸಲಿಕ್ಕೂ, ಅದನ್ನು ಗರಗರ ತಿರುಗಿಸಿ ಅದರಿಂದ ವರ್ತುಲವನ್ನು ಮೂಡಲಿಕ್ಕೂ, ಘಡಿಯಾರದ ತೂಗಬಟ್ಟಲದ ಗತಿಯನ್ನು ಅದಕ್ಕೆ ಕೊಡಲಿಕ್ಕೂ ಲಂಬರೇಷೆಯನ್ನು ತೋರಿಸಲಿಕ್ಕೂ ಬರುತ್ತದೆ. ಇಷ್ಟು ಸಂಗತಿಗಳನ್ನು ತೋರಿಸುವಾಗ ಹುಡುಗಳಂತು ಬೇಕೇಬೇಕು. ಯಾಕಂದರೆ ಅವು ಈಗ ಬಹು ಉಪಯೋಗವುಳ್ಳವುಗಳಾಗಿರುತ್ತವೆ. ಬೇರೆಬೇರೆ ತರದ ಗತಿಗಳನ್ನು ನೆನಪಿನಲ್ಲಿಡಲಿಕ್ಕೂ ಜಿತ್ಯಾಕರ್ಷಣವು ಹೆಚ್ಚಾಗಲಿಕ್ಕೂ ಅವುಗಳಿಂದ ಬಹು ಸಹಾಯವಾಗುತ್ತದೆ. ಇದಲ್ಲದೆ, ಹುಡುಗರ ಮನಸಿನಲ್ಲಿ ಗಾನಪ್ರೇಮವೂ ಕಾವ್ಯಪ್ರೇಮವೂ ಸಹಜವಾಗಿಯೇ ಹುಟ್ಟುತ್ತವೆ.

ಮಕ್ಕಳು ಹುಟ್ಟುಕವಿಗಳಿರುತ್ತಾರೆ. ಕಣ್ಣಿಗೆ ಬಿದ್ದ ಎಲ್ಲ ವಸ್ತುಗಳಲ್ಲಿ ತಮ್ಮ ಸ್ವಂತ ಶಕ್ತಿಯು ಅಧ್ಯಾರೋಪವನ್ನು ಮಾಡಿ ಅವುಗಳ ಕೂಡ ಹಿಗ್ಗಿಹಿಗ್ಗಿ ಆಡುತ್ತಲೂ ಮಾತಾಡುತ್ತಲೂ ಇರುತ್ತವೆ. ಪ್ರಾಚೀನಕಾಲದಲ್ಲಿ, ನವೀ ಜಾತಿಯು ಬಾಲ್ಯಾವಸ್ಥೆಯಲ್ಲಿ ಮನುಷ್ಯ, ವ ನಿರ್ಜೀವಿಗಳಾವ ಯಾವತ್ತು ವಸ್ತುಗಳ್ಳ ಪುರುಷಭಾವಾರೋಪವನ್ನು ಮಾಡಕ್ಕಳಾದರೂ ಮಾಡುತ್ತಿರುತ್ತವೆ;

೧. ಘನಾಕೃತಿಯಿಂದ ಏನೇನು ಕಲಿಸಬಹುದೆಂಬುದನ್ನು ನೋಡುವಾ.

(ಅ) ಎದುರಿಗೆ ಕಣ್ಣಿಗೆ ಸಮಾಂತರವಾಗಿ ಘನಾಕೃತಿಯನ್ನು ಹಿಡಿದರೆ, ಅದರದೊಂದೇ ಮೈಯೂ ಅಂಚಿನ ನಾಲ್ಕು ರೇಖೆಗಳೂ ನಾಲ್ಕು ಕಾಟಕೋನಗಳೂ ಕಾಣಿಸುತ್ತವೆ.

(ಬ) ಕಣ್ಣಿದುರಿಗೆ ತುಸು ಮೇಲೆ ಇಲ್ಲವೆ ತುಸು ಕೆಳಗೆ ಅದನ್ನು ಹಿಡಿದರೆ, ಎರಡು ಮೈಗಳೂ, ಏಳು ರೇಖೆಗಳೂ, ಆರು ಬಿಂದುಗಳೂ, ಎಂಟು ಕೋನಗಳೂ ಕಾಣಿಸುತ್ತವೆ.

(ಕ) ಅದನ್ನು ಮೂಲೆಯಮೇಲೆ ತುಸು ಮೇಲೆಯಾಗಲಿ ತುಸು ಕೆಳಗೆಯಾಗಲಿ ಹಿಡಿದರೆ, ಅದರ ಮೂರು ಮೈಗಳೂ, ಏಳು ಬಿಂದುಗಳೂ, ಹನ್ನೆರಡು ಕಾಟಕೋನಗಳೂ ಕಣ್ಣಿಗೆ ಬೀಳುವವು.

೨. ಅದನ್ನು ಅದರದೊಂದು ಅಂಚಿನಮೇಲೆ ನಿಲ್ಲಿಸಿ,

(ಅ) ಕಣ್ಣುಗಳಿಗೆ ಪೂರಾ ಸಮಾಂತರವಾಗಿ ಹಿಡಿದರೆ, ಬಾನು ಮೈಯೂ ನಾಲ್ಕು ಬಿಂದುಗಳೂ, ನಾಲ್ಕು ಕಾಟಕೋನಗಳೂ ಕಾಣಿಸುವವು.

(ಬ) ಕಣ್ಣುಗಳ ಎದುರಿಗೆ ತುಸು ಮೇಲೆ ಇಲ್ಲವೆ ತುಸು ಕೆಳಗೆ ಅದನ್ನು ಹಿಡಿದರೆ, ಎರಡು ಮೈಗಳೂ ಏಳು ರೇಖೆಗಳೂ ಆರು ಬಿಂದುಗಳೂ, ಎಂಟು ಕೋನಗಳೂ ಕಾಣಿಸುವವು.

(ಕ) ಕಣ್ಣುಗಳ ಎದುರಿಗೆ ಅದನ್ನು ಮೂಲೆಯಮೇಲೆ ತುಸು ಕೆಳಗೆ ಇಲ್ಲವೆ ತುಸು ಮೇಲೆ ಹಿಡಿದರೆ, ಅದರ ಮೂ ಮೈಗಳೂ ಬಂಭತ್ತು ರೇಖೆಗಳೂ, ಏಳು ಬಿಂದುಗ ಹನ್ನೆರಡು ಕಾಟಕೋನಗಳೂ ಕಾಣಿಸುವವು. ಮಾಗು ಮೇಲೆ ನಿಲ್ಲಿಸಿ ಏನೇನು ಕಾಣಿಸು ತಿಳಿಸಿಕೊಡಬೇಕು.

ದಾರಕಟ್ಟಿ ಇಳಿಬಿಟ್ಟ ಘನಾಕೃತಿಯಿಂದ ಯಾವ ಯಾವ ತರದ ಗತಿಗಳನ್ನು ಹುಟ್ಟಿಸಬಹುದೆಂಬ ಮೂತಿನ ವಿಚಾರ ವನ್ನಾದರೂ ಮಾಡಬೇಕು. ಘನಾಕೃತಿಯ ಅಚ್ಚುಗಳೂ ಅವರ ಮಧ್ಯರೇಖೆಗಳೂ ಯಾವವು ಎಂಬದನ್ನು ಅವರಿಗೆ ಹೇಳಬೇಕು. ಮೈಯಪಾತಳಿಯ ನಟ್ಟನಡುವಿನ ಬಿಂದುವಿ ನಿಂದ ಅವರ ವಿರುದ್ಧದಿಕ್ಕಿಗಿರುವ ಮೈಯಪಾತಳಿಯ ಮಧ್ಯ ವವರೆಗೆ ಹೋಗುವ ಕಲ್ಪಿತ ರೇಖೆಗೆ ಆ ಮೈಗಳ ಅಚ್ಚು ಎಂದು ಅನ್ನುತ್ತಾರೆ. ಈ ಮಧ್ಯಬಿಂದುಗಳಲ್ಲಿ ತೂತನ್ನು ಸರಿದು ಪ್ರತ್ಯಕ್ಷವಾಗಿ ಅರುಪಾರು ಕಡ್ಡಿಯನ್ನು ಹಾಕಿ ಗರ ಗರ ತಿರುಗಿಸಿದರೆ ಲಳಿಗೆಯ ಆಕೃತಿಯು ಕಾಣಿಸುತ್ತದೆ. (೧೧೯೯ ಆಕೃತಿ ನೋಡು). ೧೨೦೯ ಆಕೃತಿಯಲ್ಲಿ, ಬಂ ದು ಅಂಚಿನ ಮಧ್ಯಬಿಂದುವಿನೊಳಗಿಂದ ಅವರ ವಿರುದ್ಧ ಅಂ ಚಿನ ಮಧ್ಯಬಿಂದುವಿನೊಳಗೆ ಬಂದು ಕಟ್ಟಿಗೆಯನ್ನು ಹಾಕಿ ಗರಗರ ತಿರುಗಿಸಿದರೆ, ಜಕಾಕಾರವು ಕಾಣಿಸುತ್ತದೆಂಬದ ನ್ನು ತೋರಿಸಿರುತ್ತದೆ. ೧೩೯೯ ಆಕೃತಿಯಲ್ಲಿ ಬಂದು ಮೂಲೆಯೊಳಗಿಂದ ಅವರ ಎದುರಿನ ಮೂಲೆಯೊಳಗೆ ಬಂದು ಕಡ್ಡಿಯನ್ನು ಹಾಕಿ ತಿರುಗಿಸಿದರೆ, ಯಾವ ಆಕೃತಿಯು ಕಾ ಣಿಸುತ್ತದೆಂಬದನ್ನು ತೋರಿಸಿ ಅದೆ. ಘನಾಕೃತಿಯನ್ನು ತೋರಿಸುವದರಿಂದ ಹುಡುಗರ ಮನಸಿನಲ್ಲಿ ಯಾವ ಯಾವ ಕಲ್ಪನೆಗಳು ಬರುತ್ತವೆ ಎಂಬದನ್ನು ಚನ್ನಾಗಿ ಯೋಚಿಸಿ ಅವುಗಳನ್ನು ಅವರಿಗೆ ತಿಳಿಸಿಕೊಡಬೇಕು. ಚೌಕೋನಾ ಕೃತಿಯ ಕಲ್ಲು, ಅರಳಿಯ ನೆಗ, ಮೇಜು, ಸಂದ

ತಾದ ಪದಾರ್ಥಗಳಿಗೂ ಘನಾಕೃತಿಗೂ
ತೋರಿಸಬೇಕು.

METHODS OF TEACHING

ಕಲಿಸುವ ಪದ್ಧತಿಗಳು.

(ಹಿಂದಿನ ಪುಟದಿಂದ ಮುಂದೆ ಸಾಗಿದ್ದು)

ಒಡವೆ ಪಾಠಗಳು.

೧ನೇ ಪಾಠ.

ಅಕಳೆ.

ಸ್ವರೂಪ—ನಾಲ್ಕು ಕಾಲು, ಎರಡು ಕೋಡು, ಗೋಪ್ರಾಕಾರದ ಬಾಲ, ಕುತ್ತಿಗೆ ಕೆಳಗೆ ಜೋತಾಡುವ ಮಾಂಸದ ಗಂಗೆದೊಗಲು, ಕಿವಿಯಲ್ಲಿ ನಾಲ್ಕು ಹೊಲೆಗಳು. ನಿಲುವು ಸುಮಾರು ನಾಲ್ಕು ಫೂಟು.

ಸ್ವಭಾವ—ಸಭ್ಯ, ಚಕಪಕ, ಪ್ರೀತಿಯುಳ್ಳ.

ಆಹಾರ—ಹುಲ್ಲು, ಕಿರಿಗಿಡಗಂಟಿ, ಎಲೆಗಳು, ಕಾಳು, ತೌಡು, ಹಿಂಡಿ.

ಪೀಳಿಗೆ—ಅಕಳು ಗರ್ಭಾವಧಿ ಒಂಭತ್ತು ತಿಂಗಳಿಗೆ ಈಯುತ್ತದೆ. ಸರ್ತಿಗೆ ಒಂದೇ ಮರಿಯನ್ನು ಕೊಡುವದು. ಹೆಣ್ಣು ಮರಿಗೆ ಕರವೆಂತಲೂ, ಗಂಡುಮರಿಗೆ ಹೋರಿಯೆಂತಲೂ ಅನ್ನುತ್ತಾರೆ.

ಉಪಯೋಗ—ತಿನ್ನಲಿಕ್ಕೆ ಹೈನವು ಸಿಗುತ್ತದೆ. ಸಗಣಿಯಿಂದ ಮನೆಗಳನ್ನು ಸಾರಿಸುವರು; ಕುಳ್ಳು ಮಾಡುವದು; ಮತ್ತು ಅವರಲ್ಲಿ ಎಲುವಿನ ಪುಡಿಯನ್ನು ಕೂಡಿಸಿ ಗೊಬ್ಬರ ಮಾಡುವರು. ಎಲುವು ಕೋಡುಗಳಿಂದ ಹಣಿಗೆ, ಚಾಕು, ಹಿಡಿಕೆ, ಗುಂಡಿ ಮುಂತಾದವುಗಳನ್ನು ಮಾಡಲಿನಿಂದ ಜೋತು ಬಾಗು ಕರಳಿನಿಂದ ಬೀಸ

ಎನೇ ಪಾಠ.

ಬೆಕ್ಕು.

ಸ್ವರೂಪ—ನಾಲ್ಕು ಕಾಲು, ಬಟ್ಟನ್ನ ಮೋರೆ, ನಿಗರಗಿವಿ, ಹೊಳೆಯುವ ದೊಡ್ಡ ಕಣ್ಣುಗಳು, ಉದ್ದಬಾಲ, ಮೈಮೇಲೆ ಮೆತ್ತಗಿನ ತುಪ್ಪಳು ಇದ್ದು ಪಟ್ಟಗಳಿರುತ್ತವೆ. ಕಾಲಿಗೆ ಐದು ಬೆರಳುಗಳು, ಆ ಬೆರಳುಗಳ ತುದಿಯಲ್ಲಿ ಬಾಗಿದಂಥ ಹದನಾದ ಉಗುರುಗಳಿರುತ್ತವೆ.

ಸ್ವಭಾವ—ತುಡಗ, ಕಪಟೀ, ಹಿಂಸಕ, ಮುಪ್ಪ.

ಆಹಾರ—ಹಾಲು, ಅನ್ನ, ಮಾಂಸ.

ಪೀಳಿಗೆ—ಅದು ವರ್ಷಕ್ಕೆ ಎರಡು ಸಾರೆ ಈಯುತ್ತದೆ. ಸತಿಗೆ ಎರಡರಿಂದ ನಾಲ್ಕರ ತನಕ ಮರಿಗಳಾಗುವವು, ಗಂಡು ಜೆಕ್ಕಿಗೆ ಬಾವುಗ ಅನ್ನುತ್ತಾರೆ.

ಉಪಯೋಗ—ಇಲಿಗಳ ಉಪದ್ರವವು ಕಡಿಮೆಯಾಗುವದಕ್ಕಾಗಿ ಜನರು ಬೆಕ್ಕುಗಳನ್ನು ಸಾಕುವರು.

೩ನೇ ಪಾಠ.

ಗುಬ್ಬಿಯು.

ಸ್ವರೂಪ—ಎರಡು ಕಾಲು, ಪಕ್ಕ, ಚಂಚು. ಗುಬ್ಬಿ ನಾಲ್ಕೈದು ಇಂಚು ಉದ್ದವಾಗಿಯೂ ಗಪ್ಪುತರವಾಗಿಯೂ ಇರುವದು.

ಸ್ವಭಾವ—ಧಿಟ್ಟ, ಹರೇವಿ, ಚಪಲ, ಆಟಗುಳಿ.

ಆಹಾರ—ಕಾಳು, ಸುಳ.

ಪೀಳಿಗೆ—ಅದು ವರ್ಷಕ್ಕೆ ಮೂರುಸಾರೆ ಹತ್ತಿ[illegible]ದೆ. ಸತಿಗೆ ಎರಡರಿಂದ ಐವರ ವರೆಗೆ ಹತ್ತಿಗ[illegible]

ಉಪಯೋಗ—ಹೊಲದೊಳಗಿನ [illegible] ತಿನ್ನುತ್ತದೆ.

೪ನೇ ಪಾಠ.

ಜೇನ ನೊಣವು.

ಸ್ವರೂಪು—ದುಂಡು ದಲೆ, ತಲೆಯ ಎರಡೂ ಮಗ್ಗಲಿಗೆ ಎರಡು ಕಣ್ಣುಗಳು, ಎರಡು ವಿೂಚಿ, ಉದ್ದನ್ನ ನಾಲಿಗೆ, ಆರು ಕಾಲು, ನೀಲ ನಡು ಗಡುತರವಾದ ಉದ್ದನ್ನ ಹಿಂಭಾಗವು, ಅದರ ತುದಿಗೆ ಬಂದು ಕೊಂಡಿಯು.

ಸ್ವಭಾವ—ಉದ್ಯೋಗಿ, ಸಿಟ್ಟನದು, ಪೂರದೃಷ್ಟಿ, ಹಿಂಡು ಗಟ್ಟಿರುವದು.

ಆಹಾರ—ಹೂ ಹಣ್ಣುಗಳೊಳಗಿನ ಧೂಳಿ ಮತ್ತು ರಸ.

ಪೀಳಿಗೆ—ಬಂದು ಹುಟ್ಟನಲ್ಲಿ ಬಂದೇ ಹೆಣ್ಣು ಹುಳವು ಇರುವದು. ಅವಕ್ಕೆ ಅರಸಿ ಹುಳ ಅನ್ನುತ್ತಾರೆ. ಅದು ಬೇಕಾದಾಗ ಬೇಕಾದಷ್ಟು ಪತ್ತಿಗಳನ್ನು ಇಕ್ಕುವದು.

ಉಪಯೋಗ—ಅದರಿಂದ ಜೇನತುಪ್ಪ, ಮೇಣ ಇವು ಸಿಗುತ್ತವೆ.

೫ನೇಪಾಠ.

ಮೂವಿನಮರ.

ಸ್ವರೂಪು—ಈ ಗಿಡಗಳು ಸುತ್ತಲೆ ಪರವಾಗಿಯೂ, ಎಂಟರಿಂದ ಮೂವತ್ತು ಮೊಳದವರೆಗೆ ಎತ್ತರವಾಗಿಯೂ ಬೆಳೆಯುವವು. ಇವುಗಳಿಗೆ ಟೊಂಗೆಗಳಿರುತ್ತವೆ. ಗೇಣು ಗೇ ಕೊವ್ವ ಎಲೆಗಳು ಮರದ ತುಂಬ ಇರುವವು. ಕಲಮಿಾಗಿಪ ಮಾವಿನಮರ ಬೆಳೆಯುವದಿಲ್ಲ.

ನಮ್ಮ ನಾಡುಗಳೊಳಗೆ ಮೆಸೂರಿ ಭೂಮಿಗಳ

ರಸಾವಿನ ಕಪ್ಪಿಯನ್ನು ಊರಿದರೆ

ಸಸಿಯಾಗುವದು. ಸಸಿಯು ತಕ್ಕಷ್ಟು ದೊಡ್ಡವಾದ ಮೇಲೆ ಅದನ್ನು ಕಿತ್ತಿ ಬೇರೆ ಕಡೆಯಲ್ಲಿ ಹಚ್ಚುವರು. ಹಚ್ಚಿದ ಐದಾರು ವರ್ಷಕ್ಕೆ ಹೂವು ಬಿಡುವದು. ಪೌಷ ಮಾಘ ಮಾಸಗಳೇ ಹೂವು ಬಿಡುವ ಕಾಲವು. ಕ್ಷೇತ್ರ ಮೈಚಾಟಿಗಳಲ್ಲಿ ಪಾಡಗಾಯಿಗಳನ್ನು ಇಳಿಸಿ ಬತ್ತಿಗೆ ಹಾಕುತ್ತಾರೆ. ಈ ಗಿಡವು ಪ್ರತಿ ವರ್ಷ ಫಲಿಸುತ್ತದೆ. ಇದು ಐವತ್ತು ಅರವತ್ತು ವರ್ಷ ಬಾಳುವದು.

ಪ್ರಕಾರ—ಮಾವಿನಲ್ಲಿ ಗಿಣಿಮಾವು, ಬಾಳಿ ಮಾವು, ಮುಗಿಮಾವು, ಗುಂಗಿ ಮಾವು, ಕೇರ ಮಾವು, ಸಬ್ಬಸಗಿ ಮಾವು, ಎಂಬ ಹಲವು ತರಗಳುಂಟು. ಕಲಮಿ ಹಾಗು ಗೋಮಾಂತಕವ ಸೀಮೆಯ ಹಣ್ಣುಗಳು ಬಹು ಪ್ರಸಿದ್ಧ.

ಉಪಯೋಗ—ಕಾಯಿಯಿಂದ ಚಟ್ನಿ, ಕಾಯರಸ, ಗೊಳಂಬ, ಉಪ್ಪಿನಕಾಯಿಗಳನ್ನು ಮಾಡುತ್ತಾರೆ. ಹಣ್ಣಿನಿಂದ ಪೀಕರಣಿ ಮತ್ತು ವಡಿಗಳನ್ನು ಮಾಡುವರು. ಮದುವೆಮುಂಜಿ ಮುಂತಾದ ಸಮಾರಂಭಗಳಲ್ಲಿ ಬಾಗಿಲಗಳಿಗೂ ಹಂದರಗಳಿಗೂ ಮಾವಿನ ತೋರಣಗಳನ್ನು ಕಟ್ಟುವರು. ಎಲೆಗಳ ಪತ್ರಾವಳಿಗಳನ್ನು ಹಚ್ಚುತ್ತಾರೆ. ಕಟ್ಟಿಗೆಯಿಂದ ಕೊಣಾಂಬಿಗ, ಕೈಬಟ್ಲ ತೊಳಲಿಕಲ್ಲು, ಮಣೆ, ಬಾಗಿಲ ಪಡಕು, ಪೆಟ್ಟಿಗೆ ಮುಂತಾವವುಗಳನ್ನು ಮಾಡುವರು. ಸಣ ಸಣ ಟೊಂಗೆಗಳನ್ನು ಉರವಲಕ್ಕೆ ಉಪಯೋಗಿಸುತ್ತಾರೆ.

ಒನೇ ಪಾಠ.

ಅಧಳೆಯೂ. ಉಣ್ಣೆಯೂ.

ಸಿದ್ಧತೆ—ಪಾಠ ಕಲಿಸುವ ಪೂರ್ವದಲ್ಲಿ
ಳೆ, ಉಣ್ಣೆ (ಕರೇ ಮತ್ತು ಬಿಳೇ) ಫ್ಲಾಸ್ಕ್
ಬೇರೆ ತರವ ಅರಿವೆ ತುಂಡುಗಳನ್ನ
ಕೊಂಡಿರ ಬೇಕು.

ಸಾಮ್ಯ—ಎರಡೂ ಬೆಳ್ಳಗೆ, ಮೆತ್ತಗೆ, ಹಗುರು, ಸ್ಥಿತಿ ಸ್ಥಾಪಕ ಗುಣವುಳ್ಳವು ಇರುವವು. ಉಣ್ಣೆಯಲ್ಲಿ ಉಷ್ಣತಾ ಅನಾಹಕವೆಂಬ ಇನ್ನೊಂದು ಹೆಚ್ಚಿನ ಗುಣವಿರುತ್ತದೆ.

ವೈಷಮ್ಯ—ಅರಳಿ ಉಣ್ಣೆಗಳ ಎಳೆಗಳನ್ನು ದೀವಿಗೆಯ ಮೇಲೆ ಹಿಡದರೆ, ಅರಳಿಯ ಎಳೆಯು ಬೇಗ ಸುಟ್ಟು ಬೂದಿಯಾಗುವದು. ಆದರೆ ಉಣ್ಣೀ ಎಳೆಯು ಬೇಗ ಸುಡುವದಿಲ್ಲ. ಸುಡುವಾಗ ಕಮರು ನಾತ ಬರುತ್ತದೆ; ಹಾಗೂ ಎಳೆಯು ತುದಿಗೆ ಕರೀ ಗಂಟುಗಟ್ಟುತ್ತದೆ.

ಉತ್ಪತ್ತಿ—ಅರಳಿ ಗಿಡಗಳಿಂದ ದೊರಿಯುತ್ತದೆ. ಉಣ್ಣೆ ಕುರಿಗಳಿಂದ ದೊರೆಯುತ್ತದೆ.

ಉಪಯೋಗ—ಇವೆರಡರಿಂದ ವಸ್ತ್ರಗಳನ್ನು ಮಾಡುತ್ತಾರೆ. ಅರಳೀ ವಸ್ತ್ರಗಳು ಬಹಳ ದಿವಸ ತಡಿಯುವದಿಲ್ಲ. ಅವು ಬೇಗ ತೊಯಿದು ಬೇಗ ಒಣಗುತ್ತವೆ; ಹಾಗೂ ಬೇಗ ಕಾಯಿದು ಬೇಗ ಆರುವವು. ಉಣ್ಣೀ ವಸ್ತ್ರಗಳು ಬಹಳ ದಿವಸ ತಡಿಯುತ್ತವೆ. ಬರ್ಫಿಗೆ ಸುತ್ತಿದರೆ ಬರ್ಫು ಕರಗುವದಿಲ್ಲ. ಚಹಾ ಪಾತ್ರೆಯ ಮೇಲೆ ಹಾಕಿದರೆ ಬಳಗಿನ ಬಿಸಿ ಚಹಾ ಬೇಗನೆ ಆರುವದಿಲ್ಲ. ಜೆನಗಾದ ಉಣ್ಣೀ ವಸ್ತ್ರವನ್ನು ಧರಿಸುವದು ಶರೀರಕ್ಕೆ ಒಳ್ಳೀದು. ಬಿಳೀ ಉಣ್ಣೆಯಿಂದ ಧಾಬಳಿಗಳನ್ನೂ ಬಿಳೀ ಹಾಗೂ ಕರೀ ಉಣ್ಣೆಯಿಂದ ಕಂಬಳಿಗಳನ್ನೂ ಮಾಡುವರು.

CORRESPONDENCE.

ಪತ್ರವ್ಯವಹಾರ.

ಬಾಲಾಪತ್ರಕದ ಎಡಿಟರ ಪ್ರಾಂತ ಧಣಿ ಸರಸಿಜಕ್ಕ—

ಮಿ. ಪಿ. ಪತ್ರಕರ್ತರೇ ತಮ್ಮ ಕೆರಕವೊಲದಲ್ಲಿ ಉಳ್ಳ ವಿಷಯಂಥ ಅತಿಮನೋಹರವಾದ ಪತ್ರಕದ ಸ್ಪಟಿಂಗ್ ಸಂಚಿಕೆ ೯ ರಲ್ಲಿ ನಮ್ಮ ದೇಶಬಾಂಧವರಾದ ಮುಂಗಳಾಪಾತ ಶಾಲಾ ಅಧ್ಯಾಪಕರು ಕೊಟ್ಟ ಮೂರು ಬಗಟಿನ ಚಾಪದನ ಗಳನ್ನು ಬಿಡಿಸಿ, ಬಡಂಬಡಿಕೆ ಬಂದಲ್ಲಿ ಮುಂದಿನ ಅಗಟೀಬ ರ ತಿಂಗಳ ಸ್ಕೂಲ ಪೇಪರಿನಲ್ಲಿಯೇ ಮುದ್ರಿಸುವಿರೆಂದು ಆಶಾಬದ್ಧನಾಗಿರುತ್ತೇನೆ.

೧ನೇ ಬಿಡಗಿನ ಅರ್ಥ (ರಾಟೆ).

೨ನೇ ಬಿಡಗಿನ ಅರ್ಥ (ಕೇತಕೆಯು).

೩ನೇ ಬಿಡಗಿನ ಅರ್ಥ (ಸೂರ್ಯ).

ನೀಲಕಂಠ ಚಿಕ್ಕೂರಿ,
ಹೆ. ಮಾಸ್ತರ ಮುಳಗುಂದ.

ಮಾನ್ಯರು॥ ಕನ್ನಡ ಶಾಲಾಪತ್ರಕವ ಎಡಿಟರವರ ಚರ ಣ ಸನ್ನಿಧಾನಕ್ಕೆ—

ಮಿ॥ ಮಿ॥ ಕೆಳಗೆ ಬರೆವ ಶ್ಲೋಕಕ್ಕೂ, ಲಿಖ್ಖಿಕ್ಕೂ ತ ಮ್ಮ ಮಾನವಾದ ಶಾಲಾ ಪತ್ರಕದಲ್ಲಿ ಸ್ಥಳ ದೊರೆಯುವಂತ ದೆಂದು ತುಂಬಾ ನಂಬಿದ್ದೇನೆ.

ಶ್ಲೋಕ.

ಗುಣಿಸಾವಂಕ್ಷಿಯುಲೆಖ್ಖಂ। ಗುಣಿಸಾರವಿದಳವಿಂದಂ ॥
ಫನಮೊಳಗೆ ಪುಣವಕಳೆಯುಲು। ಬಪ್ಪುದು ತಪ್ಪದುತಪಸಿಗೆ
ಮುಲೆಖ್ಖಂ॥

ಈ ಶ್ಲೋಕವನ್ನು ಹೇಳಿದ ಗಣಿತಜ್ಞನು ಶ್ಲೋ ಕ್ಷೇಮು ಬೀಜದ (ಅದರಲ್ಲಿರುವ ಪಾಜ್ಯಾ ಮಿಷ್ಟಲಿ ಉತ್ತರವನ್ನು ಬಿಡಲಕ್ಕೆ, ನ ಮದರೆ ಮನದ ಅಭಿಪ್ರಾಯವ

ಉದಾಹರಣೆ ಸಹಿತವಾಗಿ ನಮ್ಮ ಸ್ನೇಹಿತ ಬಂಧುಗಳಲ್ಲಿ ಯಾ
ರಾದರೂ ತಿಳುಹಿಸುವರೆಂದು ಅಪೇಕ್ಷಿಸುತ್ತೇನೆ.

ಲೆಕ್ಕ.

ಬುಟ್ಟಿಮಾವುಕಾರನ ಬಳಿಯಲ್ಲಿ ೧೦೦ ಮುತ್ತುಗಳಿದ್ದವು. ಅವುಗಳ ಕ್ರಯವು ೧ನೇದು—೧ವರಹ, ೨ನೇದು—೦ ಪಾ
ಪ, ೩ನೇದು—೩ವರಹ ಇವರಂತೆ ಕಡೆಯು ವರದು ೧೦೦ ವ
ರಹ ಕಿಮ್ಮತ್ತು ಆದೆ. ಆ ಮಾವಕಾರನು ಅವುಗಳನ್ನು ತ
ನ್ನ ಹತ್ತುಮಂದಿ ಮಕ್ಕಳಲ್ಲಿ ಹಂಚಿ ಕೊಡಲಾಗಿ, ಎಲ್ಲರಿ
ಗೂ ಅಷ್ಟಷ್ಟೇ ಮುತ್ತುಗಳು ಬರುವವಲ್ಲದೆ ಅವುಗಳ
ಬೆಲೆಯೂ ಹವರೂ ಸಮವಾಗಿಯೇ ಬಂತು; ಅವರೆ ಬಹಿಷ್ಟು
ನಿಗೆ ಎಷ್ಟೆಷ್ಟು ಕಿಮ್ಮತ್ತಿನ ಮುತ್ತುಗಳು ಬಂದವು?

ತಾಳಿಕೋಟಿ.
ಮುಕ್ಕಾಮು ಅಮಿನಭಾವಿ,
ತಾಲೂಕಾ ಧಾರವಾಡ.

ಬಿಂದು ಶಿವರಾಜ,
ಅಸಿಸ್ಟೆಂಟ ಮಾಸ್ತರ

EXCURSION TO KOLHAPUR

ಕೊಲ್ಹಾಪುರದ ಪ್ರವಾಸವು.

ಇಟ್ಟಿನೇ ಪುಟದಿಂದ ಮುಂದೆ ಸಾಗಿದ್ದು.

ಈ ಕೋಣೆಯ ನೆರೆಯ ಕೋಣೆಯಲ್ಲಿ ಭೂಗರ್ಭಶಾ
ಸ್ತ್ರವನ್ನು ವ್ಯಕ್ತಪಡಿಸುವ ಬಿಲೆಗಳು, ನಾನಾತರದ ದಿಣ್ಣಿ
ಮೂಲಿಕೆಗಳು, ಗೋಕಾವಿಯ ಬಣ್ಣದ ಸಾಮಾನುಗಳು ಕ
ಸಗುದ್ದಿನ ಸಾಲುಗೊಳಿಸಿ ರಚಿಸಲ್ಪಟ್ಟಿದ್ದವು.

ಖನಿಜಶಾಸ್ತ್ರ—ಈ ಶಾಸ್ತ್ರಾಭ್ಯಾಸದಿಂದ ಪೃಥ್ವಿಯ
ಪ್ರಾಚೀನ ಸ್ವರೂಪಗಳು, ಬೆಲೆಗಳ ಧರ್ಮ
ಸೂತ್ರ, ಬಣ್ಣ ಮುಂತಾದ ಸಂಗತಿಗಳು.
ಈ ಸಂಗತಿಗಳನ್ನು ಪರೀಕ್ಷಿ

ವಿ. ವಿ. ಪತ್ರಕರ್ತರೇ ತಮ್ಮ ಕರಕಮಲದಲ್ಲಿ ಉದ್ಭವಿಸುವಂಥ ಅತಿಮನೋಹರವಾದ ಪತ್ರಕದ ಪುಟ ೦೧೫ ಸಂಚಿಕೆ ೯ ರಲ್ಲಿ ನಮ್ಮ ದೇಶಬಾಂಧವರಾದ ಮಂಗಳೂರಿನ ಶಾಲಾ ಅಧ್ಯಾಪಕರು ಕೊಟ್ಟ ಮೂರು ಬಗಟಿನ ಜಾಪದನೆಗಳನ್ನು ಬಿಡಿಸಿ, ಬಡಂಬಡಿಕೆ ಬಂದಲ್ಲಿ ಮುಂದಿನ ಅಗಟೀಬರ ತಿಂಗಳ ಸ್ಕೂಲ ಪೇಪರಿನಲ್ಲಿಯೇ ಮುದ್ರಿಸುವಿರೆಂದು ಲಿಖಾಬದ್ಧನಾಗಿರುತ್ತೇನೆ.

೧ನೇ ಬೆಡಗಿನ ಅರ್ಥ (ರಾಟಿ).

೨ನೇ ಬೆಡಗಿನ ಅರ್ಥ (ಕೇತಕೆಯು).

೩ನೇ ಬೆಡಗಿನ ಅರ್ಥ (ಸೂರ್ಯ).

ನೀಲಕಂಠ ಚಿಕ್ಕೂರಿ,
ಹಿ. ಮಾಸ್ತರ ಮುಳಗುಂದ.

ರಾವಸಾ॥ ಕನ್ನಡ ಶಾಲಾಪತ್ರಕದ ಎಡಿಟರವರ ಚರಣ ಸನ್ನಿಧಾನಕ್ಕೆ—

ವಿ॥ ವಿ॥ ಕೆಳಗೆ ಬರೆದ ಶ್ಲೋಕಕ್ಕೂ, ಲೆಖ್ಖಕ್ಕೂ ತಮ್ಮ ಸುಂದರವಾದ ಶಾಲಾ ಪತ್ರಕದಲ್ಲಿ ಸ್ಥಳ ದೊರೆಯುವದೆಂದು ತುಂಬಾ ನಂಬಿದ್ದೇನೆ.

ಶ್ಲೋಕ.

ಎಣಿಸಾಪಂಕ್ತಿಯಲೆಖ್ಖಂ। ಗುಣಿಸಾರವಿದಳದಿಂದಂ ॥
ಘನದೊಳಗೆ ಋಣವಕಳಿಯಲು। ಬಪ್ಪುದು ತಪ್ಪದುತ್ತರವಣಿ
ಯಲೆಖ್ಖಂ

ಈ ಶ್ಲೋಕವನ್ನು ಹೇಳಿದ ಗಣಿತಜ್ಞನು ಭಾ
ಜ್ಯವು ಬೇರೀಜದ (ಅದರಲ್ಲಿರುವ ಪಂಜಿ
ಯಮ್ಮೇಲೆ ಉತ್ತರವನ್ನು ಇಡಲಿಕ್ಕೆ
ನ; ಆವರೆ ಇವರ ಅಭಿಪ್ರಾಯವ

ಉದಾಹರಣ ಸಹಿತವಾಗಿ ನಮ್ಮ ಸ್ಕೂಲ ಬಂಧುಗಳಲ್ಲಿ ಯಾ
ರಾದರೂ ತಿಳುಹಿಸುವರೆಂದು ಅಪೇಕ್ಷಿಸುತ್ತೇನೆ.

ಲೆಕ್ಕ.

ಬುಬ್ಬಸಾವುಕಾರನ ಬಳಿಯಲ್ಲಿ ೧೦೦ ಮುತ್ತುಗಳಿದ್ದವು. ಅವುಗಳ ಕ್ರಯವು ೧ನೇದು—೧ವರಹ, ೨ನೇದು—೨ ವರಹ, ೩ನೇದು—೩ವರಹ ಇವರಂತೆ ಕಡೆಯ ವರದು ೧೦೦ ವರಹ ಕಿಮ್ಮತ್ತು ಅವೆ. ಆ ಸಾವಕಾರನು ಅವುಗಳನ್ನು ತನ್ನ ಹತ್ತುಮಂದಿ ಮಕ್ಕಳಲ್ಲಿ ಹಂಚಿ ಕೊಡಲಾಗಿ, ಎಲ್ಲರಿಗೂ ಅಷ್ಟಷ್ಟೇ ಮುತ್ತುಗಳು ಬರುವವಲ್ಲದೆ ಅವುಗಳ ಬೆಲೆಯಾವರೂ ಸಮವಾಗಿಯೇ ಬಂತು; ಆವರೆ ಬಜೊಬ್ಬನಿಗೆ ಎಷ್ಟೆಷ್ಟು ಕಿಮ್ಮತ್ತಿನ ಮುತ್ತುಗಳು ಬಂದವು?

ತಾಳಿಕೋಟೆ—೭—೧೯೦೦.
ಮುಕ್ಕಾಮ ಅಮಿನಭಾವಿ,
ತಾಲೂಕ ಧಾರವಾಡ.

ಬಿಂದು ಭಿವಾಜಿ,
ಅಸಿಸ್ಟಂಟ ಮಾಸ್ತರ.

EXCURSION TO KOLHAPUR

ಕೊಲ್ಹಾಪುರದ ಪ್ರವಾಸವು.

ಗಟ್ಟನೇ ಪುಟವಿಂದ ಮುಂದೆ ಸಾಗಿದ್ದು.

ಈ ಕೋಣೆಯ ನೆರೆಯ ಕೋಣೆಯಲ್ಲಿ ಭೂಗರ್ಭಶಾಸ್ತ್ರವನ್ನು ವ್ಯಕ್ತಪಡಿಸುವ ಶಿಲೆಗಳು, ನಾನಾತರದ ಔಷಧಿ ಮೂಲಿಕೆಗಳು, ಗೋಕಾವಿಯ ಬಣ್ಣವ ಸಾವಾನುಗಳು ಕ್ರಮದಿಂದ ಸಾಲುಗೊಳಿಸಿ ರಚಿಸಲ್ಪಟ್ಟಿದ್ದವು.

ವಿಷಯಶಾಸ್ತ್ರ—ಈ ಶಾಸ್ತ್ರಾಭ್ಯಾಸದಿಂದ ಪೃಥ್ವಿಯ ನೈಜಚೀನ ಸ್ವರೂಪಗಳು, ಶಿಲೆಗಳ ಫರಗ
ಬಣ್ಣ ಮುಂತಾದ ಸಂಗತಿಗಳು
ಈ ಸಂಗತಿಗಳನ್ನು ಪ್ರತ್ಯಕ್ಷ

ಪ್ರಸನ್ನ ಕೋಧವೃಷ್ಟಿ ವಿಚಾರಗಳೂ, ಶಾಂತವಾದ ದೀರ್ಘೋದ್ಯೋಗಗಳೂ, ನಿಯಮಿತತನ, ಸಮಯನಿಷ್ಠತೆಗಳೂ ಈ ಅದ್ಭುತ ವ್ಯಾಪಾರಗಳ ಮೂಲಕಾರಣಗಳಾಗಿರುತ್ತವೆ. ಈ ಚಮತ್ಕಾರಗಳ ದರ್ಶನ ಲಾಭವು ನಮ್ಮ ಕೃಪಾಸಾಗರರಾದ ಗುರುವರ್ಯರ ಸಹಾಯದಿಂದಲೇ ಸಂಭವಿಸಿತು. ಅವರ ಉಪಕಾರವನ್ನು ನಾವು ಏಂದಿಗೂ ಮರೆಯುವಂತಾಗಿದೆ. ಎಕಾಂಗಿಯಾಗಿ ಹೋಗುವ ಅನಾಥವಿದ್ಯಾರ್ಥಿಗೆ ಇಷ್ಟೆಲ್ಲ ಸುಖಗಳು ಒದಗುವದು ದುರ್ಲಭವೆಂಬದು ಸಹಜವಾಗಿದೆ.

ಪ್ರದರ್ಶನ ಚಮತ್ಕಾರಗಳನ್ನು ನೋಡುವದು ತಾರೀಖು ೦೯/೦೩/೧೯೦೦ ಗೆ ಪೂರ್ಣವಾಯಿತು.

ದಿನಾಲು ಪ್ರಯೋಗ ಮುಂತಾದವುಗಳನ್ನು ನೋಡಲಿಕ್ಕೆ ಬೆಳಿಗ್ಗೆ ಹೋಗುತ್ತಿದ್ದಿವು. ಮುಂಜಾನೆ ಎದ್ದಕೂಡಲೆ ಸ್ನಾನಮಾಡಿ, ವಿಭೂತಿ ಗಂಧಾಕ್ಷತಿಗಳನ್ನು ಧರಿಸಿಕೊಂಡು ಮೊದಲು ಶ್ರೀಮಹಾಲಕ್ಷ್ಮಿಯ ದೇವಾಲಯಕ್ಕೆ ಹೋಗುತ್ತಿದ್ದೆವು. ತರುವಾಯ ಊರೊಳಗಿನ ಸಾಲುಮನೆಗಳನ್ನು ಮನೆಯ ಮುಂದೆ ಇರುವ ಕಾರಂಜಿಗಳ ಶೋಭೆಯನ್ನೂ, ಮನೆಮುಂದಿನ ಸಾಲು ಗಿಡಗಳ ಸೊಬಗನ್ನು ನೋಡುತ್ತಾ ಹೋಗುತ್ತಿದ್ದೆವು. ನಾವು ಇಳಿವ ಶ್ರೀಜಗದ್ಗುರುಗಳ ಮಠದಲ್ಲಿ ತುಂಬಿ ತುಳುಕುವ ಹೌಮಗಳೆಂಬ ಎರಡು ಪುಷ್ಕರಣಿಗಳೂ, ಇವಕ್ಕೆ ಸಮೀಪವಾಗಿಯೇ ಬಂದು ಕಾರಂಜಿಯೂ ಇತ್ತು. ಅದು ಗೋಮುಖವುಳ್ಳದ್ದು. ಆ ಮುಖದಿಂದಲೇ ನೀರು ಹೊರಬೀಳುತ್ತಿತ್ತು. ನೀರುಬರುವ ಕೀಲಿಯನ್ನು ತಿರುವಿದಕೂಡಲೆ ನೀರು ಬತ್ತರದಿಂದ ಹೊರಗೆ ಬರುವಂತಹ ಜಲಸಂಚಯದ ಪ್ರಯೋಜನವು ನೆರೆಯಲ್ಲಿ ಬಹಳವಾಗುತ್ತದೆ.

ಬೆಂಗಳೂರಿನ ಸಮೀಪದಲ್ಲಿ

ಧರೆಗಿಳಿದ ಸ್ವರ್ಗ.

ಬೆಂ. ಜಿ. ಸ್ಟೇ.

ಬೆಂಗಳೂರು ಜಿಲ್ಲೆಯ ಯೋಗ್ಯವಾದ ಹಿತಕರವಾದ
ಹವ್ಯಾಯಿಗಳಿಂದಲೂ ಉತ್ತಮವಾದ ಸಾಲಿನ ಮರಗಳಿಂದಲೂ
ತಿಂಗಳ ಬಗ್ಗೆ.

ಫಲವನಾಡು ಜಿಲ್ಲೆಯು ಮೋಹಕವಾದ ನಿಸರ್ಗದಿಂದ
ಸುಶೋಭಿತವಾಗಿದೆ ಸದಾ ಸುಗಂಧವನ್ನು ಸೂಸುವ
ಬುತ್ತಿಯ ತಿಂಗಳ ಬಗ್ಗೆ.

ಧಾನ್ಯವಾಡ ಸುಬ್ರಹ್ಮಣ್ಯವಾದ ಹುಲ್ಲುಗಾವಲು ನಿ
ಗೆ ಉಲ್ಲಾಸವನ್ನು ಉಂಟುಮಾಡುವ ಬುಲ್ಲು ಗಾಳಿ
ಸಮೃದ್ಧವಾದ ತಿಂಗಳಿಗಳ ಬಗ್ಗೆ.

ಯಾರಿಬೆಸಳ್ಳಿಯ ಮಲಯಪ್ಪರಿಂದ ಪಾಠಮಾಡಿಸಲ್ಪಟ್ಟ
ಹೊಳಗಾನಹಳ್ಳಿಯ ಸಿಲಿಂಗಳು ಬಗ್ಗೆ ಪದ್ಯಪರಿ
ಯಿಂದ ಮಿಂಚಿನ ಅಕ್ಷರದಲ್ಲಿ ಪರಿಣಾಮ ಮುತ್ತು
ಬ್ಯಾಂಗಿ ಎ. ಪಿ. ಹೈಸ್ಕೂಲಿನ ಬಗ್ಗೆ ಪದ್ಯ
ವರಿಗಾಗಿಂದ ಜಾಣನ ಗಾರಂಗಿ ನಾಟಕ.

ಪಾಳಗಾರ ಟೀಲ್.

ಮಮಮಲೆಯಮಲಯಪ್ಪರಿಂದ ಗಾರಂಗಿಯ
ಸಾಲಿನ ಲಕ್ಷ್ಮಿಯ ಬಗ್ಗೆ.

ಸಧರವಾ ಮುಮ್ಮನಿಸಿಪಲ್ ಹುಲ್ಲುಗಾವಲ ಬಗ್ಗೆ
ಗಾರಂಗಿಯ ಪದ್ಯದ ಪದಗಳ.

ಶಿಗಾಂವಿ ಪಿ. ಎ. ಗಾಯಕಪ್ಪರಿಂದ

ಮಾಲಿಮಾಜಿಲ್ಲ.

ಸಿಮಲ್ಲಾ.

ಕನ್ನಡ ಶಾಲಾಪತ್ರ.

KANARESE

SCHOOL PAPER.

ಪುಸ್ತಕ ೨೬.] ಸೆಪ್ಟಂಬರ ೧೮೯೧. [ಸಂಖ್ಯೆ ೯.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೧೯೩
೨. ಫ್ರೆಬೆಲನ ಶಿಶು ಶಿಕ್ಷಣಪದ್ಧತಿ ೧೯೯
೩. ಕಲಿಸುವ ಪದ್ಧತಿಗಳು. ೨೦೭
೪. ಪತ್ರವ್ಯವಹಾರ. ೨೧೨
೫. ನೋಟೀಸು ೨೧೬

CONTENTS.

1. Educational Intelligence and Useful Notes... 193
2. Froebel's Kindergarten System 199
3. Methods of teaching 207
4. Correspondance 212
5. Notice 216

DHARWAR:

PRINTED AT THE KARNATIC BOOK DEPOT PRESS,

1891.

ನಮ್ಮ ಗವರ್ನರರಾದ ನಾಮದಾರ ಲಾರ್ಡ್ ಹಾರಿಸ್ ಧೊರೆಗಳು ಈ ಪಟ್ಟಣಕ್ಕೆ ಹೋದ ಎಪ್ರಿಲ ತಿಂಗಳಲ್ಲಿ ಬಂದಿದ್ದರಷ್ಟೇ. ಆ ಸಾಹೇಬರು ತಮ್ಮ ಆಗಮನದ ಸೂಚಕವಾಗಿ ೧೫೦ ರೂಪಾಯಿಗಳನ್ನು ಮೆ. ಕಲೆಕ್ಟರ ಸಾಹೇಬರವರ ಕಡಿಗೆ ಕಳುಹಿಸಿ ತಕ್ಕ ವ್ಯವಸ್ಥೆ ಮಾಡಲಿಕ್ಕೆ ತಿಳುಹಿಸಿದರು. ಅವರು ಮೆ. ಎಜ್ಯುಕೇಶನಲ್ ಇನಸ್ಪೆಕ್ಟರರೊಡನೆ ಆಲೋಚಿಸಿ ನಿರ್ಣಯಿಸಿರುವದೇನಂದರೆ:—

೧. ಈ ಹಣದಷ್ಟೇ ಹಣವನ್ನು ಜಂತಿಗೆಯಿಂದ ಕೂಡಿಸಿ ಪ್ರತಿ ವರ್ಷಕ್ಕೆ ೧೦೦ ರೂಪಾಯಿಯಂತೆ ವೆಚ್ಚ ಮಾಡಿ ಖಾರೀಕರ ಶಿಕ್ಷಣಕ್ಕೆ ಉತ್ತೇಜನ ಬರುವಂತೆ ೩ ವರ್ಷ ಬಕ್ಷಿಸ ಸಮಾರಂಭವನ್ನು ನೆರವೇರಿಸತಕ್ಕದ್ದು.

೨. ಧಾರವಾಡ ಶಹರದಲ್ಲಿರುವ ಯಾವತ್ತು ಶಾಲೆಗಳ ವಿದ್ಯಾರ್ಥಿಗಳನ್ನು ಅವರ ವಯಸ್ಸಿನ ಮಾನದಿಂದ ೩ ವರ್ಗಗಳಲ್ಲಿ ಸೇರಿಸತಕ್ಕದ್ದು. ಹ್ಯಾಗಂದರೆ—೨೦ ವರ್ಷ ಅದಕ್ಕಿಂತ ಹೆಚ್ಚು ವಯಸ್ಸಿನವರು ೧ನೇ ವರ್ಗದಲ್ಲಿ ೧೫—೧೯ ವರ್ಷ ವಯಸ್ಸಿನವರು ೨ನೇ ವರ್ಗದಲ್ಲಿ, ೧೦—೧೪ ವರ್ಷ ವಯಸ್ಸಿನವರು ೩ನೇ ವರ್ಗದಲ್ಲಿ, ಪ್ರತಿಬಂದು ವರ್ಗದ ಪರೀಕ್ಷೆಯನ್ನು ಇವರಡಿ ಕಾಣಿಸಿದ ವಿಷಯಗಳಲ್ಲಿ ೩ ಜನ ಕಮಿಟದಾರರು ತೆಗೆದುಕೊಂಡು ಪಾಸಾದ ಮೂರು ಜನರಿಗೆ ೧೫, ೧೦, ೮ ರೂಪಾಯಿಗಳ ಇನಾಮನ್ನು ಕೊಡತಕ್ಕದ್ದು.

ಪರೀಕ್ಷೆಯ ವಿಷಯಗಳು:—ಸಾಲಿಯ ಕವಾಯತ್ತು, ಲೋಡು, ಮಲಖಾಂಬ, ಪ್ಯಾರಲಲ್‌ಬಾರ, ಹಾರಿಸುಂಟಲ್‌ಬಾರ, ವ್ಹಾಲ್ಟಿಂಗಹಾರ್ಸ (ಕುದುರೆ), ಓಡುವದು, ಕುಸ್ತೀಹಿಡಿಯುವದು.

೩. ಪ್ರತಿಬಂದು ವರ್ಗದ ೧ನೇ ಇನಾಮಿಗೂ ೧ನೇ ವರ್ಗದ ೨ನೆ ಇನಾಮಿಗೂ ಲಾರ್ಡ್‌ಹಾರಿಸ್ ಧೊರೆಗಳ ಇನಾಮೆಂದೆನ್ನತಕ್ಕದ್ದು.

ನಡಿಯುವ ವರ್ಷದ ಸಮಾರಂಭವು ಟ್ರೇನಿಂಗಕಾಲೇಜ ದಸ್ಸಿ ಆಕ್ಟೋಬರ ತಿಂಗಳಲ್ಲಿ ಆಗುವದು.

ಶಾಲಾಪತ್ರಿಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೇದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೬.] ಸಪ್ಟೆಂಬರ ೧೮೯೧ [ಸಂಚಿಕೆ ೯.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಶ್ರೀಮಂತ ಶಿವಾಜಿರಾವ ಮಹಾರಾಜ ಹೋಳಕರ ಇವರು ತಮ್ಮ ಸಂಸ್ಥಾನದ ರಾಜಧಾನಿಯಾದ ಇಂದೂರಲ್ಲಿ "ಹೋಳಕರ ಕಾಲೇಜ" ಎಂಬದೊಂದು ಆರ್ಟ್ಸ್ ಕಾಲೇಜವನ್ನು ಸ್ಥಾಪಿಸಿರುತ್ತಾರೆ. ಈ ಕಾಲೇಜದ ಸ್ಥಾಪನ ಸಮಾರಂಭವು ಜೂನ ತಿಂಗಳ ೧೦ನೇ ತಾರೀಖಿಗೆ ಆಯಿತು. ಈ ಕಾಲೇಜವನ್ನು ಯಾವ ಯುನಿವ್ಹರ್ಸಿಟೀಗೆ ಶೇರಿಸಬೇಕೆಂಬ ವಿಚಾರವು ಈಗ ನಡೆದದೆ. ಈ ಕಾಲೇಜದಲ್ಲಿ ಕೆಲವು ವರ್ಷ ಫೀ ಇಲ್ಲದೆ ಅಥವಾ ತೀರ ಕಡಿಮೇ ಫೀ ತೆಗೆದುಕೊಂಡು ಕಲಿಸುವ ಯೋಚನೆಯಲ್ಲಿದ್ದಾರೆ. ಈ ಕಾಲೇಜದ ಮುಖ್ಯಗುರುಗಳು ಮಾತ್ರ ಯುರೋಪಿಯನ್ನರಿದ್ದು ಮಿಕ್ಕವರು ಹಿತದ್ದೇಶಿಯರೇ ಇರತಕ್ಕದ್ದೆಂದು ನಿರ್ಣಯವಾಗಿರುತ್ತದೆ. ಇಲ್ಲಿ ಮಿಕ್ಕ ಆರ್ಟ್ಸ್ ಕಾಲೇಜಗಳಲ್ಲಿ ಸಿಕ್ಕುವ ಶಿಕ್ಷಣವಲ್ಲದೆ ದೇಶಹಿತಕ್ಕೆ ಅವಶ್ಯವಾದ ಔದ್ಯೋಗಿಕ ಶಿಕ್ಷಣವಾದರೂ ಸಿಗುವದು. ಇದಂತು ಮಹಾರಾಜರಿಗೆ ಬಳ್ಳಿ ಭೂಷಣದ ಪಂಗತಿಯೇಸರಿ. ವಿದ್ಯಾಸುಧಾರಣೆ ಮುಂತಾದ ವಿಷಯಗಳಲ್ಲಿ ಹೋ

ಳಕರ ಸಂಸ್ಥೆನವು ಹಿಂದೆ ಬಿದ್ದಿರುತ್ತದೆಂಬ ಕುಂದು ಇನ್ನು ಮೇಲೆ ಬೇಗನೆ ದೂರಾಗುವದೆಂಬವಕ್ಕೆ ಏನೂ ಸಂಶಯವಿಲ್ಲ.

ಎನೇ ಸಿನೇ ಗ್ರೇಡ ಮುಲ್ಕೀ ಪರೀಕ್ಷೆಗಳು ಈ ತಿಂಗಳ ಎಂಟನೇ ತಾರೀಖಿನ ದಿವಸ ಆರಂಭವಾಗುವವು. ಪರೀಕ್ಷೆಯ ಫೀಯನ್ನು ಸಪ್ಟಂಬರದ ಎಂಟನೇ ತಾರೀಖಿಗೆ ಕಮಿಟಿಯ ಪ್ರೆಸಿಡೆಂಟರ ಕೈಯಲ್ಲಿ ಕೊಡಬೇಕು.

ಫ್ರಾಂಕ ಮೆಲ್‌ಬೋರ್ನನೆಂಬವನೊಬ್ಬ ಗೃಹಸ್ಥನು ಬೇಕಾವಲ್ಲಿ ಬೇಕಾವಾಗ ಮಳೆ ಕೆಡವುತ್ತೇನೆಂದು ಹೇಳುವವಲ್ಲದೆ ಅಮೇರಿಕವಲ್ಲಿ ಓಹಿಯೋ ಪ್ರಾಂತದೊಳಗೆ ತನ್ನ ಈ ಅದ್ಭುತ ಹಂಬಿಕೆಯ ಚಮತ್ಕಾರವನ್ನು ಮಾಡಿ ತೋರಿಸಿದನು. ಈ ಚಮತ್ಕಾರವನ್ನು ನೋಡುವ ಮನಸ್ಸುಳ್ಳ ಆ ಪಟ್ಟಣದ ಜನರು ತಮ್ಮಲ್ಲಿ ಆಕಾಶವು ನಿರಭ್ರವಾಗಿರುವದನ್ನು ನೋಡಿ ಮಂಗಳವಾರ ದಿವಸ ಮಳೆ ಕೆಡವಿಸೆಂದು ಮೆಲ್‌ಬೋರ್ನನಿಗೆ ತಿಳಿಸಿದರು. ಅದರಂತೆ ಅವನು ತನ್ನ ಪ್ರಯತ್ನಕ್ಕೆ ಹತ್ತಿದನು. ಬಂದೆರಡು ದಿವಸಗಳಲ್ಲಿ ಮೋಡಗಳು ಹುಟ್ಟಿ ಸೋಮವಾರ ಅಂದರೆ ಬಂದುದಿವಸ ಮುಂದಾಗಿಯೇ ಮಳೆ ಬಿತ್ತು. ಆ ಮಳೆಯನ್ನು ತಾನೇ ಕೆಡವಿದೆನೆಂದು ಅವನು ಸಾರಿದನು. ಆದರೆ ಜನರು ಅದಕ್ಕೆ ಒಡಂಬಡಲಿಲ್ಲ. ಮೊದಲು ಗೊತ್ತಾದಂತೆ ಮಂಗಳವಾರ ದಿವಸವೇ ಮಳೆಯನ್ನು ಕೆಡವಲಿಕ್ಕೆ ಬೇಕೆಂದು ಬತ್ತಾಯ ಮಾಡಿದರು. ಅದಕ್ಕೂ ಒಡಂಬಟ್ಟು ಅವನು ಪುನಃ ಪ್ರಯತ್ನ ನಡಿಸಿದನು. ಮಂಗಳವಾರ ಹಗಲೆಲ್ಲ ಆಕಾಶವು ಸ್ವಚ್ಛವಾಗಿತ್ತು. ಮಳೆಯ ಚಿಹ್ನವು ಎಲ್ಲಿಯೂ ಕಾಣಿಸಲಿಲ್ಲ. ಆದರೆ ನಡುರಾತ್ರಿಯಲ್ಲಿ ಮೋಡಗಳು ಕವಿದು ಮೊದಲು ಅಲ್ಪ ತರುವಾಯ ದೊಡ್ಡ ವೃಷ್ಟಿಯಾಯಿತು. ಮೆಲ್‌ಬೋರ್ನನು

೨,೫೧,೦೦೦ ಚದರಾಷ್ಟ ಈ ಭೂಮಿಯಮೇಲೆ ಜೀವಾದಾಗ ಮೆ
ಳೆಯನ್ನು ಕೆಡವುತ್ತೇನೆಂದು ಸಾರುತ್ತಾನಂತೆ!!

ಗ್ಲಾಡಸ್ಟನ ಧೊರೆಗಳು ಬಿಮುವ ಪೊತ್ತಿಗೆ ಯಾವಾಗಲೂ ತಮ್ಮ ಕೈಯಲ್ಲಿ ಸೀಸಪೇನನ್ನು ಹಿಡುಕೊಂಡಿರುತ್ತಾರೆ. ತ
ಮಗೆ ಯೋಗ್ಯವೆಂದು ಕಂಡು ಬಂದ ಸಂಗತಿಯ ಪಾರ್ಶ್ವ
ವಲ್ಲಿ ಬಂದು ಉದ್ದ ಗೆರೆಯನ್ನೆಳೆಯುತ್ತಾರೆ. ಸಂಕಯ ಬಂ
ದಲ್ಲಿ (?) ಪ್ರಶ್ನೆ ಚಿನ್ಹವನ್ನು, ತಮಗೆ ಸರಿಯಾಗಿ ಕಾಣಿಸದಿ
ದ್ದಲ್ಲಿ × ಕತ್ತರಿ ಚಿನ್ಹವನ್ನು ಮಾಡುತ್ತಾರೆ.

ಮುಪ್ಪಿನವರಾಗುವತನಕ ಬದುಕುವ ಬಗ್ಗೆ ಯಾವದಾ
ದರೊಂದು ನಿಯಮವನ್ನು ಹುಡುಕಿ ತೆಗೆಯಬೇಕೆಂಬ ಉದ್ದೇ
ಶದಿಂದ ಈಗಿರುವ ಬೆಸರಾದ ವೃದ್ಧ ಮನುಷ್ಯರಿಗೆ, ತಮ್ಮ
ತಮ್ಮ ಆಚರಣೆ ಹಾಗು ಇತಿಹಾಸ ಇವುಗಳನ್ನು ತಿಳುಹಿ
ಸಬೇಕೆಂದು ಬಂದು ವಿಶ್ವೋದ್ಯೋಗದ ಸಂಘದವರು ಕೇ
ಳಿದರು. ಅವಕ್ಕೆ ನಾಮುದಾರ ಗ್ಲಾಡಸ್ಟನ್ ಧೊರೆಗಳು ಉ
ತ್ತರವನ್ನೇ ಕೊಡಲಿಲ್ಲ; ಅವರಿಗೆ ೯೧ ವರ್ಷ ಬಾಳಿ ಹೊನ್ನೆ
ಹೊನ್ನೆ ತೀರಿಕೊಂಡ ಜರ್ಮನ್ ದೇಶದ ಸೇನಾಪತಿಗಳಾದ
ಕೌಂಟ ವ್ಹಾನ್‌ಮೊಲ್ಟಕೆ ಎಂಬವರು ತಿಳಿಸಿದ್ದೇನೆಂದರೆ:—
" ಯಾವತ್ತು ವ್ಯವಹಾರಗಳನ್ನು ನಿಯಮದಿಂದ ನಡಿಸುವ
ದೊಂದು ಇವಕ್ಕೆ ಮುಖ್ಯ ಸಾಧನವಾಗಿದೆ. ಮತ್ತು ಮಳೆ
ಗಾಗಲಿ, ಚಳಿಗಾಗಲಿ ಪೆದರಿ ಹೊರಗೆ ತಿರುಗಾಡಲಿಕ್ಕೆ ಹೋ
ಗುವದನ್ನು ಬಿಡಬಾರದು. ಎಲ್ಲ ವ್ಯವಹಾರಗಳನ್ನು ನಿಯ
ಮದಿಂದ ನಡಿಸುವದು, ಮತ್ತು ಪರಮೇಶ್ವರನ ಕೃಪೆಯು
ಇವೆರಡು ನನ್ನ ಸುಖವ ವೃದ್ಧಾಪ್ಯಕ್ಕೆ ಮುಖ್ಯ ಸಾಧನಗಳಾ
ಗಿವೆ." ಈ ಮಾತು ಅತಿ ಮಹತ್ವದ್ದಿರುತ್ತದೆ; ಪ್ರತಿಯೊಬ್ಬ
ನು ಇವನ್ನು ಲಕ್ಷವಲ್ಲಿಟ್ಟು ಅದರಂತೆ ವರ್ತಿಸತಕ್ಕದು.

ಳಿಕರ ಸಂಸ್ಥಾನವು ಹಿಂದೆ ಬಿದ್ದಿರುತ್ತದೆಂಬ ಕುಂದು ಇನ್ನು ಮೇಲೆ ಬೇಗನೆ ದೂರಾಗುವದೆಂಬವಕ್ಕೆ ಏನೂ ಸಂಶಯವಿಲ್ಲ.

ಎನೇ ಎನೇ ಗ್ರೇಡ ಮುಲ್ಕೀ ಪರೀಕ್ಷೆಗಳು ಈ ತಿಂಗಳ ೨೮ನೇ ತಾರೀಖಿನ ದಿವಸ ಆರಂಭವಾಗುವವು. ಪರೀಕ್ಷೆಯ ಫೀಯನ್ನು ಸಪ್ಟಂಬರನ ೨೬ನೇ ತಾರೀಖಿಗೆ ಕಮಿಟಿಯ ಪ್ರೆಸಿಡೆಂಟರ ಕೈಯಲ್ಲಿ ಕೊಡಬೇಕು.

ಫ್ರಾಂಕ ಮೆಲ್‌ಜೋರ್ನನೆಂಬವನೊಬ್ಬ ಗೃಹಸ್ಥನು ಬೇಕಾದಲ್ಲಿ ಬೇಕಾದಾಗ ಮಳೆ ಕೆಡವುತ್ತೇನೆಂದು ಹೇಳುವವನಲ್ಲದೆ ಅಮೇರಿಕದಲ್ಲಿ ಓಹಿಯೋ ಪ್ರಾಂತದೊಳಗೆ ತನ್ನ ಈ ಅಮೃತ ಪಂಚಿಕೆಯ ಚಮತ್ಕಾರವನ್ನು ಮಾಡಿ ತೋರಿಸಿದನು. ಈ ಚಮತ್ಕಾರವನ್ನು ನೋಡುವ ಮನಸ್ಸುಳ್ಳ ಆ ಪಟ್ಟಣದ ಜನರು ತಮ್ಮಲ್ಲಿ ಆಕಾಶವು ನಿರಭ್ರವಾಗಿರುವವನ್ನು ನೋಡಿ ಮಂಗಳವಾರ ದಿವಸ ಮಳೆ ಕೆಡವಿಸೆಂದು ಮೆಲ್‌ಜೋರ್ನನಿಗೆ ತಿಳಿಸಿದರು. ಅದರಂತೆ ಅವನು ತನ್ನ ಪ್ರಯತ್ನಕ್ಕೆ ಹತ್ತಿದನು. ಬಂದೆರಡು ದಿವಸಗಳಲ್ಲಿ ಮೋಡಗಳು ಹುಟ್ಟಿ ಸೋಮವಾರ ಅಂದರೆ ಬಂದುದಿವಸ ಮುಂದಾಗಿಯೇ ಮಳೆ ಬಿತ್ತು. ಆ ಮಳೆಯನ್ನು ತಾನೇ ಕೆಡವಿದೆನೆಂದು ಅವನು ಸಾರಿದನು. ಆದರೆ ಜನರು ಅದಕ್ಕೆ ಬೆಡಂಬಡಲಿಲ್ಲ. ಮೊದಲು ಗೊತ್ತಾದಂತೆ ಮಂಗಳವಾರ ದಿವಸವೇ ಮಳೆಯನ್ನು ಕೆಡವಲಿಕ್ಕೆ ಬೇಕೆಂದು ಬತ್ತಾಯ ಮಾಡಿದರು. ಅದಕ್ಕೂ ಒಡಂಬಟ್ಟು ಅವನು ಪುನಃ ಪ್ರಯತ್ನ ನಡಿಸಿದನು. ಮಂಗಳವಾರ ಹಗಲೆಲ್ಲ ಆಕಾಶವು ಸ್ವಚ್ಛವಾಗಿತ್ತು. ಮಳೆಯ ಚಿಪ್ಪುವು ಎಲ್ಲಿಯೂ ಕಾಣಿಸಲಿಲ್ಲ. ಆದರೆ ನಡುರಾತ್ರಿಯಲ್ಲಿ ಮೋಡಗಳು ಕವಿದು ಮೊದಲು ಅಲ್ಪ ತರುವಾಯ ದೊಡ್ಡ ವೃಷ್ಟಿಯಾಯಿತು. ಮೆಲ್‌ಜೋರ್ನನು

೨,೪೧,೦೦೦ ಚದರ ಮೈಲಿ ಭೂಮಿಯುಮೇಲೆ ಜೀವಾದಾಗ ಮು
ಳಿಯನ್ನು ಕೆಡವುತ್ತೇನೆಂದು ಸಾರುತ್ತಾನಂತೆ!!

ಗ್ಲಾಡಸ್ಟನ ಹೊರೆಗಳು ಬಿದುವ ಪೊತ್ತಿಗೆ ಯಾವಾಗಲೂ ತಮ್ಮ ಕೈಯಲ್ಲಿ ನೀಸಪೀನನ್ನು ಹಿಡುಕೊಂಡಿರುತ್ತಾರೆ. ತ
ಮಗೆ ಯೋಗ್ಯವೆಂದು ಕಂಡು ಬಂದ ಸಂಗತಿಯು ಪಾರ್ಶ್ವ
ವಲ್ಲಿ ಬಂದು ಉದ್ದಗೆರೆಯನ್ನೆಳೆಯುತ್ತಾರೆ. ಸಂಕಯ ಬಂ
ದಲ್ಲಿ (?) ಪ್ರಶ್ನೆ ಚಿನ್ಹವನ್ನು, ತಮಗೆ ಸರಿಯಾಗಿ ಕಾಣಿಸದಿ
ದ್ದಲ್ಲಿ × ಕತ್ತರಿ ಚಿನ್ಹವನ್ನು ಮಾಡುತ್ತಾರೆ.

ಮುಪ್ಪಿನವರಾಗುವತನಕ ಬದುಕುವ ಬಗ್ಗೆ ಯಾವೆದಾ
ದರೊಂದು ನಿಯಮವನ್ನು ಹುಡುಕಿ ತೆಗೆಯಬೇಕೆಂಬ ಉದ್ದೇ
ಶದಿಂದ ಈಗಿರುವ ಪೆಸರಾದ ವೈದ್ಯ ಮನುಷ್ಯರಿಗೆ, ತಮ್ಮ
ತಮ್ಮ ಆಚರಣೆ ರಾಗು ಇತಿಹಾಸ ಇವುಗಳನ್ನು ತಿಳುಹಿ
ಸಬೇಕೆಂದು ಬಂದು ವಿಶ್ವೋದ್ಯೋಗದ ಸಂಘಪವರು ಕೇ
ಳಿದರು. ಅವಕ್ಕೆ ನಾಮದಾರ ಗ್ಲಾಡಸ್ಟನ್ ಧೊರೆಗಳು ಉ
ತ್ತರವನ್ನೇ ಕೊಡಲಿಲ್ಲ; ಅವರೆ ೯೦ ವರ್ಷ ಬಾಳಿ ಮೊನ್ನೆ
ಮೊನ್ನೆ ತೀರಿಕೊಂಡ ಜರ್ಮನ್ ದೇಶದ ಸೇನಾಪತಿಗಳಾದ
ಕೌಂಟಿ ವ್ಹಾನ್‌ಮೊಲ್ಟಕೆ ಎಂಬವರು ತಿಳಿಸಿದ್ದೇನೆಂದರೆ:—
"ಯಾವತ್ತು ವ್ಯವಹಾರಗಳನ್ನು ನಿಯಮದಿಂದ ನಡಿಸುವ
ದೊಂದು ಇವಕ್ಕೆ ಮುಖ್ಯ ಸಾಧನವಾಗಿದೆ. ಮತ್ತು ಮಳೆ
ಗಾಗಲಿ, ಚಳಿಗಾಗಲಿ ಪೆವರಿ ಹೊರಗೆ ತಿರುಗಾಡಲಿಕ್ಕೆ ಹೋ
ಗುವದನ್ನು ಬಿಡಬಾರದು. ಎಲ್ಲ ವ್ಯವಹಾರಗಳನ್ನು ನಿಯ
ಮದಿಂದ ನಡಿಸುವದು, ಮತ್ತು ಪರಮೇಶ್ವರನ ಕೃಪೆಯು
ಇವೆರಡು ನನ್ನ ಸುಖದ ವೃದ್ಧಾಪ್ಯಕ್ಕೆ ಮುಖ್ಯ ಸಾಧನಗಳಾ
ಗಿವೆ." ಈ ಮಾತು ಅತಿ ಮಹತ್ವದ್ದಿರುತ್ತದೆ; ಪ್ರತಿಯೊಬ್ಬ
ನು ಇವನ್ನು ಲಕ್ಷವಲ್ಲಿಟ್ಟು ಅದರಂತೆ ವರ್ತಿಸಬೇಕು.

ಇಸವಿ ಸ್ ೧೩೬೪—೬೯ ವರ್ಷದ ಬಂದು ಚೀನದ ಬ್ಯಾಂಕನೋಟು ಶಿಕ್ಕಿರುತ್ತದೆ. ಇದು ಚೀನದ ಬಾದಶ ಹನಾದ "ಹಂಗವೂ" ನ ಕಾಲದ್ದಿರುತ್ತದೆ. ಇದನ್ನು ಈಗ ಬ್ರಿಟಿಷ್ ಮ್ಯೂಜಿಯಮದಲ್ಲಿ ಇಟ್ಟಿರುತ್ತಾರೆ. ಯುರೋಪ ಖಂಡದಲ್ಲಿ ಬ್ಯಾಂಕನೋಟುಗಳೂ ಬ್ಯಾಂಕುಗಳೂ ೧೩ನೇ ಶತಮಾನದಲ್ಲಿ ಸ್ಥಾಪಿಸಲ್ಪಟ್ಟವು. ಅಂದಮೇಲೆ ಯುರೋಪದಲ್ಲಿ ಪ್ರಾರಂಭವಾಗುವದಕ್ಕಿಂತ ೩೦೦ ವರ್ಷಗಳ ಮುಂಚೆಯೇ ಚೀನದೇಶದಲ್ಲಿ ನೋಟುಗಳು ನಡಿಯುತ್ತಿದ್ದವೆಂತಲೂ ಆ ಕಾಲಕ್ಕೆ ಸುಧಾರಿಸಿದ ರಾಷ್ಟ್ರಗಳಲ್ಲಿ ಆ ದೇಶವು ಹೆಸರಾಗಿತ್ತೆಂತಲೂ ಸ್ಪಷ್ಟವಾಗುತ್ತದೆ.

ಅಗಷ್ಟ ತಿಂಗಳ ೧೦ನೇ ತಾರೀಖಿನಿಂದ ೧೩ನೇ ತಾರೀಖಿನ ವರೆಗೆ ಲಂಡನ್ ಪಟ್ಟಣದಲ್ಲಿ ಪೃಥ್ವಿಯೊಳಗಿನ ಹಸರಾದ ವೈದ್ಯರ ಹಾಗು ಆರೋಗ್ಯಾಭಿವೃದ್ಧಿಯ ವಿಷಯವಾಗಿ ಕಳವಳಗೊಳ್ಳುವ ಗೃಹಸ್ಥರ ಬಂದು ಸಾರ್ವರಾಷ್ಟ್ರೀಯ ಸಭೆಯು ಕೂಡಿತ್ತು. ಆ ಸಭೆಗೆ ದೊಡ್ಡ ದೊಡ್ಡ ಸಂಘದವರು ತಮ್ಮ ತಮ್ಮ ಪ್ರತಿನಿಧಿಗಳನ್ನು ನೇಮಿಸಿ ಕಳುಹಿಸಿದ್ದಾರೆ. ಪುಣೆಯ ಸಾರ್ವಜನಿಕ ಸಭೆಯವರು ಸರ್ ಉಯಿಲಿಯಮ್ ಮೆಡರ ಬರ್ನ ಧೊರೆಗಳನ್ನು ತಮ್ಮ ಪ್ರತಿನಿಧಿಗಳನ್ನಾಗಿ ನೇಮಿಸಿರುತ್ತಾರೆ.

ಇತ್ತಿತ್ತಲಾಗಿ ಹಿಂದುಸ್ಥಾನದಲ್ಲಿಯೇ ಗಿರಣಿಗಳು ಸ್ಥಾಪನೆಯಾಗಿ ಅವುಗಳು ಸುಸೂತ್ರ ನಡಿಯಲಾರಂಭಿಸಿದ್ದರಿಂದಲೂ, ಚೀನ ದೇಶದಲ್ಲಿ ಮತ್ತು ಆಫ್ರಿಕದ ಪೂರ್ವದಂಡೆಯ ಪ್ರದೇಶಗಳಲ್ಲಿ ನಮ್ಮ ಗಿರಣಿಗಳ ಬಟ್ಟೆಗಳೇ ಪ್ರಚಲಿತವಾಗಿ ಮಾರಹತ್ತಿದ್ದರಿಂದಲೂ ಮ್ಯಾಂಚೆಸ್ಟರ ಪಟ್ಟಣದೊಳಗಿನ ಗಿರಣಿಗಳ ಒಡೆಯರು ತಮಗೆ ಮೊದಲಿನಂತೆ ಆದಾಯವಾಗದ್ದನ್ನು

ಕೊಂಡು ಅವರು ಇಲ್ಲದ್ದೊಂದು ನೆವನ ತೋರಿಸಿ ನಮ್ಮ ಗಿರಣಿಗಳನ್ನು ಕುಕ್ಕರಬಡಿಯುವ ಪ್ರಯತ್ನ ನಡಿಸಿದ್ದಾರೆ. ನಮ್ಮ ದೇಶದಲ್ಲಿ ಪತ್ತಿಯು ವಿಪುಲವಾಗಿ ಬೆಳೆಯುವವರಿಂದಲೂ ಈ ಲಿಕಾರರು ತುಸು ಸಂಬಳಕ್ಕೆ ಬೇಕಾದಷ್ಟು ಶಿಗುವವರಿಂದಲೂ ನಮ್ಮದೇಶದ ಗಿರಣಿಗಳಿಂದ ಹುಟ್ಟಿದ ಬಟ್ಟೆಗಳನ್ನು ಅಗ್ಗವಾಗಿ ಮಾರಲಿಕ್ಕೆ ಅನುಕೂಲವಾಗಿದೆ. ವಿಲಾಯತಿಯ ಬಟ್ಟೆಗಳನ್ನು ಇವಕ್ಕೂ ಅಗ್ಗವಾಗಿ ಮಾರಲಿಕ್ಕೆ ಅಷ್ಟವಿಲ್ಲದ್ದನ್ನು ಕಂಡು, ಅವರು ನಮ್ಮದೇಶದ ಗಿರಣಿಗಳ ಬಡಪಾಯಿ ಕೂಲಿಕಾರರನ್ನು ದಿನಾಲು ದನಗಳಂತೆ ಬಹಳ ಹೊತ್ತು ದುಡಿಸಿಕೊಳ್ಳುವವರಿಂದ ಅವರ ಆರೋಗ್ಯಕ್ಕೆ ಕೇಡು ಬರುತ್ತದೆ, ಎಂಬ ಮಿಥ್ಯಾವಾದವನ್ನು ಎಬ್ಬಿಸಿ ಹಿಂದುಸ್ಥಾನದ ಗಿರಣಿಗಳಲ್ಲಿ ಕೂಲಿಕಾರರು ಇಂತಿಷ್ಟೇ ಹೊತ್ತಿನವರೆಗೆ ಕೆಲಸಮಾಡಬೇಕೆಂಬ ಕಾಯದೆಯನ್ನು ಮಾಡಬೇಕೆಂದು ಸರಕಾರಕ್ಕೆ ಸೂಚಿಸಿದ್ದಾರೆ. ಈ ವಿಚಾರವಾದರೂ ಆ ಸಭೆಯಲ್ಲಿ ನಡಿಯುತಕ್ಕದ್ದಂಟು. ಈ ವಿಷಯವನ್ನು ಕುರಿತು ಚರ್ಚೆನಡಿಸಿ ಇಂಥ ಕಾಯದೆಯನ್ನು ಮಾಡುವ ಅವಶ್ಯವಿಲ್ಲೆಂದು ಮನಗಾಣಿಸಿ ಕೊಡುವದಕ್ಕಾಗಿ ಮುಂಬಯಿಯೊಳಗಿನ ಪ್ರಮುಖ ವ್ಯಾಪಾರ ಸಂಘದವರು ಡಾಕ್ಟರ ಬುದಾಮ್ಸರಜೀ ಎಂಬವರನ್ನು ಆ ಸಭೆಗೆ ಕಳುಹಿಸಿದ್ದಾರೆ. ಈ ಪ್ರಯತ್ನವು ಸ್ತುತ್ಯವಾದದ್ದಂಟು. ಈ ಸಭೆಯಲ್ಲಿ ಪತಿಸಿದ ಸಂಗತಿಗಳು ಇನ್ನೂ ಪ್ರಸಿದ್ಧಿಸಲ್ಪಟ್ಟಿರುವದಿಲ್ಲ.

ಪೂರ್ವದಲ್ಲಿ ಮಾಂಚೆಸ್ಟರದಿಂದ ಬರುವ ಬಟ್ಟೆಗಳ ಮೇಲೆ ಸರಕಾರದವರು ಕಷ್ಟಮಡ್ಯೂಜ ಅಂದರೆ ಜಕಾತಿ ತೆಗೆದುಕೊಳ್ಳುತ್ತಿದ್ದರು. ಆ ಜಕಾತಿಯನ್ನು ಆ ವ್ಯಾಪಾರಿಗಳ ವಿಜ್ಞಾಪನೆಯಿಂದ ಸರಕಾರದವರಿಗೆ ಮಾಫ ಮಾಡುವ ಪ್ರಸಂಗ ಬಂದು ವರ್ಷಕ್ಕೆ ೫ ಕೋಟಿ ರೂಪಾಯಿಗಳ ಉತ್ಪನ್ನಕ್ಕೆ ನೀರ ಬಿಡಬೇಕಾಯಿತೆಂಬ ಮಾತು ನಾಚ ಇದಿಗೆ ಗೊತ್ತಿರಬಹುದು.

ವೆಸುವಿಯುಸದ ಗುಡ್ಡವು ಈಗ ೬ ವರ್ಷದಿಂದ ಶಾಂತವಾಗಿತ್ತು. ಆದರೆ ಈಗ ಕೆಲವು ದಿವಸಗಳಿಂದ ಪುನಃ ಜ್ವಾಲೆಯನ್ನು ಕಾರಹತ್ತಿರುವದು. ಈ ಗುಡ್ಡದ ಸುತ್ತಳತೆ ೫೦ ಮೈಲು, ಎತ್ತರವು ೪೯೦೦ ಫೂಟು ಇರುತ್ತದೆ. ಇದಕ್ಕೆ ಪನ್ನೊಂದು ಗೋಪುರಾಕಾರದ ಜ್ವಾಲೆ ಕಾರುವ ಬಾಯಿಗಳುಂಟು. ತೋಕಿಯೋದ (ಜಪಾನ) ಹತ್ತರಿರುವ ಫ್ಯೂಜಿಯಾಮಾ ಎಂಬ ಪರ್ವತದಲ್ಲಿ ಸಹ ಜ್ವಾಲೆ ಕಾರುವ ಚಿನ್ಹೆಗಳು ತೋರಹತ್ತಿರುತ್ತವೆ. ಅದರಿಂದ ಜನರು ಗಾಬರಿಯಾಗಿರುತ್ತಾರೆ. ಆಲ್ಲಿ ಎಳನೇ ಮೇ ದಿವಸ ಬಂದು ಭೂಕಂಪದ ಭಕ್ಕಿಯು ತಗಲಿತು.

ಜನರು ವಾಸವಾಗಿರುವ ಅತ್ಯುಚ್ಚ ಪ್ರದೇಶವು ತಿಬೇಟದೊಳಗಿನ ಪಾಲನ್‌ವೆಂಬ ಮತವು. ಅದು ಸಮುದ್ರ ಸಪಾಟಿಗಿಂತ ೧೬೦೦೦ಫೂಟು ಎತ್ತರವದೆ. ಪೇರು ದೇಶದೊಳಗಿನ "ಗಲೇರಾ" ಎಂಬ ರೇಲ್ವೆ ಸ್ಟೇಶನವು ೧೫೬೫೫ ಫೂಟುಎತ್ತರವುಂಟು. ಪೋತೋಸಿ, ಕೂಫಕೋ ಪಟ್ಟಣಗಳು ಕ್ರಮವಾಗಿ ೧೩೬೫೦, ೧೧೪೮೦ ಫೂಟು ಎತ್ತರವಾಗಿರುವವು.

ನ್ಯೂಯಾರ್ಕದಲ್ಲಿ ಎಲ್ಲಕ್ಕೂ ದೊಡ್ಡ ದಿವಸವು (ಹಗಲು) ೧೫ ತಾಸಿನವು ಇರುತ್ತದೆ. ಲಂಡನದಲ್ಲಿ ೧೬೪ ತಾಸಿನವು; ಹಾಂಬರ್ಗದಲ್ಲಿ ೧೬ ತಾಸಿನದು; ಸ್ಟಾಕ್‌ಹೋಮದಲ್ಲಿ ೧೯೪ ತಾಸಿನದು; ಸೆಂಟ ಪೀಟರ್ಸಬರ್ಗದಲ್ಲಿ ೧೯ ತಾಸಿನವು; ತೋರ್ನಿಯವಲ್ಲಿ ೨೦ ತಾಸಿನದು; ಮಾರ್ಚಬರಿಯಲ್ಲಿ ೨೦ನೇ ಮೇದಿಂದ ೨೦ನೇ ಜುಲಾಯಿಯ ವರೆಗೆ ೨ ತಿಂಗಳದ್ದು; ಮತ್ತು ಸ್ವಿಟ್ಜರ್ಲಂಡನದಲ್ಲಿ ೩೨ ತಿಂಗಳದ್ದು ಬಂದು ದೊಡ್ಡ ದಿವಸವಾಗುತ್ತದೆ.

FROEBEL'S KINDER GARTEN SYSTEM.

ಫ್ರೆಬೆಲನ ಬಾಲೋದ್ಯಾನ-ಶಿಕ್ಷಣಪದ್ಧತಿ.

(ಗಳಿಂನೇ ಪುಟವಿಂದ ಮುಂದೆ ಸಾಗಿದ್ದು.)

ಎನೇ ಇನಾಮು.

ಗುಂಡು, ಲಳಿಗೆ (ಸಿಲಿಂದರ), ಘನಾಕೃತಿ.



(ಕಟ್ಟಿಗೆಯಿಂದ ಮಾಡಿದ ಒಂದು ಗುಂಡು, ಒಂದು ಲಳಿಗೆ, ಒಂದು ಘನಾಕೃತಿ ಇಪ್ಪತ್ತು ಒಂದು ಸಂದುಕವಲ್ಲಿ ಇರುತ್ತವೆ. ಗುಂಡಿಗೆ ಒಂದು ಬಂಕೆ ಇರುತ್ತದೆ. ಅದರಲ್ಲಿ ದಾರ ಪೋಣಿಸಿ ಅವನ್ನು ಜೇಕಾದಲ್ಲಿ ತೂಗಗಟ್ಟಬಹುದು. ಲಳಿಗೆ ಎರಡು ಮಗ್ಗಲಿಗೆ ಎರಡು ಬಂಕಿಗಳಿರುತ್ತವೆ. ಘನಾಕೃತಿಗೆ ಮೂರು ವಿಕ್ಕ್ಗಳಿಗೆ ಮೂರು ತೂತುಗಳೂ ಮೂರು ಬಂಕಿಗಳೂ ಇರುತ್ತವೆ. ಇವುಗಳ ಹೊರ್ತು ಆ ಸಂದುಕವಲ್ಲಿ ಪಲವು ಕಡ್ಡಿಗಳೂ ಪಲವು ದಾರಗಳೂ ಇರುತ್ತವೆ. ಆಕೃತಿ ನೋಡು.)

ಬುದ್ಧಿಗೆ ಸಂಸ್ಕಾರವು ಇಂದ್ರಿಯ ವಿಕಾಸವನ್ನೆನುಸರಿಸಿ ಆಗುತ್ತದೆ. ಆವವರಿಂದ ಇಂದ್ರಿಯಗಳ ಶುದ್ಧವಿಕಾಸವೇ ಶಿಕ್ಷೆ

ಣವೆಂದರೂ ಸಲ್ಲುವದು. ೧ನೇ ಇನಾಮಿನ ಆರು ಚೆಂಡುಗಳಿಂದ ಹುಡುಗರು ಕಲಿಯಬೇಕಾದದ್ದನ್ನೆಲ್ಲ ಕಲಿತುಕೊಂಡಮೇಲೆ ಅವರಿಗೆ ಏನಾದರೂ ಹೊಸಪದಾರ್ಥವನ್ನು ಕೊಡುವದು ಉಚಿತವು. ೧ನೇ ಇನಾಮಿನಿಂದ ಹುಡುಗರ ಮನಸಿನಲ್ಲಿ ಕೆಲವು ವಿಚಾರಗಳೂ ಕೆಲವು ಕಲ್ಪನೆಗಳೂ ಹುಟ್ಟಿ ಅವು ತಕ್ಕಮಟ್ಟಿಗೆ ಬಲಗೊಂಡ ಬಳಿಕ, ಅವರಲ್ಲಿ ಹೊಸ ವಿಚಾರವೂ ಹೊಸ ಕಲ್ಪನೆಗಳೂ ಹುಟ್ಟಲಿಕ್ಕೆ ತಕ್ಕಂಥ ಯಾವದಾದರೊಂದು ಆಟದ ಪದಾರ್ಥವನ್ನು ಕೊಡಬೇಕು. ಈ ವೃತ್ತಿಗೆ ಅವರು ಸಾಧಾರಣವಾಗಿ ೧೦ ತಿಂಗಳಿವರು ಇಲ್ಲವೆ ಐದು ವರ್ಷದವರು ಇರುವರು. ನಾವು ಅವರಿಗೆ ಕೊಡುವಂಥ ಹೊಸಪದಾರ್ಥಗಳಲ್ಲಿ ಹಲವು ಹೊಸಘನರ್ಮಗಳು ಇರಲಿಕ್ಕೆ ಬೇಕು. ಫ್ರೆಬೆಲನ ಶಿಕ್ಷಣವಿಧಿತಿಯಂತೆ ೨ನೇ ಇನಾಮನ್ನು ಹುಡುಗರ ಕೈಯಲ್ಲಿ ಕೊಡುವದರಿಂದ ಈ ಉದ್ದೇಶವು ಪೂರ್ಣವಾಗಿ ಕೈಗೂಡುತ್ತದೆ. ಐದಕ್ಕೂಂದು ವಿರುದ್ಧಾಕೃತಿಗಳಾದ ಗುಂಡು ಮತ್ತು ಘನಾಕೃತಿ ಇವು ಈ ಇನಾಮಿನಲ್ಲಿ ಇರುತ್ತವೆ; ಮತ್ತು ಅವೆರಡರ ನಡುವಿನ ಆಕೃತಿಯಾದ ಲಳಿಗೆಯು ಸಹ ಇದರಲ್ಲಿಯೇ ಉಂಟು. ಲಳಿಗೆಯು ಐದಕ್ಕೂಂದು ವಿರುದ್ಧಾಕೃತಿಗಳಾದ ಗುಂಡು, ಘನಾಕೃತಿಗಳನ್ನು ಕೂಡಿಸುವಂಥ ಕಳಿಗೆಯೇ ಇರುತ್ತದೆ.

"ಐದಕ್ಕೊಂದು ವಿಪರೀತವಾದ ವಸ್ತುಗಳು ಕಣ್ಣಿಗೆ ಬೀಳುವದರಿಂದ ಮನಸು ವಿಕಾಸ ಹೊಂದುತ್ತದೆ" ಎಂಬ ತತ್ವವನ್ನನುಸರಿಸಿ ಫ್ರೆಬೆಲನು ತನ್ನ ಶಿಕ್ಷಣವನ್ನು ಸಾಗಿಸುತ್ತಾನೆಂಬದು ೧ನೇ ಇನಾಮಿನ ವಿಷಯವಾಗಿ ಕೊಟ್ಟ ವ್ಯಾಖ್ಯಾನದಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಈ ಸೃಷ್ಟಿಯಲ್ಲಿ ಹೊದಲು ನಿರಾಕಾರವಿದ್ದದ್ದು ಸಾಕಾರವಾಗುತ್ತದೆ; ನಿ

ಜೀರ್ಣವಿದ್ದದ್ದು ಸಜೀವವಾಗುತ್ತದೆ; ಅವೃಶ್ಯವಿದ್ದದ್ದು ದೃಶ್ಯವಾಗುತ್ತದೆ; ಅದೇ ಮೇರೆಗೆ ಮೊದಲು ಪೂರ್ಣವಾಗಿ ಜಡವೆನಾರ್ಥವಿದ್ದದ್ದು ಮುಂದೆ ಜಿಜ್ಞಾಸ್ಯವುಳ್ಳದ್ದಾಗುತ್ತದೆ. ಬುದ್ಧಿಕ್ಕೊಂದು ತೀರಾ ವಿಪರೀತವಾದ ಈ ಸಂಗತಿಗಳು ಸೃಷ್ಟಿಯಲ್ಲಿ ಸಂಭವಿಸುವಂತೆಯೇ ಎಳೆಮನಸಿನ ವಿಶ್ವಾಸವಾದರೂ ಬುದ್ಧಿಕ್ಕೊಂದು ವಿರುದ್ಧವಾದ ಪದಾರ್ಥಗಳನ್ನು ನೋಡುವದರಿಂದಲೇ ಅಂದರೆ ತುಲನಾಮಾಡುವದರಿಂದಲೇ ಆಗಲಿಕ್ಕೆಬೇಕು. ಆದದರಿಂದ ಪುಡುಗರಿಗೆ ಹೊಸದಾಗಿ ಕೊಡತಕ್ಕ ಆಟದ ಬಡಿವೆಗಳು ಮೊದಲಿನ ಬಡಿವೆಗಳಿಗಿಂತ ತುಸು ಭಿನ್ನವಾಗಿರಬೇಕು. ಬಂದುವೇಳೆ ತೀರಾ ಭಿನ್ನವಾಗಿದ್ದರಂತೂ ಬಳ್ಳೀದೇ ಸರಿ. ಇಷ್ಟರಿಂದಲೇ ಮೊದಲಿನ ಬಡಿವೆಗಳನ್ನೆಲ್ಲ ಮೂಲಿಗೆ ಚಲ್ಲಿ ಬಿಡಬೇಕೆಂದು ನಮ್ಮ ಅಭಿಪ್ರಾಯವಲ್ಲ. ಯಾಕೆಂದರೆ ಪುಡುಗರು ಅವುಗಳನ್ನು ಯಾವಾಗಲು ನೋಡುವದರಿಂದ ಬಹು ಉಪಯೋಗವಾಗುತ್ತದೆ. ಹ್ಯಾಗಂದರೆ, ಅವರು ತಮ್ಮ ಮೊದಲಿನ ಆಟದ ಪದಾರ್ಥಗಳಿಗೂ ಹೊಸ ಪದಾರ್ಥಗಳಿಗೂ ಸರಿಮಾಡಿ ನೋಡಲಾರಂಭಿಸುವದರಿಂದ ಅವರ ಅವಲೋಕನ ಶಕ್ತಿಯೂ ತುಲನಾಶಕ್ತಿಯೂ ಬೆಳೆಯಲಾರಂಭಿಸುತ್ತವೆ.

ಪುಡುಗರಿಗೆ ಬುದ್ಧಿಕ್ಕೊಂದು ವಿಪರೀತವಾದ ವಸ್ತುಗಳನ್ನು ಕೊಡಬೇಕೆಂದು ಮೇಲೆ ಬರೆದಿದ್ದೇವೆ. ಅದರೆ ವಿಚಾರಮಾಡಿ ನೋಡಿದರೆ, ತೀರಾ ವಿಪರೀತವಾದ ಪದಾರ್ಥಗಳು ಈ ಸೃಷ್ಟಿಯಲ್ಲಿ ಇಲ್ಲವೇ ಇಲ್ಲ. ನಾವು ಬುದ್ಧಿಕ್ಕೊಂದು ವಿಪರೀತವಾದವುಗಳೆಂದು ಅನ್ನುವ ಮತ್ತು ಎಣಿಸುವ ವಸ್ತುಗಳು ಸ್ವಾಭಾವಿಕವಾಗಿ ಹಾಗಿರುವದು ಅಕಕ್ಯವು. ಪದಾರ್ಥಗಳಲ್ಲಿ ಸಹಜವಾಗಿಯೇ ಇರತಕ್ಕಂಥ ಸಾಧಾರಣ ಗುಣಗಳಿಲ್ಲದಂಥ ವಸ್ತುಗಳು ಈ ಪೃಥ್ವಿಯಲ್ಲಿ ವ್ಯಾ

ಗೆ ಸಿಗುವವು? ಎಂದಿಗೂ ಸಿಗಲಿಕ್ಕಿಲ್ಲ. ಅವುಗಳಿಂದ ನಾವು ಬೂದಕ್ಕೊಂದು ವಿಪರೀತವಾದ ವಸ್ತುಗಳಿಂದು ಭಾವಿಸುವ ಪದಾರ್ಥಗಳಲ್ಲಿ ಸಾಧಮ್ಯವು ಇರಲಿಕ್ಕೇಬೇಕು. ಉದಾಹರಣೆ, ಎನೇ ಇನಾಮಿನಲ್ಲಿ ಹೇಳಿರುವ ಗುಂಡು, ಘನಾಕೃತಿಗಳೆಂಬ ಎರಡು ವಸ್ತುಗಳು ಪರಸ್ಪರ ವಿಪರೀತವಾದ ಪದಾರ್ಥಗಳೆಂದು ಹಿಂದೆ ಹೇಳಿದ್ದೇವೆ. ಆದರೆ ಅವೆರಡೂ ವಸ್ತುಗಳು ಕಟ್ಟಿಗೆಯಿಂದ ಮಾಡಿವಂಥವಿರುತ್ತವೆ. ಗುಂಡಿನ ವ್ಯಾಸವೂ, ಘನದ ಪಿಂಡ, ಅಗಲ, ಉದ್ದಳತೆಗಳೂ ಅವೆರಡರ ಸಮಾನತ್ವವನ್ನು ತೋರಿಸುತ್ತವೆ. ಇದೇಮೇರೆಗೆ ಸಮಾನವೆಂದು ಎಣಿಸಲ್ಪಡುವ ಪಲವು ಪದಾರ್ಥಗಳಲ್ಲಿ ಸಹ ಪರಸ್ಪರ ವಿರೋಧವು ಬಮ್ಮೊಮ್ಮೆ ಕಂಡು ಬರುತ್ತದೆ. ಉದಾಹರಣೆ:—ಗುಂಡು ಮತ್ತು ಎನೇ ಇನಾಮಿನಲ್ಲಿ ಹೇಳಿರುವ ಚಂಡು ಇವು ಆಕಾರದಿಂದ ಸಮಾನವಾಗಿ ತೋರುತ್ತವೆ. ಆದರೆ ಅವುಗಳನ್ನು ಎರಡು ಭಿನ್ನ ಭಿನ್ನ ವಸ್ತುಗಳಿಂದ ಮಾಡಿರುವವರಿಂದ, ಆ ವಸ್ತುಗಳ ಭಿನ್ನ ಭಿನ್ನ ಧರ್ಮಗಳನ್ನನುಸರಿಸಿ ಇವುಗಳಲ್ಲಿಯೂ ಭಿನ್ನತ್ವವು ಇರುವಮುಂಟು. ಗುಂಡನ್ನು ಕಟ್ಟಿಗೆಯಿಂದ ಮಾಡಿರುವದರಿಂದ ಅದರಲ್ಲಿ ಕಾಠಿಣ್ಯವಿದೆ. ಚಂಡು ಉಣ್ಣೆಯುದಿರುವದರಿಂದ ಅದು ಮೆತ್ತಗದೆ. ಗುಂಡನ್ನು ನೆಲಕ್ಕೆ ಅಪ್ಪಳಿಸಿದರೆ ಅದರಿಂದ ಖಣಖಣವೆಂಬ ಸಪ್ಪಳವು ಹುಟ್ಟುತ್ತದೆ. ಚಂಡನ್ನು ಅಪ್ಪಳಿಸಿದರೆ ಹಾಗೆಹುಟ್ಟುವದಿಲ್ಲ. ಈ ಪರಸ್ಪರ ವಿಪರೀತವಾದ ಗುಣಗಳನ್ನು ಹುಡುಗರು ತಿಳುಕೊಂಡು ಮನನಮಾಡಿಕೊಳ್ಳಬೇಕೆಂಬದೇ ಈ ಎನೇ ಇನಾಮಿನ ಉದ್ದೇಶವಿರುತ್ತದೆ.

ಈ ಗುಂಡನ್ನು ಹುಡುಗನ ಮುಂದೆ ಹಿಡಿಯುವಾ. ಮೊದಲು, ಅವನು ಅದನ್ನು ತುಸು ಹೊತ್ತು ದಿಟ್ಟಿಸಿ ನೋಡಿ

ಪನ್ನು; ಆ ಮೇಲೆ ಗನೇ ಇನಾಮಿನೆಲ್ಲಿಯ ಚಂಡಿನ ಆಕಾರಕ್ಕೂ ಇವರ ಆಕಾರಕ್ಕೂ ಇರುವ ಸಮಾನತ್ವವನ್ನು ಕಂಡು, ತಾನು ನೋಡಬೇ ಇದ್ದಂಥ ಬಂದು ತರದ ಬಣ್ಣದ ಚಂಡು ಇದೆಂದು ಗುರುತಿಸುವನು; ಆದರೆ ಆದನ್ನು ಅವನ ಕೈಯಲ್ಲಿ ಕೊಟ್ಟರೆ, ತಾನು ಇಷ್ಟು ದಿವಸಗಳ ವರೆಗೆ ನೋಡಿದಂಥ ಚಂಡುಗಳಿಗಿಂತ ಇದು ಹೆಚ್ಚು ಭಾರವಾದದ್ದು ಹೆಚ್ಚು ಕಠಿಣವಾದದ್ದೂ ಎಂದು ಕಂಡುಕೊಳ್ಳುವನು. ಅದು ಅವನ ಕೈಯೊಳಗಿಂದ ಬೆದ್ದು ಜುಣುಜುಣುವೆಂದು ಸಪ್ಪಳ ಮಾಡುತ್ತ ಅತ್ತಿತ್ತ ಗುಡುಗುಡು ಉರುಳ್ಯಾಡ ಹತ್ತಿದಾಗ್ಗೆ, ಅವನು ಮೊದಲಿನ ಚಂಡುಗಳಿಗಿಂತ ಇದು ಹೆಚ್ಚು ಕಸುವಿನಿಂದಲೂ ಹೆಚ್ಚು ಸಪ್ಪಳ ಮಾಡುತ್ತಲೂ ಚಲಿಸುತ್ತದೆಂದು ಬೇಗನೇ ತಿಳಿದುಕೊಳ್ಳುವನು. ಅದರಿಂದ ಹುಟ್ಟುವ ಸಪ್ಪಳವನ್ನು ಕೇಳಿ ಅವನ ಕರ್ಣೇಂದ್ರಿಯದ ವಿಕಾಸನವಾದರೂ ಅಲ್ಪ ಸ್ವಲ್ಪ ಆಗುವದು; ಯಾಕಂದರೆ ಮೊದಲಿನ ಚಂಡಿನಿಂದ ಸಪ್ಪಳವು ಏನೂ ಆಗುತ್ತಿದ್ದಿಲ್ಲವೆಂದು ಹೇಳಿದರೂ ಹೇಳಬಹುದು. ಈ ಗುಂಡಿನಿಂದ ಆದ ಸಪ್ಪಳವು ಆ ಹುಡುಗನಿಗೆ ತೀರ ಹೊಸದು: ಇವರಂತೆ ಅವನ ಮನಸಿನಲ್ಲಿ ಹುಟ್ಟಿದಂಥ ಆಶ್ಚರ್ಯದಿಂದ ಯುಕ್ತವಾದ ವಿಚಾರವೂ ಕಲ್ಪನೆಯೂ ಸಹ ಅವನಿಗೆ ಹೊಸವೇ ಸರಿ.

ಸಪ್ಪಳವನ್ನು ಹುಟ್ಟಿಸುವ ಧರ್ಮವೇ ಈ ಎನೇ ಇನಾಮಿನಲ್ಲಿರುವ ಮುಖ್ಯ ಲಕ್ಷಣವು. ಅದರಿಂದಲೇ ಹುಡುಗರಿಗೆ ಹೆಚ್ಚಿಗೆ ಆನಂದವಾಗುವ ಸಂಭವವಿರುತ್ತದೆ. ಯಾಕಂದರೆ ಈ ಮೂರು ವಸ್ತುಗಳುಳ್ಳಂಥ ಇನಾಮನ್ನು ಕೊಡಲಿಕ್ಕೆ ಯೋಗ್ಯವಾದ ವಯಸ್ಸಿಗೆ ಉಚ್ಚಾರ ಹಾಗು ಸಪ್ಪಳ ಇವುಗಳ ಮಹತ್ವವು ಹೆಚ್ಚಿರುತ್ತದೆ. ಆ ಕಾಲದಲ್ಲಿ ಹುಡುಗರ ಲಕ್ಷವು ಸುತ್ತು ಮುತ್ತಲು ಆಗುವ ಸಪ್ಪಳದ ಕಡೆಗೆ ವಿಶೇ

ಷವಾಗಿ ಹೋಗುತ್ತಿರುತ್ತದೆ. ಆ ವಯಸ್ಸಿನಲ್ಲಿ ಹುಡುಗರ ಕರ್ಣೇಂದ್ರಿಯದ ವಿಕಾಸಕ್ಕೆ ಆರಂಭವಾಗುತ್ತದೆ. ಈವೊತ್ತಿಗೆ ಹುಡುಗರು ಕೈಗೆ ಸಿಕ್ಕದ್ದನ್ನು ನೆಲಕ್ಕೆ ಅಪ್ಪಳಿಸಿ ಆದರಿಂದ ಸಪ್ಪಳವನ್ನು ಹುಟ್ಟಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಮತ್ತು ತಾವು ಬಾಯಿಂದ " ಪಾ, ಪಾ; ಲಿ, ಲಿ ಮುಂತಾದ ಶಬ್ದಗಳನ್ನು ಉಚ್ಚರಿಸುತ್ತಿರುತ್ತಾರೆ. ಇದಲ್ಲದೆ ತಾಯಿಯಾಗಲಿ, ಬಕ್ಕಲಗಿತ್ತಿಯಾಗಲಿ ಆಡಿಸುತ್ತಿರುವಾಗ್ಗೆ ಆವಳು ತನ್ನ ಬಾಯಿಂದ ಏನಾದರೂ ನುಡಿಯುತ್ತಿರಬೇಕೆಂಬ ಕುತೂಹಲವು ಹುಡುಗರಿಗೆ ಬಹಳವಾಗಿರುತ್ತದೆ. ಆದದರಿಂದ ಈ ಇನಾಮಿನ ಪದಾರ್ಥಗಳನ್ನು ತಕ್ಕೊಂಡು ಹುಡುಗರನ್ನು ಆಡಿಸುತ್ತಿರುವಾಗ್ಗೆ ಪದಗಳನ್ನು ಹಾಡಬೇಕೆಂದು ಫ್ರೆಬೆಲನ ಅಭಿಪ್ರಾಯ ಉಂಟು. ಅವು ಇಂಥವೇ ಇರಬೇಕೆಂದು ಅವನು ಹೇಳುವದಿಲ್ಲ. ಗಾಯನವು ಮನುಷ್ಯರನ್ನು ಆನಂದ ಪಡಿಸುವಂಥ ಸಂಗತಿಗಳಲ್ಲಿ ಎಲ್ಲಕ್ಕೂ ಮೇಲಾದದ್ದು ಇರುತ್ತದೆ; ತಾಯಿಯ ಕಂಠದಿಂದ ಹೊರಟಿಂಥ ಪ್ರೇಮಪೂರಿತವಾದ ಮಧುರ ಹಾಡುಗಳು ಹುಡುಗರ ಕರ್ಣರಂಧ್ರದಲ್ಲಿ ಜೀವನಾಮೃತದಂತೆ ಪ್ರವೇಶಿಸಿ ಅವರಿಗೆ ಸುಖ ನಿದ್ರೆಯನ್ನು ಬರಮಾಡುವದು ನಿಶ್ಚಯವು. ಆದಾಗ್ಯೂ 'ಅತಿಯಾದರೆ ಗತಿಗೆಡಿಸುವದು' ಎಂಬ ನಾಣ್ಣುಡಿಯನ್ನು ಮರಿಯಲಾಗದು. ಪದಗಳು ಸರಸವಾದಂಥವೂ ಮನೋಹರವಾದಂಥವೂ ಇದ್ದಾಗ್ಯಾದರೂ ದಿನೆಂಪ್ರತಿ ಕೇಳುತ್ತ ಹೋದರೆ ಅವುಗಳಲ್ಲಿ ಏನೂ ಮಹತ್ವವು ಉಳಿಯುವದಿಲ್ಲ. ಆದದರಿಂದ ಬಮ್ಮೊಮ್ಮೆ ಬರೇ ಪದಗಳನ್ನು ಹಾಡಬೇಕು, ಬಮ್ಮೊಮ್ಮೆ ಆಟವನ್ನು ಕುರಿತು ರಚಿಸಿದಂಥ ಬರೇ ಪ್ರಶ್ನೆಗಳನ್ನು ಕೇಳಬೇಕು, ಮತ್ತು ಉತ್ತರಗಳನ್ನು ಸೂಚಿಸಬೇಕು. ಉದಾಹರಣೆ:—

"ಈ ಗುಂಡು ಏನು ಮಾಡುತ್ತದೆ?" "ಗುಡು ಗುಡು ಉರುಳುತ್ತದೆ." "ಈಗ್ಗೆ ಏನು ಮಾಡುತ್ತದೆ?" "ಟಣ ಟಣ ಹಾರುತ್ತದೆ" ಇತ್ಯಾದಿ.

ತೀರ ಸಣ್ಣ ಸಣ್ಣ ಮಕ್ಕಳು ಉತ್ತರಗಳನ್ನು ಸಂಜ್ಞೆಗಳಿಂದ ಕೊಡುತ್ತಾರೆ. ಶಬ್ದಗಳಿಂದ ಉತ್ತರ ಕೊಡುವದು ಅವರಿಂದ ಆಗದ ಮಾತು. ಬಂದು ವೇಳೆ ಕೊಟ್ಟರೂ ಏಕಾಕ್ಷರೀ ಶಬ್ದಗಳನ್ನು ಉಚ್ಚರಿಸಿ ಉತ್ತರ ಕೊಡುವ ಪ್ರಯತ್ನ ಮಾಡುವರು, ಇದೇ ಅವರ ಭಾಷೆಯು. ಇವರ ಅಭಿಪ್ರಾಯವು ಅನ್ಯರಿಗೆ ತಿಳಿಯದೇ ಇದ್ದಾಗ್ಯೂ ತಾಯಿಗೆ ಅದು ಕೂಡಲೇ ಸರಿಯಾಗಿ ತಿಳಿಯುವದು. ಹುಡುಗರು ಮಾತಾಡುವಂಥ ಶಬ್ದಗಳು ಅರ್ಥವಾ ಹಾವಭಾವಗಳು ಸ್ಪಷ್ಟವಿರಲಿ, ಅಸ್ಪಷ್ಟವಿರಲಿ, ಸರಿಯಾಗಿರಲಿ, ಇಲ್ಲದಿರಲಿ, ಅವುಗಳಿಗೆ ಪೂರ್ಣವಾಗಿ ಲಕ್ಷಗೊಟ್ಟು ತಿದ್ದುತ್ತ ಹೋಗುವದೇ ಧಿಟವಾಗಿ ಬುದ್ಧಿ ಶಿಕ್ಷಣವೆಂದೆನಿಸಿಕೊಳ್ಳುತ್ತದೆ. ಮೊದಲು ಶುದ್ಧ ಅವಲೋಕನದಿಂದಾವ ಶುದ್ಧಜ್ಞಾನವನ್ನೂ ತದನಂತರ ಅದಂಥ ಹೆಚ್ಚಿನ ಜ್ಞಾನವನ್ನೂ ಶಬ್ದಗಳಿಂದಾಗಲಿ, ಹಾವಭಾವಗಳಿಂದಾಗಲಿ ಸ್ಫುಟವಾಗಿ ತಿಳಿಸಲಿಕ್ಕೆ ಕಲಿಸುವದೇ ನಿಜವಾದ ಬುದ್ಧಿಶಿಕ್ಷಣವೆಂದು ಹೇಳಲ್ಪಡುತ್ತದೆ. ಹುಡುಗರ ಭಾಷೆ ಮತ್ತು ಬುದ್ಧಿ ಇವುಗಳ ವಿಕಾಸವು ಆಗುತ್ತಿರುವಾಗ್ಗೆ ಅವರಿಗೆ ಸಹಾಯ ಮಾಡುತ್ತ ಹೋಗುವದು ಅತ್ಯವಶ್ಯಕವಿರುತ್ತದೆ; ಮತ್ತು ಈ ಪ್ರಕಾರದ ಸಹಾಯವು ಇಂಥ ಶಿಕ್ಷಣದಿಂದಲೇ ಅವರಿಗೆ ದೊರಿಯುತ್ತದೆ.

ಈ ಇನಾಮಿನಲ್ಲಿ, ಮೊಟ್ಟಮೊದಲು ಹುಡುಗರಿಗೆ ಗುಂಡನ್ನು ಚೆನ್ನಾಗಿ ತೋರಿಸಬೇಕು. ಅವನ್ನು ಅವರ ಮುಂದೆ ಬಿಮ್ಮಗೆ ಹಾಗೆಯೇ ಹಿಡಿಯಬೇಕು, ಬಿಮ್ಮಗೆ ಅವರೊಳಗೆ ದಾರ ಪೋಣಿಸಿ ಅವನ್ನು ಎತ್ತರಿಸಿ ಹಿಡಿಯಬೇಕು. ಉಣ್ಣಿಯ ಚಕೆಂಡಿನಿಂದಲೇ ಅವರು ಇಷ್ಟು ಆನಂದಪಟ್ಟಮೇಲೆ

ಲೆ ನಾದಯುಕ್ತವಾದ ಈ ಗುಂಡಿನಿಂದ ಅವರು ವಿಶೇಷವಾಗಿ ಲಾಭವ ಪಡುವರೆಂದು ಮೇಲೆ ಹೇಳಿದ್ದೀವೆ. ಉಣ್ಣಿಯು ಚಂಡಿನಿಂದ ಆಡಬಹುದಾದ ಅನೇಕ ಆಟಗಳನ್ನು ಈ ಗುಂಡಿನಿಂದಲೂ ಆಡಬಹುದು. ಕೆಳಗೆ ಬರೆದ ಪದವನ್ನು ಅನ್ನು ತ್ತಾ ಗುಂಡನ್ನು ಅವರ ಮುಂದೆ ಹಿಡಿದು ಇಲ್ಲವೆ ಅವರ ಕೈಯಲ್ಲಿ ಕೊಟ್ಟು ಅವರನ್ನು ಆಡಿಸಬೇಕು. ತಾಯಿಗಳು ಇಲ್ಲವೇ ಉದ್ಯಾನಪಾಲಕರು ಕೆಲವು ಪದಗಳನ್ನು ಸ್ವತಃ ರಚಿಸಬಹುದು.

ಗೋಲೀಗುಂಡಿದು ಗುಜುಗುಡು ಉರುಳುವದು ।
ಲಿಲಸ್ಯ ಮೂಡದೂ ನಿಲಿಯದು ಎಂದೂ ॥೧॥
ಕೈಯೊಳಗಿಟ್ಟರೆ ಕೈ ಜುಂಬಾಗುವದು ।
ಕೈತಪ್ಪಿದರೆ ಜಾರಿ ಕೆಳಗೆ ಬೀಳುವದು ॥೮॥
ಗರಗರ ತಿರುಗೋದು ಬಲುಚಕೆಂದದಿಂದ ।
ಹಿರಿಹಿರಿ ಹಿಗ್ಗೋದು ಮನಸಂದದಿಂದ ॥೩॥

ಇದೇಮಾತು ಘನಾಕೃತಿಗಾದರೂ ಜರ್ತುತ್ತದೆ. ಅವನ್ನು ಕುರಿತು ರಚಿಸಿದಂಥ ಪದಗಳಲ್ಲಿ ಅದರ ವಿಶೇಷ ಗುಣದ ವರ್ಣನೆಯೇ ಇರತಕ್ಕದ್ದು.

ಉದಾಹರಣೆ:—ಘನಾಕೃತಿಯನ್ನು ಅದರದೊಂದು ಬಾಜುವಿನ ಮೇಲೆ ನಿಲ್ಲಿಸಿದರೆ ಅದು ಸ್ಥಿರವಾಗಿ ನಿಲ್ಲುವದು. ಅತ್ತಿತ್ತ ಎಂದೂ ಉರುಳ್ಯಾಡಲಿಕ್ಕಿಲ್ಲ. ಅದು ತನ್ನ ಪಟಿನ ಮೇಲೆ ಎಂದಿಗೂ ನಿಲ್ಲಲಾರದು. ಗೋಡೆಗಾನಿಸಿ ಇಟ್ಟರೆ ಅದು ಪಟಿನ ಬಂದು ಬಿಂದುವಿನ ಮೇಲೆ ಸಹ ನಿಲ್ಲಬಹುದು. ಗುಂಡಿನಂತೆ ಅದಕ್ಕೂ ವರೂ ಬಂಕಿ ಇರುತ್ತದೆ. ಅವರಲ್ಲಿ ವಾರಪ್ಪೋಣಿಸಿ ಗುಂಡಿನಂತೆ ಅದರಿಂದಲೂ ಆಡಬಹುದು. ಇದಲ್ಲದೆ ಸಂದುಕದಲ್ಲಿದ್ದ ಬೂದು ಸಣ್ಣ ಕಡ್ಡಿಯನ್ನು ಆ ಘನಾಕೃತಿಗಿದ್ದ ತೂತುಗಳೊಳಗಿಂದ ಆರುವಾರು ಹಾಯಿಸಿ ಅವನ್ನು

ಗರಗರ ತಿರುಗಿಸಬೇಕು. ಹೀಗೆ ಅದು ತಿರುಗುವಾಗ್ಗೆ ಆ ಫೆನಾಕೃತಿಯ ಬಾಜುಗಳೂ ಪಣುಗಳೂ ಏನೂ ಕಾಣಿಸದಂತೆ ಆಗುತ್ತವೆ. ಇವನ್ನು ಸಹಾ ಬಂದು ಪದವ ಸಹಾಯದಿಂದ ಹುಡುಗರಿಗೆ ತಿಳಿಯುವಂತೆ ಮಾಡಬೇಕು.

ಆದರೆ ಬಂದು ಮಹತ್ವದ ಮಾತನ್ನು ಯಾವಾಗಲೂ ನೆನಪಿನಲ್ಲಿಡತಕ್ಕದ್ದು. ಅದೇನೆಂದರೆ:—ಹುಡುಗರ ಮನಸಿನಲ್ಲಿ ಆಡುವದು ಇಲ್ಲದಾಗ್ಗೆ ಅವರನ್ನು ಆಡುವದಕ್ಕೆ ಎಂದೂ ಪ ಚ್ಚಬಾರದು. ಕೈಯಲ್ಲಿ ಕೊಟ್ಟ ಬಿಜಿವೆಗಳನ್ನು ಅವರು ಬಿ ಮ್ಮೆ ಅಥವಾ ಎರಡುಸಾರೆ ಬಿಕ್ಕೊಟ್ಟರೆ ಅವನ್ನು ತೆಗೆದು ಬತ್ತಟ್ಟಿಗೆ ಇಡಬೇಕು. ಗುಂಡಿಗೂ ಸುತ್ತು ನುತ್ತಲಿನ ಪ ದಾರ್ಥಗಳಿಗೂ ತುಲನಾಮಾಡಿ ತೋರಿಸಬೇಕು. ಬಣ್ಣಗಳ ಜ್ಞಾನಮಾಡಿ ಕೊಡತಕ್ಕದ್ದಿದ್ದರೆ ಬಂದು ಕಪ್ಪು ಬಣ್ಣದ್ದು ಮತ್ತೊಂದು ಬಿಳೇಬಣ್ಣದ್ದು ಹೀಗೆ ಎರಡು ಗುಂಡುಗಳನ್ನು ಅವರ ಕೈಯಲ್ಲಿ ಕೊಡಬೇಕು. ಇವೆರಡು ಬಣ್ಣಗಳು ರಂಗಮಾಲೆಯೊಳಗಿನ ಮುಖ್ಯ ಬಣ್ಣಗಳಾಗಿರುವವಲ್ಲದೆ ಅ ವುಗಳಲ್ಲಿರುವ ವಿರೋಧವು ನೋಡುವವರ ಕಣ್ಣಿಗೆ ಬಹಿಮು ಕಾಣಿಸುವಂಥಾದ್ದು ಇರುತ್ತದೆ.

METHODS OF TEACHING.

ಕಲಿಸುವ ಪದ್ಧತಿಗಳು.

(೧೯ನೇ ಪುಟದಿಂದ ಮುಂದೆ ನೋಡಿರಿ.)

೫ನೇ ಪಾಠ.

ಒಂದರ ಮೊಗ್ಗೆಯು

ಬಂದರಿಂದ ಹತ್ತರ ವರೆಗೆ ಅಂಕಿಗಳು ಚನ್ನಾಗಿ ಗೊ ತ್ತಾದನಂತರ ಬಂದರಮೊಗ್ಗೆಯು ಅವರಿಗೆ ಸುಲಭವಾಗಿ ತಿ ಳಿಯುವದು. ಹಾಗಂದರೆ:—

ಒಂದೊಂದಲೆ	ಒಂದು	೧×೧=೧
ಇಂದೆರಡ್ಲೆ	ಎರಡು	೧×೭=೭
ಒಂದನೂನ್ಲೆ	ಮೂರು	೧×೩=೩
ಒಂದನಾಲ್ಕಲೆ	ನಾಲ್ಕು	೧×೪=೪
ಒಂದೈದ್ಲೆ	ಐದು	೧×೫=೫
ಒಂದಾರ್ಲೆ	ಆರು	೧×೬=೬
ಒಂದೇಳ್ಲೆ	ಏಳು	೧×೭=೭
ಒಂದೆಂಟ್ಲೆ	ಎಂಟು	೧×೮=೮
ಒಂದೊಂಭತ್ತಲೆ	ಒಂಭತ್ತು	೧×೯=೯
ಒಂದಹತ್ತಲೆ	ಹತ್ತು	೧×೧೦=೧೦

ಪ್ರಶ್ನೆಗಳು.

೧. ಒಬ್ಬೊಬ್ಬನಿಗೆ ಒಂದೊಂದು ಮಾವಿನ ಹಣ್ಣು ಕೊಟ್ಟರೆ ಎಂಟು ಹುಡುಗರಿಗೆ ಎಷ್ಟು ಮಾವಿನ ಹಣ್ಣುಗಳು ಬೇಕಾಗುವವು?

೨. ದುಡ್ಡಿಗೊಂದು ಬಾಳೇ ಹಣ್ಣಾದರೆ, ಆರು ಬಾಳೇ ಹಣ್ಣಿಗೇನು?

೩. ಶೇರು ಹಾಲಿಗೆ ಒಂದು ಆಣೆ ಆದರೆ ಹತ್ತುಶೇರಿನ ಕ್ರಯವೇನು?

೪. ಒಬ್ಬೊಬ್ಬ ಭಿಕ್ಷುಕನಿಗೆ ಒಂದೊಂದು ದುಡ್ಡಿನಂತೆ ಎರಡು ಆಣೆ ಹಂಚಿಕೊಟ್ಟರೆ ಭಿಕ್ಷುಕರು ಎಷ್ಟುಮಂದಿ ಇರಬೇಕು?

೫. ದಿನಾ ಒಂದು ರೂಪಾಯಿಯಂತೆ ಐದು ರೂಪಾಯಿ ಗಳಿಸಲಿಕ್ಕೆ ಎಷ್ಟು ದಿವಸಗಳು ಬೇಕು?

೬. ೩ರಿಂದ ೪ರ ತನಕ ಅನ್ನು; ೫ರಿಂದ ೧೦ರ ತನಕ ಎಣಿಸು?

ನಾಲ್ಕು, ಏಳು, ಒಂದು, ಹತ್ತು ಈ ಅಂಕಿಗಳನ್ನು ಬರಿ.

ಒನೇ ಪಾಠ.

೧೧ರಿಂದ ೨೦ರ ತನಕ ಅಂಕಿಗಳೂ, ಎರಡರ ಮೊಗ್ಗೆಯು.

ಮೊದಲಿನ ಹತ್ತು ಅಂಕಿಗಳಂತೆ ಮುಂದಿನ ಹತ್ತು ಅಂಕಿಗಳನ್ನು ತಿಳಿಸಿ ಕೊಡುವದು. ಹ್ಯಾಗಂದರೆ:—

ಬಂದರವೇಲೊಂದು ಹನ್ನೊಂದು ೧೧=೧೦+೧, ೯+೨, ೪+೩
ಬಂದರವೇಲೆರಡು ಹನ್ನೆರಡು ೧೨=೧೦+೨, ೧೧+೧, ೯+೩
ಬಂದರವೇಲೆ ಮೂರು ಹದಿಮೂರು ೧೩=೧೦+೩, ೧೨+೧, ೧೧+೨
ಬಂದರವೇಲೆ ನಾಲ್ಕು ಹದಿನಾಲ್ಕು ೧೪=೧೦+೪, ೧೩+೧, ೧೨+೨
ಬಂದರವೇಲೈದು ಹದಿನೈದು ೧೫=೧೦+೫, ೧೪+೧, ೧೩+೨
ಬಂದರವೇಲಾರು ಹದಿನಾರು ೧೬=೧೦+೬, ೧೫+೧, ೧೪+೨
ಬಂದರವೇಲೇಳು ಹದಿನೇಳು ೧೭=೧೦+೭, ೧೬+೧, ೧೫+೨
ಬಂದರವೇಲೆಂಟು ಹದಿನೆಂಟು ೧೮=೧೦+೮, ೧೭+೧, ೧೬+೨
ಬಂದರವೇಲೊಂಭತ್ತು ಹತ್ತೊಂಭತ್ತು ೧೯=೧೦+೯, ೧೮+೧, ೧೭+೨
ಎರಡರವೇಲೆ ಶೂನ್ಯ ಇಪ್ಪತ್ತು ೨೦=೧೦+೧೦, ೧೯+೧, ೧೮+೨

ಈ ಮೇರೆಗೆ ೧೧—೨೦ ಅಂಕಿಗಳು ಹ್ಯಾಗೆ ಹುಟ್ಟುತ್ತವೆಂಬವನ್ನು ನೆಟ್ಟಗೆ ತಿಳಿಸಿ ಕೊಡಬೇಕು. ಇಪ್ಪತ್ತು ಅಂಕಿಗಳು ಚನ್ನಾಗಿ ಬಂದರೆ, ಎರಡರ ಮೊಗ್ಗೆಯು ವಿದ್ಯಾರ್ಥಿಯುವಿಗೆ ಸಹಜವೇ ತಿಳಿಯುವದು, ಆವರೆ ಅವನ್ನು ಪಿಡಲಿಕ್ಕೆ ಮಾತ್ರ ಕಲಿಸತಕ್ಕದ್ದು ಹ್ಯಾಗಂವರೆ:—

ಎರಡೊಂದ್ಲೆ ಎರಡು ೨×೧=೨ ಅದ್ದರಿಂದ ಎರಡರ ಅರ್ಧ ಒಂದು.
ಎರಡೆರಡ್ಲೆ ನಾಲ್ಕು ೨×೨=೪ ,, ನಾಲ್ಕರ ಅರ್ಧ ಎರಡು.
ಎರಡಮೂರ್ಲೆ ಆರು ೨×೩=೬ ,, ಆರರ ಅರ್ಧ ಮೂರು.
ಎರಡನಾಲ್ಕಲೆಎಂಟು ೨×೪=೮ ,, ಎಂಟರ ಅರ್ಧ ನಾಲ್ಕು.
ಎರಡೈದ್ಲೆ ಹತ್ತು ೨×೫=೧೦ ,, ಹತ್ತರ ಅರ್ಧ ಐದು.
ಎರಡಾರ್ಲೆ ಹನ್ನೆರಡು ೨×೬=೧೨ ,, ಹನ್ನೆರಡರ ಅರ್ಧ ಆರು.
ಎರಡೇಳ್ಲೆ ಹದಿನಾಲ್ಕು ೨×೭=೧೪ ,, ಹದಿನಾಲ್ಕರ ಅರ್ಧ ಏಳು.
ಎರಡೆಂಟ್ಲೆ ಹದಿನಾರು ೨×೮=೧೬ ,, ಹದಿನಾರರ ಅರ್ಧ ಎಂಟು.
ಎರಡೊಂಬತ್ತೆಲ್ಲೆ ಹದಿನೆಂಟು ೨×೯=೧೮ ,, ಹದಿನೆಂಟರ ಅರ್ಧ ಒಂಭತ್ತು.
ಎರಡಹತ್ತೆಲ್ಲೆ ಇಪ್ಪತ್ತು ೨×೧೦=೨೦ ,, ಇಪ್ಪತ್ತರ ಅರ್ಧ ಹತ್ತು.

ಪ್ರಶ್ನೆಗಳು.

೧. ಒಬ್ಬೊಬ್ಬ ಹುಡುಗನಿಗೆ ಎರಡೆರಡು ದುಡ್ಡಿನಂತೆ ಕೊಟ್ಟಿರೆ ನಾಲ್ಕು ಹುಡುಗರಿಗೆ ಎಷ್ಟು ದುಡ್ಡು ಬೇಕು?

೫. ಹದಿನಾರು ಮುಡ್ಡುಗಳನ್ನು ಒಬ್ಬೊಬ್ಬನಿಗೆ ಎರಡೆರಡರಂತೆ ಕೊಟ್ಟರೆ ಎಷ್ಟು ಹುಡುಗರಿಗೆ ಸಾಕಾಗುವವು?

೬. ಹನ್ನೆರಡು ಮುಡ್ಡುಗಳನ್ನು ಆರು ಹುಡುಗರಿಗೆ ಸರಿಯಾಗಿ ಹಂಚಿಕೊಟ್ಟರೆ ಒಬ್ಬೊಬ್ಬನ ಪಾಲಿಗೆ ಎಷ್ಟೆಷ್ಟು ಮುಡ್ಡು ಬರುವವು?

೭. ಮುಡ್ಡಿಗೆ ಎರಡು ಬಾಳೇ ಹಣ್ಣುಗಳಾದರೆ ಒಂದು ಡಜನಿಗೆ ಎಷ್ಟು?

೮. ಒಬ್ಬ ಮನುಷ್ಯನಿಗೆ ದಿನಾ ಒಂದು ಶೇರು ಅಕ್ಕಿ ಬೇಕು, ಅದರೆ ಇಬ್ಬರಿಗೆ ಎರಡು ದಿವಸಕ್ಕೆ ಎಷ್ಟು ಅಕ್ಕಿ ಹತ್ತುವವು?

೯. ಹನ್ನೊಂದು, ಹದಿನಾಲ್ಕು ಒಂಬತ್ತು, ಹತ್ತೊಂಬತ್ತು, ಹದಿನೂರು ಈ ಅಂಕಿಗಳನ್ನು ಬರಿ.

೧೦. ೧೧, ೧೪, ೧೯, ೧೩, ೧೫, ೧೭, ೧೮, ಈ ಅಂಕಿಗಳನ್ನು ಓದು.

೧೧. ೧೧ರಿಂದ ೧೫ರ ತನಕ ಅನ್ನು. ೭ರಿಂದ ೧೩ರ ತನಕ ಬರಿ.

ಟಿಪ್ಪಣಿ—ಮೇಲಿನಂತೆ ಮುಂದಿನ ಪಾಠಗಳನ್ನು ಕಲಿಸಬೇಕು.

(೧) ೨ರಿಂದ ೩ರ ತನಕ ಅಂಕಿಗಳು ಮತ್ತು ಮೂರರ ಮಗ್ಗಿಯು.
(೨) ೩ರಿಂದ ೪ರ ತನಕ ಅಂಕಿಗಳು ಮತ್ತು ನಾಲ್ಕರ ಮಗ್ಗಿಯು.
(೩) ೪ರಿಂದ ೫ರ ತನಕ ಅಂಕಿಗಳು ಮತ್ತು ಐದರ ಮಗ್ಗಿಯು.
(೪) ೫ರಿಂದ ೬ರ ತನಕ ಅಂಕಿಗಳು ಮತ್ತು ಆರರ ಮಗ್ಗಿಯು.
(೫) ೬ರಿಂದ ೭ರ ತನಕ ಅಂಕಿಗಳು ಮತ್ತು ಏಳರ ಮಗ್ಗಿಯು.
(೬) ೭ರಿಂದ ೮ರ ತನಕ ಅಂಕಿಗಳು ಮತ್ತು ಎಂಟರ ಮಗ್ಗಿಯು.
(೭) ೮ರಿಂದ ೯ರ ತನಕ ಅಂಕಿಗಳು ಮತ್ತು ಒಂಬತ್ತರ ಮಗ್ಗಿಯು.
(೮) ೯ರಿಂದ ೧೦ರ ತನಕ ಅಂಕಿಗಳು ಮತ್ತು ಹತ್ತರ ಮಗ್ಗಿಯು.

ಅಂಕಿಗಳು.

೧—೧೦೦

ಹುಡುಗರಿಗೆ ನೂರರ ತನಕ ಅಂಕಿಗಳೂ ಹತ್ತರ ತನಕ ಮಗ್ಗಿಗಳೂ ಚೆನ್ನಾಗಿ ಬಂದನಂತರ, ಮಾಸ್ತರನು ಕರೇಪಲಿಗೆಯು ಮೇ[illegible]ಕಾದ ಅಂಕಿಗಳನ್ನು ಹುಡುಗರಿಗೆ ಬರಿಯು

ಹೇಳಬೇಕು ಮತ್ತು ತಾನು ಬರಿದ ಅಂಕಿಗಳನ್ನು ಅವರ ಜ
ಪಿಯಿಂದ ಶುದ್ಧವಾಗಿ ಓದಿಸಬೇಕು; ಯಾಗು ಬೇಕಾವಲ್ಲಿಂದ
ಅಂಕಿಗಳನ್ನು ಅನುಕ್ರಮವಾಗಿ ಎಣಿಸಲಿಕ್ಕೆ ಕಲಿಸಬೇಕು.

ಮೊಗ್ಗೆಗಳು.

೧—೩೦

ಸೂಚನೆ—ಒರ ಮೊಗ್ಗೆಯನ್ನು ಅನ್ನು, ಇರ ಮೊಗ್ಗೆಯ
ನ್ನು ಬರಿ, ಮೂರ ನಾಲ್ಕಲೆ ಎಷ್ಟು, ಐದ ಮೂರ್ಲೆ ಏನು?
ಏಳ ಏಳ್ಲೀನು? ಹನ್ನೆರಡರ ಮೊಗ್ಗೆಯನ್ನು ಬರಿ. ಹನ್ನೊಂ
ದೆಂಟ್ಲೆ ಏನು? ಪದಿಮೂರು ಏಳ್ಲೆ ಏನು? ಹದಿನೇಳ ಆರ್ಲೆ
ಏನು? ಹವಿನೈದ ಬಂಭತ್ತಲೆ ಏನು? ದುಡ್ಡಿಗೆ ಬಂದಾವರೆ ಎರ
ಡು ದುಡ್ಡಿಗೆಷ್ಟು? ದುಡ್ಡಿಗೆ ಎರಡಾದರೆ ಎರಡು ದುಡ್ಡಿಗೆಷ್ಟು?
ದುಡ್ಡಿಗೆ ಮೂರಾದರೆ ನಾಲ್ಕು ದುಡ್ಡಿಗೆಷ್ಟು? ದುಡ್ಡಿಗೆ ಹದಿ
ನಾರು ಪೇರ್ಲ ಹಣ್ಣುಗಳಾವರೆ ಎರಡು ಆಣೆಗಳಿಗೆ ಎಷ್ಟು?
ದುಡ್ಡಿಗೆ ಇಪ್ಪತ್ತೈದು ನೀರಲ ಹಣ್ಣುಗಳಾದರೆ ಎಂಟು ದು
ಡ್ಡಿಗೆ ಎಷ್ಟು? ಮೂರು ದುಡ್ಡಿಗೆ ಹದಿಮೂರು ಮಾವಿನ ಹ
ಣ್ಣುಗಳಾವರೆ ಮೂರು ಪಾವಲಿಗಳಿಗೆಷ್ಟು? ಮುಂತಾದ ಪ್ರ
ಶ್ನೆಗಳನ್ನು ಮಾಡಬೇಕು.

ಕಾಲು.

೧—೧೦೦

ಸೂಚನೆ—ನಾಲ್ಕು ಕಾಲು ಏನು? ಎಂಟು ಕಾಲು ಏನು?
ಹನ್ನೆರಡು ಕಾಲು ಎಷ್ಟು? ಹದಿನಾರು ಕಾಲು ಏನು? ಎಷ್ಟು
ಕಾಲು ಐದು? ಎಷ್ಟು ಕಾಲು ಏಳು? ಎಷ್ಟು ಕಾಲು ಹನ್ನೆರ
ಡುವರೆ? ಎಷ್ಟು ಕಾಲು ಹದಿನಾರು? ಎಂಭತ್ತು ಕಾಲು ಏನು?
ಅಣೆಗೆ ಬಂದಾವರೆ ಎರಡು ದುಡ್ಡಿಗೆಷ್ಟು? ಹದಿನಾರು ದುಡ್ಡಿ
ಗೆಷ್ಟು? ಇವೇ ಪೇರೆಗೆ ಅರ್ಧ, ಮುಕ್ಕಾಲು, ಸವ್ವಾ, ವೀಸ,
ಅಡಿಜೇ ಮೊದಲಾವವುಗಳನ್ನು ಸಹ ಕೇಳಬೇಕು.

CORRESPONDENCE.

ಪತ್ರವ್ಯವಹಾರ.

ಸುಧಾರಣಾ ವೃತ್ತಾಂತ.

ರಾವಸಾಹೇಬ ಕನ್ನಡ ಶಾಲಾ ಪತ್ರಿಕೆಯ ವ್ಯವಸ್ಥಾಪಕರ ಸನ್ನಿಧಿಗೆ.

ವಿ. ವಿ. ಕೆಳಗಿನ ಸಂಗತಿಗೆ ತಮ್ಮ ಪತ್ರದಲ್ಲಿ ಸ್ಥಳ ದೊರಿಯಬೇಕೆಂದು ಪ್ರಾರ್ಥಿಸುತ್ತೇನೆ—

ನಡಿಯುವ ವರ್ಷದ ಜನವರಿ ತಿಂಗಳ ಶಾಲಾ ಪತ್ರಿಕೆಯ ೮ನೆಯ ಪುಟದಲ್ಲಿ "ಶಾಲಾ ಗುರುಗಳು ನಿಯಮಿತ ದಿವಸಕ್ಕೊಮ್ಮೆ ಬಂದು ಕಡೆಯಲ್ಲಿ ಒಟ್ಟುಗೂಡಿ ತಮ್ಮ ಕರ್ತವ್ಯವನ್ನು ಹೆಚ್ಚು ಸರಸಾಗಿ ನಡಿಸಲಿಕ್ಕೆ ಉಪಾಯಗಳನ್ನು ಆಲೋಚಿಸಬೇಕು" ಎಂದು ನಾವು ಅಭಿಪ್ರಾಯವನ್ನು ಪ್ರಕಟಿಸಿವ ಮೇರಿಗೆ ಇಲ್ಲಿ ತಾ॥ ೧೯। ೬। ೯೦ನೇ ದಿವಸಾ ಇಲ್ಲಿಯ ಹಾಗೂ ನೆರೆಊರ ಶಾಲಾ ಗುರೂಪಗುರುಗಳು ಒಟ್ಟುಗೂಡಿ ಬಂದು ಸಭೆಯನ್ನು ಸ್ಥಾಪನ ಮಾಡಿದ್ದಾರೆ. ಈ ಸಂಗತಿಯನ್ನು "ಶಿಕ್ಷಕವರ್ಗ ಸುಧಾರಣಾಪೇಕ್ಷೆಗಳಾವ" ತಮಗೆ ತಿಳುಹಿಸುವದು ಯೋಗ್ಯಕಂಡದ್ದರಿಂದ ತಿಳುಹಿಸಿದ್ದೇನೆ. ಸಾದ್ಯಂತವನ್ನಾಗಲಿ, ಸಾರಾಂಶವನ್ನಾಗಲಿ, ತಮ್ಮ ಪತ್ರದಲ್ಲಿ ಮುದ್ರಿಸೋಣಾಗಬೇಕು.

ಸಭೆಯ ವಿವರವು.

ಸಭಾಭಿಧಾನ—ಶಿಕ್ಷಣೋತ್ಕರ್ಷಕ ಸಭಾ ಬಂಕಾಪೂರ.

ಸ್ಥಳ—ಬಂಕಾಪೂರ ಕನ್ನಡ ಶಾಲೆಯ ಇಮಾರತು.

ಕಾಲ—ಪದಿನೈದು ದಿನಕ್ಕೊಂದು ರವಿವಾರ ಮಧ್ಯಾನ್ಹದ ೧—೦ ಘಂಟೆಯಿಂದ ೨ ಘಂಟೆಯವರಿಗೆ ೨ ತಾಸು.

ಶಾಲಕರು—ಬಂಕಾಪೂರದ ನಾಲ್ಕು ಶಾಲೆ ಮತ್ತು ಅದರ ನೆರೆಯಲ್ಲಿರುವ ನೀರ್ಲಿಗಿ, ಮಾಸನಕಟ್ಟಿ, ಅಲವಕಟ್ಟಿ ನಾ

ರಾಯಚೂರು, ಬಾಡ, ತೆವರಮೊಳ್ಳಿಹಳ್ಳಿ ಶಾಲೆಗಳ ಶಿಕ್ಷಕರೇ ಪ ಶಿಕ್ಷಕರೆಲ್ಲರೂಕೂಡಿ ೭೦ ಜನರುಂಟು. ಅವರಲ್ಲಿ ಮೂವರು ೧ನೇ ವರ್ಗದ ಸರಟಿಫಿಕೇಟುಳ್ಳವರೂ, ಇಬ್ಬರು ೨ನೇ ವರ್ಗದ ಸರಟಿಫಿಕೇಟುಳ್ಳವರೂ, ನಾಲ್ವರು ೩ನೇ ವರ್ಗದ ಸರಟಿಫಿಕೇಟುಳ್ಳವರೂ, ಉಳಿದವರು ಅಂಟ್ರೆನ್ಸಿಯವರೂ ಉಂಟು. ಇವೆಲ್ಲರು ೧೫ ದಿನಕ್ಕೊಮ್ಮೆ ತಪ್ಪದೆ ಸಭೆಗೆಬರುವೆವೆಂದು ಬಾಂಡು ಲೇಖನವನ್ನು ಬರೆದಿಟ್ಟಿದ್ದಾರೆ.

ವಿಷಯಗಳೂ ವೇಳೆಯ ವಿಭಾಗಗಳು—(ಅ) ವರ್ಗ ಕಲಿಸುವದು—ಸತಿಗೆ ೨ ವಿಷಯಗಳು ಇಡಲ್ಪಡುತ್ತವೆ. ಬಂದೊಂದು ವಿಷಯಕ್ಕೆ ಮುಕ್ಕಾಲು ತಾಸಿನಂತೆ ೧½ ತಾಸು ಈ ವಿಷಯ ನಡಿಯುವದು.

(ಬ) ಕಲಿಸುವ ವಿಷಯದೊಳಗಿನನ್ಯೂನಾಧಿಕ್ಯಗಳನ್ನು ತಿಳುಹಿಸುವ ಬಗ್ಗೆ ಕಾಲು ತಾಸು.

(ಕ) ೫ನೇ ೬ನೇ ಪುಸ್ತಕಗಳೊಳಗಿನ ಶಾಸ್ತ್ರೀಯ ಪ್ರಯೋಗಗಳನ್ನು ಮಾಡುವದು. ಮತ್ತು "ಸ್ಕಾಲರಕೃತ ಶಿಕ್ಷಣಪದ್ಧತಿಯ" ನಿಯಮಗಳನ್ನು ಓದುವದು, ಮುಂದಿನಸತಿಗೆ ನಡೆಯತಕ್ಕ ವಿಷಯಗಳನ್ನು ನಿರ್ಣಯಿಸುವದಕ್ಕಾಗಿ ಕಾಲುತಾಸು.

ಸಭಾಧಿಕಾರಿಗಳು:—**अ** ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವ ಬಗ್ಗೆ ಮೆಹಬ್ಬೂನ ಪರಾಣ ಸಾಹೇಬ ಬಹಾದ್ದೂರವರಿಗೆ ವಿನಂತಿಯು ಪತ್ರವು ಬರೆದು ಹೋಗಿದೆ, ಅವರು ಈ ಸಭೆಯನ್ನು ಸ್ಥಾಪನಾ ಮಾಡುವದಕ್ಕಾಗಿ ಇಲ್ಲಿಗೆ ಬಂದಾಗ್ಯೆ ನಮಗೆ ಬಹಳೇ ಹುರುಪು ಹುಟ್ಟಿಸಿದವು. **ब** ಕಾರ್ಯದರ್ಶಿತ್ವವು ರಾ. ರಾ. ಗೋ. ವೆ. ದೇಸಪಾಂಡೆ ಪೆಷ್ಕಾರ ಬಂಕಾಪೂರ ಇವರಿಗೆ ಕೊಡಲ್ಪಟ್ಟಿತು. **क** ಮಿಕ್ಕಾದವರೆಲ್ಲರೂ ಸಭಿಕರು.

ಈ ಸಭೆಯು ಸ್ಥಾಪನೆಯಾದನಂತರ ೨ ಸಾರಿ ನೆರವಿತ್ತು. ೧ನೇ ಸಾರಿ ಸಭೆಯ ನಿಯಮಗಳು ಗೊತ್ತಾದವು. ಈ ಸಂಬಂಧದ್ದಾಂದು ನಿಬಂಧವನ್ನು ರಾ. ರಾ. ಕೃ. ಶ್ರೀ. ನಾಡಕರ್ಣಿ ಹೆಡ್ಡಮಾಸ್ತರ ಅಲದಕಟ್ಟಿ ಇವರು ಓದಿದರು. ಅದು ಈ ಸಭೆಯ ಕಾಗದ ಪತ್ರಗಳಲ್ಲಿ ಇಡಲ್ಪಟ್ಟಿದೆ. ಮತ್ತು ಕೆಲವು ಪ್ರಯೋಗ, ಸ್ಫಟಿಕರೂಪ ಹೊಂದಿದ ರಂಗೋಲಿಯ ಪರಿಳು, ನ್ಯಾಪ್ತಾವಲೋಕಗಳು (ತಾಳಿಕೋಟೆಯಿಂದ ತುದಿರುತ್ತವೆ ಅವುಗಳಲ್ಲಿ ಬಂದು ಪ್ರಕಾರದ ಗಿಡದ ಪಡಿಯಚ್ಚುಂಬಟು) ತೋರಿಸಲ್ಪಟ್ಟವು.

೨ನೇ ಸಾರಿ:— ಬಾಲಕರ ವರ್ಗಕ್ಕೆ ಅಂಕಿಗಳೂ, ಬಡವಿಯ ಪಾಠಗಳೂ, (ಹೊಸ ಉಜಳ್ಳಿ ಪುಸ್ತಕದಲ್ಲಿ ತೋರಿಸಿದ ಮೂವರಿಯಂತೆ) ಕಲಿಸಲ್ಪಟ್ಟವು. ಮತ್ತು ಸಜಾತೀಯತ್ವ, ವಿಭಾಜ್ಯತ್ವ, ನಿರ್ಭೇದ್ಯತ್ವ, ಅಮ್ಲಕ್ಷಾರಗಳ ಧರ್ಮ, ಪೃಥ್ವಿಯ ಮೇಲಿನ ವೃತ್ತಗಳು, ಪ್ರವಾಹಿಗಳು ಈ ಕುಂಚಿತ ಪಾಗುವೆದಿಲ್ಲ. ಇತ್ಯಾದಿ ಪ್ರಯೋಗಗಳು ತೋರಿಸಲ್ಪಟ್ಟವು.

ಕೃಪಾಳುಗಳೇ ಮುಂದೆ ಪ್ರಸಂಗಾನುಸಾರ ಭೆಟ್ಟಿಯಾಗಿ ಸಭಾವೃತ್ತಾಂತವನ್ನು ರುಮುಪೆನು, ಲೋಭವಿರಲಿ. ಇಂತಿ ವಿನಂತಿ.

ಮುಕ್ಕಾನು ಬಂಕಾಪೂರ
ತಾರೀಖು ೨೪ | ೬ | ೧೯.

ಸಭಿಕರ ಅಪ್ಪಣೆಯ ಮೇರಿಂದ
G. V. Deshpande.
ಕಾರ್ಯದರ್ಶಿ ಶಿಕ್ಷಣೋತ್ಕರ್ಷ
ಕಸಬಾ ಬಂಕಾಪೂರ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರವ್ರಾಂತ ದಕ್ಷಿಣಭಾಗ ಇವರ ಚರಣಕಮಲಗಳ ಸನ್ನಿಧಾನಕ್ಕೆ.

ವಿ. ವಿ. ಎಡಿಟರ ರಾವಸಾಹೇಬರವರೇ, ತಮ್ಮ ಕರಕಮಲದಲ್ಲಿ ಉದ್ಭವಿಸುವಂಥ ಅತಿಮನೋಹರವಾದ ಬಾಲಾಪ

ತ್ರಕದಲ್ಲಿ ನಾನು ಕೆಳಗೆ ಬರವಂಥಾ ೩ ಮೂರು ಬಗಟಿನ ಚಿತ್ರ ಪದ್ಯಗಳನ್ನು ಮುಂದಿನ ತಿಂಗಳ ಬಾಲಾಪತ್ರಕದಲ್ಲಿ ಛಾಪಿಸಿ ಪ್ರಸಿದ್ಧ ಮಾಡಿಸುವಿರೆಂದು ಅತಿ ಆಶೆಯುಳ್ಳವನಾಗಿದ್ದೇನೆ. ವಯಮಾಡಿ ಸ್ವಲ್ಪಸ್ಥಳ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕಂಭಯುರಡರ ಮೇಲಿನಿಂತಿಹಳು ಬಾಲೇ।
ತುಂಬಿ ಕರಗಳನುಗಿದು ಎಂಟೆಲಿಯ ಮೇಲೆ।।
ಸಂಭ್ರಮಾದಿಂದಲೀ ಕೊರಳ ಜಸಮಾಲೇ।
ಹಂಬಲಿಸುತಿಹಳೋ ಕಾಂತಿ. ನಿನ್ನ ಮೇಲೇ ॥೧॥
ಪಕ್ಕುಂಟುಗಣತಿಲ್ಲ ಪಕ್ಷಿಸ್ಮೃಗವಲ್ಲಾ।
ವೃಕ್ಷಾಗಿಯುಲಿಯಿಲ್ಲ ತರುಮುರದೊಳಿಹುದೂ।।
ಕುಕ್ಷಿಯೊಳು ಮಾಂಸುಂಟು ರಕ್ತತನಗಿಲ್ಲಾ।
ಲಕ್ಷ ಬಗಿಯಿಬೆಡಗು ತಿಳಿದು ಪೇಳುವದೂ ॥೨॥
ಹೆತ್ತವರಿಗ್ಹೋಳದೇಬಂದ ತಾಪುಂಡಾ।
ಹತ್ತೆಂಟುಪ್ಯಾಟೆಯೊಳು ಹೆಸರಿಡಿಸಿಕೊಂಡಾ।
ಹೊತ್ತುತಂದರೆ ಬಂದ ಹೊಸಮುದ್ದುಪಿಂಡಾ।।
ಮುತ್ತಿಕೊಂಡರು ತನಗೆ ಮಿಗಿಲುಪ್ರಚಂಡಾ ॥೩॥

ನನ್ನ ಬಾಂಧವರಾದಂಥ ಸತ್‌ಶಿಕ್ಷಕರೆನಿಸುವಂಥ ಮಾಸ್ತರರೇ, ಮೇಲೆ ಬರದ ಬಗಟುಗಳ ಅರ್ಥಮಾಡುವಿರೆಂದು ಆಶಿಸುತ್ತೇನೆ. ಎಡಿಟರ ಮಹಾರಾಯರೇ ಪತ್ರವು ಬಹಳೇ ಬೆಳಿಯಿತೆಂದು ತಾತ್ಸಾರ ಮಾಡಬೆ, ಬಹಳ ದಿವಸಕ್ಕೆ ಮೊದಲ ನೇಸಾರಿ ಭೆಟ್ಟಿಗೆ ಬಂದವನಿಗೆ ಆನಂದ ಮಾಡಬೇಕೆಂದು ಕರಗೊಂಡ್ಡಿ ಬೇಡಿಕೊಳ್ಳುತ್ತೇನೆ. ತಾರೀಖು ೨೦—೧—೧೧ ನೇ ಇಸ್ವಿ.

ಮುಕ್ಕಾಮು ಮಂಗಳವಾಡ ತಾಲೂಕ ಹಳ್ಳಿಯಾಳ ಜಿಲ್ಲಾ ಕಾನಡಾ. } ಸಹಿ ಗುಡ್ಡೋ ಶಿವರಾಮ, ಕುಲಕರ್ಣಿ ಹೆಸರು ಸನರು ಸ್ಕೂಲ ಮಂಗಳವಾಡ.

NOTICE.

ನೋಟೀಸು.

ಈ ನೋಟೀಸಿನಿಂದ ಕ್ಯುರೇಟರ ಗವರ್ನ್‌ಮೆಂಟ ಸೆಂಟ್ರಲ್ ಬುಕ್ಕ ಡಿಪೋ ಮುಂಬಯಿ ಇವರು ತಿಳಿಸುವದೇನಂದರೆ;—

ತಾ॥ ೧ನೇ ಎಪ್ರಿಲದಿಂದ ತಾ॥ ೩೧ನೇ ಜುಲಾಯಿ ಸನ್ ೧೮೯೯ನೇ ಇಸವಿಯವರೆಗೆ ಛಾಪಿಸಿ ಪ್ರಸಿದ್ಧಿಪಡಿಸಲ್ಪಟ್ಟ ಹೊಸ ಪುಸ್ತಕಗಳು ಸೆಂಟ್ರಲ್ ಬುಕ್ಕ ಡಿಪೋದಲ್ಲಿ ಮಾರಾಟಕ್ಕಾಗಿ ಸಿದ್ಧವಾಗಿವೆ. ಅವುಗಳ ವಿವರವು;—

ಕನ್ನಡ	ಕಿಮ್ಮತು.
೧.ಟ್ರ್ಯಾನ್ಸಲೇಶನ್ ಸೀರೀಜ ಪುಸ್ತಕ ೧ನೇದು ...	೪೫೬
೧. ಯುರೋಪಖಂಡದ ನಕಾಶ	೫೯೦
೧. ಪಾಚನ ಐದನೇ ಪುಸ್ತಕ	೯೧೫
೧. ಕವಿತೆಯ ಮೊದಲನೇ ಪುಸ್ತಕ	೯೦
ಸಂಸ್ಕೃತ.	
೧. ಉಪನಿಷದ್ವ್ಯಾಖ್ಯ ಕೋಶ	೪೯೬
೧. ಪ್ಯಾಲಡ ಬುಕ್ಕ ಆಫ ಋಗ್ವೇದ	೩೯೬
ಇಂಗ್ಲಿಷ.	
೧. ಕುಕ್‌ನ ಕೆಮಿಸ್ಟ್ರೀ	೧೯೬

ಮುಂಬಯಿ
ತಾ॥ ೧೦ ಇಷ್ಟ ೧೯೯೯

(Sd.) G. B. Nene,
ಕ್ಯುರೇಟರ

ವರ್ಗಣೀ ವಸೂಲು.*

ಧಾರವಾಡ ಜಿಲ್ಲೆ.

	ರೂ.	ಆ.	ಪೈ.
ಹುಬ್ಬಳ್ಳಿ ಮ್ಯುನಿಸಿಪಲ್ ಸ್ಕೂಲುಗಳಿಂದ ೧೮೯೧ನೇ ಸಾಲಿನಬಗ್ಗೆ ಜನವರಿಯಿಂದ ಸಪ್ಟಂಬರ ಅಖೈರವರೆಗೆ.	೯	೨	೦
ಹುಬ್ಬಳ್ಳಿ ತಾಲೂಕ ಲೋಕಲ್‌ಬೋರ್ಡ ಹಾಗೂ ಮ್ಯುನಿಸಿಪಲ್ ಸ್ಕೂಲುಗಳಿಂದ ೧೮೯೧ನೇ ಸಾಲಿನಬಗ್ಗೆ ಜುಲೈದಿಂದ ಡಿಸಂಬರ ಅಖೈರವರೆಗೆ.	೧೯	೪	೬

ಬೆಳಗಾವ ಜಿಲ್ಲೆ.

ನಿಪ್ಪಾಣಿ ಮ್ಯುನಿಸಿಪಲ್ ಸ್ಕೂಲುಗಳಿಂದ ೧೮೯೧ನೇ ಸಾಲಿನ ಅಖೈರವರೆಗೆ.	೪	೧೩	೦

ಕಾರವಾರಜಿಲ್ಲೆ.

ತೇರಗಾಂವ ಮಾಸ್ತರರಿಂದ ೧೮೯೧ನೇ ಸಾಲಿನ ಬಾಬತು ಜನವರಿಯಿಂದ ಜೂನ ಅಖೈರವರೆಗೆ ಹಿಂದಿನ ಬಾಕಿ ಸಹಿತ.	೬	೧	೦

ವಿಜಾಪೂರ ಜಿಲ್ಲೆ.

ಡಿ. ಎ. ಇವರಿಂದ ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಲ್ ಸ್ಕೂಲುಗಳ ಬಾಬತ್ತು ೧೮೯೧ ಜೂಲೈ ತಿಂಗಳ ಬಗ್ಗೆ.	೬೦	೧೧	೪

ಕೆರೆಕುಳ.

ಧಾರವಾಡ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರಿಂದ ಸನ ೧೮೯೦–೧೮೯೧ನೇ ಸಾಲುಗಳಬಗ್ಗೆ.	೧	೧೪	೦

---

* ಇದರೊಳಗೇನಾಡರೂ ತಪ್ಪು ಇದ್ದರೆ ಮಾಸ್ತರ ಜನರು ಆಗತ್ಯವಾಗಿ ತಿಳಿಸಬೇಕು.



ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೧೬ನೇ ತಾರೀಖಿನ ದಿವಸ ಕನ್ನಡ ೬ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೬ನೇ ಅಥವಾ ೭ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ಐದು ಫೂಟಿಗಿಂತ ಎತ್ತರಿರುವಂಥವರೂ, ಹದಿನೇಳರ ಮೇಲೆ ಇಪ್ಪತ್ತೈದರ ಒಳಗೆ ವಯಸ್ಸುಳ್ಳವರೂ ಇರಬೇಕು. ಮತ್ತು ಅವರು ವಯಸ್ಸಿನ ದಾಖಲೆಯನ್ನೂ, ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು ಮೇಲೆ ನಮೂದಿಸಿದ ಮುದ್ದತಿನ ಒಳಗಾಗಿ ಬಂದು ಹಾಜರಾಗಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಪಾಧ್ಯೇದವಾರರೇ ಇರಲಿ ಇವರಲ್ಲಿ ಉತ್ತಮ ರೀತಿಯಿಂದ ಪಾಸಾದ ೮೦ ಜನರನ್ನು ಸರಕಾರೀ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳಲಾಗುವದು.

೨. ಪರೀಕ್ಷೆಗೆ ಬರುವ ಉಮೇದವಾರರೆಲ್ಲರು ಪರೀಕ್ಷೆಯ ವಿಷಯಗಳನ್ನು ಚನ್ನಾಗಿ ನೋಡಿಕೊಂಡು ಬರಬೇಕು.

ಟ್ರೇ. ಕಾ. ಧಾರವಾಡ :
ತಾ ॥ ೧೪ನೇ ಸೆಪ್ಟೆಂಬರ :

Raoji B. Karandikar.
ಪ್ರಿನ್ಸಿಪಾಲ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯ ವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯವಿಂದಿತ್ತಪೆನೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೬.] ಅಗಷ್ಟ ೧೮೯೧ [ಸಂಚಿಕೆ ೮.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧವ ವೃತ್ತಾಂತಗಳು.

ಮಹತ್ವವ ಠರಾವು:—ಪ್ರಾಥಮಿಕ ಶಿಕ್ಷಣವ ಕೆಲಸವು ಸರಿಯಾಗಿ ಸಾಗಬೇಕೆಂಬ ಉದ್ದೇಶದಿಂದ ಶಿಕ್ಷಕ ಶಿಕ್ಷಣ ವಿದ್ಯಾಲಯಗಳ್ಳುಬಹುದಿವಸಗಳ ಕೆಳಗೆ ಈ ಇಲಾಖೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟವು. ತರುವಾಯ ಪಾಯಿನಿಕ್ಷರರಾದ ಪೀಲ ಧೊರೆಗಳು ಈ ವಿದ್ಯಾಲಯಗಳನ್ನು ಸುಧಾರಿಸಿದ್ದಲ್ಲದೆ ಟ್ರೈಂಡ ಅಂಟ್ರೈಂಡ ಜನರ ವಿಷಯವಾಗಿ ಕೆಲವು ನಿಯಮಗಳನ್ನು ಮಾಡಿದರು. ಇತ್ತಲಾಗಿ ಪ್ರಾಥಮಿಕ ಬಾಲಿಗಳಲ್ಲಿ ಟ್ರೈಂಡ ಜನರನ್ನೇ ಇಡುವಮು ಗೊತ್ತಾದವರಿಂದ ಕೆಲಸವಾಗಲಿ ಹೆಸರು ಪಡೆದವರೂ ಕಡೀಮರೂ ಆದ ಅಂಟ್ರೈಂಡ ಮಾಸ್ತರರಿಗೆ ಮೈ. ಎ. ಇನಸ್ಪೆಕ್ಟರ ಧೊರೆಗಳು ಟ್ರೈಂಡ ಜನರವ ಕ್ಲಾಸುಗಳನ್ನು ಕೊಡಬಹುದೆಂತಲೂ, ಯೋಗ್ಯರೆಂಬ ಅಂಟ್ರೈಂಡ ಮಾಸ್ತರರನ್ನು ಅರಿಸಿ ಅವರಿಗೆ ರಜೆಯನ್ನು ಕೊಟ್ಟು ಕಾಲೇಜಕ್ಕೆ ಕಳುಹಿಸಬಹುದೆಂತಲೂ ಈಗಿನ ಪಾಯಿನಿಕ್ಷರ ಧೊರೆಗಳು ನಿರ್ಬಂಧ ಮಾಡಿದವು. ಇದಲ್ಲದೆ ಮೆಟ್ರಿಕುಲೇಷನ್ ಕೇಟು ಪಡಿಯುವ ಮನಸ್ಸುಳ್ಳಂಥ ಕಾಲೆಜಿ ಸರ್ಟಿಫಿಕೇಟು

ಸ್ಟೆಂಷ ಮಾಸ್ತರಾವರೂ ಕಾಲೇಜಕ್ಕೆ ಹೋಗಬಹುದೇತಲೂ ವಿಧಿಸಿದರು. ಈ ಮೇರೆಗೆ ಕಾಲೇಜಕ್ಕೆ ಹೋಗುವ ಮಾಸ್ತರರಿಗೆ ಬಿನ್ನ ಪಗಾರಿ ರಜೆಯು ಶಿಕ್ಕುತ್ತಿತ್ತು. ಆದರೆ ಈ ವ್ಯವಸ್ಥೆಯಿಂದ ಅವರ ಪಗಾರವು ಮುಳುಗುವದಲ್ಲದೆ ನೌಕರಿಯು ಮುದ್ದಾತ್ತಾದರೂ ಹೋಗುತ್ತದೆ ಎಂಬದನ್ನು ಆಲೋಚಿಸಿ ಮೆ. ಬೌಟಪಿಲ್ಡ ಧೊರೆಗಳು ಸರಕಾರಕ್ಕೆ ಬರೆದು ಈ ಮುದ್ದತ್ತು ನೌಕರಿಯಲ್ಲಿ ಎಣಿಸಬಹುದೆಂಬ ಠರಾವನ್ನು ಮಾಡಿಸಿರುತ್ತಾರೆ. ಇದೊಂದು ಮಾಸ್ತರ ಜನರಿಗೆ ಅಲಭ್ಯ ಲಾಭವೆಂದು ನಾವು ಎಣಿಸುತ್ತೇವೆ. ಇದರಿಂದ ತಮ್ಮ ಯೋಗ್ಯತೆಯನ್ನು ಬೆಳಿಸುವ ಅಪೇಕ್ಷೆಯುಳ್ಳಂಥ ಟ್ರೈಂಡ ಅಂಟ್ರೈಂಡ ಮಾಸ್ತರರು ಕಲಿತವರ ಪುನರಾವರ್ತನ ಮಾಡಿ ತಮಗೆ ಕೂಡಿದಾಗ ರಜೆಯನ್ನು ಪಡಕೊಂಡು ಕಾಲೇಜಕ್ಕೆ ಹೋಗಿ ಕಲಿಯಲಿಕ್ಕೆ ಅನುಕೂಲವಾಗಿರುವದು. ಇನ್ನು ಮುಂದೆ ಇಂಥ ಮಾಸ್ತರರು ಕಾಲೇಜದಲ್ಲಿ ನಿಂತು ಅಭ್ಯಾಸ ಮಾಡಿದ ದಿವಸಗಳನ್ನು ಅವರ ನೌಕರಿಯ ಮುದ್ದತ್ತಿನಲ್ಲಿ ಹಿಡಿಯಲಾಗುವದು.

ಈ ವರ್ಷ ಅದ ಖಾನೆಷುಮಾರಿಯಿಂದ ಹಿಂದುಸ್ತಾನದ ಜನ ಸಂಖ್ಯೆಯು ಹತ್ತು ವರ್ಷಗಳಹಿಂದೆ ಇದ್ದದಕ್ಕಿಂತ ಮೂರುಕೋಟಿ ಹೆಚ್ಚಾಗಿರುತ್ತದೆಂದು ತೋರುತ್ತದೆ. ಇದು ಬಂದು ಬಗೆಯಿಂದ ಸಮಾಧಾನಕರವಾದ ಸಂಗತಿಯಾಗಿರುತ್ತದೆ. ಆದರೆ ಜನರ ವ್ಯಾಪ್ತಿಯನ್ನೂ ಉಪಜೀವನದ ಸಾಧನಗಳನ್ನೂ ವಿಚಾರಿಸಿ ನೋಡಿದರೆ ಸಮಾಧಾನಕ್ಕೆ ಸ್ವಲ್ಪವೂ ಆಧಾರ ತೋರುವದಿಲ್ಲ. ಕೆಲವು ವರ್ಷಗಳಹಿಂದೆ ಹಂಚರೆ ಧೊರೆಗಳು ಮತ್ತು ಬೇರೆ ಹಿತೈಷಿಗಳು ಹಿಂದುಸ್ತಾನದ ಜನಸಂಖ್ಯೆಯಲ್ಲಿ ೫ ಜನರು ಬಪ್ಪತ್ತೇಳುಂಡು ಬಹು ಕಷ್ಟದಿಂದ ಕಾಲಕಳೆಯುತ್ತಾರೆಂದು ಸಶ್ರಮಣವಾಗಿ ಸ್ಥಾಪಿಸಿದರು. ಅಂದಿನಿಂದ ಇತ್ತಲಾಗೆ ನಮ್ಮ ಜನರ ಸ್ಥಿತಿ ೨೯

ಶಗಳಲ್ಲಿಯೂ ಜೀವನದ ಸಾಧನೆಗಳಲ್ಲಿಯೂ ಏನೂ ಹೆಚ್ಚು ಕಡಿಮೆ ಯಾಗಿರುವದಿಲ್ಲ. ಆದದರಿಂದ ಈ ಮೂರು ಕೋಟಿ ಜನರ ಸ್ಥಿತಿಯನ್ನು ಸಹಜವಾಗಿಯೇ ಊಹಿಸಬಹುದು.

ಹಿಂದುಸ್ಥಾನದ ನಿವಾಸಿಗಳ ಚರಿತಾರ್ಥವು ಸುಸೂತ್ರವಾಗಿ ಹ್ಯಾಗೆ ಸಾಗುವದು, ಅದಕ್ಕೆ ಉಪಾಯಗಳುಯಾವವು, ಎಂಬ ವಿಷಯಗಳನ್ನು ಕುರಿತು ಸರಕಾರದವರು ತೀವ್ರ ವಿಚಾರ ಮಾಡಬೇಕಾಗುವದೆಂದು ತೋರುತ್ತದೆ. ಸದ್ಯಕ್ಕಾದರೂ ಉದಾರ ಪ್ರಭುಗಳು ಈ ವಿಷಯದಲ್ಲಿ ಚರ್ಚೆ ನಡಿಸಿರುತ್ತಾರೆ. ಹುಟ್ಟರ ಸಾಹೇಬರು ತಿಳಿಸುವದೇನಂದರೆ—೧೦ ವರ್ಷದ ಹಿಂದೆ ಬಂಗಾಲ ಪ್ರಾಂತದಲ್ಲಿ ಸರಾಸರಿ ಮಾನದಿಂದ ೧ ಚಜಾಬ್ಕು ಮೈಲಿಗೆ ೪೪೦ ಜನರು ಇದ್ದರು. ಆ ಕಾಲಕ್ಕೆ ಎಷ್ಟೋ ಜನರ ಚರಿತಾರ್ಥ ಸಾಗುವದು ಬಹಳ ದುಸ್ತರವಾಗಿತ್ತು. ಈಗಂತೂ ಅಲ್ಲಿಯ ಜನಸಂಖ್ಯೆಯು ೧ ಚಜಾಬ್ಕು ಮೈಲಿಗೆ ೪೭೧ ಆಗಿರುತ್ತದೆ. ಫಲವತ್ತಾದ ಫ್ರಾನ್ಸದೇಶದಲ್ಲಿ ಸಹ ೧ ಚಜಾಬ್ಕು ಮೈಲಿಗೆ ೧೪೭ಕ್ಕಿಂತ ಹೆಚ್ಚು ಜನರಿಲ್ಲ. ಆದದರಿಂದ ಉಪಜೀವನದ ಬೇರೆ ಉಪಾಯಗಳು ಹುಟ್ಟದೆ ಹೋದರೆ ಹಿಂದುಸ್ಥಾನದ ನಿವಾಸಿಗಳಿಗೆ ಕಷ್ಟದಕಾಲ ಬರುವದೆಂಬದು ಸಹಜವದೆ.

ಸ್ರ ೧೪೭೬—೭೭ನೇ ವರ್ಷದಲ್ಲಿ ಬರಬಿದ್ದಾಗ್ಗೆ, ಅದರ ಕಾರಣವನ್ನೂ ಪ್ರತಿಬಂಧಕ ಉಪಾಯಗಳನ್ನೂ ವಿಚಾರಿಸಲಿಕ್ಕೆ ಸರಕಾರದವರು ಒಂದು ಕಮಿಶನ್ನವನ್ನು ನೇಮಿಸಿದ್ದರು. ಆ ಕಮಿಶನ್ನದ ಅಧ್ಯಕ್ಷರೂ ಕೃಷಿಕರ್ಮಶಾಸ್ತ್ರದಲ್ಲಿ ಪ್ರವೀಣರೂ ಆದ ಸರ್ ಜೇಮ್ಸ ಕೇರ್ಡ ಧೊರೆಗಳು ಈ ಅನರ್ಥಕ್ಕೆ ಬೇಸಾಯದ ಸುಧಾರಣೆ ಮತ್ತು ನಟ್ಟವಸ್ತ್ರಯುಳ್ಳ ಪ್ರದೇಶದಿಂದ ವಿರಳ ವಸ್ತ್ರಯುಳ್ಳ ಪ್ರದೇಶಗಳಿಗೆ ಜನರ ಸ್ಥಳಾಂತರ ಇವೇ ಎರಡು ಮೇಲಾದ ಉಪಾಯಗಳೆಂದು

ಸೂಚಿಸುತ್ತಾರೆ: ಮತ್ತು ಈ ಉಪಾಯಗಳನ್ನು ಜನರು ಕೈ ಕೊಳ್ಳಬೇಕಾದರೆ ಕಾಯಮು ತೆರಿಗೆಯಿಂದ ರೈತರಿಗೆ ಭೂಮಿಯನ್ನು ಸರಕಾರದವರು ಕೊಡುವದು ಉಚಿತವೆಂದು ತಿಳಿಸುತ್ತಾರೆ. ಬಂಗಾಲದ ಲೆಫ್ಟ್ಟನೆಂಟ ಗವ್ಹರ್ನರರೂ ಫ್ಯಾಮಿನ್ ಕಮಿಶನ್ನಿನ ಮೆಂಬರರೂ ಆದ ಸರ್‌ಚಾರ್ಲ್ಸ ಇಲಿಯಟ್ ಥೊರೆಗಳು ಕೀರ್ಜ್ ಸಾಹೇಬರು ಸೂಚಿಸುವ ಉಪಾಯಗಳಿಗಿಂತ ಬೇರೆ ಬೇರೆ ತರದ ವ್ಯಾಪಾರಾಭಿವೃದ್ಧಿಯೇ ಈ ಸಂಕಟ ನಿವಾರಣಕ್ಕೆ ತಕ್ಕ ಉಪಾಯವೆಂದು ಪ್ರತಿಪಾದಿಸುತ್ತಾರೆ. ಸಣಬು, ಕಲ್ಲಿದ್ದಲೆ, ಕಲ್ಲೆಣ್ಣೆ, ಮುಂತಾದವುಗಳ ಕಾರಖಾನೆಗಳನ್ನು ಏತದ್ದೇಶಿಯ ಜನರು ಸಾಗಿಸಿದರೆ ಎಷ್ಟೋ ಜನರ ಚರಿತಾರ್ಥವು ಸಾಗುವದೆಂದು ವಾದಿಸುತ್ತಾರೆ. ಲಾಹೋರದ ಪ್ರೊಫೇಸರ ಓವನ್ನು ಥೊರೆಯು ಇದೇ ಸಂಗತಿಯನ್ನು ಹೇಳುತ್ತಾನೆ. ತಾತ್ಪರ್ಯ ವೇನೆಂದರೆ:—ನಮ್ಮ ಜನರು ಬರೇ ಬೆಸಾಯವನ್ನೇ ಅವಲಂಬಿಸಿ ನಿಂತರೆ ಅವರ ಪರಿಣಾಮವಾಗುವಂತೆ ಇಲ್ಲ. ಕಾರಣ ನಮ್ಮ ದೇಶದ ಜನರಿಗೆ ಔದ್ಯೋಗಿಕ ಶಿಕ್ಷಣವು ದೊರೆಯುವಂತ ಕೈಲಾದ ಮಟ್ಟಿಗೆ ಪ್ರಯತ್ನ ಪಡುವದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಾಗಿದೆ.

ನಮ್ಮ ಇಲಾಖೆಯೊಳಗೆ ಉದ್ಯೋಗ-ಶಿಕ್ಷಣದ ಶಾಲೆಯು ಐನೇಳುಂಟು. ಅವನ್ನು ಸ್ಥಾಪಿಸಿ ೪೫೪ ವರ್ಷಗಳಾದವು. ಅವರೂ ನಮ್ಮ ಪ್ರಾಂತದಿಂದ ಅಲ್ಲಿಗೆ ಬಹುಜನರು ಹೋದಂತೆ ತೋರಲಿಲ್ಲ. ಇವರ ಸಂಬಂಧವಾಗಿ ಸರ್ಕಾರ್‌ನಿಂದ ಇವು ಗೋಸ್ಕರ ನಿರ್ಣಯಿಸಲ್ಪಟ್ಟ ನಿಯಮಗಳ ಸಾರಾಂಶವನ್ನು ನಮ್ಮ ವಾಚಕರ ಸಲುವಾಗಿ ಕೆಳಗೆ ಬರೆಯುತ್ತೇವೆ. ಆ ಶಾಲೆಗೆ "ವಿಕ್ಟೋರಿಯಾ ಜ್ಯುಬಿಲಿ ಟೆಕ್ನಿಕಲ್ ಇನಸ್ಟಿಟ್ಯೂಟು" ಎಂದು ಹೆಸರುಂಟು.

ಫೀ:—ಈ ಶಾಲೆಯಲ್ಲಿ ಲಿಗಲಿ, ಇದಕ್ಕೆ ಸೇರಿವ ಕಾರಣಾ ನೆಯಲ್ಲಿ ಆಥಲಿ ಹಗಲು ಕಲಿಯಲಿಕ್ಕೆ ಹೋಗುವ ವಿದ್ಯಾರ್ಥಿಯು ವರ್ಷಕ್ಕೆ ೫೬ ರೂಪಾಯಿ ಶಿಕ್ಷಣದ ಫೀಯನ್ನು ಮೂರು ಹಪ್ತೆಗಳಿಂದ ಮುಂಗಡ ಕೊಡಬೇಕಾಗುವದು. ೧ನೇ ಹಪ್ತೆಯು ೧೮ ರುಪಾಯಿಗಳನ್ನು ೧೪ನೇ ತಾ॥ ಯು ನವಂಬರ ತಿಂಗಳದ ಆರಂಭಕ್ಕೆ; ೨ನೇ ಹಪ್ತೆಯನ್ನು ೧೪ನೇ ತಾ॥ ಫೆಬ್ರುವಾರಿಯ ಆರಂಭಕ್ಕೆ; ೩ನೇ ಹಪ್ತೆಯನ್ನು ಜೂನ ತಿಂಗಳವ ಆರಂಭಕ್ಕೆ ಕೊಡತಕ್ಕದ್ದು. ನೇಮಕ ಮಾಡಿವ ತಾರೀಖಿಗೆ ಫೀಯನ್ನು ಕೊಡವಂಥ ವಿದ್ಯಾರ್ಥಿಯ ಹೆಸರನ್ನು ರಜಿಸ್ತರದೊಳಗಿಂದ ತೆಗದು ಹಾಕುವರು.

ಶಾಲೆಯನ್ನು ಬಿಡತಕ್ಕ ವಿದ್ಯಾರ್ಥಿಯು ಅರ್ಜಿಯನ್ನು ಮಾಡಿಕೊಳ್ಳಲಿಕ್ಕೆ ಬೇಕು. ಮತ್ತು ಯಾವಹಪ್ತೆಯಲ್ಲಿ ಅರ್ಜಿ ಮಾಡಿಕೊಳ್ಳುತ್ತಾನೋ ಆ ಹಪ್ತೆಯ ಫೀಯನ್ನು ಕೊಡಲಿಕ್ಕೆ ಬೇಕು.

ಅಭ್ಯಾಸ ನಡಿಯುವ ಅವಧಿಗಳು:—ಪ್ರತಿಯೊಂದು ವರ್ಷದಲ್ಲಿ ೩ ಟರ್ಮಗಳು ಅಂದರೆ ಅಭ್ಯಾಸ ನಡಿಯುವ ಅವಧಿಗಳು ಮಾಡಲ್ಪಟ್ಟವೆ. ಮೊದಲನೇದು ೧೪ನೇ ನವಂಬರ ೯ನೇ (ತಾರೀಖಿಗೆ) ಆರಂಭವಾಗಿ ೧೪ನೇ ತಾ॥ ಎಪ್ರೆಲ್ ೧೬ನೇ ತಾರೀಖಿಗೆ ಮುಗಿಯುವದು. ಎರಡನೇದು ೧೪ನೇ ತಾ॥ ಜೂನ ೧೩ನೇ ತಾರೀಖಿಗೆ ಆರಂಭವಾಗಿ ತಾ॥ ೧೩ನೇ ಸಪ್ಟಂಬರಕ್ಕೆ ಮುಗಿಯುವದು.

ಪರೀಕ್ಷೆಯುಫೀ:—ಮೊದಲನೇ ಎರಡನೇ ಪರೀಕ್ಷೆಗಳಿಗಾಗಿ ೦ರೂ. ಫೀಯನ್ನು ಮುಂದಿನ ಪರೀಕ್ಷೆಗಾಗಿ ೫ ರೂ. ಫೀಯನ್ನು ಮುಂಗಡ ಕೊಡಲಿಕ್ಕೆ ಬೇಕು.

ಪ್ರತಿಯೊಂದು ಅಭ್ಯಾಸ ಕ್ರಮವನ್ನು ಮುಗಿಸಲಿಕ್ಕೆ ೩ ವರ್ಷಗಳು ಹಿಡಿಯುವವು.

ಪ್ರವೇಶವು:—ಈ ಶಾಲೆಯನ್ನು ಶೇರಲಿಕ್ಕೆ ಅಪೇಕ್ಷಿಸುವ ವಿದ್ಯಾರ್ಥಿಗಳ ವಯಸ್ಸು ೧೪ ವರ್ಷಕ್ಕಿಂತ ಹೆಚ್ಚು ಇರಲಿಕ್ಕಿಬೇಕು. ಅವರು ಇಂಗ್ಲೀಷ ಶಿನೇ ಇಯತ್ತೆಯಲ್ಲಿ ಪಾಸಾದ ಬಗ್ಗೆ ಸರ್ಟಿಫಿಕೇಟನ್ನು ತೋರಿಸಲಿಕ್ಕೆ ಬೇಕು.

ಈ ಶಾಲೆಯಲ್ಲಿ ನಡಿಯುವ ಅಭ್ಯಾಸವು ಇಬ್ಬಗೆಯಾಗಿರುವದು. ಅದು ಹ್ಯಾಗಂದರೆ:—

(೧) ಶಾಸ್ತ್ರೀಯ ವಿಷಯುಗಳು ಮತ್ತು ಯಾಂತ್ರಿಕ ವಿಷಯುಗಳು. (೨) ಶಾಸ್ತ್ರೀಯ ವಿಷಯುಗಳು ಮತ್ತು ನೇಯಿಗೆಯ ವಿಷಯುಗಳು.

ಶಾಸ್ತ್ರೀಯ ವಿಷಯುಗಳು.

(ಅ) ಯುಂತ್ರಗಳ ಡ್ರಾಯಿಂಗ (ಚಿತ್ರ) ತೆಗೆಯುವದು.
(ಬ) ಉಗಿ.
(ಕ) ಯುಂತ್ರಶಾಸ್ತ್ರದ ಪುಸ್ತಕಜ್ಞಾನ ಮತ್ತು ವ್ಯವಹಾರಜ್ಞಾನ.
(ಡ) ಧ್ವನಿ, ಪ್ರಕಾಶ ಮತ್ತು ಉಷ್ಣತೆ.
(ಇ) ವಿದ್ಯುತ್ತು ಮತ್ತು ಲೋಹಚುಂಬಕತ್ವ.
(ಫ) ಸೃಷ್ಟಿಪದಾರ್ಥ ವಿಜ್ಞಾನಶಾಸ್ತ್ರ ಮತ್ತು ಅದರ ಪ್ರಯೋಗಗಳು.

ಯಾಂತ್ರಿಕ ವಿಷಯುಗಳು.

ಯುಂತ್ರಗಳನ್ನು ರಚಿಸಲಿಕ್ಕೆ ಪ್ರಯೋಜನಕರವಾದ ಆಯುಧಗಳನ್ನು ಕುರಿತು ಕೊಟ್ಟ ವ್ಯಾಖ್ಯಾನಗಳು.

ಸರ್ಜಿನುಶಿಟ್ಟ್ ಜಿಜೀಭಾಯ್ ಟೆಕ್ನಾ ಲಾಜಿಕಲ್ ಮೆಕ್ಯಾನಿಕಲ್ ಇಂಜಿನಿಯರಿಂಗ ಸ್ಕೂಲಿಗೆ ಶೇರಿದ ಕಾರಖಾನೆಗಳಲ್ಲಿ ಕಲಿಯುತಕ್ಕ ವಿಷಯುಗಳು.

- ಮಾದರಿಗಳನ್ನು ರಚಿಸುವದು.
- ಎರಕ ಹೊಯ್ಯುವದು.
- ಕಂಬಾರಿಕೆ.
- ಯುಂತ್ರದ ಹತ್ಯಾರಗಳು.
- ಗಾಡದ ಕೆಲಸ.
- ಉಜ್ಜುವದೂ ಹೊಂದಿಸಿ ಕೂಡ್ರಿಸುವದೂ.

ನೇಯಿಗೆಯ ಸಂಬಂಧದ ವಿಷಯೆಗಳು.

ಅರಳಿಯನ್ನು ನೂಲುವ ಮತ್ತು ನೇಯುವ ಯಂತ್ರಗಳನ್ನು ಕುರಿತು ವ್ಯಾಖ್ಯಾನಗಳು.

ರಿಸನ್ ಟೆಕ್ಸ್‌ಟೈಲ್ ಸ್ಕೂಲದಲ್ಲಿ ಅರಳಿಯನ್ನು ನೂಲುವ ಮತ್ತು ನೇಯುವ ಯಂತ್ರಗಳನ್ನು ನಡಿಸುವದರಲ್ಲಿ ಪರಿಶ್ರಮ.
- ಅರಳೀ ಹೊಡೆಯುವದು.
- ಹಂಜೀ ಮಾಡುವದು.
- ಸುತ್ತುವದು.
- ನೂಲುವದು.
- ನೇಯುವದು.

ಯಾಂತ್ರಿಕ ವಿಷಯಗಳನ್ನು ಮೂರುವರ್ಷ ಅಭ್ಯಾಸ ಮಾಡುವ ವಿದ್ಯಾರ್ಥಿಗೆ ಪುಸ್ತಕಗಳು, ಯಂತ್ರಗಳ ಡ್ರಾಯಿಂಗ ತೆಗೆಯುವ ಸಾಹಿತ್ಯಗಳು, ಯಂತ್ರದ ಹತ್ಯಾರಗಳು, ಶಿಕ್ಷಣದ ಫೀ, ಪರೀಕ್ಷೆಯ ಫೀ ಇಷ್ಟೆಲ್ಲಕೂಡಿ ೬೦ ರೂ. ಹಿಡಿಯುವವು; ಅಂದರೆ ಸರಾಸರಿ ಮಾನದಿಂದ ತಿಂಗಳಿಗೆ ರೂ. ೭—೮ ಖರ್ಚು ಬೀಳುವದು. ನೇಯಿಗೆಯಸಂಬಂಧ ವಿಷಯಗಳನ್ನು ಮೂರುವರ್ಷ ಅಭ್ಯಾಸಿಸುವ ವಿದ್ಯಾರ್ಥಿಗೆ ಪುಸ್ತಕಗಳು, ಯಂತ್ರಗಳ ಡ್ರಾಯಿಂಗ ತೆಗೆಯುವ ಸಾಹಿತ್ಯಗಳು, ಶಿಕ್ಷಣ ಮತ್ತು ಪರೀಕ್ಷೆಯ ಫೀಗಳು ಇಷ್ಟಕ್ಕೆಲ್ಲ ಕೂಡಿ ರೂ. ೬೫—೭೦ ಖರ್ಚುಬೀಳುವದು; ಅಂದರೆ ಸರಾಸರಿ ಮಾನದಿಂದ ತಿಂಗೆಳಿಗೆ ರೂ. ೬—೮—೦ ಬೀಳುವದು.

ಸರ್ಟಿಫಿಕೇಟುಗಳು. ಸರ್ಟಿಫಿಕೇಟುಗಳಲ್ಲಿ ಮೂರು ವರ್ಗಗಳುಂಟು. ಮೂರನೇವರ್ಷದ ಅಂತ್ಯಕ್ಕೆ ಆಗುವ ಪರೀಕ್ಷೆಯಲ್ಲಿ ೧೦೦ಕ್ಕೆ ೬೬೫ ಗುಣಗಳನ್ನು ಪಡೆದಂಥ ವಿದ್ಯಾರ್ಥಿಗಳು ೧ನೇ ವರ್ಗದಲ್ಲಿ, ೫೦ ಗುಣಗಳನ್ನು ಪಡೆದಂಥವರು ೨ನೇ ವರ್ಗದಲ್ಲಿ, ೪೦ ಗುಣಗಳನ್ನು ಪಡೆದವರು ೩ನೇ ಅಥವಾ ಪಾಸುಎಂಬ ವರ್ಗದಲ್ಲಿ ಬೇರಿಸಲ್ಪಡ್ಡು

ವರು. ಶಾಸ್ತ್ರೀಯ ಮತ್ತು ಯಾಂತ್ರಿಕ ವಿಷಯಗಳನ್ನು ತೆಗೆದುಕೊಂಡು ೧ನೇ ವರ್ಗದಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಎಲ್ ಎಮ್ ಇ. ಎಂಬ ಪದವಿಗಳು ಮತ್ತು ಶಾಸ್ತ್ರೀಯ ಹಾಗು ನೇಯಿಗೆಯ ವಿಷಯಗಳನ್ನು ತೆಗೆದುಕೊಂಡು ೧ನೇ ವರ್ಗದಲ್ಲಿ ಪಾಸಾದವರಿಗೆ ಎಲ್ ಟಿ. ಎಮ್ ಎಂಬ ಪದವಿಗಳು ಕೊಡಲ್ಪಡುವವು.

ಇಂಥ ಪದವಿಗಳನ್ನು ಪಡೆದಂಥವರು "ಮುಂಬಯಿ ಬಾಯಲರ್ ಇನಸ್ಪೆಕ್ಶನ್ ಆಕ್ಟ" ಎಂಬ ಕಾಯಿದೆಗೆ ಅನುಸರಿಸಿ ಆಗುವ ೨ನೇ ವರ್ಗದ ಎಂಜಿನಿಯರ ಪರೀಕ್ಷೆಗೆ ಮತ್ತು ಪ್ರಿನಸಿಪಾಲರ ಸರ್ಟಿಫಿಕೇಟು ಪಡೆದಂಥವರು ೩ನೇ ವರ್ಗದ ಎಂಜಿನಿಯರ ಪರೀಕ್ಷೆಗೆ ಕೂಡ್ರಬಹುದು.

ಈ ಶಾಲೆಯ ವ್ಯವಸ್ಥಾಪಕಸಂಘದವರು ನೇಮದಿಂದ ಶಾಲೆಗೆ ಹೋಗುವಂಥ ವಾರ್ಷಿಕ ಪರೀಕ್ಷೆಗಳಲ್ಲಿ ಎಲ್ಲರಿಗೂ ಹೆಚ್ಚು ಗುಣಗಳನ್ನು ಪಡೆಯುವಂಥ ವಿದ್ಯಾರ್ಥಿಗಳಲ್ಲಿ ೫ ಜನರಿಗೆ ಸ್ಕಾಲರಷಿಪ್ಪುಗಳನ್ನು ೯ ಜನರಿಗೆ ಇನಾಮುಗಳನ್ನು ಬಬ್ಬನಿಗೆ ಚಿನ್ನದ ಪದಕವನ್ನು ಕೊಡುವರು.

ಈ ಶಾಲೆಯಲ್ಲಿ, ಮುನಿಸಿಪ್ಯಾಲಿಟಿಯವರೂ ಲೋಕಲ ಬೋರ್ಡಿನವರೂ ಸ್ಕಾಲರಷಿಪ್ಪುಗಳನ್ನು ಕೊಟ್ಟು ತಮ್ಮ ವಿದ್ಯಾರ್ಥಿಗಳನ್ನು ಕಲಿಯಲಿಕ್ಕೆ ಇಡಬಹುದು ಇಂಥವರಿಗಾಗಿ ಮಾಡಿದ ವಿಶೇಷ ನಿಯಮಗಳು—

---

* ೨ನೇ ೩ನೇ ವರ್ಗದ ಇಂಜಿನಿಯರ ಪರೀಕ್ಷೆಯಲ್ಲಿ ಪಾಸಾದವರು ಗಿರಣಿಗಳಲ್ಲಿರುವ ಬಾಯಲರುಗಳ ಮೇಲೆ ಇನಸ್ಪೆಕ್ಟರರಾಗಿ ನೇಮಿಸಲ್ಪಡುವರು. ಇವರಿಗೆ ತಿಂಗಳಿಗೆ ೩೦ ರೂ. ಯಿಂದ ೪೦ ರೂ. ವರೆಗೆ ತಲಬು ದೊರಕುವದು. ಈ ರಾವಿನಿಂದ ಈ ಶಾಲೆಯಲ್ಲಿ ಕಲಿತವರಿಗೆ ಸರಕಾರದವರು ಉಪಜೀವನಕ್ಕೆ ಮಾರ್ಗ ಮಾಡಿಕೊಟ್ಟದ್ದಲ್ಲದೆ ಉದ್ಯೋಗಪೇಕ್ಷಣ ಪಡೆದವರಿಗೆ ಉತ್ತೇಜನ ಕೊಟ್ಟಂತೆ ಆಯಿತು.

ಈ ಶಾಲೆಯಲ್ಲಿ ಪ್ರವೇಶ ಪರೀಕ್ಷೆಯು ಆಗುವದಿಲ್ಲ. ... ಕಾರೀ ಶಾಲೆಗಳಲ್ಲಿ ಇಂಗ್ಲಿಷ ಸೆನೇ ಇಯತ್ತೆಯಂತೆ ಮತ್ತು ಅವಕ್ಕೂ ಹೆಚ್ಚಿಗೆ ಅಭ್ಯಾಸ ಮಾಡಿದಂಥ ತಕ್ಕ ಉಪೇದ ವಾರರನ್ನು ಆರಿಸಿ ಕಳುಹಿಸಬೇಕು.

ವಿದ್ಯಾರ್ಥಿಗಳಿಗೆ ಸಲ್ಲಬೇಕಾದ ಸ್ಕಾಲರಷಿಪ್ಪಿನ ಹಣವನ್ನು ಅವರನ್ನು ಕಳುಹಿಸಿದವರು ಮುಂಗಡವೇ ಕೊಡದಿದ್ದರೆ, ವ್ಯವಸ್ಥಾಪಕಸಂಘದವರು ವಿದ್ಯಾರ್ಥಿಗಳಿಗೆ ಸ್ಕಾಲರಷಿಪ್ಪು ಕೊಡುವ ಜವಾಬದಾರಿಯನ್ನು ವಹಿಸುವದಿಲ್ಲ.

ಹುಡುಗರ ಅಭ್ಯಾಸದ ಬಗ್ಗೆ ಸರ್ಟಿಫಿಕೇಟು ದಾಖಲೆ ಮುಂತಾದವುಗಳನ್ನು ಸಂಘದವರು ಕಳುಹಿಸಲಾರರು; ಆದರೆ ವಿದ್ಯಾರ್ಥಿಯು ಗೈರಹಾಜರಾದ ಬಗ್ಗೆ ಆ ಹುಡುಗನನ್ನು ಕಳುಹಿಸಿದವರಿಗೆ ತಪ್ಪದೆ ನೋಟೀಸನ್ನು ಕಳುಹಿಸುವರು.

ಮ್ಯುನಿಸಿಪ್ಯಾಲಿಟಿಯವರು ಮತ್ತು ಲೋಕಲ್‌ಬೋರ್ಡಿನವರು ೩ ವರ್ಷದ ಶಿಕ್ಷಣ, ಫೀ, ಪುಸ್ತಕ ಮುಂತಾದವುಗಳ ಬಗ್ಗೆ ನೇಮಕ ಮಾಡಿದ ರಕಮನ್ನು ಮುಂಗಡ ಕೊಟ್ಟಿರೆ, ಸೆಕ್ರೆಟರಿಗಳು ಆ ಹಣವನ್ನು ತಕ್ಕೊಂಡು ಪಾವತೀ ಕೊಡುವರು; ಆದರೆ ಹುಡುಗನು ಶಾಲೆಯಲ್ಲಿ ದಾಖಲಾದ ಹೊರ್ತು ಆ ಹಣವನ್ನು ಹಿಡಿಯಲಿಕ್ಕಿಲ್ಲ.

ಟಿಪ್ಪಣಿ:—ಮೇಲೆ ವಿವರಿಸಿದಂತೆ ಒಟ್ಟು ಹಣವನ್ನು ಮುಂಗಡ ಕೊಡದವಂಥವರು ಸ್ಕಾಲರಷಿಪ್ಪು ಮುಂತಾದವುಗಳ ಸಂಬಂಧದವ್ಯವಹಾರವನ್ನು ವಿದ್ಯಾರ್ಥಿಗಳ ಸಂಗಡಲೇ ಇಡಲಿಕ್ಕೆಬೇಕು. ಸ್ಕಾಲರಷಿಪ್ಪಿನ ಹಣವನ್ನು ವಿದ್ಯಾರ್ಥಿಗಳ ಹೆಸರಿಲೇ ಕಳುಹಿಸಿಕೊಡಬೇಕು; ಸೆಕ್ರೇಟರಿ ಅಥವಾ ಪ್ರಿನ್ಸಿಪಾಲರ ಹೆಸರಿಲೆ ಕಳುಹಿಸಬಾರದು.

ಸೊಲ್ಲಾಪುರ ಮ್ಯುನಿಸಿಪಾಲಟಿಯವರು ಔದ್ಯೋಗಿಕ ವಿಷಯಗಳನ್ನು ಕಲಿಯುವಂಥ ವಿದ್ಯಾರ್ಥಿಗಳಿಗೆ ಸ್ಕಾಲರಷಿಪ್ಪು ಕೊಡುವ ಬಗ್ಗೆ ಆಲೋಚಿಸಿ, ಕಲಾಕೌಶಲ್ಯದ ಶಿಕ್ಷಣಕ್ಕಾಗಿ ನಾವು ವರ್ಷಕ್ಕೆ ೧೫೦ ರಿಂದ ೩೫೦ ವರೆಗೆ ಹಣ ವೆಚ್ಚ ಮಾಡಲಿಕ್ಕೆ ಸಿದ್ಧರಿದ್ದೀವೆಂತಲೂ ಸರಕಾರದವರು ಈ ಆಲೋಚನೆಗೆ ಸಮ್ಮತಿಸಿದರೆ ವಿದ್ಯಾರ್ಥಿಗಳನ್ನಾರಿಸಿ ಕಳುಹಿಸುವೆವೆಂತಲೂ ಸರಕಾರದವರಿಗೆ ತಿಳಿಸಿರುತ್ತಾರೆ. ಈ ಸಂಗತಿಯನ್ನು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷ ವಾಗುತ್ತದೆ. ಉಳಿದ ಮ್ಯುನಿಸಿಪಾಲಿಟಿಯವರೂ ಉದಾರ ಗೃಹಸ್ಥರೂ ಇವರ ಅನುಕರಣ ಮಾಡುವರೆಂದು ನಾವು ಕೋರುತ್ತೇವೆ.

FROEBEL'S KINDER GARTEN SYSTEM.

ಫ್ರೆಬೆಲನ ಶಿಶು-ಶಿಕ್ಷಣಪದ್ಧತಿ.

(೧೫೩ನೇ ಪುಟದಿಂದ ಮುಂದೆ ಸಾಗಿದ್ದು.)

೧೩ನೇ ಮತ್ತು ೧೪ನೇ ಆಕೃತಿಗಳು:—ಚಂಡನ್ನು ಪೆಟ್ಟಿಗೆಯ ಮೇಲೆ ಪಟಪಟವೆಂದು ಪುಟಿಸಿ, ಇದು ನೋಡಿರಿ, ಚಂಡು ಪೆಟ್ಟಿಗೆಯೊಳಗೆ ಹೋಯಿತು ಎಂದು ಫಕ್ಕನೆ ಅದನ್ನು ಬಳಗೆ ಇಟ್ಟುಬಿಡಬೇಕು; ಆಗ ಹುಡುಗರು ಅಳ ಹೋರೆ ಮಾಡಿಕೊಂಡು ನಿಲ್ಲುವರು. ತಿರುಗಿ ಅದನ್ನು ಬಿಮ್ಮಿಂದೊಮ್ಮೆ ಹೊರಗೆ ತೆಗೆಯಬೇಕು, ಅದನ್ನು ಕಂಡು ಅವರು ಉಲ್ಲಾಸದಿಂದ ಹಿಗ್ಗುವರು. ೧೫ನೇ ೧೬ನೇ ಆಕೃತಿಗಳು ಅನುಕ್ರಮವಾಗಿ "ಮೇಲೆ, ಮೇಲೆ" "ಕೆಳಗೆ, ಕೆಳಗೆ" ಎಂದು ಗಟ್ಟಿಸಿ ನುಡಿದು ಚಂಡಿನ ಗತಿಗಳನ್ನು ವ್ಯಾಪ್ತಿ ತೋರಿಸಬೇಕೆಂಬದನ್ನು ಸೂಚಿಸುತ್ತವೆ. ೧೭, ೧೮, ೧೯, ೨೦ನೇ ಆಕೃತಿಗಳು ಕ್ರಮವಾಗಿ ಕೈಯೊಳಗಿ

ನೆ ಚಂಡನ್ನು ಕೆಳಗೆ ಚಲ್ಲುವದು, ತನ್ನ ಬಳಿಗೆ ಬರಮಾಡಿ ಕೊಳ್ಳುವದು, ಬಲಗಡಿಗೆ ನೂಕುವದು, ಎಡಗಡಿಗೆ ದೂಡುವದು. ಇಷ್ಟು ಸಂಗತಿಗಳನ್ನು ತೋರಿಸುತ್ತವೆ. ಎಂನೇ ಆ ಕೃತಿಯು ಚಂಡನ್ನು ಎತ್ತರಿಸಿ ಹಿಡಿದು ಸುತ್ತಿರಿಗಿಸುವದು, ಎಂಎನೇದು ನೆಲದ ಮೇಲೆ ಸುತ್ತಿರಿಗಿಸುವದು, ಎಷ್ಟನೇ ಎಂಟನೇ ಆಕೃತಿಗಳು ಚಂಡನ್ನು ಸಾವಕಾಶವಾಗಿ ದುಂಡಗೆ ತಿರುಗಿಸುವದು, ತ್ವರೆಯಿಂದ ತಿರುಗಿಸುವದು, ಬದೀಮೇರೆಗೆ ಬೆರಳಿಗೆ ಸುತ್ತಿಕೊಳ್ಳುವದು, ಉಚ್ಚುವದು ಈ ಸಂಗತಿಗಳನ್ನು ಕ್ರಮದಿಂದ ತೋರಿಸುತ್ತವೆ. ಎಷ್ಟನೇ ಎಟನೇ ಆ ಕೃತಿಗಳ ಗತಿಗಳನ್ನು ತಿಳುಕೊಳ್ಳುವದು ಸುಲಭ. ಎಒನೇ ಆಕೃತಿಯು ಚಂಡಿನಲ್ಲಿ ಜೋಡು ಪದರು ಧಾರ ಪೋಣಿಸಿ ಅದಕ್ಕೆ ಮುರಿಗೆ ಹಾಕೋಣ, ಮುರಿಗೆ ಉಚ್ಚೋಣ* ಇವುಗಳನ್ನು ತೋರಿಸುತ್ತದೆ. ಎಎನೇ ಎಗನೇ ಆಕೃತಿಗಳು ಕ್ರಮವಾಗಿ ಹುಡುಗನ ಕೈಯಲ್ಲಿ ಚಂಡು ಕೊಡುವದು, ಕೈ ತೆರೆಯುವದು, ಕೈಮುಚ್ಚುವದು, ಮುಂತಾದ ಕೃತ್ಯಗಳನ್ನು ತೋರಿಸುತ್ತವೆ. ಈ ಪ್ರಕಾರ ಬೇರೆ ಬೇರೆ ತರದ ಆಟಗಳನ್ನು ಆಡುವಲ್ಲಿ ಅವರು ತಕ್ಕಮಟ್ಟಿಗೆ ಜಾಣರಾದ ಮೇಲೆ ಅವರಿಗೆ ಬಣ್ಣಗಳನ್ನು ಕಲಿಸಬೇಕು. ಈ ಕಿತ್ತಳೆ ಬಣ್ಣದ ಚಂಡು ಕಿತ್ತಳೆ ಹಣ್ಣಿನಂತೆ ಅದೆ, ಈ ಹಳದಿ ಬಣ್ಣದ ಚಂಡು ಅರಿಶಿನದಂತೆ ಅಥವಾ ಚಂಡು ಹೂವಿನಂತೆ ಅದೆ. ಈ ಹಸುರು ಚಂಡು ಪುಲ್ಲಿನಂತೆ ಅದೆ. ಈ ಮೇರೆಗೆ ಮೇಳಿ ಅವರಿಗೆ ಬಣ್ಣಗಳ ಮತ್ತು ಬಂದೇ ಬಣ್ಣದ ಅನೇಕ ಬಡಿವೆಗಳ ಜ್ಞಾನವನ್ನು ಮಾಡಿಕೊಡಬೇಕು. ಆಟವು ಮುಗಿದು ಚಂಡುಗಳನ್ನು ಸಂದುಕದಲ್ಲಿ ಇಡುವ ಹೊತ್ತಾಯಿತೆಂದರೆ ಕೆಳಗೆ ಬರೆವಂಥ ಪದಗಳನ್ನು ಹಾಡಬೇಕು.

---

* ನಾಗರಪಂಚಮಿಯಲ್ಲಿ ಹುಡುಗರು ಬೊಬ್ಬರಿಯು ಬೆಂಗರಿಯನ್ನು ಆಡಿಸುವಂತೆ.

ಪುಟದು ಜಿಗಿದು ಹಾರಿ ದಣಿಯಿತು ಚಂಡು ।
ಪೆಟ್ಟಿಗೆಯೊಳಗೆ ಹೋಗಿ ಮಲಗಿತು ಚಂಡು ॥೧॥
ಬಾರೋ ಪಾಂಡುರಂಗ ಬಾಪಿಂಡುಗುಂಡು ।
ಬಾರಾವೂ ಬಾದತ್ತು ಮಲಗಲಿ ಚಂಡು ॥೨॥
ಚುಕ್ಕು ಚುಕ್ಕು ಬಾಳಾ ಮಲಗೊ ನೀಚಂಡು ।
ತಕ್ಕಥೈಯಂದು ಮತ್ತೇಳೋ ನಾಳುಂಡು ॥೩॥
ಜೋ ಮುದ್ದು ಚಂಡೇ ಜೋ ನೀಲಿಗುಂಡೇ ।
ಜೋ ನಿಂಬೀಹಣ್ಣೇ ಜೋ ಜೋ ಕೆಂಬಣ್ಣಾ ॥೪॥

ಹುಡುಗರು ಬೆಳಬೆಳೆದ ಹಾಗೆ ಅವರ ಶರೀರಾವಯವಗಳ ವೃದ್ಧಿಗೂ ಬುದ್ಧಿಯ ಬೆಳವಣಿಗೆಗೂ ತಕ್ಕಂಥ ಆಟಗಳನ್ನು ಆಡಿಸುತ್ತ ಹೋಗಬೇಕು. ಉದಾಹರಣಾರ್ಥವಾಗಿ, ನಿಂತುಕೊಂಡು ಚಂಡನ್ನು ಕೆಳಗೆ ಬಗೆಯುವದಕ್ಕೆ ಹೇಳಬೇಕು; ಅವರು ಅದನ್ನು ಬಗೆಯುವಾಗ್ಗೆ ತುದಿಗಾಲಮೇಲೆ ನಿಲ್ಲಹೇಳಬೇಕು. ಇದೊಂದು ಆಟವೆಂದು ಅವರು ಭಾವಿಸುವಂತೆ, ಅದೇ ಅಭಿಪ್ರಾಯದ ಒಂದು ಪದವನ್ನು ಅವರಿಂದ ಹಾಡಿಸಬೇಕು. ಪದಗಳ ಹೊತ್ತು ಆಟವಾಡಿಸಕೂಡದೆಂಬ ಮಾತನ್ನು ಮರಿಯಬಾರದು. ಇಷ್ಟಾದಮೇಲೆ ಅವರಿಗೆ ಕಾಲನ್ನು ಎತ್ತಲಿಕ್ಕೆ ಹೇಳಬೇಕು. ಮೊದಲು "ಬಲಗಾಲು" ಆ ಮೇಲೆ "ಎಡಗಾಲು" ಎಂದು ಗಟ್ಟಿಸಿ ನುಡಿಯಬೇಕು, ತದನಂತರ ಕ್ರಮವಾಗಿ ಕೈಎತ್ತಲಿಕ್ಕೂ ಕಿರಿಕಿ ಹೊಡಿಯಲಿಕ್ಕೂ ಹೇಳಬೇಕು. ಆ ಮೇಲೆ ೫।೬ ಹುಡುಗರನ್ನು ದುಂಡಗೆ ನಿಲ್ಲಿಸಿ ಪ್ರತಿಯೊಬ್ಬನಿಗೆ ತನ್ನ ಎಡಬಲವಲ್ಲಿರುವವರ ಕೈಯಲ್ಲಿ ಎರಡು ಚಂಡುಗಳನ್ನು ಬವ್ಮೇಲೆ ಕೊಡಲಿಕ್ಕೆ ಹೇಳಬೇಕು; ಮತ್ತು ಅವು ಪ್ರತಿಯೊಬ್ಬನ ಕೈಯೊಳಗಿಂದ ಹಾದು ಬಂದು ಸರ್ತಿ ತಿರುಗಿ ಅವನವನ ಚಂಡುಗಳು ಅವನವನ ಕೈಯಲ್ಲಿಯೇ ಬರುವಂತೆ ಮಾಡ



ಬೇಕು. ಈ ಆಟವು ಸಾಗಿದ್ದಾಗ್ಗೆ ಅವರು ಪದಗ ... ನ್ನು ಹಾಡುತ್ತಿರಬೇಕು. ಅವರನ್ನು ಎರಡು ಸಾಲಾಗಿ ನಿಲ್ಲಿಸಿ, ಬಂದು ಸಾಲೊಳಗಿನ ಹುಡುಗನಿಗೆ ತನ್ನ ಎದುರಿನವನ ಕೈಗಳಲ್ಲಿ ಚಂಡುಗಳನ್ನು ಒಪ್ಪಿಯು ಹೇಳಬೇಕು; ಆ ಮೇಲೆ ಎದುರಿನವನು ತಿರುಗಿ ಅವುಗಳನ್ನು ಮೊದಲಿನವನ ಕಡೆಗೆ ಬಗೆಯಬೇಕು. ನಾಲ್ಕು ನಾಲ್ಕು ಹುಡುಗರ ಸಾಲುಗಳನ್ನು ನಿಲ್ಲಿಸಿ ಪದಗಳನ್ನು ಹಾಡಿಸುತ್ತ ಆಟವನ್ನು ಆಡಿಸಬಹುದು. ಆಟದ ಕೆಲವು ಮಾದರಿಗಳನ್ನು ಕೆಳಗೆ ಕಾಣಿಸುತ್ತೇವೆ.

(೧.) ಚಂಡನ್ನು ತೂರಿ ಅದು ನೆಲಕ್ಕೆ ಬೀಳುವದರೊಳಗಾಗಿಯೇ ಹಿಡಿಯಬೇಕು, ಇಲ್ಲವೆ ಅದು ನೆಲಕ್ಕೆ ಬಿದ್ದು ಪುಟಿವ ಮೇಲೆ ಹಿಡಿಯಬೇಕು.

(೨.) ಎರಡು ಚಂಡುಗಳನ್ನು ಸಮಾನ ಅಂತರದ ಮೇಲಿಂದ ಬಂದನ್ನೊಂದು ವಿರುದ್ಧ ದಿಕ್ಕಿಗೆ ಉರುಳಿಸಬೇಕು, ಆದರೆ ಅವು ಬುದಕ್ಕೊಂದು ನಡುವೆ ತಾಕಾಡದಂತೆ ವ್ಯವಸ್ಥೆ ಇಡತಕ್ಕದ್ದು.

(೩.) ೨, ೩, ೪ ಚಂಡುಗಳನ್ನು ಮೇಜಿನ ಮೇಲೆ ಉರುಳಿಸ್ಯಾಡಬೇಕು; ಆದರೆ ಅವನ್ನು ಕೆಳಗೆ ಬೀಳಗೊಡಬಾರದು.

(೪.) ನಾಲ್ಕು ಹುಡುಗರನ್ನು ಸಮಾನ ಅಂತರದಲ್ಲಿ ನಾಲ್ಕು ಮೂಲಿಗಳಿಗೆ ನಿಲ್ಲಿಸಿ ಅವರ ಕಡಿಯಿಂದ, ೧ನೆಯವನು ೨ನೆಯವನ ಕಡಿಗೆ, ೨ನೆಯವನು ೩ನೆಯವನ ಕಡಿಗೆ ೩ನೆಯವನು ೪ನೆಯವನ ಕಡಿಗೆ ಈ ಮೇರೆಗೆ ಚಂಡನ್ನು ಬಗಿಸಬೇಕು. ಇದರಿಂದ ಕಾಟಕೋನ ಚೌಕೋನದ ಜ್ಞಾನವನ್ನು ಮಾಡಿಕೊಡಬೇಕು. ಇದೇ ಮೇರೆಗೆ ಮೂವರನ್ನು ನಿಲ್ಲಿಸಿ ತ್ರಿಕೋನದ ಜ್ಞಾನವನ್ನು ಮಾಡಿಕೊಡಬೇಕು.

ಸಾರಾಂಶ—ನಾವು ನಿಮಗೆ ಎಷ್ಟು ಆಟದ ಮಾದರಿಗಳನ್ನು ಹೇಳಿದ್ದಾಗ್ಯಾದರೂ ನಿಮಗೆ ಮಾರ್ಗವನ್ನಷ್ಟೇ ತೋರಿಸಿ ಕೊಡುವದು ನಮ್ಮ ಕೆಲಸವಾಗಿದೆ. ತಾಯಿತಂದೆಗಳೂ ಉದ್ಯಾನಪಾಲಕರೂ ತಮ್ಮ ಕೈಯೊಳಗಿನ ಹುಡುಗರ ಸ್ವಭಾವ, ಅವರ ಮನಸಿನ ಬಲವು ಮುಂತಾದವುಗಳನ್ನು ಅನುಲಕ್ಷಿಸಿ ಅವರ ಸಾಮರ್ಥ್ಯವನ್ನು ತಿಳುಕೊಂಡು, ಅವರಿಗೆ ಶಾರೀರ ಮತ್ತು ಮಾನಸಿಕ ಶ್ರಮವು ಅವರ ಯೋಗ್ಯತೆಯು ಮೀರಿಯಾಗಲಿ, ಅವರಿಗೆ ತಕ್ಕಷ್ಟಕ್ಕಿಂತ ಕಡಿಮೆಯಾಗಲೀ ಆಗದಂತೆ ಅವರಿಂದ ಆಟ ಅಡಿಸಬೇಕು. ಪುಸ್ತಕದೊಳಗೆ ಬರೆದದ್ದನ್ನಷ್ಟೇ ಅಥವಾ ನಾವು ಹೇಳಿದ್ದನ್ನಷ್ಟೇ ಉಪಯೋಗಿಸಿದರೆ ಅವರಿಂದ ತುಸು ಮಾತ್ರ ಉಪಯೋಗವಾಗುವದು.

ಇನ್ನು ಯಾವ ಆಟದಿಂದ ಅಥವಾ ಯಾವ ಬಿಡಿವೆಗಳಿಂದ ಹುಡುಗರ ಜ್ಞಾನಾಭಿವೃದ್ಧಿಗೆ ಪ್ರಯೋಜನವಾಗುವದೋ ಅಂಥ ಆಟಗಳನ್ನೂ ಅಂಥ ಬಿಡಿವೆಗಳನ್ನೂ ಮಾತ್ರ ಉಪಯೋಗಿಸಬೇಕು. ಹುಡುಗರ ಸ್ವಭಾವ, ಪ್ರವೃತ್ತಿ, ಆಕಲನಶಕ್ತಿ ಮುಂತಾದವುಗಳಿಗೆ ಸರಿಯಾಗಿ (ಪದಾರ್ಥಗಳ ಸಂಖ್ಯೆ, ಗುಣಧರ್ಮಾದಿಗಳನ್ನು ತಿಳುಕೊಳ್ಳಲಿಕ್ಕೆ ಸುಲಭವಾಗುವಂಥ) ಬಿಡಿವೆಗಳನ್ನೇ ಆಗಾಗ್ಗೆ ಆರಿಸಿಕೊಳ್ಳಬೇಕು. ಹುಡುಗರು ಸಾಧಾರಣವಾಗಿ ತಮ್ಮ ಸುತ್ತುಮುತ್ತಲಿರುವ ಪದಾರ್ಥಗಳನ್ನು ನೋಡಿ ಅವುಗಳ ಪ್ರತಿಬಿಂಬಗಳನ್ನು ತಮ್ಮ ಮನಸಿನಲ್ಲಿ ಇಟ್ಟುಕೊಳ್ಳುತ್ತಾರೆ. ಸ್ವಾಭಾವಿಕವಾಗಿ ಅವರನ್ನು ಆನಂದಗೊಳಿಸುವಂಥ, ಸುಪ್ತಾವಸ್ಥೆಯಲ್ಲಿರುವ ಅವರ ಬುದ್ಧಿಯನ್ನು ಜಾಗ್ರತಪಡಿಸುವಂಥ, ಅವರ ಸ್ಮರಣಶಕ್ತಿಯನ್ನು ಬಳಸುವಂಥ ಆಟದ ಬಿಡಿವೆಗಳನ್ನು ಹುಡುಗರು ಸಹಜವಾಗಿಯೇ ಪ್ರೀತಿಸುವರು.

ಇವೆಲ್ಲ ಸಂಗತಿಗಳನ್ನು ಪೂರ್ಣವಾಗಿ ಕೈಗೂಡಿಸುವಂಥ ಆಟ ವೆಂದರೆ ಚಂಡಿನಾಟವು. ಚಂಡಿನಲ್ಲಿ ಇರುವ ಗುಣಗಳು ಯಾವ ವೆಂದರೆ:—ಅದನ್ನು ನೋಡಿದಕೂಡಲೆ ಮನಸಿನಲ್ಲಿ ಉಲ್ಲಾಸ ವು ಹುಟ್ಟುತ್ತದೆ; ಇದಲ್ಲದೆ ಗತಿ, ಚುರುಕುತನ, ವ್ಯವಸಾಯ ಇವುಗಳನ್ನೆಲ್ಲ ತೋರಿಸಲಿಕ್ಕೆ ಚಂಡು ಮೂಲವಾಗಿದೆ. ಅದರ ಆಕೃತಿಯು ಆದ್ಯಾಕೃತಿಯಾಗಿದ್ದು ಪೂರ್ಣವಾಗಿರುತ್ತದೆ. ಅವ ರಲ್ಲಿ ಮಿಕ್ಕ ಎಲ್ಲ ಆಕೃತಿಗಳ ಸಮಾವೇಶವಾಗುತ್ತದೆ. ಬಣ್ಣ ವು ಪ್ರಕಾಶದ ಮೂಲ ಉತ್ಪತ್ತಿಯಾಗಿದೆ. ಅದು ಆನಂದವನ್ನೂ ಸಂತೋಷವನ್ನೂ ಹುಟ್ಟಿಸಿ ಮನಸಿನ ಪ್ರಕಾಶವ ಕಾಂತಿಯ ನ್ನು ಹೆಚ್ಚಿಗೆ ಉಜ್ವಲಿಸುವಂತೆ ಮಾಡುತ್ತದೆ. ಮೊದಲನೇ ಇನಾಮಿನಲ್ಲಿ ಹೇಳಿರುವ ಆರು ಚಂಡುಗಳು ಎಲ್ಲ ಬಗೆಗಳಿಂ ದ ವಸ್ತುಗಳ ಗುಣಧರ್ಮಾದಿಗಳನ್ನು ಕಲಿಸಲಿಕ್ಕೆ ಬಹು ಪ್ರಯೋಜನಕರವಾಗಿವೆ. ಅವುಗಳ ಸಹಾಯದಿಂದ ಕಲಿಸ ಲಿಕ್ಕೆ ಬಾರದಂಥ ಪದಾರ್ಥದ ಧರ್ಮವೇ ಮತ್ತೊಂದಿಲ್ಲವೆಂ ದು ನಾವು ನೆನಿಸುತ್ತೇವೆ. ಆಕಾರ, ಬಣ್ಣ, ಭಾರ, ಪರಿ ಮಾಣ, ಘನತ್ವ ಎಂಬ ವಸ್ತುಗಳ ಸರ್ವಸಾಧಾರಣವಾದ ಧರ್ಮಗಳನ್ನು ಈ ಮೊದಲನೇ ಇನಾಮಿನಿಂದ ಹುಡುಗರಿಗೆ ಚೆನ್ನಾಗಿ ತಿಳಿಸಿಕೊಡಲಿಕ್ಕೆ ಬರುತ್ತದೆ. ಬಂದೇ ಚಂಡನ್ನು ತಕ್ಕೊಂಡಾಗ್ಯಾದರೂ ಅದು ಪೂರ್ಣವಾಗಿರುವದರಿಂದ ಯಾ ವತ್ತು ಸಂಗತಿಗಳನ್ನು ತಿಳಿಸುತ್ತದೆ. ಅದನ್ನು ಬೇರೇ ಚಂಡುಗಳಲ್ಲಿ ಕೂಡಿಸಲಾಗಿ ಭಾಗದ ಕಲ್ಪನೆಯನ್ನುಂಟು ಮಾಡುತ್ತದೆ. ಅದನ್ನು ಸ್ಥಿರವಾಗಿ ನಿಲ್ಲಿಸಬಹುದು, ಬೇಕಾ ದ ಹಾಗೆ ಅವನ್ನು ಅತ್ತಿತ್ತ ಉರುಳಿಸ್ಯಾಡಬಹುದು; ಅವ ರೊಳಗೆ ಅದೃಶ್ಯವಾದ ಕೇಂದ್ರವು ಅಂದರೆ ಮಧ್ಯಬಿಂದು ಇ ರುತ್ತದೆ. ಇದೊಂದರಿಂದ ಅನೇಕ ವಸ್ತುಗಳನ್ನು ತಿಳಿಸಬ ಹುದು. ಇವನ್ನು ಉಪಯೋಗಿಸುವದರಿಂದ ಹುಡುಗರಿಗೆ

ವ್ಯಾಯಾಮವಾಗಿ ಬಲಬರುತ್ತದೆ. ಇದೇಮೇರೆಗೆ ಅವರ ಬುದ್ಧಿಯೂ ನೀತಿಯೂ ಆಕಲನ ಶಕ್ತಿಯೂ ವಿಕಸಿತವಾಗುತ್ತವೆ. ಟಣಟಣವೆಂದು ಹಾರುತ್ತ ಹಾರುತ್ತ ಹೋಗುವಂಥ ಚಂಡನ್ನು ಬೆನ್ನಟ್ಟಿ ಹಿಡಿಯಬೇಕಾದರೆ ಹುಡುಗನು ತನ್ನ ಎಲ್ಲ ಶಕ್ತಿಯನ್ನು ಉಪಯೋಗಿಸಬೇಕಾಗುತ್ತದೆ. ಬಂದುವೇಳೆ ಅದು ಕೈವಶವಾಯಿತೆಂದರೆ ಆದು ಕೈಯೊಳಗಿಂದ ತಿರುಗಿ ಹೋಗದಂತೆ ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬೇಕಾದರೆ ಅಷ್ಟೇ ಶಕ್ತಿಯನ್ನು ಉಪಯೋಗಿಸಬೇಕಾಗುತ್ತದೆ.

ಈ ಮೇರೆಗೆ ಬಹು ಸುಲಭವಾದ ಈ ಆಟದಿಂದ ಹುಡುಗರ ಶಾರೀರ ಮತ್ತು ಮಾನಸಿಕ ಶಕ್ತಿಗಳು ಬೆಳೆಯುತ್ತಿರುವ ಕಾಲಕ್ಕೆ ಹೆಚ್ಚಾಗಲಿ ಕಡಿಮೆಯಾಗಲಿ ಸಹಾಯ ಮಾಡಲಿಕ್ಕೆ ನಮಗೆ ಅನುಕೂಲವಾಗುತ್ತದೆ. ಅದರಿಂದ ಶರೀರದ ಅಭಿವೃದ್ಧಿಯಾಗುತ್ತ ಸಾಗಿದಾಗಲೇ ಸಂವೇದನಾ, ಇಚ್ಛಾ, ವಿಚಾರ ಎಂಬೀ ಮನಸಿನ ಮೂರೂ ಪ್ರಕಾರದ ವ್ಯವಸಾಯಗಳಾದರೂ ಬಲ ಹೊಂದುತ್ತಾ ಹೋಗುತ್ತವೆ. ಚಿಕ್ಕಂದಿನಲ್ಲಿ ಹುಡುಗರ ಮನಸಿನ ಮೇಲೆ ಆಗತಕ್ಕ ಪರಿಣಾಮುಗಳನ್ನು ಮನಬಂದಂತೆ ಆಗಗೊಟ್ಟರೆ ಅದು ಶಿಕ್ಷಣವೆಂಬ ಗೌರವದ ಹೆಸರಿಗೆ ತಕ್ಕದ್ದಾಗಲಾರದು. ಹುಡುಗರ ಆಕಲನ ಶಕ್ತಿಯು ಕಡಿಮೆ ಇದ್ದಂತೆ ಅವರಿಗೆ ಅನ್ಯರ ಸಹಾಯವೂ ಆಶ್ರಯವೂ (ಅಂದರೆ ಶಿಕ್ಷಣವು) ಹೆಚ್ಚು ಹೆಚ್ಚು ಬೇಕಾಗುತ್ತದೆ. ಚಂಡಿನಾಟವು ಎಲ್ಲ ಆಟಗಳಲ್ಲಿ ಪುರಾತನವಾದದ್ದಲ್ಲದೆ ನಾವು ಯಾವ ದೇಶದ ವಿಷಯವಾಗಿ ವಿಚಾರ ಮಾಡಿದರೂ ಅದು ಅನಾದಿಸಿದ್ಧವಾದ ಆಟವೆಂದು ಕಂಡು ಬರುವದು.

ಪ್ರತಿಯೊಂದು ಆಟವನ್ನು ಬಳ್ಳೇ ಜಾಣತನದಿಂದ ಹುಡುಗರ ಕಡೆಯಿಂದ ಆಡಿಸಬೇಕು, ಅಂದರೆ ಅದರಿಂದ ಅವರಿ

ಗೆ ನಿಶ್ಚಯವಾಗಿ ಬಳ್ಳೀ ಹಿತವಾಗುವದು. ಮಿತ್ರತ್ವವ ಮೂಲಬೀಜವು ಆಟದಲ್ಲಿಯೇ ಹುಟ್ಟುತ್ತದೆ. ಪ್ರೇಮೋ ತ್ಪತ್ತಿಯಾದರೂ ಅವರಲ್ಲಿಯೇ ಆಗುತ್ತದೆ. ಹುಡುಗರಿಗೆ ಚಂ ಡಿನ ಸಹಾಯದಿಂದ ಪದಾರ್ಥಗಳ ಬಣ್ಣ ಆಕೃತಿ ಮುಂತಾ ದ ಅನೇಕ ತರದ ಗುಣಧರ್ಮಗಳ ತಿಳುವಳಿಕೆಯಾಯಿತೆಂ ದರೆ, ನಾವು ಸೃಷ್ಟಿ ಎಂಬ ದೊಡ್ಡ ಪುಸ್ತಕದೊಳಗಿನ ಎಲ್ಲ ಬಿಡಿಪೆಗಳ ತಿಳುವಳಿಕೆಯನ್ನು ಮಾಡಿಕೊಳ್ಳಲಿಕ್ಕೆ ಪ್ರಯೋ ಜನಕರವಾದ ಓದುವ ಕಲೆಯನ್ನೇ ಅವರಿಗೆ ಕಲಿಸಿದಂತೆ ಆಗುವದು; ಮತ್ತು ಅವರು ಆ ಪುಸ್ತಕವನ್ನು ಓದಿಕೊಳ್ಳಲಿ ಕ್ಕೆ ಶಕ್ತರಾಗುವ ಹಾಗೆ ಈ ಮೊವಲನೇ ಇನಾಮಿನ ರೂಪದಿಂ ದ ಅವರಿಗೆ ಮೂಲಾಕ್ಷರಗಳನ್ನೇ ಕಲಿಸಿದಂತೆ ಆಗುವದು.

ಮೊವಲನೇ ಇನಾಮು ಶಿಶು-ಶಿಕ್ಷಣ ಅಥವಾ ಬಾಲೋ ದ್ಯಾನ ಶಿಕ್ಷಣಪದ್ಧತಿಯೊಳಗಿನ ಆರಂಭದ ಪುಸ್ತಕವಿರುತ್ತ ದೆ. ಅವರಲ್ಲಿ ಹಸುಮಕ್ಕಳಿಗೆ ಉಂಟಾದ ಜ್ಞಾನಕ್ಕೂ, ಅಂ ಕುರಿಸುವ ವಿಚಾರ ಕ್ರಮಕ್ಕೂ ತಳಕು ಹ್ಯಾಗೆ ಬೀಳುತ್ತದೆಂ ಬವನ್ನು ಕಂಡುಕೊಳ್ಳಬಹುದು. ಫ್ರೆಬೆಲನು ಹುಡುಗರ ಬು ದ್ಧಿಯ ವಿಕಾಸಕ್ಕಾಗಿ ಯಾವದೊಂದು ಹೊಸ ಯುಕ್ತಿಯನ್ನು ಹುಡುಕಿ ತೆಗೆಯಲಿಲ್ಲ; ಆದರೆ ಹುಡುಗರ ಬುದ್ಧಿಯ ವಿಕಾಸ ವು ಸ್ವಾಭಾವಿಕವಾಗಿ ಹ್ಯಾಗೆ ಆಗುತ್ತ ಹೋಗುತ್ತದೆಂಬುದ ನ್ನು ಲಕ್ಷ್ಯಪೂರ್ವಕವಾಗಿ ನೋಡಿ ಅದನ್ನನುಸರಿಸಿಯೇ ತ ನ್ನ ಶಿಕ್ಷಣಪದ್ಧತಿಯನ್ನು ರಚಿಸಿದ್ದಾನೆ.

ಶರೀರದಂತೆ ಮನಸು ವಿಕಸಿತವಾಗಲಿಕ್ಕೆ ಸಹ ಚಿಕ್ಕಂದಿ ನಲ್ಲಿ ಅನ್ಯರ ಸಹಾಯವು ಬೇಕೇಬೇಕು. ಬಂದು ವೇಳೆ ಹೀಗೆ ಇರದಿದ್ದರೆ ಜಗತ್ತಿನಲ್ಲಿ ಶಿಕ್ಷಣವೆಂಬ ಶಬ್ದವೇ ಬರು ತ್ತಿದ್ದಿಲ್ಲ. ಹುಡುಗರ ಮನಸ್ಸು ಕೋಮಲವಿರುವಾಗ್ಗೆ ಮ

೬. ಹತ್ತರೊಳಗೆ ಎಷ್ಟು ಕಳೆದರೆ ಏಳು ಉಳಿಯುವವು, ಮತ್ತು ಎಷ್ಟು ಕಳೆದರೆ ನಾಲ್ಕು ಉಳಿಯುವವು?

೪. ಒಂಬತ್ತರಲ್ಲಿ ಮೂರು ಎಷ್ಟು ಸಾರೆ ಕಳೆದರೆ ಆರು ಉಳಿಯುವವು?

೯. ಎಂಟರಲ್ಲಿ ಎರಡು ಎಷ್ಟು ಸಾರೆ ಕಳೆದರೆ ಎರಡು ಉಳಿಯುವವು?

೧೦. ಒಂಬತ್ತರಲ್ಲಿ ಮೂರು ಎಷ್ಟು ಸಾರೆ ಹೋಗುವವು

೧೧. ಹತ್ತರಲ್ಲಿ ಎರಡು ಎಷ್ಟು ಸಾರೆ ಹೋಗುವವು?

೧೨. ಮೂರು ಜೋಡುಗಳೆಂದರೆ ಎಷ್ಟು?

೧೩. ನಾಲ್ಕು ಜೋಡುಗಳೆಂದರೆ ಎಷ್ಟು?

೧೪. ಮೂರು ಜೋಡುಗಳು ಮತ್ತು ಮೂರು ಅಂದರೆ ಎಷ್ಟು?

೧೫. ಐದು ಜೋಡುಗಳ ದರೆ ಎಷ್ಟು?

೪ ನೇ ಪಾ ಠ.

ಅಂಕಿಗಳು—೧ರಿಂದ ೧೦ರ ತನಕ.

ಮುಂದಿನಿಂದ ಹತ್ತರ ವರೆಗೆ ಅಂಕಿಗಳನ್ನು ಸ್ಲೇಟಿನ ಮೇಲೆ ತಿರುವು ಮುರುವು ಬರಿಸಜೇಕು, ಮತ್ತು ಓದಿಸಜೇಕು; ತರುವಾಯ ಕೆಳಗೆ ತೋರಿಸಿದಂತೆ ಅಂಕಿಗಳನ್ನು ಕರೇ ಪಲಿಗೆಯ ಮೇಲೆ ಮಾಸ್ತರನು ಸ್ವತಃ ಬರೆದು, ಅವುಗಳನ್ನು ಓದಿಸಜೇಕು.

೧, ೨, ೩, ೪, ೫, ೬, ೭, ೮, ೯, ೧೦,

ಒಂಬತ್ತು ಅಂಕಿಗಳ ಗುರುತುಗಳು ಬೇರೆ ಬೇರೆ ಆಗಿರುತ್ತವೆ; ಆದರೆ ಬಿಂದರ ಮೇಲೆ ಶೂನ್ಯಬರೆದು ಹತ್ತರ ಅಂಕಿಯನ್ನು ಬರೆಸುತ್ತೇವೆಂಬವನ್ನು ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿಸಿ ಹೇಳಬೇಕು.

ಬರೆ ಶೂನ್ಯಕ್ಕೆ ಏನೂ ಬೆಲೆ ಇಲ್ಲ; ಅದನ್ನು ಬಂದರ ಮೇಲೆ ಬರೆದರೆ ಮೂತ್ರ ಬಂದನ್ನು ಹತ್ತು ಸಾರೆ ತೆಗದುಕೊಂಡಂತೆ ಆಗುತ್ತದೆ. ಇದೇ ಮೇರೆಗೆ ಯಾವದೊಂದು ಅಂಕಿಯ ಮೇಲೆ ಶೂನ್ಯ ಬರೆದರೆ ಆ ಅಂಕಿಯ ಬೆಲೆಯು ಹತ್ತು ಪಾಲು ಬೆಳೆಯುತ್ತದೆ.

ಇನ್ನು ಹುಡುಗರಿಗೆ ಮುಂದಿನ ಚಿನ್ಹೆಗಳ ಉಪಯೋಗವನ್ನು ತಿಳಿಸಿ ಕೊಡಬೇಕು.

× ಅಂದರೆ ಎಷ್ಟು ಸಾರೆ ತೆಗೆದುಕೊಳ್ಳುವದು (ಗುಣಿಸೋಣ)

÷ ,, ಎಷ್ಟುಸಾರೆ ಕಳೆಯುವದು (ಭಾಗಿಸೋಣ)

೩×೨ ಅಂದರೆ ಮೂರು ಎರಡು ಸಾರೆ ತೆಗದುಕೊಳ್ಳುವದು=೩+೩=೬

೪×೨ ಅಂದರೆ ನಾಲ್ಕು ಎರಡು ಸಾರೆ ತೆಗೆದುಕೊಳ್ಳುವದು=೪+೪=೮

---

* ಟಿಪ್ಪಣಿ—ಮಾಸ್ತರನು ಗಜಗ, ಹರಳು ಮುಂತಾದವುಗಳನ್ನು ಇಟ್ಟುಕೊಂಡು ವಿದ್ಯಾರ್ಥಿಗಳ ಮುಂದೆ ಕೂತು ಒಮ್ಮೆ ಒಂದು, ಒಮ್ಮೆ ನಾಲ್ಕು, ಒಮ್ಮೆ ಎಂಟು ಹಾಗು ಒಮ್ಮೆ ಬಂಬತ್ತು ಕಾಳುಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ವಿದ್ಯಾರ್ಥಿಗಳಿಗೆ ತೋರಿಸಿ ಇವೆಷ್ಟು ಉಂಟೆಂದು ಕೇಳಿ, ಅವನ್ನು ಕರೀ ಹಲಿಗೆಯ ಮೇಲೆ ಬರಿಸಬೇಕು. ಮತ್ತೊಮ್ಮೆ ತನ್ನ ಕೈಯಲ್ಲಿ ಏನೂ ತೆಗೆದುಕೊಳ್ಳದೆ ಹಾಗೇ ಬರೀಗೈಯನ್ನು ತೋರಿಸಿ, ಈಗ ನನ್ನ ಕೈಯೊಳಗೆ ಎಷ್ಟು ಗಜಗ ಅಥವಾ ಹರಳುಗಳುಂಟೆಂದು ಕೇಳಬೇಕು. ಅವರು ಏನೂ ಇಲ್ಲವೆಂದು ಸಹಜವಾಗಿ ಹೇಳುವರು; ಈ ಏನೂ ಇಲ್ಲೆಂಬುದನ್ನು ಬರೆಮ ತೋರಿಸಲಿಕ್ಕೆ ಕಲ್ಪಿಸಿದ ಗುರುತೇ ಶೂನ್ಯವು. ಶೂನ್ಯವೆಂದರೆ ಏನೂ ಇಲ್ಲ, ಎಂಬುದನ್ನು ವಿದ್ಯಾರ್ಥಿಯರಿಗೆ ಚೆನ್ನಾಗಿ ತಿಳಿಸಿ ಹೇಳಬೇಕು.

ಈ ಶೂನ್ಯವನ್ನು ಯಾವದೊಂದು ಸಂಖ್ಯೆಯ ಮುಂದಿಟ್ಟರೆ ಅದರ ಬೆಲೆಯು ಹತ್ತು ಪಾಲು ಬೆಳೆಯುತ್ತದೆ ಅಂದರೆ ಅಷ್ಟು ಹತ್ತು ಆಗುತ್ತವೆಂಬುದನ್ನು ಶಿಕ್ಷಕರು ಉದಾಹರಣೆಗಳಿಂದ ತಿಳಿಸಿ ಹೇಳತಕ್ಕದ್ದು.

ಇದರಿಂದ ಬಂದು ಅಂಕಿಗೆ ಮತ್ತೊಂದು ಅಂಕಿಯಿಂದ ಗುಣಿಸುವದೆಂದರೆ ಮೊದಲನೇ ಅಂಕಿಯನ್ನು ಎರಡನೇ ಅಂಕಿಯಷ್ಟು ಸಾರೆ ಇಟ್ಟು ಬೇರೀಜು, ಮಾಡುವದೆಂಬರ್ಥವು ವ್ಯಕ್ತವಾಗುತ್ತದೆ.

೮÷೨ ಅಂದರೆ ಎಂಟರಲ್ಲಿ ಎರಡು ಎಷ್ಟು ಸಾರೆ ಹೋಗುತ್ತದೆಂಬವನ್ನು ತಿಳುಕೊಳ್ಳುವದು; ಹ್ಯಾಗಂದರೆ ೮—೨—೨—೨—೨=೦ ಆದರಿಂದ ೮÷೨=೪ ಅಂದರೆ ಎಂಟರಲ್ಲಿ ಎರಡು, ನಾಲ್ಕು ಸಾರೆ ಹೋಗುವದೆಂದು ತಿಳಿಯಬೇಕು. ಅದೇ ಪೇರೆಗೆ ೯—೩—೩—೩=೦ ಆದರಿಂದ ೯÷೩=೩ ಅಂದರೆ ಬಂಬತ್ತರೊಳಗೆ ಮೂರು, ಮೂರುಸಾರೆ ಹೋಗುತ್ತದೆಂದು ತಿಳಿಯಬೇಕು.

ಬಂದು ಅಂಕಿಗೆ ಮತ್ತೊಂದು ಅಂಕಿಯಿಂದ ಭಾಗಿಸುವದೆಂದರೆ, ಮೊದಲನೇ ಅಂಕಿಯಲ್ಲಿ ಎರಡನೇ ಅಂಕಿಯು ಎಷ್ಟುಸಾರೆ ಹೋಗುತ್ತದೆಂದು ನೋಡುವದೆಂಬರ್ಥವು ವ್ಯಕ್ತವಾಗುತ್ತದೆ.

೨×೪=೮

೮÷೨=೪

ಇವರಿಂದ ತೋರುವದೇನಂದರೆ, ಬಂದೇ ಅಂಕಿಯನ್ನು ಹಲವು ಸಾರೆ ಇಟ್ಟು ಕೂಡಿಸಿದರೆ ಆಗುವ ಬೇರೀಜನ್ನು ಗುಣಾಕಾರವು ಹೇಳುತ್ತದೆ; ಅದರಂತೆಯೇ ಬಂದು ಅಂಕಿಯಲ್ಲಿ ಮತ್ತೊಂದು ಅಂಕಿಯು ಎಷ್ಟು ಸಾರೆ ಹೋಗುತ್ತದೆಂಬವನ್ನು ಭಾಗಾಕಾರವು ತಿಳಿಸುತ್ತದೆ.

ಪ್ರಶ್ನೆಗಳು.

೧. ಬಸಪ್ಪನ ಹತ್ತರ ನಾಲ್ಕು ದುಡ್ಡು ಅವೆ, ಅವನ ತಂದೆಯು ಅವನಿಗೆ ಮತ್ತೆ ಎರಡು ದುಡ್ಡು ಕೊಟ್ಟರೆ, ಅವನ ಬಳಿಯಲ್ಲಿ ಒಟ್ಟಿಗೆ ಎಷ್ಟು ದುಡ್ಡುಗಳಾಗುವವು?

೨. ನನ್ನ ಖಲಗೈಯೊಳಗೆ ನಾಲ್ಕು ಪಾಗು ಎಡಗೈಯೊಳಗೆ ಮೂರು ಬೋರೇ ಹಂಣುಗಳವೆ, ಅದರಿ ಎಲ್ಲಕೂಡಿ ನನ್ನ ಹತ್ತರ ಹಣ್ಣುಗಳಿಷ್ಟು?

೩. ಒಬ್ಬ ಗೃಹಸ್ಥನ ಆರು ಮಕ್ಕಳಲ್ಲಿ ಎರಡು ಹೆಂಣು ಆಪ ಆದರೆ ಗಂಡು ಮಕ್ಕಳೆಷ್ಟು?

೪. ಎಂಟು ಮಾವಿನ ಹಣ್ಣುಗಳಲ್ಲಿ ಮೂರು ತಿಂದರೆ ಎಷ್ಟು ಹಣ್ಣುಗಳು ಉಳಿದವು?

೫. ಮೂರು ಆಕಳುಗಳ ಕೊಡುಗಳೆಷ್ಟು?

೬. ಎರಡು ಕುದುರೆಗಳ ಕಾಲುಗಳೆಷ್ಟು?

೭. ನಾಲ್ಕು ಹದ್ದುಗಳ ಪಕ್ಕಗಳೆಷ್ಟು?

೮. ಎಂಟು ಮಾವಿನ ಹಂಣುಗಳನ್ನು ನಾಲ್ಕು ಹುಡುಗರಿಗೆ ಸರಿಯಾಗಿ ಹಂಚಿ ಕೊಟ್ಟರೆ, ಒಬ್ಬೊಬ್ಬನ ಪಾಲಿಗೆ ಎಷ್ಟೆಷ್ಟು ಬರುವವು?

೯. ನನ್ನ ಹತ್ತಿರಿರುವ ಹತ್ತು ದುಡ್ಡಿನಲ್ಲಿ ಒಬ್ಬೊಬ್ಬ ಭಿಕ್ಷುಕನಿಗೆ ಎರಡೆರಡು ದುಡ್ಡಿನಂತೆ ಧರ್ಮ ಕೊಟ್ಟರೆ, ಭಿಕ್ಷುಕರು ಎಷ್ಟುಮಂದಿ ಇರಬೇಕು?

೧೦. ಒಂದು ಬುಟ್ಟಿಯಲ್ಲಿ ಐದು ಮಾವಿನ ಹಂಣು, ಮೂರು ಪೇರ್ಲ ಹಂಣು ಹಾಗು ಎರಡು ಬಾಳೀ ಹಂಣುಗಳಿವೆ, ಅದರೆ ಎಲ್ಲಕೂಡಿ ಎಷ್ಟು ಹಂಣುಗಳಾದವು?

೧೧. ನಾಲ್ಕು ವರ್ಷದ ಹುಡುಗನಿಗೆ ಒಂಬತ್ತು ವರ್ಷ ತುಂಬಬೇಕಾದರೆ, ಇನ್ನೂ ಎಷ್ಟು ವರ್ಷ ಬೇಕು?

೧೨. ಅಣೆಗೆ ನಾಲ್ಕು ದುಡ್ಡುಗಳಾದರೆ ಎರಡು ಅಣೆಗೆ ಎಷ್ಟು ದುಡ್ಡು?

೧೩. ರಾಮನು ಯಮುನೆಗಿಂತ ಎರಡು ವರ್ಷಕ್ಕೆ ಹಿರಿಯನು, ಯಮುನೆಯು ಈಗ ಐದು ವರ್ಷದವಳಿದ್ದರೆ ರಾಮುನ ವಯಸ್ಸೆಷ್ಟು?

೧೪. ಒಬ್ಬೊಬ್ಬನಿಗೆ ಎರಡೆರಡು ಬರುವಂತೆ ಒಂಬತ್ತು ಪೇರ್ಲ ಹಂಣುಗಳನ್ನು ಮೂರು ಮಂದಿಯಲ್ಲಿ ಹಂಚಿಕೊಟ್ಟರೆ, ಇನ್ನೂ ಪೇರ್ಲ ಹಂಣುಗಳು ಎಷ್ಟು ಉಳಿಯುವವು?

೧೫. ಒಂದು ವರ್ಗದೊಳಗೆ ಮೂವರು ಹೆಂಣು ಹುಡುಗರು ಹಾಗು ಇಬ್ಬರು ಗಂಡು ಹುಡುಗರಿರುತ್ತಾರೆ; ಒಬ್ಬ ಹುಡುಗನಿಗೆ ಒಂದು ರೂಪಾಯಿಯಂತೆ ಮತ್ತು ಒಬ್ಬ ಹುಡಿಗಿಗೆ ಎರಡು ರೂಪಾಯಿಯಂತೆ ಇನಾಮು ಕೊಟ್ಟರೆ ಎಷ್ಟು ರೂಪಾಯಿ ಹತ್ತುವವು?

SOLUTION OF QUESTIONS.

ಶಂಕಾ-ಸಮಾಧಾನ.

ಕಳೆದ ಮೇ ತಿಂಗಳ ಕಾಲಾಪತ್ರಕದ ೧೦೬ನೇ ಪುಟದಲ್ಲಿ ಛಾಪಿಸಿದ ಶ್ಲೋಕದ ಅರ್ಥವನ್ನು ಯಾರಾದರೂ ಬರೆದು ಕಳುಹಿಸುವರೆಂದು ದಾರಿ ನೋಡಿದೆವು; ಅವರಿಂಗಳಿಗಿ ಮಾಸ್ತರರಾದ ಹುಚ್ಚಯ್ಯಾ ಕಲ್ಲಯ್ಯಾ ಇವರ ಹೊರ್ತು ಯಾರೂ ಪ್ರಯತ್ನವನ್ನು ಸಹ ಮಾಡಲಿಲ್ಲ. ಇದು ಅಸಾವಧಾನದ ಸಂಗತಿಯೇ ಸರಿ. ಆ ಮಾಸ್ತರರು ಬರೆದದ್ದನ್ನು ಸಂಗ್ರಹಿಸಿ, ಮಿ. ಕುರ್ತಕೋಟಿಯವರ ಪ್ರಶ್ನಕ್ಕೆ ಉತ್ತರವನ್ನು ಸಂಕ್ಷೇಪದಿಂದ ಇವರ ಅಡಿಯಲ್ಲಿ ಕೂಟ್ಟಿರುತ್ತೇವೆ.

ಪಂಚವರ್ಣಾಪ್ರಗತ—೧ ಐದು ಬಣ್ಣಗಳಿಂದ ಮುಕ್ತವಾದ ಪಂಚ (ಗಿಳಿಯು) ೨ ನಮಃ ಶಿವಾಯ ಎಂಬ ಮಂತ್ರದ ಸಾಮರ್ಥ್ಯದಿಂದ ಪ್ರಾಪ್ತವಾದ (ಮಗನು,) ಸತ್ಯೇಂದ್ರಚೋಳನಿಗೆ ಬಹುಕಾಲ ಮಕ್ಕಳಾಗಿದ್ದಿಲ್ಲ; ಒಂದು ಸಮಯದಲ್ಲಿ ಜಿಷ್ಣು ಶಿವಾಚಾರ್ಯರೆಂಬ ಅವನ ಗುರುಗಳು ತಮಗೆ ಮಾಡಿದ ಅತಿಥ್ಯಕ್ಕೆ ಮೆಚ್ಚಿ ಪಂಚಾಕ್ಷರಿ ಮಂತ್ರವನ್ನು ಉಪದೇಶಿಸಿ, ಈ ಮಂತ್ರದ ಸಾಮರ್ಥ್ಯದಿಂದ ತೀವ್ರವಾಗಿ ಮಗನನ್ನು ಪಡೆಯುವಿ ಎಂದು ಅರಸಿಗೆ ಆಶೀರ್ವಾದ ಮಾಡಿದರೆಂಬದು ಪುರಾಣ ಪ್ರಸಿದ್ಧವಾದ ಮಾತು.

ಅಂಬಾಪಾಣಿ ಕೀರ—೧ ಶ್ರೀ ಶ್ಯಾಮಲಾದೇವಿಯ ಕೈಯಲ್ಲಿರುವ ಗಿಳಿಯು. ೨ ಶ್ರೀ ಪಾರ್ವತಿಯ ಅವತಾರವಾದ ಈ ದೇವಿಯ ಕೈಯಲ್ಲಿ ಗಿಳಿ ಇರುತ್ತದೆಂದು ಕಾಳಿದಾಸಕೃತ ಶ್ಯಾಮಲಾ ದಂಡಕದಲ್ಲಿ ವರ್ಣನೆಯುಂಟು. ಕವಿಯು ಶಿವಚಕ್ರವ್ಯಾಪಾಸಕನು ಆದವರಿಂದ ಅಂಬಾ ಎಂಬ ಪದದ ಅರ್ಥವನ್ನು ಶ್ರೀ ಪಾರ್ವತಿ ಎಂದು ಮಾಡುವದು ಉಚಿತವು.

ಅಂಬಾಪಾಣಿ ಕೀರಪ್ರಭವತನಯ—೧ ತಾಯಿಯ ಕೈಯಲ್ಲಿರುವ ಮಗನು.

ತಾತ್ಪರ್ಯ—ಪಂಚವರ್ಣ ಪ್ರಗತ ಮತ್ತು ಅಂಬಾಪಾಣಿ (ಸ್ಥ) ಎಂಬೆರಡು ವಿಶೇಷಣಗಳನ್ನು ಎರಡೂ (ಗಿಳಿ ಮತ್ತು ಮಗ) ಕಡೆಗೆ ಹಚ್ಚಿಕೊಳ್ಳಬಹುದು.

ಕನ್ನಡಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೨೬.] ಜೂಲೈ ೧೮೯೧. [ಸಂಚಿಕೆ ೭.

ಅನುಕ್ರಮಣಿಕೆ. ಪುಟ.

೧. ವಿದ್ಯಾನುಧಾರಣಾ ಸಂಬಂಧದ ವೃತ್ತಾಂತಗಳು ೧೪೫
೨. ಕಲಿಸುವ ಪದ್ಧತಿಗಳು. ೧೫೧
೩. ಕೊಲ್ಹಾಪುರದ ಪ್ರವಾಸವು. ೧೬೦
೪. ಧಾರವಾಡ ಟ್ರೇನಿಂಗಕಾಲೇಜದ ಸರ್ಟಿಫಿಕೇಟು ಪರೀಕ್ಷೆಯು.
ಸಿದ್ಧಾಂತ ವೃತ್ತ ಮಹತ್ವ ವಾರ್ತೆ ೧೮೯೦. ... ... ೧೩೯

CONTENTS.

1. Educational Intelligence and Useful Notes... 145
2. Methods of teaching 151
3. Excursion to Kolhapur 160
4. Dharwar Training College Certificate Examination 1890. 139

DHARWAR:
PRINTED AT THE KARNATIC BOOK DEPOT PRESS,
1891.

ಕನ್ನಡ ಕಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ... ೧೫ ಆಣೆ.
ಒಂದು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ. ೪ ಪಂಕ್ತಿಗಳವರೆಗೆ ೧ ರೂ.
ನೂರುಸಾರೆ ಇಟ್ಟರೆ. ೧೦ ,, ,,
ಆರುಸಾರೆ ಇಟ್ಟರೆ. ೧೬ ,, ,,

ಸೂಚನೆಗಳು.

೧. ಕಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.
೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.
೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇನ್ನೂಡಿ ಫೀ ಬೀಳುವದು.
೪. ಪ್ರಕಟನೆಯ ಕೂಡ ಹಣ ಕಳುಹಿಸಲಿಕ್ಕೆ ಬೇಕು.
೫. ಟಿಕೀಟು ಇಟ್ಟ ಹೊರತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಕಾಲಾಪತ್ರಕ.

ಶಾಲಾಪತ್ರಿಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ
ಬಯಸುತ್ತುಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯವಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ತೆಕ್ಕೆಕೊಂಬುದ್ಯೆ !
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೬.] ಜೂಲೈ ೧೮೯೯ [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಇಂಗ್ಲಂಡದೊಳಗೆ ಎಲ್ಲರೂ ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಹಾಕಿ ವಿದ್ಯಾಭ್ಯಾಸವನ್ನು ಮಾಡಿಸಲೇ ಬೇಕೆಂಬ ನಿರ್ಬಂಧವುಂಟು. ಅವರಿಂದ ಫೀ ಮುಂತಾದ ಖರ್ಚುಗಳನ್ನು ಕೊಡಲಾರದಂಥ ಬಡ ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ತೊಂದರೆಯನ್ನು ನೀಗುವದಕ್ಕೋಸ್ಕರ ಯಾವದೊಂದು ಉಪಾಯ ಮಾಡಬೇಕಾಗಿ ಈ ವರ್ಷ ಪಾರ್ಲಮೆಂಟ ಸಭೆಯು ಸುರು ಆದ ದಿವಸ ಮಹಾರಾಣೀ ಸಾಹೇಬರು ತಮ್ಮ ಭಾಷಣವಲ್ಲಿ ಸೂಚಿಸಿದರು. ಆ ಮೇರಿಗೆ ಪ್ರಾಥಮಿಕ ಶಿಕ್ಷಣದ ಖರ್ಚನ್ನೆಲ್ಲ ಸರಕಾರದಿಂದಲೇ ಸಾಗಿಸಬೇಕೆಂಬ ಅಭಿಪ್ರಾಯವುಳ್ಳ ಬಿಲ್ಲು ಕಾಯಿದೆಯ ಮಸೂದೆಯನ್ನು ಚಾನ್ಸಲರ ಆಫ್ ದಿ ಎಕ್ಸ್‌ಚೆಕರರಾದ (ಖಜಾನೆಯ ಮಂತ್ರಿ) ಮಿ. ಗೋಶನ್ ಪೊರೆಗಳು ಪಾರ್ಲಮೆಂಟ ಸಭೆಯ ಮುಂದೆ ತಂದಿರುತ್ತಾರೆ. ಈ ಮಸೂದೆಯ ಸಂಬಂಧದಿಂದ ಮತಭೇದವು ಉಂಟು. ಕೆಲವರಂತು ಈ

ಕನ್ನಡ ಶಾಲಾಪತ್ರಿಕೆಯ ವಾರ್ಷಿಕ ವರ್ಷಕ್ಕೆ ಮುಂಗಡ ... ೧೫ ಆಣೆ.
ಇಂಡು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ.	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಶಾಲಾಪತ್ರಿಕೆಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇ ನ್ನೂಡಿ ಪೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಿಸಲಿಕ್ಕೆ ಬೇಕು.

೫. ಟಿಕೇಟು ಇಟ್ಟ ಹೊರತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಿಕೆ.

ಶಾಲಾಪತ್ರಿಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೬.] ಜೂಲೈ ೧೮೯೧ [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಇಂಗ್ಲಂಡದೊಳಗೆ ಎಲ್ಲರೂ ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಹಾಕಿ ವಿದ್ಯಾಭ್ಯಾಸವನ್ನು ಮಾಡಿಸಲೀ ಬೇಕೆಂಬ ನಿರ್ಬಂಧವುಂಟು. ಅವರಿಂದ ಫೀ ಮುಂತಾದ ಖರ್ಚುಗಳನ್ನು ಕೊಡಲಾರದಂಥ ಬಡ ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ತೊಂದರೆಯನ್ನು ನೀಗುವದಕ್ಕೋಸ್ಕರ ಯಾವದೊಂದು ಉಪಾಯ ಮಾಡಬೇಕಾಗಿ ಈ ವರ್ಷ ನಿರ್ಲಮೆಂಟ ಸಭೆಯು ಸುರು ಆದ ದಿವಸ ಮಹಾರಾಣೀ ಸಾಹೇಬರು ತಮ್ಮ ಭಾಷಣವಲ್ಲಿ ಸೂಚಿಸಿದರು. ಆ ಮೇರಿಗೆ ಪ್ರಾಥಮಿಕ ಶಿಕ್ಷಣದ ಖರ್ಚನ್ನೆಲ್ಲ ಸರಕಾರದಿಂದಲೀ ಸಾಗಿಸಬೇಕೆಂಬ ಅಭಿಪ್ರಾಯವುಳ್ಳ ಬಿಲ್ಲು ಕಾಯಿದೆಯ ಮಸೂದೆಯನ್ನು ಚಾನ್ಸೆಲರ ಆಫ್ ದಿ ಎಕ್ಸ್ಚೆಕರರಾದ (ಖಜಾನೆಯ ಮಂತ್ರಿ) ಮಿ. ಗೋಶನ್ ಪೊರೆಗಳು ಪಾರ್ಲಮೆಂಟ ಸಭೆಯ ಮುಂದೆ ತಂದಿರುತ್ತಾರೆ. ಈ ಮಸೂದೆಯ ಸಂಬಂಧದಿಂದ ಮತಭೇದ ಉಂಟು. ಕೆಲವರಂತೂ ಈ

ಕನ್ನಡ ಶಾಲಾಪತ್ರಕದ ವಾರ್ಷಿಕ ವರ್ಷಕ್ಕೆ ಮುಂಗಡ ... ೧೫ ಆಣೆ.
ಒಂದು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ. ೪ ಪಂಕ್ತಿಗಳವರೆಗೆ ೧ ರೂ.
ನೂರುಸಾರೆ ಇಟ್ಟರೆ. ೧೦ ,, ,,
ಆರುಸಾರೆ ಇಟ್ಟರೆ. ೧೬ ,, ,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.
೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.
೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.
೪. ಪ್ರಕಟನೆಯ ಕೂಡ ಹಣ ಕಳುಹಿಸಲಿಕ್ಕೆ ಬೇಕು.
೫. ಟಿಕೇಟು ಇಟ್ಟ ಹೊರತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಕ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯವಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ತೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೬.] ಜೂಲೈ ೧೮೯೯ [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಇಂಗ್ಲಂಡದೊಳಗೆ ಎಲ್ಲರೂ ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಹಾಕಿ ವಿದ್ಯಾಭ್ಯಾಸವನ್ನು ಮಾಡಿಸಲೇ ಬೇಕೆಂಬ ನಿರ್ಬಂಧವುಂಟು. ಅವರಿಂದ ಫೀ ಮುಂತಾದ ಖರ್ಚುಗಳನ್ನು ಕೊಡಲಾರದಂಥ ಬಡ ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ತೊಂದರೆಯನ್ನು ನೀಗುವದಕ್ಕೋಸ್ಕರ ಯಾವದೊಂದು ಉಪಾಯ ಮಾಡಬೇಕಾಗಿ ಈ ವರ್ಷ ಪಾರ್ಲಮೆಂಟ ಸಭೆಯು ಸುರು ಆದ ದಿವಸ ಮಹಾರಾಣೀ ಸಾಹೇಬರು ತಮ್ಮ ಭಾಷಣದಲ್ಲಿ ಸೂಚಿಸಿದರು. ಆ ಮೇರಿಗೆ ಪ್ರಾಥಮಿಕ ಶಿಕ್ಷಣದ ಖರ್ಚನ್ನೆಲ್ಲ ಸರಕಾರದಿಂದಲೇ ಸಾಗಿಸಬೇಕೆಂಬ ಅಭಿಪ್ರಾಯವುಳ್ಳ ಒಂದು ಕಾಯಿದೆಯ ಮಸೂದೆಯನ್ನು ಚಾನ್ಸೆಲರ ಆಫ್ ದಿ ಎಕ್ಸ್‌ಚೆಕರರಾದ (ಖಜಾನೆಯ ಮಂತ್ರಿ) ಮಿ. ಗೋಶನ್ ಪೌರೆಗಳು ಪಾರ್ಲಮೆಂಟ ಸಭೆಯ ಮುಂದೆ ತಂದಿರುತ್ತಾರೆ. ಈ ಮಸೂದೆಯ ಸಂಬಂಧದಿಂದ ಮತಭೇದ ಉಂಟು. ಕೆಲವರಂತು ಈ

ಕಾಯಿದೆಯಿಂದ ಜನರ ಸ್ವಾಭಿಮಾನಕ್ಕೂ, ಶಿಕ್ಷಕರ ಯೋಗ್ಯತೆಗೂ, ಶಾಲೆಗಳ ಗೌರವಕ್ಕೂ ಹಾನಿ ಬರುವದೆಂದು ಪ್ರತಿಪಾದಿಸುತ್ತಾರೆ.

ಕೆಲವು ದಿವಸಗಳ ಹಿಂದೆ ನಮ್ಮ ಮಾಜಿ ವ್ಹಾಯಿಸರಾಯಗಳಾದ ಲಾರ್ಡ ಡಫರಿನ್ ಧೊರೆಗಳು ಸೇಂಟ ಆಂಡ್ರ್ಯೂಜ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಬಹು ಗೌರವದ ಉಪದೇಶ ಮಾಡಿದರು. ಪ್ರಾಚೀನ ಭಾಷೆಗಳ ಯೋಗ್ಯತೆ, ಅವುಗಳ ಅಧ್ಯಯನದಿಂದಾಗುವ ಲಾಭ, ಬೇರೆ ಬೇರೆ ಭಾಷೆಗಳನ್ನು ಕಲಿಯುವ ಯೋಗ್ಯ ಮಾರ್ಗ, ವ್ಯಾಕರಣದ ಪ್ರಯೋಜನ, ಇವೇ ಮುಂತಾದ ವಿಷಯಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದಕ್ಕೆ ಎಲ್ಲ ವಿದ್ವಾಂಸರು ಒಪ್ಪಿಕೊಳ್ಳುವಂತೆ ತೋರುವದಿಲ್ಲ; ಆದರೆ ವ್ಯವಹಾರದ ಸಂಬಂಧದಿಂದ ಈ ವ್ಯವಹಾರ ಪಂಡಿತರು ಮಾಡಿದ ಬೋಧವಲ್ಲಿ ಗ್ರಾಹ್ಯಾಂಶವು ಹೆಚ್ಚಿಗಿದ್ದು ಹಿಂದುಸ್ತಾನದ ಭೂತ್ರವರ್ಗಕ್ಕೆ ಬಹಳ ಪ್ರಯೋಜನಕರವಾದವರಿಂದ ಅವನ್ನು ಇವರ ಕೆಳಗೆ ಬರೆಯುತ್ತೇವೆ; ಮತ್ತು ಅವನ್ನು ಕುರಿತು ಬಹುಜನರು ವಿಚಾರ ಮಾಡುವದಲ್ಲದೆ ಅವರಿಂದ ತಮ್ಮ ವರ್ತನಕ್ರಮವನ್ನು ಇಡುವರೆಂದು ಕೋರುತ್ತೇವೆ.

ನಿಬಂಧ ರಚನೆಯ ಸಂಬಂಧದಿಂದ ಡಫರಿನ್ ಧೊರೆಗಳು ಪ್ರಕಟಿಸಿದ್ದೇನಂದರೆ:—"ರಗಳೆಯು ಬರಹ ಮತ್ತು ಅರ್ಥಸಂದಿಗ್ಧತ್ವ ಎಂಬ ಎರಡು ದೋಷಗಳನ್ನು ಆಗ್ರಹದಿಂದ ವರ್ಜಿಸಿರಿ. ನಿಮ್ಮ ವಿಚಾರಗಳನ್ನೆಲ್ಲ ಮೊದಲು ನಿಮ್ಮ ಮನಸಿನಲ್ಲಿಯೇ ಅಚ್ಚುಕಟ್ಟಾಗಿ ಹೊಂದಿಸಿಕೊಳ್ಳಿರಿ, ಮತ್ತು ಅವುಗಳನ್ನು ಸುಲಭ ಶಬ್ದಗಳಿಂದ ಅರ್ಥಕ್ಕೆ ತೊಡಕು ಬಾರದಂ

ತೆ ಸರಿಯಾಗಿ ಪ್ರಕಟಿಸಿರಿ." ಈ ಉಪದೇಶವು ಬಹಳ ಪ್ರಯೋಜನಕರವಾಗಿರುತ್ತದೆ. ವಿದ್ಯಾರ್ಥಿಗಳಲ್ಲಿ ಬಹುಜನರು ಸರಕಾರದ ಜಾಕರಿಯಲ್ಲಿ ಶೇರಿ ಬಂದಿಲ್ಲ ಬಂದು ಪ್ರಕಾರದ ಪತ್ರವ್ಯವಹಾರವನ್ನು ನಡಿಸತಕ್ಕವರೇ. ಅವರು ಈ ಉಪದೇಶವನ್ನು ಲಕ್ಷ್ಯವಲ್ಲಿಟ್ಟು ಅವರಂತೆ ನಡೆದರೆ, ಅವರ ಮನಿಷ್ಯರಿಗೂ, ಅವರ ಕೈಕೆಳಗಿನವರಿಗೂ ಕೆಲಸದಲ್ಲಿ ತೊಂದರೆ ಸಂಭವಿಸಲಿಕ್ಕಿಲ್ಲ. ಸವ್ಯಕ್ಕೆ ಕೆಲವು ಅಧಿಕಾರಸ್ಥರು ತಮ್ಮ ಆಲೋಚನೆಗಳನ್ನು ಹೊಂದಿಸಿಕೊಂಡು ಸರಿಯಾಗಿ ಪ್ರಕಟಿಸುವವರಲ್ಲಿ ತಕ್ಕಷ್ಟು ಎಚ್ಚರ ಪಡದೆ ಇರುವದರಿಂದ ಅವರ ಬರಪಗಳು ಮೇಲಧಿಕಾರಸ್ಥರಿಗೆ ನಿಷ್ಪ್ರಯೋಜನಕರವಾಗುತ್ತವೆ. ಕೈಕೆಳಗಿನ ಅಧಿಕಾರಸ್ಥರಿಗೆ ಅವರ ಬರಹದ ಬೋಧವಾಗದಿರುವದರಿಂದ ಪೇಚಾಟ ಬರುತ್ತದೆ. ಈ ಅನರ್ಥವು ಈ ಉಪದೇಶದಿಂದ ಪರಿಹಾರವಾಗಿ ಕೆಲಸವು ಸುಯಂತ್ರವಾಗಿ ಸಾಗುವದು.

ಇತ್ತಲಾಗಿ ಶಾಲೆಗಳಲ್ಲಿ ಶಾರೀರ ಶಿಕ್ಷಣಕ್ಕೆ ಬಹು ಲಕ್ಷ್ಯಕೊಡಹತ್ತಿದ್ದಾರೆ; ಅವರೆ ಅವೇಕವುಳ್ಳ ಮಾಸ್ತರರಿಂದ ತಪ್ಪಾಗಿ ಹುಡುಗರಿಗೆ ಅಪಾಯ ಸಂಭವಿಸುವದೆಂದು ಜಂಟು ವಿದ್ಯಾಖಾತೆಯ ಮೆ. ಡಾಯರೆಕ್ಟರ ಸಾಹೇಬ ಬಹದೂರವರು ಗರಡೀ ಸಾಧಕ, ಕವಾಯತು, ಆಟಗಳನ್ನು ಎಚ್ಚರದಿಂದ ಮಾಡಿಸಬೇಕೆಂತಲೂ, ಬೇನೆಯ ಹುಡುಗರಿಂದ ತಕ್ಷಷ್ಟೇ ಮಾಡಿಸಬೇಕೆಂತಲೂ ಅಥವ ಮಾಡಿಸಲೇ ಬಾರದೆಂತಲೂ, ಕಟ್ಟು ಮಾಡಿರುತ್ತಾರೆ; ಮತ್ತು ಯಾರಾದರೂ ತಮ್ಮ ಮಕ್ಕಳಿಂದ ಸಾಧಕ ಮಾಡಿಸಬಾರದೆಂದು ಹೇಳಿದರೆ ಅವರ ಕೋರಿಕೆಯಂತೆ ನಡಿಯಬೇಕೆಂದು ಸಹ ವಿಧಿಸಿದ್ದು

ತ್ತಾರೆ. ಗರಡೀಸಾಧಕ, ಆಟ ಮುಂತಾದ ಶಾರೀರ ವ್ಯಾಪಾರಗಳಿಂದ ಹಿತವದೆಂಬದಕ್ಕೆ ಏನೂ ಸಂಶಯವಿಲ್ಲ. ಆದರೆ ಮಿತಿಮೀರಿ ವ್ಯಾಯಾಮ ಮಾಡುವದರಿಂದ ಮಾತ್ರ ಅಪಾಯ ಉಂಟು. ಪ್ರತಿಯೊಬ್ಬ ವಿದ್ಯಾರ್ಥಿಯ ಶರೀರ ಪ್ರಕೃತಿ, ಸ್ಥಿತಿ, ಆಹಾರ ಮುಂತಾದವುಗಳಿಗೆ ಸರಿಯಾಗಿ ವ್ಯಾಯಾಮವನ್ನು ಮಾಡಿಸತಕ್ಕದ್ದು. ಮತ್ತು ವ್ಯಾಯಾಮ ಮಾಡುವಾಗ ಅವಸರ ಮಾಡದಂತೆಯೂ, ಶಕ್ತಿಮೀರದಂತೆಯೂ ಚಳಿತಗಲಿ ಶೈತ್ಯವಾಗದಂತೆಯೂ ವ್ಯವಸ್ಥೆಯನ್ನು ಕಾಯ್ದುಕೊಳ್ಳತಕ್ಕದ್ದು.

ಮನುಷ್ಯನಲ್ಲಿ ಅಹಂಕಾರದ ಉತ್ಪತ್ತಿ ಲಯಗಳನ್ನು ಕುರಿತು ಬಬ್ಬ ಅಮೇರಿಕದ ಪಂಡಿತನು ಹೀಗೆ ತಿಳಿಸುತ್ತಾನೆ. ೧೦ನೇ ವರ್ಷಕ್ಕೆ ತನ್ನ ತಂದೆ ಬಹಳ ಬಲ್ಲವನೆಂದು ತಿಳುಕೊಳ್ಳುತ್ತಾನೆ; ೧೫ನೇ ವರ್ಷಕ್ಕೆ ತಾನು ತನ್ನ ತಂದೆಗೆ ಸಮಾನನಾವನೆಂದು ತರ್ಕಿಸುತ್ತಾನೆ; ೨೦ನೇ ವರ್ಷಕ್ಕೆ ತಂದೆಯು ಇವ್ಮಡಿ ಜಾಣನೆಂದು ಭಾವಿಸುತ್ತಾನೆ; ೩೦ನೇ ವರ್ಷಕ್ಕೆ ತನ್ನ ತಂದೆಯೊಡನೆ ಆಲೋಚನೆ ಮಾಡುವದು ಕೆಡಕಲ್ಲವೆಂದು ಆಲೋಚಿಸುತ್ತಾನೆ; ೪೦ನೇ ವರ್ಷಕ್ಕೆ ತನ್ನ ತಂದೆಗೆ ತನಗಿಂತ ಹೆಚ್ಚು ತಿಳಿಯುತ್ತದೆಂದು ನೀಡುತ್ತಾನೆ ಮತ್ತು ೫೦ನೇ ವರ್ಷಕ್ಕೆ ಅಂದರೆ ತಂದೆ ಸತ್ತನಂತರ ತನ್ನ ತಂದೆಯು ಬಹಳ ಜಾಣನಿದ್ದನೆಂದು (ಮನುಷ್ಯನು) ತಿಳುಕೊಳ್ಳುತ್ತಾನೆ.

ಕಲಕತ್ತೆಯಲ್ಲಿರುವ ಬೆಥ್ಯೂನ ಕಾಲೇಜವೆಂಬ ದೊಡ್ಡ ಸ್ತ್ರೀ ಶಾಲೆಯ ಊರ್ಜಿತ ಸ್ಥಿತಿಯನ್ನು ಕಂಡು ನಮಗೆ ಸಮಾಧಾನವಾಗುತ್ತದೆ. ಈ ವರ್ಷ ಆ ಶಾಲೆಯಿಂದ ಕಲ

ಈತ್ತಾ ಯುನಿವ್ಹರ್ಸಿಟೀ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ನಾಲ್ಕು ಮಂದಿ ವಿದ್ಯಾರ್ಥಿನಿಯರು ಎಫ್. ಇ. ಎ. ಪರೀಕ್ಷೆಯಲ್ಲಿ ನಾಲ್ವರು ಹಾಗು ಬಿ. ಎ. ಪರೀಕ್ಷೆಯಲ್ಲಿ ಬಬ್ಬಳು ಪಾಸಾವದ್ದು ತಿಳಿಯುತ್ತದೆ. ಇವರು ಬಂಗಾಲೀ (ಹಿಂದು) ಜನರು.

ಫ್ರೆಂಚ ಜನರಿಗೆ ಗೋಮಾಂಸವು ಸಾಕಷ್ಟು ಸಿಗದ್ದರಿಂದ ಅವರು ಕುದುರೇ ಮಾಂಸವನ್ನು ತಿನ್ನಲಾರಂಭಿಸಿದ್ದಾರೆ. ಕಳೆದವರ್ಷ ಪಾರಿಸ್ ಬುದೇ ಪಟ್ಟಣದೊಳಗೆ ಹದಿನಾಲ್ಕು ಸಾವಿರ ಕುದುರೆಗಳು ಬಲೀ ಬಿದ್ದವಂತೆ!

ಆಸ್ಟ್ರೇಲಿಯಾ ದ್ವೀಪದೊಳಗಿನ ಬಂದು ಅಡವಿಯಲ್ಲಿ ಬಬ್ಬ ಕಾಡು ಜಾತಿಯ ಹುಡುಗನು ಸಿಕ್ಕಿರುವನು. ಆತನ ವಯಸ್ಸು ಸುಮಾರು ೧೬ ವರ್ಷದ್ದದೆ. ಆತನ ಮೈಗೂದಲು ೪ ಇಂಚು ತಲೆಗೂದಲು ೪ ಪೂಟು ಉದ್ದಿರುವವು. ೨ ಇಂಚು ಉದ್ದವಾದ ಉಗುರುಗಳಿರುತ್ತವೆ. ಅವನನ್ನು ಹಿಡಿಯಲಿಕ್ಕೆ ಬಹಳ ಪ್ರಯಾಸವಾಗಲಿಲ್ಲ. ಆ ಹುಡುಗನು ಈಗ ಮಾತಾಡಲಿಕ್ಕೆ ಪ್ರಯತ್ನ ನಡಿಸಿರುವನೆಂದು ಕೇಳುತ್ತೇವೆ.

ಕಾರ್ಕ (ಯು. ಸ್ಟೇ.) ಎಂಬಲ್ಲಿ ೨೫೫ ಪೂಟು ಎತ್ತರವಾದ ಇಪ್ಪತ್ತು ಅಂತಸ್ತುಳ್ಳ ಬಂದು ವಿಶಾಲವಾದ ಮಂದಿರವನ್ನು ಕಟ್ಟುವ ಕೆಲಸ ನಡೆವದೆ. ಅವಕ್ಕೆ ಬಟ್ಟಗೆ ೪೪,೫೦,೦೦೦ ರೂಪಾಯಿ ವೆಚ್ಚವಾಗುವವೆಂದು ತರ್ಕವುಂಟು. ಈ ಮಂದಿರವು ೪೫,೦೦೦ ಜನರು ವಾಸಮಾಡುವಷ್ಟು ಇಂಬುಳ್ಳದ್ದಾಗುವದು.

ಪಸು ಮಕ್ಕಳ ಕಾಲಿಗೆ ಬಂಣದ ಕಾಲು ಚೀಲುಗಳನ್ನು ತೊಡಿಸುವವರಿಂದ ಅವರ ಪ್ರಕೃತಿ ಕೆಡುತ್ತದೆಂದು ಪಾರಿಸ ಪಹರದೊಳಗಿನ ಕೆಲವೊಂದು ಸಮಾಜದವರ ಅಭಿಪ್ರಾಯ ವುಂಟು.

ಅಮೇರಿಕದಲ್ಲಿ ಬಬ್ಬ ಗೃಹಸ್ಥನು ನೀರೊಳಗೆ ಎಂದೂ ಮುಳುಗದಂಥ ಹಾಗು ಬೆಂಕಿ ಹತ್ತದಂಥ ಹಡಗವನ್ನು ರ ಚಿಸಿರುವನು. ಇಂಥ ಬಂದಾದರೂ ಕೌತುಕವು ನಮ್ಮ ದೇ ಶದಲ್ಲಿ ಯಾಕೆ ಗೋಚರವಾಗುತ್ತಿರಲಿಕ್ಕಿಲ್ಲ?

ದಿಲ್ಲಿಯಲ್ಲಿ ದೀಪದ ಕಡ್ಡಿಗಳನ್ನು ಮಾಡುವ ಬಂದು ಕಾ ರಖಾನೆಯು ಬೇಗ ಹೊರಡುವದದೆ.

ಎಲುವಿನ ಹಿಟ್ಟು ಮಾಡುವ ಕಾರಖಾನೆಗಳು ಮುಂಬ ಯಿಯಲ್ಲಿ ೬, ಬಂಗಾಲದಲ್ಲಿ ೨, ಕೋಯಿಮತ್ತೂರಲ್ಲಿ ೩, ದಕ್ಷಿಣ ಕಾನಡಾದಲ್ಲಿ ೧, ಮಾನಮಾರದಲ್ಲಿ ೧, ರಂಗೂನದ ಲ್ಲಿ ೧, ಹೀಗೆ ಹದಿನಾಲ್ಕು ಅವೆ.

ಡಾಕ್ಟರ ಶೆ ಎಂಬ ಬಬ್ಬ ಅಮೇರಿಕದ ಪ್ರಸಿದ್ಧ ಪಾ ದ್ರಿಯು ಚೀನ ದೇಶಕ್ಕೆ ಹೋದಾಗ್ಗೆ ಅಲ್ಲಿ ನಡಿಸಿದ ಆತ ನ ಪರಿಶೋಧನೆಯಿಂದ ಕ್ರಿಸ್ತನ ಮುಂಚೆ ಇನ್ನೂರು ವರ್ಷ ಗಳ ಆಚೆಯಲ್ಲಿ ಬರೆದಿಟ್ಟ ಚೀನೀ ಜನರ ಬಂದು ಹಸ್ತಲೇ ಖವು ಆತನ ಕೈಗೆ ಸಿಕ್ಕಿರುವವು. ಅದರಲ್ಲಿ:—

ಚೀನರಾಜ್ಯದಲ್ಲಿ ಚಿಂಗ್ ವ್ಯಾಂಗನೆಂಬ ಚಕ್ರವರ್ತಿಯು ಆಳುತ್ತಿರಲಾಗಿ, ಹೀಲಾಯನೆಂಬ ಬಬ್ಬ ನಾವಿಕನು ಕ್ರಿ. ಶ.

ಮು. ೨೧೩ನೇ ವರ್ಷದ ಸುಮಾರಿನಲ್ಲಿ ಅಮೋರಿಕ ಖಂಡವನ್ನು ಗೊತ್ತು ಹಚ್ಚಿದನೆಂದು ಸಪ್ರಮಾಣವಾದ ದಾಖಲೆ ಹೊರಡುತ್ತದೆ.

ಕೆಲವು ದಿವಸಗಳ ಹಿಂದೆ ಸುರತದ ನಿವಾಸಿಯಾದ ಮಿ. ಆರದೇಸರ ಪೆಸ್ತನಜಿ ಗ್ರೀನನೆಂಬ ಒಬ್ಬ ಎದೆಗಾರನು ೨ ತಾಸು ೪೫ ಮಿನೀಟುಗಳಲ್ಲಿ ತಾಪೀ ನದಿಯೊಳಗೆ ಹತ್ತು ಮೈಲು ದೂರ ಈಸಿ ಹೋದನಂತೆ.

METHODS OF TEACHING.

ಕಲಿಸುವ ಪದ್ಧತಿಗಳು.

ವಿಕ್ಷಣದ ಕೆಲಸವು ನಮ್ಮ ಶಾಲೆಗಳಲ್ಲಿ ಸರಿಯಾಗಿ ಸಾಗುವದಿಲ್ಲ. ಅದಕ್ಕೆ ಅಜ್ಞಾನ, ದುರ್ಲಕ್ಷ್ಯಗಳೇ ಕಾರಣವು. ಮಾಸ್ತರ ಜನರಿಗೆ ಅವರ ಕರ್ತವ್ಯವು ಸರಿಯಾಗಿ ತಿಳಿಯದೆ ಇರುವದರಿಂದಲೂ, ತಿಳಿದದ್ದನ್ನಾದರೂ ಲಕ್ಷ್ಯಕೊಟ್ಟು ಮಾಡದೆ ಇರುವದರಿಂದಲೂ ಅವರ ದುಡಿತವೆಲ್ಲ ಹಾಳಾಗುತ್ತದೆಂಬದಿಷ್ಟೇ ಅಲ್ಲ, ವಿದ್ಯಾರ್ಥಿಗಳಿಗೂ ಹಾನಿ ಸಂಭವಿಸುತ್ತದೆ. ಪ್ರತಿ ದಿವಸ ಹತ್ತು ಹನ್ನೆರಡು ತಾಸು ದುಡಿದು ಕಲಿಸುವ ವಿಷಯಗಳನ್ನೆಲ್ಲ ಎರಡೆರಡು ಮೂರು ಮೂರು ಸಾರಿ ಕಲಿಸಿವರೂ ಬಳ್ಳೇ ಪ್ರಶಂಸೆಯನ್ನು ಹೊಂದವಂಥ ಶಾಲೆಗಳನ್ನು ನಾವು ಬಲ್ಲೆವು. ಆ ಮಾಸ್ತರರು ಗುಪ್ತಕ್ಕೆ ಕಲ್ಲು ಹೊರುವದನ್ನು ನೋಡಿ ಯಾರಿಗಾದರೂ ಸಂತೋಷಾಶ್ಚರ್ಯವಾಗದೆ ಇರಲಾರದು. ಅವರ ಬದುಲಿಯ ಲುವಿಕೆಯನ್ನು ತಪ್ಪಿಸಿ ಅವರು ಮಾಡುವದನ್ನು ಅಥವಾ ಅವಕ್ಕೂ ಕಡಿಮೆ ಪ್ರಮಾಣದಿಂದ ದೊಕ್ಕುವ ಯೋಗ್ಯತೆಯು

ನ್ನು ದೊರಕಿಸಿ ಕೊಡಬೇಕೆಂಬ ಉದ್ದೇಶದಿಂದ ಪಾಠಗಳ ನ್ನು ಹ್ಯಾಗೆ ಕಲಿಸಬೇಕೆಂಬದನ್ನು ಕುರಿತು ಕೆಲವು ಸೂಚ ನೆಗಳನ್ನು ಬರೆಯಬೇಕೆಂದು ನಮ್ಮ ಮನಸುಂಟು. ಈ ಉದ್ದೇಶಕ್ಕೆ ಸರಿಯಾಗಿ ನಾವು ಬಿನ್ನ ಇಯತ್ತೆಯಿಂದ ಆ ರಂಭಿಸುವ—ಬಿನ್ನ ಇಯತ್ತೆಯ ವಿದ್ಯಾರ್ಥಿಗಳೆಂದರೆ ತೀ ರ ಹೊಸದಾಗಿ ಶಾಲೆಗೆ ಬಂದಂಥ ಹಸುಮಕ್ಕಳು. ಈ ಹ ಸು ಮಕ್ಕಳಿಗೆ ಕಲಿಸುವ ವಿಷಯಗಳು ಎರಡು. ಅಂಕಲಿಪಿ ಮತ್ತು ವ್ಯವಹಾರದೊಳಗಿನ ಒಡಿವೆಗಳ ಗುಣ ಧರ್ಮಾದಿ ಗಳು. ಈ ವಿಷಯಗಳನ್ನು ಕಲಿಸುವ ಮಾರ್ಗವನ್ನು ಮೆ. ಎಜ್ಯುಕೇಶನಲ್ ಇನ್‌ಸ್ಪೇಕಟರ ಸಾಹೇಬ ದಕ್ಷಿಣ ಭಾಗ ಇವರು ಮಾಡಿದ ಉಜಳಣೀ ಪುಸ್ತಕದಲ್ಲಿ ಸ್ಫುಟವಾಗಿ ಹೇ ಳಿರುತ್ತದೆ. ಅದನ್ನು ಮಾಸ್ತರ ಜನರ ಸಲುವಾಗಿ ಕನ್ನಡ ದಲ್ಲಿ ಭಾಷಾಂತರಿಸಿ, ಇದರಡಿಯಲ್ಲಿ ಕೊಡುತ್ತೇವೆ.

ಪ್ರಸ್ತಾವನೆ.

ಬಾಲಕರು ಕಲಿಯಲಿಕ್ಕೆ ಆರಂಭ ಮಾಡುವ ಕಾಲವು ಬಹು ಗೌರವದ್ದಿರುತ್ತದೆ. ಆಗ್ಗೆ ಮಾಸ್ತರರು ಒಳ್ಳೇ ಎಚ್ಚ ರದಿಂದ ಅವರ ಲಕ್ಷ್ಯವನ್ನು ಅಭ್ಯಾಸಕ್ಕೆ ಹಚ್ಚಲಿಕ್ಕೆ ಬೇ ಕು; ಇಲ್ಲದಿದ್ದರೆ ಅಭ್ಯಾಸಕ್ಕೆ ಅವರ ಲಕ್ಷ್ಯವು ಎಳೆಯದೆ ಅವರು ಬುದ್ಧಿವಂತರಾಗುವದು ಅಪರೂಪವು. ಯೋಗ್ಯ ಉ ಪಾಯಗಳಿಂದ ಅಭ್ಯಾಸದ ರುಚಿಯನ್ನು ಹುಟ್ಟಿಸಿ ಶಿಕ್ಷ ಣವನ್ನು ತಕ್ಕ ವ್ಯವಸ್ಥೆಯಿಂದ ಕೊಟ್ಟರೆ ಎಂಥ ಮಂ ದ ಬುದ್ಧಿಯವನಾದರೂ ತಕ್ಕಮಟ್ಟಿಗೆ ಜಾಣನಾಗಬಹು ದು. ಈ ತಕ್ಕ ಮಾರ್ಗವನ್ನು ಸೂಚಿಸುವ ಉದ್ದೇಶ ದಿಂದ ಈ ಚಿಕ್ಕ ಪುಸ್ತಕವನ್ನು ರಚಿಸಿರುತ್ತೇವೆ. ಇದರಲ್ಲಿ ಅಕ್ಷರ ಪ್ರಕರ್ಣ, ಅಂಕಪ್ರಕರ್ಣಗಳೆಂಬ ಎರಡು ಭಾಗ

ಗಳುಂಟು. ಇವೆರಡೂ ಪ್ರಕರ್ಣಗಳನ್ನು ಬಮ್ಮೆಲೆ ಪ್ರಾರಂಭಿಸಬೇಕು; ಹಾಗು ಅವುಗಳನ್ನು ಕಲಿಸುವಾಗ ಯಾವಾಗಲೂ ಕರೇ ಹಲಿಗೇ ಉಪಯೋಗವನ್ನು ಮಾಡುತ್ತಿರಬೇಕು. ಹುಡುಗರು ಬಿನ್ ಇಯತ್ತೆಯಲ್ಲಿ ಇಡೀ ಒಂದು ವರ್ಷ ಇಲ್ಲವೆ ಹೆಚ್ಚು ಕಾಲ ಇದ್ದರೂ ಅವರಿಗೆ ಬಹುಶಃ ಏನೂ ಬರುತ್ತಿರುವದಿಲ್ಲೆಂದು ನಾವು ಅನೇಕ ಸಾರೆ ಮನಗಂಡಿದ್ದೇವೆ. ಅವಕ್ಕಾಗಿ ಈ ವಿಷಯದಲ್ಲಿ ತಕ್ಕಮಟ್ಟಿಗಾದರೂ ತಿದ್ದುಪಾಟಾಗಬೇಕೆಂಬ ಹೇತುವಿನಿಂದ ನಾವು ಇಲ್ಲಿ ಹಲವು ಸೂಚನೆಗಳನ್ನು ಕೊಡುವೆವು.

ಕೆಲಜನ ಮಾಸ್ತರರು ಇಯತ್ತೆ ಪತ್ರಿಕೆಯಲ್ಲಿ ಹೇಳಿವಪ್ಪ ಅಭ್ಯಾಸವನ್ನು ಹಾಗೂ ಹೀಗೂ ಮಾಡಿಸುವದೇ ತಮ್ಮ ಕರ್ತವ್ಯವೆಂದು ತಿಳಿದು ಹುಡುಗರಿಗೆ ವಿಷಯಜ್ಞಾನ ಆಗಲಿ ಆಗದಿರಲಿ ಅದನ್ನು ಎಷ್ಟು ಮಾತ್ರವೂ ಲೆಕ್ಕಿಸದೆ, ಬಡೆದು ಹೊಡೆದು ನಿಯಮಿಸಿದ ವಿಷಯವನ್ನು ಕೂಲಿಕಾರರಂತೆ ಅವರ ಕಡೆಯಿಂದ ಮಾಡಿಸುತ್ತಾರೆ. ಅದರಿಂದ ಬಾಲೆಯ ಹೆಸರು ತೆಗದಾಕ್ಷಣವೇ ಹುಡುಗರಿಗೆ ಒಂದು ಪ್ರಕಾರವ ಭೀತಿಯುಂಟಾಗಿ ಅವರು ಕೈಲಾದ ಮಟ್ಟಿಗೆ ಅದನ್ನು ತಪ್ಪಿಸಹತ್ತುತ್ತಾರೆ. ವಿದ್ಯಾರ್ಥಿಗಳು ಆನಂದದಿಂದ ಸಾಲಿಗೆ ಬರುವಂತೆಯೂ, ಹುರುಪಿನಿಂದ ಅಭ್ಯಾಸ ಮಾಡುವಂತೆಯೂ ಕೆಲಸವನ್ನು ನಡಿಸುವದು ಸತ್‌ಶಿಕ್ಷಕನ ಮೇಲಾವ ಕರ್ತವ್ಯವು. ಈ ಕೆಲಸವನ್ನು ಕೈಗೂಡಿಸುವದು ದುಸ್ತರವಲ್ಲ. ಅವರ ಮನಃಪ್ರವೃತ್ತಿಗಳನ್ನು ಅನುಲಕ್ಷಿಸಿ, ಮನಸಿಗೆ ಸೊಗಸೊಗುವಂತೆ ಕಲಿಸುತ್ತಹೋದರೆ ಈ ಕೆಲಸದಲ್ಲಿ ಬಹಳ ಮುಂದಾಗುವದು.

ಹುಡುಗರಿಗೆ ಬಂದೇಸವನೆ ಬರೇಪಾಠ ಮಾಡಿಸುತ್ತಾ

ಕೂಡಿಸುವ ನಡತೆ ಬಳ್ಳೀದಲ್ಲ. ತಾವು ಬರಿಯುವದೇನು ಹಾಗು ನುಡಿಯುವದೇನು ಎಂಬದರ ಬಗ್ಗೆ ವಿಚಾರ ಮಾಡಲಿಕ್ಕೆ ಅವರಲ್ಲಿ ಕಿಂಚಿತ್ ಜ್ಞಾನಹುಟ್ಟುವಂತೆ ಯತ್ನ ಮಾಡಬೇಕು. ಸಹಜ ಕಂಣಿಗೆ ಬೀಳುವ ಸಾಧಾರಣ ಪದಾರ್ಥಗಳ ವೈಷ್ಟಂತವನ್ನು ಕೊಟ್ಟು ಕಲಿಸುವ ವಿಷಯವು ಅವರಿಗೆ ಮನದಟ್ಟಾಗುವಂತೆ ಮಾಡಬೇಕು; ಮತ್ತು ಅವರಿಗೆ ಗೊತ್ತಿದ್ದ ಸಂಗತಿಗಳ ಮೇಲಿಂದ ಅವರಿಗೆ ಸೂಚಕ ಪ್ರಶ್ನೆಗಳನ್ನು ಮಾಡಿ, ಯಾವದೊಂದು ಹೊಸ ವಿಷಯವು ಸುಲಭವಾಗಿ ತಿಳಿಯುವಂತೆ ಅವರ ಮುಂದೆ ಇಡಬೇಕು. ಈ ಪರಿಯಿಂದ ಶಿಕ್ಷಣ ಕ್ರಮ ನಡಿಸಲು ಹೇಳಿದ ಸಂಗತಿಗಳ ವಿಷಯವಾಗಿಯೂ, ಸುತ್ತಮುತ್ತ ಕಾಣುವ ಪದಾರ್ಥಗಳ ವಿಷಯವಾಗಿಯೂ ಹೊಸದಾಗಿ ಏನಾದರೂ ತಿಳುಕೊಳ್ಳ ಬೇಕೆಂಬ ಲವಲವಿಕೆಯು ಅವರಲ್ಲಿ ಹುಟ್ಟುವದು. ಈ ಮನೋಧರ್ಮವನ್ನು ಬೆಳಿಸಲಿಕ್ಕೆ ಮಾಸ್ತರನು ಕೈಲಾದಮಟ್ಟಿಗೆ ಯತ್ನಮಾಡತಕ್ಕದ್ದು. ಹುಡುಗರಿಗೆ ಯಾವದೊಂದು ಹೊಸ ಮಾತು ಚೆನ್ನಾಗಿ ತಿಳಿಯಿತೆಂದರೆ ಅವರಿಗಾಗುವ ಸಾನೆಂದಾಶ್ಚರ್ಯವು ಅವರ ಜಿಜ್ಞಾಸೆಯನ್ನು ಎಚ್ಚರಗೊಳಿಸುವದು. ಆ ಮೇಲೆ ಅವರು ಪ್ರಶ್ನೆಗಳನ್ನು ಕೇಳಲಾರಂಭಿಸುವರು. ಇಂಥ ಸಮಯದಲ್ಲಿ ಮಾಸ್ತರನು ಎಷ್ಟು ಮಾತ್ರವೂ ಅಲಕ್ಷ್ಯ ಮಾಡದೆ ಅವರು ಕೇಳುವ ಪ್ರತಿಯೊಂದು ಪ್ರಶ್ನೆಗೆ ಸ್ವಲ್ಪದರಲ್ಲಿ ತಿಳಿಯುವಹಾಗೆ ಸುಲಭವಾದ ಉತ್ತರಗಳನ್ನು ಸಂತೋಷದಿಂದ ಕೊಡುತ್ತಾ ಹೋಗಬೇಕು, ಅಂದರೆ ಮಾಸ್ತರನ ಮೇಲೆಯೂ ಸಾಲಿಯ ಮೇಲಿಯೂ ಅವರಪ್ರೀತಿ ಪೆಚ್ಚಾಗಿ ಅವರ ಬುದ್ಧಿಯು ಮೆಲ್ಲ ಮೆಲ್ಲನೆ ವಿಕಸಿತವಾಗುತ್ತಾ ಹೋಗುವದು.

ಹುಡುಗರ ಬುದ್ಧಿ ಈ ರೀತಿ ಬಲಿಯಬೇಕಾದರೆ ಅವರು ಆರಂಭದಿಂದ ಒಳ್ಳೇ ಚತುರ ಮಾಸ್ತರನ ಬಳಿಯಲ್ಲಿರತಕ್ಕದ್ದು. ಚಿಕ್ಕ ಹುಡುಗರ ಬುದ್ಧಿಯು ಚೊಕ್ಕ ಚಿನ್ನದಂತೆ ಮಣಿಸಿದಂತೆ ಮಣಿಯುತ್ತಿರುವದರಿಂದ, ಅವರು ಚಿಕ್ಕಂದಿನಿಂದಲೇ ಯೋಗ್ಯಮಾಸ್ತರನ ಕೈಯಲ್ಲಿದ್ದರೆ ಮುಂದೆ ವಿದ್ವಾಂಸರೂ ಬುದ್ಧಿವಂತರೂ ಆಗುವರೆಂಬದಕ್ಕೆ ಅನುಮಾನವಿಲ್ಲ. ಬಿನ್ನ ಇಯತ್ತೆಯ ಹುಡುಗರಿಗೆ ಮುಖ್ಯ ಮಾಸ್ತರನು ಇಲ್ಲವೆ ಅವನಷ್ಟೇ ಬುದ್ಧಿವಂತನಾದ ಶಿಕ್ಷಕನು ಮನಃಪೂರ್ವಕವಾಗಿ ಕಲಿಸತಕ್ಕದ್ದು. ಹುಡುಗರ ಜ್ಞಾನ ಶಕ್ತಿಯನ್ನು ಕ್ರಮದಿಂದ ಬೆಳಿಸುತ್ತಾ ಸಾಗಬೇಕು. ಬಂದು ಪೇಳೆ ಅವರಿಗೆ ದಣಿವು ಇಲ್ಲವೆ ಬೇಸರ ಬಂದದ್ದು ಕಂಡು ಬಂದರೆ ತಕ್ಷಣವೇ ಅಭ್ಯಾಸವನ್ನು ನಿಲ್ಲಿಸಿ, ಅವರನ್ನು ಅಡಲಿಕ್ಕೆ ಬಿಟ್ಟು ಬಿಡಬೇಕು. ಅವರ ಮನಸಿಗೆ ಸೊಗಸಾಗುವಂಥ ಆಟವನ್ನೇ ಆಡಿಸಿ, ಅದರಿಂದ ಸವ ಜ್ಞಾನ ಉತ್ಪನ್ನವಾಗುವಂತೆ ಎತ್ತುಗಡೆ ಮಾಡಬೇಕು. ಆಟ ಮುಗಿದನಂತರ ಪೂರ್ವ ವಿಷಯವನ್ನು ಪುನಃ ಕೈಕೊಂಡು, ಅದನ್ನು ಕಥೆಯ ರೂಪದಿಂದ ಅವರಿಗೆ ಸುಲಭವಾಗಿ ತಿಳಿಯುವಂತೆ ಮಾಡಬೇಕು. ಅಂದರೆ ಅವರಿಗೆ ಅಭ್ಯಾಸದ ರುಚಿಯು ಅನಾಯಾಸವಾಗಿ ಹತ್ತುವದು.

ಪ್ರಾರಂಭಕ್ಕೆ ಮೂಲಾಕ್ಷರಗಳನ್ನೂ, ಅಂಕಿಗಳನ್ನೂ ಕಲಿಸುವವರಲ್ಲಿ ಹೀರಳ ದಿವಸಗಳು ವೆಚ್ಚಾಗುವವು ಸರಿ; ಅವರೆ ಆ ದಿವಸಗಳು ವ್ಯರ್ಥ ಮೋಗುತ್ತವೆಂದು ಮಾತ್ರ ಎಂದಿಗೂ ತಿಳಿಯಕೂಡದು. ಆರಂಭದ ಜ್ಞಾನಗತಿಯು ಮಂದವಾಗಿದ್ದಾಗ್ಯೂ, ಅದು ಎಲ್ಲ ಬಗೆಯಿಂದಲೂ ಹಿತಕರವೇ ಇರುವದು. ಅವರಿಂದ ಮುಂದಿನ ಗತಿಯು ನಿಯಮಿತ

ವಾದದ್ದೂ, ನಿಶ್ಚಿತವಾದದ್ದೂ, ವೇಗವುಳ್ಳದ್ದೂ ಆಗುವದು. ಹಿಂದಿನ ಪಾಠಗಳು ಅಚ್ಚುಕಟ್ಟಾಗಿ ಬಂದರೆ ಮುಂದಿನ ಪಾಠಗಳನ್ನು ಕಲಿಯುವದು ಸುಲಭವಾಗುವದು. ಆದ್ದರಿಂದ ಈ ಪುಸ್ತಕದಲ್ಲಿ ಹೇಳಿದ ಮೇರೆಗೆ ಶಿಕ್ಷಣಕ್ರಮವನ್ನು ಸಾಗಿಸಿದರೆ, ಮಾಸ್ತರನ ಶ್ರಮಕ್ಕೆ ತಕ್ಕ ಫಲವಾಗದೆ ಇರಲಿಕ್ಕಿಲ್ಲ.

೧ನೇ ಭಾಗ—ಅಕ್ಷರಪ್ರಕರಣ.

ಇದನ್ನು ಕನ್ನಡ ಅಂಕಲಿಪಿಯಲ್ಲಿ ಹೇಳಿದಂತೆ ಎಚ್ಚರದಿಂದ ಕಲಿಸತಕ್ಕದ್ದು. ಕೊಟ್ಟ ಪಾಠವು ವಿದ್ಯಾರ್ಥಿಗಳಿಗೆ ಚನ್ನಾಗಿ ಬಂದ ಹೊರತು ಮುಂದಿನ ಪಾಠಕ್ಕೆ ಕೈ ಹಾಕಲಾಗದೆಂಬ ನಿರ್ಬಂಧವನ್ನು ಮಾತ್ರ ಮಾಸ್ತರ ಜನರು ಲಕ್ಷ್ಯದಲ್ಲಿಡತಕ್ಕದ್ದು.

೨ನೇ ಭಾಗ—ಅಂಕಪ್ರಕರಣ.

೧ನೇ ಪಾಠ.

ಅಂಕಿಗಳು—ಬಂದರಿಂದ ಐದರ ತನಕ.

ಮೊದಲು ವಿದ್ಯಾರ್ಥಿಗಳಿಂದ ಬಂದು, ಎರಡು, ಮೂರು, ನಾಲ್ಕು, ಐದು ಈ ಅಂಕಿಗಳನ್ನು ಪಾಠ ಮಾಡಿಸಿ, ಆ ಮೇಲೆ ಅವುಗಳನ್ನು ತಿರವುಮುರವು ಅನ್ನಲಿಕ್ಕೆ ಕಲಿಸಬೇಕು.

ಹಳ್ಳಿ, ಗಜಗ, ಗೋಲಿ ಮುಂತಾದವುಗಳನ್ನು ಮೇಜಿನ ಮೇಲೆ ಇಟ್ಟುಕೊಂಡು ಇಲ್ಲವೆ ಕರೇಹಲಿಗೇ ಮೇಲೆ ಕಳಗೆ ತೋರಿಸಿದಂಥ ಆಕೃತಿಗಳನ್ನು ಕೊರೆದು ಮೊದಲಿನ ಐದು ಅಂಕಿಗಳನ್ನು ಹುಡುಗರಿಗೆ ಕಲಿಸಬೇಕು. ಅದು ಹ್ಯಾಗಂದರೆ:—



ಬಾಲಕರೇ—ಹಿಂದಿನ ಆಕೃತಿಯಲ್ಲಿ ಬಂದು ಪೂಜೆಯನ್ನು ಹೆಚ್ಚಿಗೆ ಕೊಟ್ಟರೆ ಮುಂದಿನ ಆಕೃತಿಯು ಅಥವಾ ಮುಂದಿನ ಆಕೃತಿಯೊಳಗಿನ ಬಂದು ಪೂಜೆಯನ್ನು ಅಳಿಸಿದರೆ ಹಿಂದಿನ ಆಕೃತಿಯು ಆಗುವದು ನೋಡಿದಿರಾ? ಇದರ ಮೇಲಿಂದ ನಿಮಗೆ ತಿಳಿಯುವದೇನಂದರೆ—

ಎರಡು ಅಂದರೆ—ಬಂದು ಮತ್ತು ಬಂದು ಅಥವಾ ಬಂದು ಎರಡು ಸಾರೆ.

ಮೂರು ಅಂದರೆ—ಎರಡು ಮತ್ತು ಬಂದು ಅಥವಾ ಬಂದು ಮತ್ತು ಎರಡು ಅಥವಾ ಬಂದು ಮೂರು ಸಾರೆ.

ನಾಲ್ಕ ಅಂದರೆ—ಮೂರು ಮತ್ತು ಬಂದು ಅಥವಾ ಬಂದು ಮತ್ತು ಮೂರು ಅಥವಾ ಎರಡು ಮತ್ತು ಎರಡು ಅಥವಾ ಬಂದು ನಾಲ್ಕ ಸಾರೆ.

ಐದು ಅಂದರೆ—ನಾಲ್ಕ ಮತ್ತು ಬಂದು, ಬಂದು ಮತ್ತು ನಾಲ್ಕ, ಮೂರು ಮತ್ತು ಎರಡು, ಎರಡು ಮತ್ತು ಮೂರು ಅಥವಾ ಬಂದು ಐದು ಸಾರೆ.

ಈ ಮೇರಿಗೆ ಐದು ಅಂಕಿಗಳನ್ನು ಚನ್ನಾಗಿ ತಿಳಿಸಿ ಕೊಟ್ಟ ಬಳಿಕ ಯಾವ ಆಕೃತಿ ಯಾವ ಅಂಕಿಯನ್ನು ತೋರಿಸುತ್ತದೆ, ಯಾವ ಅಂಕಿಯನ್ನು ತೋರಿಸುವದಕ್ಕೆ ಯಾವ ಆಕೃತಿಯನ್ನು ತೆಗದದೆ ಎಂಬ ಪ್ರಶ್ನೆಗಳನ್ನು ಕೇಳಿ, ಆ

ಮೇಲೆ ಆಯಾ ಆಕೃತಿಗಳನ್ನು ಅವರಕಡೆಯಿಂದ ಸ್ಲೇಟಿನ ಮೇಲೆ ತೆಗಿಸಬೇಕು.

ಪ್ರಶ್ನೆಗಳು.

೧. ಮೂರನೇ ಆಕೃತಿಯಲ್ಲಿ ಇನ್ನೂ ಎಷ್ಟು ಪೂಜಿಗಳನ್ನು ಕೊಟ್ಟರೆ ನಾಲ್ಕನೇ ಇಲ್ಲವೆ ಐದನೇ ಆಕೃತಿಯಾಗುವದು ?
೨. ಐದರಲ್ಲಿ ಎಷ್ಟು ಕಳೆದರೆ ಎರಡು ಉಳಿಯುವದು ?
೩. ಎರಡರೊಳಗೆ ಎಷ್ಟು ಕೂಡಿಸಿದರೆ ನಾಲ್ಕು ?
೪. ಎಷ್ಟು ಸಮ ವಸ್ತುಗಳಿಂದರೆ ಒಂದು ಜೋಡು ?
೫. ಒಂದು ಜೋಡಿನಲ್ಲಿ ಒಂದು ಕೂಡಿಸಿದರೆ ಎಷ್ಟು ?
೬. ಎರಡು ಜೋಡಿನಲ್ಲಿ ಒಂದು ಕೂಡಿಸಿದರೆ ಎಷ್ಟು ?
೭. ಎಷ್ಟು ಗುಂಡುಗಳಿಂದರೆ ಒಂದು ಒಡ್ಡಿ ?
೮. ಒಂದು ಒಡ್ಡಿ ಮತ್ತು ಒಂದು ಗುಂಡು ಕೂಡಿ ಎಷ್ಟು ಗುಂಡುಗಳಾಗುವವು ?

೯. ಒಬ್ಬ ಗೃಹಸ್ಥನಿಗೆ ಒಬ್ಬ ಗಂಡಸ ಮಗನೂ, ಇಬ್ಬರು ಹೆಣ್ಣು ಮಕ್ಕಳೂ ಇದ್ದರು; ಆದರೆ ಒಟ್ಟು ಅವನಿಗೆ ಮಕ್ಕಳೆಷ್ಟು ?

೧೦. ಒಂದು ಗಾಡಿಗೆ ಮುಂದೆ ಎರಡು, ಹಿಂದೆ ಎರಡು ಗಾಲಿಗಳವೆ ; ಆದರೆ ಒಟ್ಟು ಗಾಲಿಗಳೆಷ್ಟು ?

ಟಿಪ್ಪಣಿ—ಈ ಮಾದರಿಯ ಅನೇಕ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ವಿಷಯವು ನೆಲೆಗೊಳ್ಳುವದು.

ಎನೇ ಪಾಠ.

ಅಂಕಿಗಳು—೧ರಿಂದ ೫ರ ತನಕ.

ಹಿಂದೆ ಹೇಳಿದಂತೆ ಅಂಕಿಗಳನ್ನು ತಿಳಿಸಿ ಕೊಟ್ಟ ಬಳಿಕ ಅವುಗಳನ್ನು ಬರೆಯುವ ಕ್ರಮವನ್ನು ಕಲಿಸಬೇಕು. ಹ್ಯಾಗಂದರೆ:—



೧ ೨ ೩ ೪ ೫

ಈ ಗುರ್ತುಗಳನ್ನು ಹುಡುಗರಿಂದ ಸ್ಲೇಟಿನಮೇಲಾಗಲಿ ಕರೆ ಹಲಿಗೆಯ ಮೇಲಾಗಲಿ ಕ್ರಮವಾಗಿಯೂ, ಬೇಕ ಬೇಕಾದಂತೆಯೂ ಬರಿಸಬೇಕು; ಮತ್ತು ತಾವು ಬರೆದು ಓದಿಸ ಬೇಕು.

ಮುಂದಿನ ಚಿನ್ಹೆಗಳ ಪ್ರಯೋಜನವನ್ನು ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿಸಿ ಕೊಡಬೇಕು.

= ಇದು ಸಮ ಅಥವಾ ಸರಿ.
\+ ,, ಅಧಿಕ ಅಥವಾ ಕೂಡಿಸುವ ಚಿನ್ಹ.
— ,, ಉಣೆ ಅಥವಾ ಕಳೆಯುವಚಿನ್ಹ.
ಒಂದು ಅಧಿಕ ಒಂದು ಅಂದರೆ ೧+೧=೨
ಎರಡು ಉಣೆ ಒಂದು ಅಂದರೆ ೨—೧=೧

ಉದಾಹರಣೆಗಳು.

ಅ.	ಬ.	ಕ.
೧+೧=	೨—೧=	೧+ =೨
೧+೨=	೩—೧=	೨+ =೫
೨+೧=	೩—೨=	೧+ =೩
೩+೧=	೪—೧=	೩+ =೪
೧+೩=	೪—೨=	೨+ =೩
೨+೨=	೪—೩=	೧+ =೪
೪+೧=	೫—೧=	೪+ =೫
೧+೪=	೫—೨=	೨+ =೪
೩+೨=	೫—೩=	೧+ =೪
೨+೩=	೫—೪=	೧+ =೫

ಟಿಪ್ಪಣಿ—ಮೇಲಿನ ಉದಾಹರಣೆಗಳ ಉತ್ತರಗಳನ್ನು ಹುಡುಗರ ಬಾಯಿಯಿಂದ ಹೊರಡಿಸಬೇಕು. ಇಲ್ಲವೆ ಒಬ್ಬೊಬ್ಬನನ್ನೇ ಕರೇ ಹಲಿಗೇ ಹತ್ತರ ಕರೆದು ಅವರ ಕಡೆಯಿಂದ ಅದರ ಮೇಲೆ ಬರಿಸಬೇಕು.

CORRESPONDENCE.
EXCURSION TO KOLHAPUR.

ಪತ್ರವ್ಯವಹಾರ.
ಕೊಲ್ಹಾಪುರದ ಪ್ರವಾಸವು.

(ಗಿರ್ಣಿಯ ಪಟವಿಂದ ಮುಂದೆ ಸಾಗಿದ್ದು.)

ಮರುದಿವಸದಿಂದ ಅಂದರೆ ತಾ || ೨೪—೧೨—೯೧ ಯಿಂದ ದಿನಾಲು ಮಧ್ಯಾನ್ಹದ ೨ ಘಂಟೆಗೆ ಬಮ್ಮೆ ರಾತ್ರಿ ೪ ಘಂಟೆಗೆ ಬಮ್ಮೆ ಹೀಗೆ ಎರಡು ಸಾರೆ ಪ್ರದರ್ಶನಾಲಯಕ್ಕೆ ಹೋಗುತ್ತಿದ್ದೆವು. ಎಲ್ಲ್ಯಾದರೂ ಹೊರಗೆ ಹೋಗಬೇಕಾದರೆ ಎಲ್ಲರೂ ಗುಂಪಾಗಿ ವ್ಯವಸ್ಥೆಯಿಂದ ಹೋಗುತಿದ್ದೆವು. ಪ್ರದರ್ಶನ ದರ್ಶನಕ್ಕೆ ಹೋಗುವಾಗ್ಗೆ ಮೂತ್ರ ಹತ್ತು ಹತ್ತು ಮಂದಿಯು ಬಂದೊಂದು ಗುಂಪು ಮಾಡಿಕೊಂಡು ಬೇರೆ ಬೇರೆ ಪ್ರಯೋಗಗಳನ್ನು ನೋಡಲಿಕ್ಕೆ ಹೋಗುತ್ತಿದ್ದೆವು. ಮೊದಲು ಆ ಮಹಾವಿದ್ಯಾಲಯದ ಕಟ್ಟಣೆಯ ಶೋಭೆಯನ್ನೂ, ಯಂತ್ರಗಳ ರಚನೆಯನ್ನೂ, ಹೊರಗಿನ ಗಿಡಗಳ ಸೊಬಗನ್ನೂ, ನೋಡಿದ ಬಳಿಕ ಪ್ರಯೋಗಗಳನ್ನು ನೋಡಲಿಕ್ಕೆ ಬಂದೊಂದು ಕೋಣೆಗೆ ಬಂದೊಂದು ಗುಂಪಿನವರು ಹೋಗುತ್ತಿದ್ದರು.

ಕೋಣೆಯೊಳಗೆ ಹೊಕ್ಕ ಕೂಡಲೆ ಅಲ್ಲಿ ಯಂತ್ರಗಳ ಪ್ರಯೋಗಗಳನ್ನು ತೋರಿಸಲಿಕ್ಕೆ ಕುಳಿತಿರುವ ಉಸಶಿಕ್ಷಕರೂ, ಹಿರೇಮಣಿಗಳೂ, ನೋಡಬಂದವರಲ್ಲಿ "ಇವರು ಧಾರವಾಡ ಟ್ರೇನಿಂಗಕಾಲೇಜದ ವಿದ್ಯಾರ್ಥಿಗಳೆಂದು ತಿಳಿದ ಕೂಡಲೆ ಎಲ್ಲ ವಟ್ಟಣೆಯನ್ನು ಬೈಲುಮಾಡಿ ಮುಂದೆ ಕರೆಮ ತಮ್ಮ ವಿಷಯವನ್ನು ಸಾವ್ಯಂತವಾಗಿ ತಿಳುಹಿಸುವರು. ಆದರೆ ಸಮುದಾಯದಲ್ಲಿ ಕೆಲವರಿಗೆ ಬೇಗನೆ ತಿಳಿಯುವವೂ, ಕೆಲವರಿಗೆ

ತಡವಾಗಿ ತಿಳಿಯುವದೂ ಸ್ವಾಭಾವಿಕವೇ ಆವ್ದರಿಂದ ಪ್ರದರ್ಶನ ಚಮತ್ಕಾರಗಳನ್ನು ತೋರಿಸಲಿಕ್ಕೆ ಹಾತೊರಿಯುವ ಹಿರೇಮಣಿಗಳು ತೀರತಡವಾಗಿ ತಿಳಕೊಳ್ಳುವ ವಿದ್ಯಾರ್ಥಿಗಳಿಗೆ ಸಹ ತಿಳಿಯುವತನಕ ತಿಳಿಸುತ್ತಿದ್ದರು. ಪ್ರಯೋಗ ಮಾಡಲಿಕ್ಕೂ ತಕ್ಕ ಶಬ್ದಗಳಿಂದ ಅಕ್ಕರತೆಯಿಂದ ಕಲಿಸಲಿಕ್ಕೂ ಬಲು ಕಕ್ಕುಲತೆ ಪಡುವರು. ಮಹಾರಾಷ್ಟ್ರ ಭಾಷೆಯನ್ನೆರಿಯದ ಅಚ್ಚ ಧಾರವಾಡ ಜಿಲ್ಹೆಯವರಲ್ಲಿ ಕೆಲವರಿಗೆ ಮಾತ್ರ ಸ್ವಲ್ಪುತೊಂದರೆ ಯುಂಟಾಗುತ್ತಿತ್ತು. ಇಂಥವರು ಪ್ರಯೋಗಕರ್ತರು ಮಾತಾಡುವ ಶೈಲಿಯನ್ನೂ ಕೈಮಾ ಡಿತೋರಿಸುವ ಕೃತಿಯನ್ನೂ, ನೋಡಿ ಆ ಮಾತುಗಳು ತಿಳಿಯದೆ ಹೋದಲ್ಲಿ ಅವರ ಮೋರೆಯಕಡಿಗೆ ಮಿಕಿ ಮಿಕಿ ನೋಡಹತ್ತುವರು. ಇದನ್ನೆಲ್ಲ ಕಂಡು ಸುತ್ತಲಿದ್ದ ಆ ಪಟ್ಟಣಿಗರು ಬೆರಗಾಗಿ ನೋಡಹತ್ತುವರು. ಕಡೆಗೆ ಪ್ರಯೋಗಕಾರರು ಇವರಿಗೆ ಲೇಸಾಗಿ ಮನನವಾಗಲಿಲ್ಲೆಂದು ನಮ್ಮ ಮಿತ್ರರಲ್ಲಿ ಮಹಾರಾಷ್ಟ್ರ ಭಾಷೆಯನ್ನು ಸರಸಾಗಿ ಅರಿತಂಥವರಿಗೆ " ಇವರಿಗೆ ಸ್ವಲ್ಪ ತಿಳಿಸಿ ಹೇಳರಿ " ಎಂದು ದೀನವೃತ್ತಿಯಿಂದ ಹೇಳುವರು. ತಮ್ಮ ಮನಸಿನೊಳಗಿನ ವಿದ್ಯವನ್ನು ಪರರ ಮನದಲ್ಲಿ ನೆಲೆಗೊಳಿಸುವ ಕುತೂಹಲವು ಈ ಹಿರೇ ಮಣಿಗಳಲ್ಲಿ ಬಹಳವಾಗಿತ್ತು. ನಮಗೆ ಈ ಹಿರೇಮಣಿಗಳು " ನೀವು ದೂರದಿಂದ ಪ್ರದರ್ಶನ ದರ್ಶನೋತ್ಸುಕರಾಗಿ ಪರಿವಾರಸಮೇತ ಇಲ್ಲಿವರಿಗೆ ಬಂದದ್ದು ಕಂಡು ನಮಗೆ ಪರಮಾನಂದವಾಯಿತು " ಎಂದು ಅನ್ನುತ್ತಾ, ತಮ್ಮ ಹತ್ತರ ತೆರವಿದ್ದ ಬಾಕುಗಳಮೇಲೆ ಕೂಡ್ರಿಸಿ, ಇದು ವೃಥ್ವಿಯು ಮಹೈಶ್ವರ್ಯಾತ್ಸಾರಿ ಮಧ್ಯಾಭಿಗಾಮಿ ಶಕ್ತಿಗಳನ್ನು ತೋರಿಸುವ ಯಂತ್ರವು. ನೋಡಿರಿ! ಈ ಹಿಡಿಕೆಯಿಂದ ತಿರುಗಿಸಿರಿ. ಹ್ಯಾಗೆ ಮೇಲೆ ಕೆಳಗೆ ಕುಸಿಬೀಳುತ್ತದೆ ಎಂದು ಬಲು ಉಲ್ಹಾ

ಸದಿಂದ ಹೇಳುವರು. ನಮ್ಮ ಮಿತ್ರರಾದರೂ ಇವರೂ ನಮ್ಮಂತೆ ವಿದ್ಯಾರ್ಥಿಗಳು ಅದರಿಂದ ನೆಟ್ಟಗೆ ಮೈಚಳಿ ಬಿಟ್ಟು ಕೇಳಿಕೊಳ್ಳೋಣ ಎಂದು ಪುನಃ ಪುನಃ ಪ್ರಶ್ನೆಮಾಡುವರು. ತುಸು ವಿಚಾರದ ಅಥವಾ ಹೆಚ್ಚಿನ ಸಂಗತಿಯನ್ನು ಕೇಳಿವ ಕೂಡಲೇ ಕಾತರಸಿ ಮುಂದುಗಟ್ಟು थोडा विचार करून तरी सांगतो ಎನ್ನುತ್ತಿದ್ದರು.

ಈ ಪ್ರಕಾರ ಪ್ರತಿಯೊಂದು ಕೋಣೆಗೆ ಹೋಗಿ ಮೇಲೆ ಬರೆದಂತೆ ವಿಷಯಗಳನ್ನು ತಿಳುಕೊಳ್ಳುತ್ತಿದ್ದೆವು.

ತಾರೀಖು ೨೪–೧೦–೯೦ ದಿವಸ ಮಧ್ಯಮಂದಿರದಲ್ಲಿರುವ ಎಲ್ಲ ಚಮತ್ಕಾರಗಳನ್ನು ಮನಗಂಡೆವು. ಅಮ್ಲಜ, ಜಲಜ ವಾಯುಗಳಿಂದ ದೀಪಗಳ ಪ್ರಜ್ವಲನವೂ, ಆ ವಾಯುಗಳಿಂದ ತುಬಾಕಿಗಳಂತೆ ಆಗುವ ಸಪ್ಪಳಗಳೂ, ಜಲಜ ವಾಯುವಿನ ದೀಪವಲ್ಲಿ ಆಸ್ಮಿಯಮ್ಮದ ಹೊರ್ತು ವಿಶಿಷ್ಟಗುರುತ್ವದಿಂದ ಶ್ರೇಷ್ಠವೆನಿಸುವ ಪ್ಲಾಟಿನಮ್ ಮುಂತಾದ ಧಾತುಗಳ ತಂತಿಗಳನ್ನು ಸುಡುವ ಚಮತ್ಕಾರಗಳೂ ದೃಷ್ಟಿಗೆ ಬಿದ್ದವು. ಪ್ಲಾಟಿನಮದ ತಂತಿಯು ಸುಡುವದನ್ನು ದಿಟ್ಟಿಸಿನೋಡಿದರೆ ೨–೩ ಮಿನೀಟುಗಳವರಿಗೆ ಕಣ್ಣು ಚನ್ನಾಗಿ ಕಾಣಿಸುವದಿಲ್ಲ ಇದನ್ನು ನೋಡಿಕೊಂಡು ವಿದ್ಯುತ್ತಿನಿಂದ ದೀಪಹಚ್ಚುವ ಚಮತ್ಕಾರವನ್ನೂ ವಿದ್ಯುದ್ಯಂತ್ರದ ಎಲ್ಲ ಪ್ರಯೋಗಗಳನ್ನೂ ನೋಡಿದೆವು. ಆ ಮೇಲೆ ಚಿಕ್ಕಮಕ್ಕಳಿಗೆ ತಕ್ಕಂತೆ ಅಕ್ಕರ ತೆಯಿಂದ ಕಲಿಸುವ ವಿಷಯದಬಗ್ಗೆ ಅಲ್ಲಿಟ್ಟಿರುವ ಬಣ್ಣವಕಾಗದಗಳನ್ನೂ, ಅಕ್ಷರಗಳ ಆಕೃತಿಗಳನ್ನೂ ಬೇರೆ ಬೇರೆ ಬಣ್ಣಗಳನ್ನು ತಿಳಿಸುವದಕ್ಕಾಗಿ ಬೇರೆ ಇಟ್ಟ ದಾರದ ಪುಟ್ಟ ಉಂಡಿಗಳನ್ನೂ ಈ ವಿಷಯವನ್ನು ತಿಳಿಸಲಿಕ್ಕೆ ನೇಮಿಸಿದ ಟೀರಿಗೆಯ ವಿದ್ಯಾರ್ಥಿಗಳನ್ನೂ ನೋಡಿ, ಇಲ್ಲಿ ಎಳೆಮಕ್ಕಳು

ಇದ್ದರೆ, ಅರಗಿಳಿಗೆ ಮೊತು ಕಲಿಸುವಂತೆ ಪ್ರೀತಿಯಿಂದ ಅವರಿಗೆ ಕಲಿಸೇವು ಎಂಬ ಕುತೂಹಲವು ನಮ್ಮ ಮನೆದಲ್ಲಿಯೂ ಉತ್ಪನ್ನವಾಯಿತು.

ಇಷ್ಟಾದ ಬಳಿಕ ರಸಾಯನ ಶಾಸ್ತ್ರದ ಪ್ರಯೋಗಗಳನ್ನು ನೋಡಿದೆವು. ಈ ಸಂಬಂಧದಪ್ರಯೋಗ ಮಾಡುವದಕ್ಕಾಗಿ ಕಾಜಿನ ಸಾವಿರಾರು ಸಣ್ಣ ಪುಟ್ಟ ನಳಿಕೆಗಳನ್ನು ಸಿದ್ಧಮಾಡಿಸಿ ಬಬ್ಬೊಬ್ಬರ ಹತ್ತರ ಸುಮಾರ ೫೫—೬೦ ರ ಬಂದೊಂದು ಗುಂಪಿಯನ್ನು ಇಟ್ಟುಕೊಂಡಿದ್ದರು. ಎಲ್ಲಪ್ರಕಾರದ ಆವ್ಲಗಳ ಕುಪ್ಪಿಗಳು ಸಿದ್ಧವಾಗಿ ಹತ್ತರ ಇಡಲ್ಪಟ್ಟಿದ್ದವು. ಬೇರೆ ಬೇರೆ ಬಣ್ಣಗಳಾಗುವದನ್ನೂ ಆ ಬಣ್ಣಗಳ ರೂಪವು ಪುನಃ ಬದಲಿಸುವದನ್ನೂ, ಕೆಲವು ಪದಾರ್ಥಗಳು ಕೂಡಿ ಹೊಸದೊಂದು ಪದಾರ್ಥವಾಗುವದನ್ನೂ, ಕಣ್ಣಾರೆ ಕಂಡೆವು. ಈ ಮಂದಿರದೊಳಗಿದ್ದ ಎಲ್ಲ ವಿಷಯಗಳನ್ನು ಸಾಗ್ರವಾಗಿ ತಿಳಿದುಕೊಳ್ಳುವ ಕೆಲಸವು ಈ ದಿವಸ ಸಂಪೂರ್ಣವಾಯಿತು.

ಮಾರನೇ ದಿವಸ ೨೯—೧೦—೯೦ ದಿವಸ ಮಧ್ಯಮಂದಿರದ ಎಡಗಡೆ ಇರುವ ಧ್ವನಿಶಾಸ್ತ್ರ, ವಾಯುಶಾಸ್ತ್ರ, ಪ್ರಕಾಶಶಾಸ್ತ್ರಗಳ ಪ್ರಯೋಗಗಳನ್ನು ನೋಡಿದೆವು.

೧. ಧ್ವನಿಶಾಸ್ತ್ರ—ಬಂದು ಹರವಾದತಗಡಿನ ಮೇಲೆ ಉಸುಕು ಹರಿವಿ ಆ ತಗಡಿನ ಮೇಲೆ ತರಂಗಗಳನ್ನು ಹುಟ್ಟಿಸುತ್ತಿದ್ದರು. ಈ ತರಂಗಗಳು ಸಣ್ಣವೂ ದೊಡ್ಡವೂ ಇದ್ದಂತೆ ಉಸುಕಿನ ಭಾಗಗಳಾಗುವವು. ಸಪ್ತಸ್ವರಗಳನ್ನು ತಿಳಿಸುವ ಸೈರನ್ನ ಯಂತ್ರವನ್ನೂ, ಅವರಿಂದ ಹೊರಡುವ ಧ್ವನಿಯ ಚಮತ್ಕಾರವನ್ನೂ ಮನಗಂಡೆವು.

ವಾಯುಶಾಸ್ತ್ರ—ಈ ಶಾಸ್ತ್ರದ ಮುಖ್ಯ ಮುಖ್ಯ ಪ್ರಯೋ

ಗಗಳು ಮೊವಲೇ ನಮಗೆ ಸಾಧಾರಣ ಗೊತ್ತಿದ್ದವು. ಆ ದರೆ ಇಲ್ಲಿ ಹೆಚ್ಚು ಸ್ಪಷ್ಟವಾಗಿ ತಿಳಿವದ್ದಲ್ಲದೆ ನಾವು ನೋಡಿ ದಕ್ಕಿಂತ ಹೆಚ್ಚು ಚಮತ್ಕಾರವುಳ್ಳ ವಾತಾಕರ್ಷಕ, ವಾತಪೂ ರಕ ಯಂತ್ರಗಳನ್ನೂ ಅವುಗಳ ಕಾರ್ಯ, ಉಪಯೋಗ ಗಳನ್ನೂ ತಿಳಿದುಕೊಂಡೆವು.

ಪ್ರಕಾಶಶಾಸ್ತ್ರ—ಇದನ್ನು ಪ್ರೊಫೆಸರ ಅಪ್ಟೆ ಎಂಬವರು ತಿ ಳಿಸಿದರು. ಈ ಕೋಣೆಯಲ್ಲಿ ಮೇಣಬತ್ತಿಗಳೂ, ಸಣ್ಣದೊ ಡ್ಡ ಕನ್ನಡಿಗಳೂ ಬೇಕಾದಷ್ಟು ಇಟ್ಟಿದ್ದವು. ಅವುಗಳ ಸಹಾಯದಿಂದ ಪ್ರಕಾಶದ ಗುಣ, ಧರ್ಮ, ವೇಗ, ಮುಂ ತಾದವುಗಳನ್ನು ತಿಳಿಸಿದರು. ಇದು ಬಹು ಗಹನವಾದ ವಿ ಷಯವು ಇದಲ್ಲದೆ ಈ ವಿಷಯದ ಅಧ್ಯಾಪಕರು ಮಹಾರಾ ಷ್ಟ್ರದಲ್ಲಿ ಇಂಗ್ರೇಜಿ ಬಹಳ ಬೆರಿಸಿ ಮಾತಾಡುತ್ತಿದ್ದದ್ದರಿಂದ ನನಗೆ ಮೊದಲು ಸಂದಿಗ್ಧವಾಗಿ ತಿಳಿಯಿತು. ಸ್ವಲ್ಪ ಹೊ ತ್ತಿನಮೇಲೆ ಕರುಣಾಳುಗಳಾದಂತ, ವಿಷಯಗಳು ಅನೂ ನವಾಗಿ ತಿಳಿದವೋ, ಇಲ್ಲೋ ಎಂಬ ಸಂಶಯದಿಂದ ಬೆನ್ನ ಟ್ಟಿ ಬರುವಂತ ಗುರುವರ್ಯರು ಅಪ್ಟೆ ಸಾಹೇಬರು ಹೇ ಳಿದ ವಿಷಯವನ್ನು ಸಮರ್ಪಕವಾಗಿ ತಿಳಿಸಿ ಹೇಳಿದರು. ಇ ದಾದ ಬಳಿಕ ಜಲಶಾಸ್ತ್ರ, ಉಷ್ಣತಾಶಾಸ್ತ್ರಗಳ ಕೋಣೆಗ ಳಿಗೆ ಹೋದೆವು.

ಜಲಶಾಸ್ತ್ರ—ಈ ಕೋಣೆಯಲ್ಲಿ ಘಟಪ್ರಭಾ ನದಿಯ ನೀ ರಿನ ವೇಗದಿಂದ ಗೋಕಾವಿಯ ಅರಳೆಯ ಯಂತ್ರಕ್ಕೆ ಗ ತಿಯು ಹ್ಯಾಗೆ ದೊರೆಯುತ್ತದೆಂಬದನ್ನು ತೋರಿಸುವ ಯಂ ತ್ರವನ್ನು ಮಾಡಿಟ್ಟಿದ್ದರು. ಇದರ ತತ್ವವಾದರೂ ಗೋಕಾ ವಿಯ ಯಂತ್ರದ ತತ್ವವಂತೆಯೇ ಇತ್ತು. ಇದನ್ನು ಚನ್ನಾ ಗಿ ತಿಳಿದುಕೊಂಡಕೂಡಲೆ ಗೋಕಾವಿಯ ಅದ್ಭುತ ಯಂ

ತ್ರದ ಕಾರ್ಯವು ಮನದಲ್ಲಿ ನೆಲೆಗೊಂಡಿತು. ನೀರಿನ ಬಂ
ಬು, ಪ್ರವಾಹಿಗಳ ಬತ್ತುವಿಕೆಗಳನ್ನು ಮನಗಂಡೆವು.

ಉಷ್ಣತಾಶಾಸ್ತ್ರ—ಉಷ್ಣತೆಯಿಂದ ಪದಾರ್ಥಗಳ ಪ್ರಸ
ರಣವೂ, ರೂಪಾಂತರವೂ ವ್ಯಕ್ತವಾಗಿ ಕಂಡೆವು. ಘನ ಪ
ದಾರ್ಥಗಳ ವಿಸ್ತಾರವು ಸ್ಫುಟವಾಗಿ ತಿಳಿಯಿತು. ಪ್ರವಾಹಿಗ
ಳು ಉಷ್ಣತೆಯಿಂದ ವಿಸ್ತೃತ ಹೊಂದುವದು ಚನ್ನಾಗಿ ತಿಳಿ
ಯಿತು. ಉಷ್ಣತಾಮಾಪಕ ಯಂತ್ರವನ್ನೂ, ಅದರ ರಚನೆ
ಯನ್ನೂ, ಉಪಯೋಗವನ್ನೂ ಚನ್ನಾಗಿ ತಿಳಿದುಕೊಂಡೆವು.

ಇವರಂತೆ ಉಪ್ಪರಿಗೆಯ ಮೇಲೆ ಹೋಗಿ ಪ್ರತಿಯೊಂದು
ಕೋಣೆಯೊಳಗಿನ ಯಂತ್ರಗಳ ವಿಷಯದ ವಿವೇಚನವನ್ನು
ಮಾಡಿದೆವು.

ಪ್ರಕಾಶಜನ್ಯ ಚಿತ್ರಕಲಾ ದೊಡ್ಡ ದೊಡ್ಡ ಅರಸರ ಚಿ
ತ್ರಗಳನ್ನು ತೆಗೆದಿಟ್ಟಿದ್ದರು. ಚಿತ್ರ ತೆಗೆಯುವ ಬಗೆಗಳ
ನ್ನು ತೋರಿಸುತ್ತಿದ್ದರು.

ಇದನ್ನು ನೋಡಿ ಮಹಾರಾಷ್ಟ್ರ ಭಾಷೆಯಿಂದ ವರ್ತ
ಮಾನವನ್ನು ತಿಳಿಸುವ ತಾರಾಯಂತ್ರವನ್ನು ನೋಡಿದೆ
ವು. ಈ ಯಂತ್ರಗಳು ಎರಡು ಇದ್ದವು. ಬತ್ತಿಟ್ಟಗೆ ಸುದ್ದಿ
ಯನ್ನು ಕಳಿಸಿವ ಕೂಡಲೆ ಎರಡನೇ ಬದಿಯಲ್ಲಿ ಆ ಸು
ದ್ದಿಯು ತಿಳಿಯುತ್ತಿತ್ತು. ಮಹಾರಾಷ್ಟ್ರ ಭಾಷೆಯ ಸನ್ನಿಗ
ಳು ಇರುವದರಿಂದ ಇದರಲ್ಲಿ ಬಂದೆರಡು ಮೂತಾಡುವ ಎಂ
ದು ನಮ್ಮ ಗುರುವರ್ಯರು ಒಂದು ಯಂತ್ರವಲ್ಲಿ ,,ಈ
ಕೊಲ್ಹಾಪೂರ ಪಾಠಶಾಲೆಯವರು ನಮಗೆ ಬಹಳ ಚಮ
ತ್ಕಾರಗಳನ್ನು ತೋರಿಸಿದರು. ಅವರಿಂದ ನಾವು ಅವರ ಉ
ಪಕಾರ ನೆನಿಸುತ್ತೇವೆ'' ಎಂದು ಹೇಳಿದರು. ಅದೇಕ್ಷಣಕ್ಕೆ
ನಮ್ಮ ಮಿತ್ರರಲ್ಲಿ ಕೆಲವರು ಮತ್ತೊಂದು (ರಿಸೀವ್ಹಿಂಗ)
ಯಂತ್ರದ ಹತ್ತರ ನಿಂತಂಥವರು ತಂತಿಯಿಂದ ಈ ವ

ರ್ತಮಾನವನ್ನು ತಿಳುಕೊಂಡರು. ಇದರಿಂದ ಬೇಕಾದ ಭಾಷೆಯ ವರ್ತಮಾನವನ್ನು ತಂತಿಯ ಯಂತ್ರದಿಂದ ಕಳುಹಿಸಬಹುದೆಂಬದು ತಿಳಿಯಿತು.

ಇಷ್ಟವ ಬಳಿಕ ಪುರಾತನ ಅರಸರು ಯುದ್ಧಮಾಡುವಾಗಲೂ, ಬೇಟಿಯಾಡುವಾಗಲೂ ಉಪಯೋಗಿಸುತ್ತಿದ್ದ ಆಯುಧಗಳನ್ನು ನೋಡಿದೆವು. ಹನ್ನೆರಡು ಮೆಟ್ಟಿನ ಹುಲಿಯನ್ನು ಬಂದೇ ಹೊಡತಕ್ಕೆ ಕೊಲ್ಲುವಂಥ ಆಯುಧಗಳಿದ್ದವು. ಕತಾರಿ, ಕತ್ತಿ, ಡಾಲುಗಳು ಸೂಲುಗೊಳಿಸಿಡಲ್ಪಟ್ಟಿದ್ದವು. ಇದೇ ಕೊಣೆಯಲ್ಲಿ ಪುರಾತನ ಕಾಲದ ಶೂರಪುರುಷರು ಯುದ್ಧಮಾಡುವಾಗ್ಗೆ ತೊಡುವ ಉಡಿಗೆ, ಧರಿಸುವ ಆಯುಧಗಳಿಂದ ಯುಕ್ತವಾದ ಬೂದು ಗೊಂಬೆಯನ್ನು ಮಾಡಿ ನಿಲ್ಲಿಸಿದ್ದರು. ಆ ಪುರುಷಾಕೃತಿಯನ್ನು ನೋಡಿದ ಕೂಡಲೆ ಮೇಲೆ ಎದ್ದುಬರುತ್ತದೇನೋ ಎಂಬಂತೆ ತೋರುತ್ತಿತ್ತು. ಅವರ ಬಲಗೈಯಲ್ಲಿ ಕತ್ತಿಯೂ, ಎಡಗೈಯಲ್ಲಿ ಡಾಲೂ ಇದ್ದವು.

DHARWAR TRAINING COLLEGE CERTIFICATE EXAMINATION. 1890.

ಧಾರವಾಡ ಟ್ರೇನಿಂಗಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯು. ೧೮೯೦.

ಸಿದ್ಧಾಂತ ಮತ್ತು ಮಹತ್ವ ಪೂಪನ.

೧ನೇ ವರ್ಷ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು)

೧. ಪ್ರತಿಜ್ಞೆ, ಪ್ರಮೇಯ, ಪ್ರತ್ಯಕ್ಷ ಪ್ರಮಾಣ, ಗ್ರಹಿತ ಕೃತ್ಯ, ಉಪಸಿದ್ಧಾಂತ, ಪಕ್ಷ, ಮತ್ತು ಸಾಧ್ಯ, ಅಂದರೇನು? ೨

೨. ೧ನೇ ಪ್ರತ್ಯಕ್ಷ ಪ್ರಮಾಣವನ್ನು ಬರೆದು ಅದರ ಉಪಯೋಗ ಯಾವ್ಯಾವ ಸಿದ್ಧಾಂತಗಳಲ್ಲಾಗುತ್ತವೆಂಬುವದನ್ನು ಹೇಳಿರಿ.

೩. (ಅ) ಸಮಾನ ಹಾಗು ಏಕರೂಪ ತ್ರಿಕೋನಗಳಲ್ಲಿ ಭೇದವೇನು? ೫

(ಬ) ೧ನೇ ಪುಸ್ತಕದ ೨೦ ಸಿದ್ಧಾಂತದ ಪ್ರತಿಜ್ಞೆಯಲ್ಲಿ ಎರಡು ರೇಷೆಗಳ ಬೇರೀಜು ಮೂರನೇದಕ್ಕಿಂತ ಹೆಚ್ಚಿಗಿರಬೇಕೆಂದು ಹೇಳುವ ಕಾರಣವೇನು?

೪. ೧ನೇ ಪುಸ್ತಕದ ೨೮ನೇ, ೨೩ನೇ, ೪೦ನೇ, ಹಾಗೂ ೪೪ನೇ ಸಿದ್ಧಾಂತಗಳ ಪ್ರತಿಜ್ಞೆಗಳನ್ನು ಬರಿಯಿರಿ. ೬

೫. ೩ನೇ ಹಾಗೂ ೭೬ನೇ ಸಿದ್ಧಾಂತಗಳ ಪ್ರತಿಜ್ಞೆ ಹೇಳಿ ಅವುಗಳ ೭ನೇ ಭಾಗಗಳ ಸಿದ್ಧತೆ ಬರಿಯಿರಿ. ೮

೬. ೧೫ನೇ ಹಾಗೂ ೪೬ನೇ ಸಿದ್ಧಾಂತಗಳ ಉಪಸಿದ್ಧಾಂತಗಳನ್ನು ಬರಿಯಿರಿ. ೪

೭. ೯ನೇ ಸಿದ್ಧಾಂತ ಸಿದ್ಧ ಮಾಡುವದರಲ್ಲಿ ಕೊಟ್ಟ ಕೋನಿನ ವಿರುದ್ಧ ದಿಕ್ಕಿಗೆ ಸಮಭುಜ ತ್ರಿಕೋಣ ಮಾಡದೆ ಕೆಳಗೆ ಬರೆದ ಪ್ರಕಾರ ಕೋನಿನ ಬಾಜೂಕ್ಕೆ ಬಳಮ್ಯೆಯಲ್ಲಿ ಸಮಭುಜ ತ್ರಿಕೋಣವನ್ನು ಮಾಡಿಕೊಂಡು ಆ ಸಿದ್ಧಾಂತವನ್ನು ಸಿದ್ಧ ಮಾಡಿ ತೋರಿಸರಿ. ೮



೮. ಬಂದು ಚೌರಸಿನ ಕರ್ಣ ರೇಖೆಯ ಮೇಲೆ ತೆಗೆದ ಚೌರಸಿನ ಕ್ಷೇತ್ರವು ಆ ಮೂಲ ಚೌರಸಿನಕಿಂತ ಎಷ್ಟು ಹೆಚ್ಚಾಗುವದು? ೪

೯. ಒಂದು ಬಂದರದಿಂದ ಎರಡು ಹಡಗಗಳು, ಬಂದು ಉತ್ತರಕ್ಕೆ ೪೦೧೬ ಮೈಲು ಮತ್ತೊಂದು ಪೂರ್ವಕ್ಕೆ ೧೬೨ ಮೈಲು, ಹೋದರೆ ಅವುಗಳ ನಡುವೆ ಎಷ್ಟು ಅಂತರ ಬೀಳುವದು? ೫

೧೦. ಬಂದು ಬುರಜು ವ್ಯಾಪಿಸಿದ ನೆಲದ ಕ್ಷೇತ್ರವು ೬೪೩ ೧೬
ಯಾರ್ಡ್‌ಗಳಿರುತ್ತದೆ. ಮತ್ತು ಅದರ ಸುತ್ತಲಿನ ಖಂದಕದ ಕ್ಷೇತ್ರವು ೧೭೪೦ ಯಾರ್ಡ್ ಇರುತ್ತದೆ. ಆದರೆ ಆ ಖಂದಕದ ಅಗಲವೆಷ್ಟು?

೧೧. ೬೦ ಫೂಟು ಎತ್ತರ ನಿಚ್ಚಣಿಕೆಯ ಬುಡವು ನೆಲದ ೧೬
ಮೇಲೆ ಗೋಡೆಯ ಬುಡದಿಂದ ೧೪ ಫೂಟ ಅಂತರದ ಮೇಲಿದ್ದಾ ಗ್ಯೆ ಅದರ ತುದಿಯು ಆ ಮನೆಯ ಗೋಡೆಯಲ್ಲಿರುವ ವರ್ತುಳಾ ಕಾರ ಖಿಡಕಿಯ ಮೆಲ್ಭಾಗಕ್ಕೆ ಹತ್ತಿರುತ್ತದೆ. ಅವನ್ನು ಗೋಡೆ ಯ ಬುಡದಿಂದ ೧೬ ಫೂಟ ಅಂತರದ ಮೇಲೆ ಎಳೆದ ಕೂಡಲೆ ಅದರ ತುದಿಯು ಆ ಖಿಡಕಿಯ ತಳಭಾಗಕ್ಕೆ ಬಂದು ಹತ್ತುತ್ತಾ ದೆ. ಆದರೆ ಆ ಖಿಡಕಿಯ ಪರೀಘವೆಷ್ಟು?

೧೨. ೧೬ ಫೂಟ ಉದ್ದ ೧೦ ಫೂಟ ಅಗಲವಾದ ಬಂದು ೧೦
ಖೋಲಿ ಇರುತ್ತದೆ. ಅದರ ಗೋಡೆಗಳು ೪ ಫೂಟ ಎತ್ತರ ಅವೆ. ಅದಕ್ಕೆ ೬+೪ ಫೂಟಿನ ಎರಡು ಬಾಗಿಲಗಳೂ ೪+೩ ಫೂಟಿನ ೬ ಖಿ ಡಕಿಗಳೂ ಇರುತ್ತವೆ. ಆ ಖೋಲಿಯ ಬಳಮಗ್ಗಲು ಗೋಡೆಗ ಳಿಗೆ ಸುಣ್ಣ ಹಚ್ಚಿ ಬಾಗಿಲಗಳಿಗೂ ಖಿಡಕಿಗಳ ಫಡಕುಗಳಿಗೂ ಹ ಸರು ಬಣ್ಣ ಹಚ್ಚಿ ನೆಲಫಟ್ಟಣಿ ಮಾಡತಕ್ಕದ್ದಿರುತ್ತದೆ. ಸುಂಣ ಹಚ್ಚುವ ಖರ್ಚು ೧೦೦ ಚೌರಸ ಫೂಟಿಗೆ ೫ ಆಣೆ, ಬಣ್ಣದ ಖರ್ಚು ೧ ಚೌರಸ ಫೂಟಿಗೆ ೫ ಆಣೆ, ಮತ್ತು ನೆಲ ಮಾಡುವ ಖರ್ಚು ೧೦೦ ಚೌರಸ ಫೂಟಿಗೆ ೧೫ ಆಣೇದ ಪ್ರಕಾರ ಆ ಖೋ ಲಿಯನ್ನು ತಯಾರ ಮಾಡುವವಕ್ಕೆ ಒಟ್ಟು ಎಷ್ಟು ಖರ್ಚು ಹತ್ತು ವದು?

೧೩. ಒಬ್ಬ ಮನುಷ್ಯನು ೪ ಮಳೆಯ ಕಟ್ಟನ ಸೊಪ್ಪಿ ರೂ ಪಾಯಿಕ್ಕೆ ೮ ಕಟ್ಟು ಕೊಂಡು ಅವನ್ನು ೩೫ ಮಳೆಯ ಕಟ್ಟನಿಂ ದ ರೂಪಾಯಿಕ್ಕೆ ಎಷ್ಟು ಕಟ್ಟು ಮಾರಿದರೆ ಆತನಿಗೆ ೪ ಆಣೆ ಲು ಳಿಯುವವು?

ವರ್ಗಣೀ ವಸೂಲು.

ಧಾರವಾಡ ಜಿಲ್ಲೆ.

	ರೂ.	ಅ.	ಪೈ.
ಧಾರವಾಡ ತಾಲೂಕ ಮಾಸ್ತರರಿಂದ ಧಾರವಾಡ ಮ್ಯುನಿಸಿಪಾಲ ಸಾಲಿಗಳಬಗ್ಗೆ ನೇ ತಿಮಾಹಿ ಎಪ್ರೀಲ, ಮೇ, ಜೂನ್ ಬಾಬತು.	೬	೦	೯
ಧಾರವಾಡ ಡಿ. ಎ. ಇನ್‌ಸ್ಪೆಕ್ಟರರ ಕಡಿಯಿಂದ ಲೋಕಲ್‌ಬೋರ್ಡ ಶಾಲೆಗಳಬಗ್ಗೆ ೧೪೯೦ನೇ ಸಾಲಿನ ಮಾರ್ಚ, ಎಪ್ರೀಲ, ಮೇ ತಿಂಗಳುಗಳ ಬಾಬತು.	೬೪	೬	೯

ವಿಜಾಪೂರ ಜಿಲ್ಲೆ.

ವಿಜಾಪೂರ ಮ್ಯುನಿಸಿಪಾಲ ಸ್ಕೂಲುಗಳಿಂದ ೧೪೯೦ನೇ ಸಾಲಿನ ಜನವರಿ, ಫೆಬ್ರುವಾರಿ ತಿಂಗಳ ಬಾಬತು.	೧೨	೯	೦
ವಿಜಾಪೂರ ಮ್ಯುನಿಸಿಪಲ್ ಲೋಕಲ್‌ಬೋರ್ಡ ಸ್ಕೂಲುಗಳಿಂದ ೧೪೯೦ನೇ ಸಾಲಿನ ಎಪ್ರೀಲದ ಬಗ್ಗೆ.	೩೦	೧೫	೦
ವಿಜಾಪೂರ ಮ್ಯುನಿಸಿಪಲ್ ಲೋಕಲ್‌ಬೋರ್ಡ ಶಾಲೆಗಳ ಬಗ್ಗೆ ೧೪೯೦ನೇ ಸಾಲಿನ ಜನವರಿ, ಫೆಬ್ರುವಾರಿ ಬಾಬತು.	೪೦	೧	೯
ವಿಜಾಪೂರ ಡಿಪೂಟಿ ಎ. ಇನ್‌ಸ್ಪೆಕ್ಟರರ ಕಡಿಯಿಂದ ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಾಲ ಸ್ಕೂಲುಗಳಿಂದ ೧೪೯೦ನೇ ಸಾಲಿನ ಮೇ ತಿಂಗಳ ಬಾಬತು.	೩೦	೧೫	೦

ಸಂಸ್ಥಾನ.

ರಾಮದುರ್ಗದ ೧೧ ಸ್ಕೂಲುಗಳಿಂದ ಎಪ್ರೀಲ ೧೪೯೦ನೇ ಸಾಲಿನಿಂದ ೧೪೯೦ನೇ ಸಾಲಿನ ಮಾರ್ಚ ಅಖೈರನವರೆಗೆ.	೧೦	೪	೦

ಕಿರಕುಳ.

ಕ್ಯೂರೇಟರ ಕಡಿಯಿಂದ ನೋಟೀಸಿನ ಬಗ್ಗೆ. ...	೧	೯	೦

ಜಿ. ಬಿ. ನಾಯಿಕ ಕಂಪನಿಯವರ ಕಡಿಯಿಂದ ಹ ಸ್ತ ಪತ್ರಗಳನ್ನು ಹಂಚುವಬಗ್ಗೆ. } ೯ ೦ ೦

• ಇದರೊಳಗೇನಾದರೂ ತಪ್ಪು ಇದ್ದರೆ ಮಾಸ್ತರ ಜನರು ಅತ್ಯ ವಾಗಿ ತಿಳಿಸಬೇಕು.

ಪ್ರಕಟನೆ .

ಈ ಪತ್ರಕದ ಚಂದಾ ಹಣವನ್ನು ವ್ಯವಸ್ಥಾಪಕ ಕನ್ನಡ ಶಾಲಾಪತ್ರಕ ಇವರ ಹೆಸರಲಿ ರೆವಿಟನ್ಸ ಟ್ಯಾಮ್ಸ್ಫರ ರಿನೀ ಟುಗಳ ಮುಖಾಂತರವಾಗಿ ಕಳುಹಿಸಬೇಕೆಂದು ಈ ಪೂರ್ವ ದಲ್ಲಿ ತಿಳಿಸಿದ್ದೇವಷ್ಟೇ. ಆದರೆ ಕೆಲವು ಜನ ತಾಲೂಕ ಮಾಸ್ತರರೊಬ್ಬನನ್ನೂ ಮನಿ ಆರ್ಡರ ಮಾಡಿ ಹಣವನ್ನು ಕಳು ಹಿಸುತ್ತಾರೆ. ಅದದರಿಂದ ಈ ನೋಟೀಸು ಪುನಃ ಕೊಡಬೇ ಕಾಯಿತು. ಯಾರಾದರೂ ಈ ಪ್ರಕಾರ ಚಂದಾ ಹಣವನ್ನು ಕಳುಹಿಸಿದರೆ ಕಮಿಶನದ ಹಣವನ್ನು ಅವರೇ ಕೊಡಬೇ ಕಾಗುವದು; ಚಂದಾ ಹಣವಲ್ಲಿ ಅವನ್ನು ಮುರುಕೊಳ್ಳಲಾಗ ದು. ಕಮಿಶನ್ ಕೈಲೆ ಹಾಕಿ ಚಂದಾ ಹಣವನ್ನು ಕಳುಹಿಸು ವ ಮನಸುಳ್ಳವರು ಹಾಗೆ ಮಾಡಬಹುದು.

೨. ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಾಲ ಶಾಲೆ ಗಳ ಮಾಸ್ತರರ ಹೊರತು ಬೇರೆ ವರ್ಗಣಿದಾರರು ಈಗಿನಂ ತೆ ಪೂರಾ ಕ್ರಯದ ಮನಿ ಆರ್ಡರುಗಳನ್ನು ಮಾಡಿ ತಮ್ಮ ಚಂದಾ ಹಣವನ್ನು ಮುಟ್ಟಿಸಬೇಕು.

ವ್ಯ. ಕನ್ನಡ ಶಾಲಾಪತ್ರಕ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುಪ್ಪಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೬.] ಎಪ್ರಿಲ ೧೮೯೧ [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ವರ್ಹಾಡವ ವಿದ್ಯಾಖಾತೆಯ ಡೈರೆಕ್ಟರರಾದ ಮೆಹಬ್ಬಾನ ಶ್ರೀರಾವು ಭಿಕಾಜಿ ಜಿತಾರ ಸಾಹೇಬರು ಕೆಲವು ದಿವಸಗಳ ಕೆಳಗೆ ರಜೆಯನ್ನು ಪಡಕೊಂಡಾಗ್ಗೆ ಅವರ ಕೆಲಸಕ್ಕೆ ಎಲ್ಫಿನ್ ಸ್ಟನ್ ಕಾಲೇಜದ ಇಂಗ್ಲಿಷಪ್ರೊಫೆಸರರಾವ ಮಿ. ಬ್ಯಾರೆಟ್ ಸಾಹೇಬರನ್ನು ನೇಮಿಸಿದ್ದರು. ಅವರು ೧೮೯೦ನೇ ಇಸವಿಯ ಜೂನ ತಿಂಗಳಲ್ಲಿ ಮಾಡಿದ ವಾರ್ಷಿಕ ರಿಪೋರ್ಟನಲ್ಲಿ ಕೆಲವು ಸಾಮಾನ್ಯವಾದ ಶಾಲಾ ದೋಷಗಳನ್ನು ಕಾಣಿಸಿರುತ್ತಾರೆ. ಅವುಗಳಲ್ಲಿ ಬಂದೆರಡನ್ನು ಕೆಳಗೆ ವಿವರಿಸುತ್ತೇವೆ.

ಅವರು ಮಿಡಲ್ (ಅಂದರೆ ಅ. ವ್ಹ.) ಸ್ಕೂಲುಗಳ ಮತ್ತು ಪ್ರಾಯಮರಿ (ಪ್ರಾಥಮಿಕ ಶಿಕ್ಷಣದ) ಸ್ಕೂಲುಗಳ ವಿಷಯವಾಗಿ ಬರೆದದ್ದೇನಂದರೆ:—ಇವೆರಡೂ ವರ್ಗದ ಸಾಲಿಗಳಲ್ಲಿ ಪಾಠನವು ಸಮಾಧಾನಕರವಾಗಿರುವದಿಲ್ಲ. ಮಾಜುಗ

ರು ತಮ್ಮ ಮಾತಗಳನ್ನು ಎಷ್ಟು ಮಾತ್ರವು ತಿಳುಕೊಳ್ಳದೆ ಗಿಳಿಗಳಂತೆ ಓದುವರು. ಓದಿದ್ದು ಓದುವವರಿಗೂ ಕೇಳುವವರಿಗೂ ಚನ್ನಾಗಿ ತಿಳಿಯಲಿಕ್ಕೆ ಬೇಕು; ಆದರೆ ಈ ಹುಡುಗರು ಸರಳವಾಗಿ ಓದಿದ್ದನ್ನು ಕೇಳಿ ಅದರ ಅರ್ಥವು ಅವರಿಗೆ ಚನ್ನಾಗಿ ಮನದಟ್ಟಾಗಿರುವದೆಂದು ತಿಳುಕೊಂಡರೆ ದೊಡ್ಡ ತಪ್ಪಾಗಬಹುದು. ಅ. ವ್ಹ. ಸಾಲಿಗಳಲ್ಲಿ ಹುಡುಗರು ಸರಳವಾಗಿ ಓದುವರು, ಕಠಿಣ ಶಬ್ದಗಳಿಗೆ ತಕ್ಕ ಪ್ರತಿ ಶಬ್ದಗಳನ್ನು ಹೇಳುವರು; ಆದರೆ ಇದಕ್ಕೂ ಹೆಚ್ಚಿಗೆ ಯಾರಾದರೂ ವಿಚಾರ ಮಾಡಿದರೆ ಅವರು ಹುಡುಗರ ಅಪೂರ್ಣ ಜ್ಞಾನವನ್ನು ಕಂಡು ಆಶ್ಚರ್ಯ ಪಡಬಹುದು. ಒಂದು ಪಾಲೆಯಲ್ಲಿ ಪಾಠ ಓದಿಸುವಾಗ ಒಬ್ಬ ಹುಡುಗನು "Two boys used to visit a sandy beach because it was a wonderful place for shells" ಈ ವಾಕ್ಯವನ್ನು ನೆಟ್ಟಗೆ ಓದಿದ್ದಲ್ಲದೆ wonderful ಎಂದರೆ remarkable ಎಂಬ ತಕ್ಕ ಅರ್ಥವನ್ನಾದರೂ ಹೇಳಿದನು. ಆದರೆ wonderful ಎಂದರೆ ನಿನಗೇನು ತಿಳಿಯಿತು ನಿನ್ನ ಸ್ವಭಾಷೆಯಲ್ಲಿ ಹೇಳೆಂದು ಕೇಳಲು ಅವನು चमत्कारिक ಎಂದು ಹೇಳಿದನು. ಇದರಿಂದ ಆ ವಾಕ್ಯದ ಅರ್ಥವು ಅವನಿಗೆಷ್ಟು ಮನದಟ್ಟಾಗಿರುವದೆಂಬದು ಸಹಜವದೆ. ಬೇರೆ ಹುಡುಗರಾದರೂ ವಿಚಾರ ಮಾಡಲೆಲೆ ಬಬ್ಬನು ಹೇಳಿದ್ದನ್ನೇ ಹೇಳುವರು. ಮತ್ತೊಂದು ಪಾಲೆಯಲ್ಲಿ "My wife was in the house and I was without" ಎಂಬ ವಾಕ್ಯವನ್ನು ಓದಿಸಿ ಅದರೊಳಗೆ without ಶಬ್ದದ ಅರ್ಥವೇನೆಂದು ಕೇಳಿದ್ದಕ್ಕೆ शिवाय (ಹೊರತು) ಎಂದು ಬಹು ಮಂದಿ ವಿದ್ಯಾರ್ಥಿಗಳು ಹೇಳಿದರು. ಇದು ಬಹುತ್ತ ಅತಿಶಯೋಕ್ತಿಯಾಗಿ ತೋರುವದು, ಆದರೆ ಇದು ನಾವು ಮನಗಂಡ ಮಾತು.

ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ಶಬ್ದಕ್ಕೆ ಪ್ರತಿ ಶಬ್ದವನ್ನು ಹೇಳಿದರೆ ತಮ್ಮ ಕೆಲಸವಾಯಿತೆಂದು ಮಾಸ್ತರ ಜನರು ನೆನಸುವಂತೆ ತೋರುತ್ತದೆ. ಪಾಠದಿಂದ ಯಾವ ತತ್ವದ ಮಾತು ಬೈಲಿಗೆ ಬಂತು, ಅದರಿಂದ ತಮಗೆ ಪ್ರಯೋಜನವೇನು, ಇವೇ ಮುಂತಾದ ಸಂಗತಿಗಳನ್ನು ತಿಳಿಸಿ ಹೇಳುವದರ ಕಡಿಗೆ ವಾಡಿಕೆಯಾಗಿ ಮಾಸ್ತರ ಜನರು ಲಕ್ಷ ಕೊಡುವಂತೆ ತೋರಲಿಲ್ಲ. ಯಾಕಂದರೆ ಇಂಥ ಪ್ರಶ್ನಗಳನ್ನು ಕೇಳಲಾಗಿ ವಿದ್ಯಾರ್ಥಿಗಳು ಉತ್ತರವನ್ನೇ ಕೊಡಲಾರದೆ ಸುಮ್ಮನಿರುವರು, ಒಪ್ಪತ್ತು ಕೊಟ್ಟರೂ ಅದು ಅಸಂಬದ್ಧವಾಗಿರುವದು. ಬಮ್ಮೊಮ್ಮೆ ಆ ಉತ್ತರವನ್ನು ಕೇಳಿ ನಗೆ ಬರುವದು. ಬಂದು ಶಾಲೆಯಲ್ಲಿ "ಸಿಂಹವೂ ಇಲಿಯೂ" ಎಂಬ ಪಾಠವನ್ನು ಬಂದು ವರ್ಗದ ವಿದ್ಯಾರ್ಥಿಗಳಿಂದ ಓದಿಸಿದೆವು. ಓದುವದಾದ ಮೇಲೆ ಈ ಪಾಠದಿಂದ ನೀವೇನು ಕಲಿತಿರೆಂದು ಕೇಳಿದ್ದಕ್ಕೆ ಇಬ್ಬರು ಮಾತ್ರ ಉತ್ತರವನ್ನು ಕೊಡಲಿಕ್ಕೆ ಯತ್ನ ಮಾಡಿದರು. ಒಬ್ಬನು ಬರೆಯಲಿಕ್ಕೆ ಕಲಿತೆವೆಂತಲೂ ಮತ್ತೊಬ್ಬನು ವಿದ್ಯವನ್ನು ಕಲಿತೆವೆಂತಲೂ ಹೇಳಿದರು. ಎರಡನೆಯವನಿಗೆ ಯಾವ ವಿದ್ಯವೆಂದು ಕೇಳಲು ಎಲ್ಲ ವಿದ್ಯವೆಂದು ಉಸುರಿದನು. "ಸಮಯ ಬಂದಾಗ ನಿನಗೆ ಪ್ರತ್ಯುಪಕಾರವನ್ನು ಮಾಡುವೆನು, ಎಂದು (ಇಲಿಯು) ಕೃತಜ್ಞತೆಯಿಂದ ನುಡಿಯಿತು. ಆ ಮಾತು ಕೇಳಿ ಸಿಂಹವು ನಕ್ಕು—" ಈ ವಾಕ್ಯವನ್ನು ಓದಿಸಿ ಸಿಂಹವು ಯಾಕೆ ನಕ್ಕಿತು, ಎಂದು ಕೇಳಲಾಗಿ ಒಬ್ಬನು ಮಾತ್ರ ಉತ್ತರವನ್ನು ಕೊಡಲು ಯತ್ನಿಸಿ ಇಲಿ ಮಾತಾಡುವದನ್ನು ನೋಡಿ ನಕ್ಕಿತೆಂದು ಹೇಳಿದನು.

ಮತ್ತೊಂದು ಶಾಲೆಯಲ್ಲಿ "ಜಲಮನುಷ್ಯನೂ ಕಾಬಾ

ಡಿಗನೂ " ಎಂಬ ಪಾಠವನ್ನು ವಿದ್ಯಾರ್ಥಿಗಳು ಓದಿದರು. ಆಗ ಅವರಿಗೆ, ಬಂಗಾರದ ಕೊಡ್ಲಿಯನ್ನೂ ಬೆಳ್ಳಿಯ ಕೊಡ್ಲಿಯನ್ನೂ ಬಿಟ್ಟು ತನ್ನ ಕಬ್ಬಿಣದ ಕೊಡ್ಲಿಯನ್ನೇ ಕೊಟ್ಟು ಹಿಡಿದು ತಕ್ಕೊಂಡ ಮನುಷ್ಯನು ಎಂಥವನು, ಅವನ ಸ್ವಭಾವ ಎಂಥಾದ್ದು, ಎಂದು ಕೇಳಲಾಗಿ ಒಬ್ಬನು ಅವನು ಬಡ ಮನುಷ್ಯನೆಂಬೂ ಮತ್ತು ಕೆಲವರು ಅವನು ಜಾಣ ಮನುಷ್ಯನೆಂತಲೂ ಹೇಳಿದರು.

ಪ್ರಾಥಮಿಕ ಶಾಲೆಗಳಲ್ಲಿ ಓದೋಣವಾದರೂ ಸಂತೋಷಕರವಾಗಿರುವದಿಲ್ಲ. ವಾಡಿಕೆಯಾಗಿ ವಿದ್ಯಾರ್ಥಿಗಳು ಧನಿತೆಗೆದು ಓದುವರು, ಇಲ್ಲವೆ ಬಂದೇ ಸ್ವರದಿಂದ ಓದುವರು. ಭೂಗೋಲದ ಅಭ್ಯಾಸವಾದರೂ ಇದೇ ಮೇರೆಗೆ ನಿಷ್ಪ್ರಯೋಜನಕರವಾಗಿರುವದು. ಭೂಗೋಲ ಬಾಯಪಾಠ ಬಂದಾಗ್ಯೂ ಕಾಶಿಯಿಂದ ರಾಮೇಶ್ವರ ಯಾವ ದಿಕ್ಕಿಗೆ, ತಾನು ಇರುವ ಹಳ್ಳಿಯಿಂದ ಇಲಾಖೆಯ ಮುಖ್ಯ ಪಟ್ಟಣಕ್ಕೆ ಹೋಗಬೇಕಾದರೆ ಹಾದಿಯಲ್ಲಿ ಯಾವ ಹೊಳೆಗಳನ್ನು ದಾಟಬೇಕಾಗುತ್ತದೆ, ಯಾವಯಾವ ಊರು ಹತ್ತುವವು, ಇವರ ಜ್ಞಾನವೇನೂ ಇರುವದಿಲ್ಲ. ನಕಾಶದ ಮೇಲೆ ಭೂಗೋಲದೊಳಗೆ ಹೇಳಿದ ಯಾವತ್ತು ಊರುಗಳನ್ನು ತಪ್ಪದೆ ತೋರಿಸಲಿಕ್ಕೆ ಬಂದಾಗ್ಯೂ ಹೋಳಕರ, ಗಾಯಕವಾಡ, ಮುಂತಾದ ಹೆಸರುಗಳನ್ನು ಅರಿಯದಂಥ ಹುಡುಗರನ್ನೂ ಕಾಣಬಹುದು. "

ಈ ದೊಷಗಳನ್ನು ಮಾಸ್ತರ ಜನರು ಆಗ್ರಹಪೂರ್ವಕವಾಗಿ ದೂರಮಾಡತಕ್ಕದ್ದು. ವಿದ್ಯಾರ್ಥಿಗಳಿಗೆ ವಿಚಾರದ ಚಟ ಹಚ್ಚುವದೇ ಮಾಸ್ತರರ ಮುಖ್ಯ ಕರ್ತವ್ಯವು. ಓದಿದ ಸಂಗತಿಗಳಿಂದ ಆಗುವ ಪ್ರಯೋಜನವನ್ನು ತೋರಿಸಿ ಜ್ಞಾನ

ಸಂಪಾದನೇಚ್ಛೆಯನ್ನು ಎಚ್ಚರ ಗೊಳಿಸಿದರೆ, ಈ ಕೆಲಸವು ಕೈಗೂಡುವದು ಅಸಾಧ್ಯವಲ್ಲ. ಮಾಸ್ತರ ಜನರು ಹುಡುಗರ ಕಲ್ಯಾಣಕ್ಕೆ ಲಕ್ಷಕೊಟ್ಟು ತಮ್ಮ ಕೆಲಸವನ್ನು ಮನಮುಟ್ಟಿ ನಿಷ್ಠೆಯಿಂದ ಮಾಡಿದರೆ ಯಶವೂ ಕೀರ್ತಿಯೂ ತಪ್ಪವು.

ನ್ಯೂಯಾರ್ಕ ಪಟ್ಟಣದಲ್ಲಿ ಎರಡು ಅನೆಗಳನ್ನು ತಂದಿದ್ದಾರಂತೆ. ಅವುಗಳಲ್ಲಿ ದೊಡ್ಡದು ೩೬ ಇಂಚು, ಸಣ್ಣದು ೬ ಇಂಚು ಎತ್ತರ ಇರುತ್ತದೆ. ಅವು ಆರು ವರ್ಷದವವೆ. ಅವುಗಳ ಬಗ್ಗೆ ಸೋಜಿಗದ ಸಂಗತಿ ಏನಂದರೆ ಅವುಗಳ ತಲೆ ಬೆನ್ನು ಮತ್ತು ಕಾಲು ಇವುಗಳ ಮೇಲೆ ಮೂರು ಇಂಚು ಉದ್ದನ್ನ ದಟ್ಟ ಕೂದಲುಗಳವೆ. ಇಷ್ಟು ಸಣ್ಣ ಮತ್ತು ಕೂದಲುಳ್ಳ ಆನೆಗಳು ಮೊದಲು ಯಾರಿಗೂ ಸಿಕ್ಕಿದ್ದಿಲ್ಲ.

ಚಾರದಾಸವನದ ವೃತ್ತಾಂತವನ್ನು ನಮ್ಮ ವಾಚಕರಿಗೆ ಈ ಮೊದಲು ತಿಳಿಸಿರುತ್ತೇವೆ. ಆ ಸದನದ ಎನೇ ವಾರ್ಷಿಕ ಸಮಾರಂಭವು ಕಳೆದ ಬುಧವಾರ ತಾ॥ ೧೧ನೇ ದಿವಸ ಪುಣೆಯಲ್ಲಿ ಆಯಿತು. ಈ ಸಮಾರಂಭಕ್ಕೆ ಪತರ್ದೇಶೀಯರು ಅನೇಕ ಸ್ತ್ರೀಪುರುಷರೂ ಹಲವು ಯುರೋಪಿಯನ್ ಸ್ತ್ರೀ ಪುರುಷರೂ ಬಂದಿದ್ದರು. ಅಧ್ಯಕ್ಷಸ್ಥಾನವನ್ನು ಸಾಧ್ವಿ ಗ್ಯವತಿ ರಮಾಬಾಯಿ ರಾನಡೆ ಇವರು ಸ್ವೀಕರಿಸಿದ್ದರು. ಇವರು ಸಮಾರಂಭದ ಕೊನೆಗೆ ಸಮಯೋಚಿತ ಭಾಷಣ ಮಾಡಿ ಸಭೆಯ ಕೆಲಸವನ್ನು ಮುಗಿಸಿದರು. ನಮ್ಮ ಹಿಂದೂ ಸ್ತ್ರೀಯರು ಬರಬರುತ್ತಾ ಇಂಥ ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಅಧ್ಯಕ್ಷಸ್ಥಾನವನ್ನು ಅಂಗೀಕರಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವವನ್ನು ನೋಡಿ ಯಾರಿಗೆ

ಸಂತೋಷವಾಗಲಿಕ್ಕಿಲ್ಲ? ಸದ್ಯಕ್ಕೆ ಸದನದಲ್ಲಿ ೪೩ ಮಂದಿ ವಿದ್ಯಾರ್ಥಿನಿಯರಿದ್ದಾರೆ; ಅವರಲ್ಲಿ ೩೦ ಜನ ವಿಧವೆಯರು, ೬ ಜನ ಮುತುವೆಯಾದವರು, ೭ ಜನ ಮುದುವೆಯಾಗದವರು ಇರುತ್ತಾರೆ. ಸದನದ ಖರ್ಚನ್ನು ಪಂಡಿತಾ ರಮೂಬಾಯಿಯವರು ಅವೈದಿಕದ ಜನರ ವರ್ಗಣಿಯಿಂದ ಸಾಗಿಸುತ್ತಲಿದ್ದಾರೆ. ಆವರೆ ಈ ಸದನಕ್ಕೆ ಉದಾರಾಶ್ರಯವನ್ನು ಕೊಟ್ಟು ಈ ದೇಶದಲ್ಲಿ ಸ್ತ್ರೀ ಶಿಕ್ಷಣವನ್ನು ಹಬ್ಬಿಸುವದು ನಮ್ಮ ಜನರ ಕರ್ತವ್ಯವಾಗಿರುತ್ತದೆ. ಸೌ. ರಮೂಬಾಯಿ ರಾನಡೆ ಇವರು ಸೂಚಿಸಿದಂತೆ ಅಲ್ಲಿರುವ ಒಬ್ಬೊಬ್ಬ ವಿದ್ಯಾರ್ಥಿನಿಯ ಖರ್ಚನ್ನು ಒಬ್ಬೊಬ್ಬ ಸದ್ಗೃಹಸ್ಥರು ಕೊಡುವವಕ್ಕೆ ಒಪ್ಪಿಕೊಂಡರೆ ಅವೈದಿಕದವರ ಮೋರೆ ನೋಡುವ ಪ್ರಸಂಗವು ತಪ್ಪುವದು.

ನಮ್ಮ ಇಲಾಖೆಯ ಗವರ್ನರರಾದ ನಾಮದಾರ ಲಾರ್ಡ ಹಾರಿಸ ಧೊರೆಗಳು ಮಾರ್ಚ ೩೦ನೇ ತಾರೀಖಿನ ದಿವಸ ರಾತ್ರಿ ೧೦ ಘಂಟೆಗೆ ಮುಂಬಯಿಯಿಂದ ಹೊರಟು ಮುಧ್ಯವಲ್ಲಿ ಮುಕ್ಕಾಮು ಮಾಡುತ್ತ ಮಾಡುತ್ತ ಎಪ್ರಿಲ ೧೮ನೇ ತಾರೀಖಿಗೆ ಧಾರವಾಡಕ್ಕೆ ಬರುವರು. ಇಲ್ಲಿಂದ ಹೊರಟು ಮುಂದೆ ತಾ॥ ೨೩ನೇ ದಿವಸ ಹುಬ್ಬಳ್ಳಿಗೆ, ತಾ॥ ೨೫ನೇ ದಿವಸ ವಿಜಾಪುರಕ್ಕೆ ತಾ॥ ೨೭ನೇ ದಿವಸ ಬೆಳಗಾವಿಗೆ, ತಾ॥ ೩೦ನೇ ದಿವಸ ಮಿರಜೆಯು ಮೇಲಿಂದ ಕೊಲ್ಹಾಪುರಕ್ಕೆ ಹೋಗುವರು. ಅಲ್ಲಿ ಎರಡು ದಿವಸ ನಿಂತು ತಾ॥ ೩೩ನೇ ದಿವಸ ಕೊಲ್ಹಾಪುರದಿಂದ ಹೊರಟು ಪುನಃ ಮಿರಜೆ ಮತ್ತು ವಾತಾರ ಮಾರ್ಗವಾಗಿ ಮಹಾಬಳೇಶ್ವರಕ್ಕೆ ಹೋಗುವರು.

ಕೆಳಗೆ ಬರೆದ ಪಟ್ಟಣಗಳ ಜನಸಂಖ್ಯೆಯು ಹೋದ ಜಾನೆಸುವಾರಿಯಿಂದ ತಿಳಿದದೆ. ಅದರ ವಿವರ:—

ಪಟ್ಟಣ.	ಜನಸಂಖ್ಯೆ.	
	೧೮೮೧.	೧೮೯೧.
ಕಲಕತ್ತಾ ...	೪೩೨೯೦೦	೭೪೦೦೦೦
ಮುಂಬಯಿ ...	೭೬೪೦೦೦	೮೦೪೪೬೪
ಪುಣೆ ...	೮೮೬೦೦	೧೦೮೬೪೭
ಧಾರವಾಡ ...	೦೭೦೦೦	೪೦೬೭೦
ಬೆಳಗಾಂವ ಶಹರ ...	೦೦೦೦೦	೦೭೯೪೦
ಸ. ಕ್ಯಾಂಟೋನ್ಮೆಂಟ		೧೦೦೪೯

HINTS ON MORAL TEACHING.

ನೀತಿಶಿಕ್ಷಣದ ಬಗ್ಗೆ ಸೂಚನೆಗಳು.

ಕೆಲವು ದಿವಸಗಳ ಹಿಂದೆ ಶಿಕ್ಷಣವೆಂದರೆ ಬರೀ ಓದಲಿಕ್ಕೆ ಬರೆಯಲಿಕ್ಕೆ ಲೆಕ್ಕ ಮಾಡಲಿಕ್ಕೆ ಕಲಿಸುವದೆಂದು ಜನರು ನಂಬುತಿದ್ದರು. ಇತ್ತಿತ್ತ ಪಾಶ್ಚಿಮಾತ್ಯ ಸುಧಾರಣೆಯು ಹಬ್ಬುಗೊಂಡಹಾಗೆ ಶಿಕ್ಷಣವ ನಿಜಸ್ವರೂಪವು ಬೈಲಿಗೆ ಬಂದು ಚಿಕ್ಕದೊಡ್ಡವರಿಗೆ ಅದರ ವ್ಯಾಪಕಾರ್ಥವು ಗೊತ್ತಾಗಿದೆ. ಮನುಷ್ಯನೆಂಬ ಬಹುಮಾನದ ಬಿರುದಿಗೆ ತಕ್ಕಂಥ ಕರ್ತವ್ಯಗಳನ್ನು ಸರಿಯಾಗಿ ಮಾಡುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸುವಂಥ ಕಾರ್ಯವೇ ಶಿಕ್ಷಣವೆಂತಲೂ ಅದರಲ್ಲಿ ನೀತಿಶಿಕ್ಷಣ, ಬುದ್ಧಿಶಿಕ್ಷಣ, ಶಾರೀರಶಿಕ್ಷಣ ಎಂಬ ಮೂರು ಮುಖ್ಯ ಭಾಗಗಳಿರುತ್ತವೆಂತಲೂ ಶಿಕ್ಷಣದ ಕೆಲಸದಲ್ಲಿ ಸ್ವಲ್ಪಮಾತ್ರ ಪರಿಶ್ರಮ ಮಾಡಿದವರಿಗೆ ಸಹ ಈ

ಗ್ಗೆ ಗೊತ್ತಾಗಿದೆ. ಬುದ್ಧಿಶಿಕ್ಷಣದ ವಿಷಯದಲ್ಲಿ ಬಹುತರ ಎ ಲ್ಲ ಮಾಸ್ತರ ಜನರಿಗೆ ಪೂರ್ಣಜ್ಞಾನವಾಗದಿದ್ದರೂ ಅಲ್ಪ ಸ್ವ ಲ್ಪ ಜ್ಞಾನವಾದರೂ ಆಗಿರುತ್ತದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಆದರೆ ನೀತಿಶಿಕ್ಷಣದ ಸಂಬಂಧದಿಂದ ಬಹು ಜನರಿಗೆ ತಕ್ಕ ಷ್ಟು ಜ್ಞಾನವಾಗಿರುವದಿಲ್ಲ. ಕೆಲವರು ನೀತಿಶಿಕ್ಷಣವೆಂದರೆ ಬಂದು ಅಗಾಧವಾದ ವಿಷಯವೆಂದು ಆಲೋಚಿಸಿ ಉಪಾಯ ಗಾಣದೆ ಕಂಗೆಡುವರು. ಆದರೆ ಅದು ಗೌರವದ ವಿಷಯ ವಾದಾಗ್ಯೂ ಅವರು ಹೆದರಿ ಕೈಮುಚ್ಚಿಕೊಂಡು ಕೂಡ್ಯುವ ಕಾರಣವಿಲ್ಲ. ಮನುಷ್ಯರ ಪರಸ್ಪರ ವ್ಯವಹಾರಗಳು ಸು ಸೂತ್ರವಾಗಿ ಸಾಗಿಸಲಿಕ್ಕೆ ಪ್ರಯೋಜನಕರವಾದ ನಿಯಮ ಗಳ ಸಮೂಹವೇ ನೀತಿಶಾಸ್ತ್ರವೆಂದು ತುಸು ವಿಚಾರದಿಂದ ಅವರಿಗೆ ತಿಳಿಯುವದು; ಮತ್ತು ತಮ್ಮ ವಿದ್ಯಾರ್ಥಿಗಳು ನೀತಿವಂತರಾಗುವ ಹಾಗೆ ಯತ್ನಮಾಡುವ ಧೈರ್ಯವು ಅ ವರಲ್ಲಿ ಹುಟ್ಟುವದು. ನೀತಿಯಬೀಜಾರೋಪಣವು ಸಾ ಲಿಯಲ್ಲಿಯೇ ಆಗತಕ್ಕದ್ದು. ಮನಸ್ಸು ಕೋಮಲವಿದ್ದಾಗ್ಗೆ ಅವನ್ನು ಬಲಿಸುವದು ಸುಲಭವು; ಆದದರಿಂದ ಸತ್‌ಶಿಕ್ಷಕರು ಮಾಡತಕ್ಕ ಕೆಲಸಗಳಲ್ಲಿ ಇದು ಹೆಚ್ಚು ಗೌರವದ್ದೂ ಅವ ಶ್ಯವಾದದ್ದೂ ಎಂದರೂ ಸಲ್ಲುವದು. ಈ ಕೆಲಸವು ನುಡಿಗಿಂ ತ ನಡೆಯನ್ನೇ ಹೆಚ್ಚು ಅವಲಂಬಿಸಿರುವದು. ಎಚ್ಚರದಿಂ ದ ಈ ಕೆಲಸವನ್ನು ಕೈಕೊಂಡರೆ ಇದು ಎಷ್ಟು ಮಾತ್ರ ವೂ ಕ್ಲೇಶಕರವೆನಿಸದು. ನೀತಿವಂತನಾದ ಮಾಸ್ತರನು ವಿ ದ್ಯಾರ್ಥಿಗಳ ದುರ್ಗುಣ ದುರಾಚಾರಗಳನ್ನು ಗೊತ್ತು ಹ ಚ್ಚಿ ಸ್ಥಿರತ್ವದಿಂದ ಅವುಗಳನ್ನು ಹೋಗಲಾಡಿಸಿದರೆ ಬಾಲ ಯಲ್ಲಿ ನೀತಿಯು ನೆಲೆಗೊಂಡು ಶಿಕ್ಷಣದ ಬಂದು ಅಂಗವು ತಕ್ಕಮಟ್ಟಿಗೆ ಪೂರ್ಣವಾಗುವದೆಂಬದಕ್ಕೆ ಏನೂ ಸಂದೇ ಹವಿಲ್ಲ.

ಶಿಕ್ಷಕರು ಒಳ್ಳೇ ನಡತೆಯವರೂ ಕೋಮಲಾಂತಃಕರಣದವರೂ, ಉಲ್ಲಾಸವುಳ್ಳವರೂ ಯಾವಾಗಲೂ ಆನಂದವೃತ್ತಿಯಿಂದ ಇರುವವರೂ ಧಾರ್ಮಿಕರೂ ಆಗಿ ವಿದ್ಯಾರ್ಥಿಗಳ ಮನೋವಿಕಾರಗಳನ್ನು ತಿಳುಕೊಳ್ಳುತ್ತಾ ಸದ್ಬುದ್ಧಿ ಸದುದ್ದೇಶಗಳಿಗೆ ಬಲಗೊಡುತ್ತಾ ದುರ್ಬುದ್ಧಿ ದುಷ್ಟವಿಚಾರಗಳನ್ನು ಬೇರೊರಸಿ ಕಿತ್ತುಹಾಕುತ್ತಾ, ಸದ್ಭಾವ ಸದಾಚಾರಗಳನ್ನು ನೆಲೆಗೊಳಿಸುತ್ತಾ ಇರಬೇಕು. ಇದಲ್ಲದೆ ವ್ಯಾಪಾರಸ್ಥರು ವರ್ಷವರ್ಷಕ್ಕೆ ಆಥಾವೆ ತೆಗೆದು ತಮ್ಮ ವ್ಯಾಪಾರದ ಸ್ಥಿತಿಯನ್ನು ಕಂಡುಕೊಳ್ಳುವಂತೆ ಮಾಸ್ತರ ಜನರಾದರೂ ನೀತಿಯ ವಿಷಯದಲ್ಲಿ ತಮ್ಮ ಶಾಲೆಯು ಎಷ್ಟು ಮುಂದರಿಸಿರುವದೆಂಬದನ್ನು ಆಗಾಗ್ಗೆ ಪರೀಕ್ಷಿಸುತ್ತಿರಬೇಕು. ಈ ಪರೀಕ್ಷಣವನ್ನು ಕುರಿತು ಕೆಲವು ಸೂಚನೆಗಳನ್ನು ಕೆಳಗೆ ಬರೆಯುತ್ತೇವೆ.

೧. ಗಣಿತ, ಇತಿಹಾಸ, ವ್ಯಾಕರಣ ಮುಂತಾದ ವಿಷಯಗಳ ಕೆಲವು ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು ಬಿಡಿಸಲಿಕ್ಕೆ ಹೇಳಿದಾಗ್ಗೆ ಅವರು ತಮ್ಮ ತಮ್ಮ ಕೆಲಸಗಳನ್ನು ಪ್ರಾಮಾಣಿಕತನದಿಂದ ಮಾಡುವರೋ, ಇಲ್ಲವೆ ಯಾವದಾವದೊಂದು ನೆವವೂಡಿ ತಮ್ಮ ಸ್ಥಳಬಿಟ್ಟು ಬಾರಿಬಾರಿಗೆ ಏಳುವರೋ, ಅತ್ತಿತ್ತ ಸರಿದಾಡುವರೋ, ಎಡಕ್ಕೂ ಬಲಕ್ಕೂ ನೋಡುವರೋ, ಬಬ್ಬರಿಗೊಬ್ಬರು ಸನ್ನೆಗಳಿಂದಾಗಲಿ ಅನ್ಯರೀತಿಯಿಂದಾಗಲಿ ಕೇಳುಹೇಳುವರೋ ಎಂಬದನ್ನು ಎಚ್ಚರದಿಂದ ನೋಡಬೇಕು. ಸ್ಥಳಬಿಟ್ಟು ಸುಮ್ಮಸುಮ್ಮನೇ ಉಲುಕುವದು, ಅತ್ತ ಇತ್ತ ನೋಡುವದು, ಮುಂತಾದ ಕೃತ್ಯಗಳು ಅಪ್ರಾಮಾಣಿಕತನದ ಕುರುಹುಗಳು; ಇವು ಬಣಡಾಲು, ಡಾಂಭಿಕತನ, ವೋಸ, ಮುಂತಾದ ದುರ್ಭಾವನೆಗಳನ್ನು

ಸೂಚಿಸುತ್ತವೆ. ಇವುಗಳನ್ನು ಮಾಸ್ತರರು ನಿಲ್ಲಿಸಲು ಯತ್ನಿಸತಕ್ಕದ್ದು. ಅದೇಮೇರೆಗೆ ಹಲಿಗೆಗಳನ್ನು ನೋಡುವಾಗ್ಗೆ ಸಮಿಸವಿಾಪವಲ್ಲಿ ಕೂತಂಥ ಹುಡುಗರು ಬೀದೇ ಪ್ರಕಾರದ ತಪ್ಪನ್ನು ಮಾಡಿರುವರೋ, ಅವರು ಮಾಡಿದ ರೀತಿಗಳೂ ಉತ್ತರಗಳೂ ಬಂದಕ್ಕೊಂದು ಪೂರಾ ಹೋಲುವವೋ ಎಂಬದನ್ನು ಜಾಗ್ರತೆಯಿಂದ ನೋಡುತ್ತಿರಬೇಕು. ಇದರಿಂದ ಹುಡುಗರಲ್ಲಿ ಸತ್ಯವಂತಿಕೆ, ಸ್ವಾವಲಂಬನೆ ಎಂಬ ಮೇಲಾದ ಗುಣಗಳು ಎಷ್ಟರಮಟ್ಟಿಗೆ ಹುಟ್ಟಿರುತ್ತವೆಂಬದು ಮಾಸ್ತರರಿಗೆ ತಿಳಿಯುವದು.

೭. ಹುಡುಗರು ದಿನಾಲು ಕೈಕಾಲು ಮೋರೆಗಳನ್ನು ತೊಳಕೊಂಡು ಸ್ವಚ್ಛವಾದ ಉಡುತೊಡಿಗೆಗಳನ್ನು ಹಾಕಿಕೊಂಡು ಬರುತ್ತಾರೋ ಇಲ್ಲೋ ಎಂಬದನ್ನು ಲಕ್ಷಪೂರ್ವಕವಾಗಿ ನೋಡುತ್ತಿರಬೇಕು. ಬೆಲೆಯುಳ್ಳ ಒಟ್ಟೆಗಳು ಇರಲಿಕ್ಕೆಬೇಕೆಂಬ ಅರ್ಥವಲ್ಲ; ಆದರೆ ಇದ್ದಬಟ್ಟೆಗಳೇ ಸ್ವಚ್ಛವಾಗಿರಬೇಕು. ಅಭ್ಯಾಸದ ಉಪಕರಣಗಳು ಅಂದರೆ ಪಾಟಿ, ಪೆನಸಿಲು, ಪುಸ್ತಕ ಮುಂತಾದವುಗಳು ಅವರ ಹತ್ತರ ಇರುತ್ತವೆಯೋ, ಬಂದು ಅಭ್ಯಾಸವು ಮುಗಿದಕೂಡಲೆ ಅವರು ತಮ್ಮ ತಮ್ಮ ಬಡಿವೆಗಳನ್ನು ವ್ಯವಸ್ಥಿತವಾಗಿ ತಕ್ಕಸ್ಥಳದಲ್ಲಿಟ್ಟು ಮತ್ತೊಂದು ಪಾಠದ ಸಾಹಿತ್ಯಗಳನ್ನು ಜಾಗ್ರತೆಯಿಂದ ತೆಗೆದುಕೊಳ್ಳುವರೋ, ನಕಾಶಗಳನ್ನು ಕೆಡದಂತೆ ಉಪಯೋಗಿಸುವರೋ, ಇವೇ ಮುಂತಾದ ಸಂಗತಿಗಳನ್ನು ನೋಡುತ್ತಿರಬೇಕು. ಇದರಿಂದ ಹುಡುಗರಲ್ಲಿ ಸ್ವಚ್ಛತೆ, ಓರಣ, ಕೆಲಸವಲ್ಲಿ ಪ್ರೀತಿ, ಮುಂತಾದ ಗುಣಗಳು ಎಷ್ಟರಮಟ್ಟಿಗೆ ಹುಟ್ಟಿರುತ್ತವೆಂಬದು ತಿಳಿಯುವದು. ಸಾಲಿಯ ಅಂಗಳವೂ ಅದರ ಸುತ್ತುಮುತ್ತಲಿನ ಸ್ಥಳವೂ ಹಸನು ಇರುವದೋ, ವಿದ್ಯಾರ್ಥಿಗಳು ಗೊತ್ತು ಮಾಡಿಟ್ಟ ಸ್ಥಳದ

ಲ್ಲಿ ಮೂತ್ರಕ್ಕೆ ಹೋಗುವರೋ, ಹೊರಗೆ ಹೋದಾಗ್ಗೆ ಸಾಲೆಯ ಗೋಡೆಯ ಮೇಲೆ ಖಡು, ಬಳಪ ಹೆಸಸಿಲು ಇವುಗಳಿಂದ ಏನಾದರೂ ಬರೆಯುವರೋ, ಕಾಗದಗಳನ್ನು ಹರಿದು ಅತ್ತಿತ್ತ ಹಾರಿಬಿಡುವರೋ, ಇವುಗಳಿಗೂ ಇಂಥ ಬೇರೆ ಸಂಗತಿಗಳಿಗೂ ಮಾಸ್ತರರು ಲಕ್ಷ್ಯಕೊಡತಕ್ಕದ್ದು. ಇವುಗಳನ್ನು ಶಿಕ್ಷೆಯ ಭೀತಿಯಿಂದ ನಿಲ್ಲಿಸಿದಷ್ಟಕ್ಕೆ ಶಿಕ್ಷಕರ ಕೆಲಸವು ತೀರದು. ಸದ್ಬೋಧದಿಂದ ಈ ಕೆಲಸಗಳು ಕೆಟ್ಟವೆಂದು ಮನಗಾಣಿಸಿಕೊಟ್ಟು, ಅವರ ಮನಸು ಈ ಕೆಲಸಗಳಿಗೆ ಒಲಿಯದಂತೆ ಶಿಕ್ಷಕರು ಮಾಡತಕ್ಕದ್ದು.

೩. ಹುಡುಗರು ಮಾಸ್ತರರಿಗೂ, ಮೇಲಾಧಿಕಾರಿಗಳಿಗೂ, ಊರೊಳಗಿನ ಸಭ್ಯಗೃಹಸ್ಥರಿಗೂ ತಾಯಿತಂದೆಗಳಿಗೂ ಮಾನಕೊಡುವರೋ ಇಲ್ಲೋ ಎಂಬವನ್ನು ನೋಡಬೇಕು; ಅವರ ಸಂಗಡ ಮರ್ಯಾದೆಯಿಂದ ಮಾತಾಡುವ ಹಾಗೆ ಅಗ್ರಹಪೂರ್ವಕವಾಗಿ ಹೇಳಬೇಕು. ಸಾಲಿ ಬಿಟ್ಟ ಕೂಡಲೆ ಕೈಯೊಳಗಿನ ಪುಟಿಯನ್ನು ಶಿಕ್ಷಕಂತೆ ಬೀಸುತ್ತ ಬುಬ್ಬರನ್ನೊಬ್ಬರು ಬೆನ್ನಟ್ಟುತ್ತ, ಬೈಯುತ್ತ, ಬಡಿದಾಡುತ್ತ, ಬದರಾಡುತ್ತ, ಜೀರಾಡುತ್ತ ಹುಡುದಿ ಹಾಕುತ್ತ, ಹೋಗುವರೋ; ಗುರುಹಿರಿಯರ ಮಾತನ್ನು ಲೆಕ್ಕಿಸದೆ ಮನಬಂದಂತೆ ಮಂಗಾಟ ಮಾಡುವರೋ, ಎಂಬವನ್ನು ತಿಳುಕೊಳ್ಳುತ್ತಿರಬೇಕು. ವಾಡಿಕೆಯಾಗಿ ಶಿಕ್ಷೆಯ ಭೀತಿಯಿಂದ ವಿನೇಯತ್ವವನ್ನು ಕಾಯ್ದುಕೊಂಡಿರುವಂಥ ಸಾಲಿಗಳಲ್ಲಿ ಈ ಕುಚೇಷ್ಟೆಗಳು ಕಣ್ಣಿಗೆ ಬೀಳುವವು. ಆದರೆ ಪ್ರೀತಿ ಸದ್ಬೋಧಗಳಿಂದ ಈ ತರದ ನಡಾವಳಿಗೆ ಅವರು ಮೆಚ್ಚದಂತೆಯೂ ಸಣ್ಣ ಸಣ್ಣ ಕೆಲಸಗಳಲ್ಲಿ ಸಹ ತಾಳ್ಮೆಯೂ ಸಭ್ಯತನವೂ ಸ್ವಾಭಿಮಾನವೂ ಅವರಲ್ಲಿ ಕಂಡುಬರುವಂತೆಯೂ

ಸೂಚಿಸುತ್ತವೆ. ಇವುಗಳನ್ನು ಮಾಸ್ತರರು ನಿಲ್ಲಿಸಲು ಯತ್ನಿಸತಕ್ಕದ್ದು. ಅದೇವೇರೆಗೆ ಹಲಿಗೆಗಳನ್ನು ನೋಡುವಾಗ್ಗೆ ಸಮಿಸಮಾಪವಲ್ಲಿ ಕೂತಂಥ ಹುಡುಗರು ಬೇರೇ ಪ್ರಕಾರದ ತಪ್ಪನ್ನು ಮಾಡಿರುವರೋ, ಅವರು ಮಾಡಿದ ರೀತಿಗಳೂ ಉತ್ತರಗಳೂ ಬಂದಕ್ಕೊಂದು ಪೂರಾ ಹೋಲುವವೋ ಎಂಬದನ್ನು ಜಾಗ್ರತೆಯಿಂದ ನೋಡುತ್ತಿರಬೇಕು. ಇದರಿಂದ ಹುಡುಗರಲ್ಲಿ ಸತ್ಯವಂತಿಕೆ, ಸ್ವಾವಲಂಬನ ಎಂಬ ಮೇಲಾದ ಗುಣಗಳು ಎಷ್ಟರಮಟ್ಟಿಗೆ ಹುಟ್ಟಿರುತ್ತವೆಂಬದು ಮಾಸ್ತರರಿಗೆ ತಿಳಿಯುವದು.

೮. ಹುಡುಗರು ದಿನಾಲು ಕೈಕಾಲು ಮೋರೆಗಳನ್ನು ತೊಳಕೊಂಡು ಸ್ವಚ್ಛವಾದ ಉಡುತೊಡಿಗೆಗಳನ್ನು ಹಾಕಿಕೊಂಡು ಬರುತ್ತಾರೋ ಇಲ್ಲೋ ಎಂಬದನ್ನು ಲಕ್ಷಪೂರ್ವಕವಾಗಿ ನೋಡುತ್ತಿರಬೇಕು. ಬೆಲೆಯುಳ್ಳ ಒಟ್ಟಿಗಳು ಇರಲಿಕ್ಕೆಬೇಕೆಂಬ ಅರ್ಥವಲ್ಲ; ಆದರೆ ಇದ್ದಬಟ್ಟಿಗಳೇ ಸ್ವಚ್ಛವಾಗಿರಬೇಕು. ಅಭ್ಯಾಸದ ಉಪಕರಣಗಳು ಅಂದರೆ ಪಾಟಿ, ಪೆನಸಿಲು, ಪುಸ್ತಕ ಮುಂತಾದವುಗಳು ಅವರ ಹತ್ತರ ಇರುತ್ತವೆಯೋ, ಬಂದು ಅಭ್ಯಾಸವು ಮುಗಿದಕೂಡಲೆ ಅವರು ತಮ್ಮ ತಮ್ಮ ಬಿಡಿವೆಗಳನ್ನು ವ್ಯವಸ್ಥಿತವಾಗಿ ತಕ್ಕಸ್ಥಳದಲ್ಲಿಟ್ಟು ಮತ್ತೊಂದು ಪಾಠದ ಸಾಹಿತ್ಯಗಳನ್ನು ಜಾಗ್ರತೆಯಿಂದ ತೆಗೆದುಕೊಳ್ಳುವರೋ, ನಕಾಶಗಳನ್ನು ಕೆಡದಂತೆ ಉಪಯೋಗಿಸುವರೋ, ಇವೇ ಮುಂತಾದ ಸಂಗತಿಗಳನ್ನು ನೋಡುತ್ತಿರಬೇಕು. ಇದರಿಂದ ಹುಡುಗರಲ್ಲಿ ಸ್ವಚ್ಛತೆ, ಓರಣ, ಕೆಲಸದಲ್ಲಿ ಪ್ರೀತಿ, ಮುಂತಾದ ಗುಣಗಳು ಎಷ್ಟರಮಟ್ಟಿಗೆ ಹುಟ್ಟಿರುತ್ತವೆಂಬದು ತಿಳಿಯುವದು. ಸಾಲಿಯ ಅಂಗಳವೂ ಅದರ ಸುತ್ತುಮುತ್ತಲಿನ ಸ್ಥಳವೂ ಹಸನು ಇರುವದೋ, ವಿದ್ಯಾರ್ಥಿಗಳು ಗೊತ್ತು ಮಾಡಿಟ್ಟ ಸ್ಥಳದ

ಲ್ಲಿ ಮೂತ್ರಕ್ಕೆ ಹೋಗುವರೋ, ಹೊರಗೆ ಹೋದಾಗ್ಗೆ ಸಾಲೆಯ ಗೋಡೆಯ ಮೇಲೆ ಖಡು, ಬಳವ ಹೆಸಸಿಲು ಇವುಗಳಿಂದ ಏನಾದರೂ ಬರೆಯುವರೋ, ಕಾಗದಗಳನ್ನು ಹರಿದು ಅತ್ತಿತ್ತ ಹಾರಿಬಿಡುವರೋ, ಇವುಗಳಿಗೂ ಇಂಥ ಬೇರೆ ಸಂಗತಿಗಳಿಗೂ ಮಾಸ್ತರರು ಲಕ್ಷ್ಯಕೊಡತಕ್ಕದ್ದು. ಇವುಗಳನ್ನು ಶಿಕ್ಷೆಯ ಭೀತಿಯಿಂದ ನಿಲ್ಲಿಸಿದಷ್ಟಕ್ಕೆ ಶಿಕ್ಷಕರ ಕೆಲಸವು ತೀರದು. ಸದೊಬ್ಬೀಧದಿಂದ ಈ ಕೆಲಸಗಳು ಕೆಟ್ಟವೆಂದು ಮನಗಾಣಿಸಿಕೊಟ್ಟು, ಅವರ ಮನಸು ಈ ಕೆಲಸಗಳಿಗೆ ಒಲಿಯದಂತೆ ಶಿಕ್ಷಕರು ಮಾಡತಕ್ಕದ್ದು.

೩. ಹುಡುಗರು ಮಾಸ್ತರರಿಗೂ, ಮೇಲಾಧಿಕಾರಿಗಳಿಗೂ, ಊರೊಳಗಿನ ಸಭ್ಯಗೃಹಸ್ಥರಿಗೂ ತಾಯಿತಂದೆಗಳಿಗೂ ಮಾನಕೊಡುವರೋ ಇಲ್ಲೋ ಎಂಬವನ್ನು ನೋಡಬೇಕು; ಅವರ ಸಂಗಡ ಮರ್ಯಾದೆಯಿಂದ ಮಾತಾಡುವ ಹಾಗೆ ಆಗ್ರಹಪೂರ್ವಕವಾಗಿ ಹೇಳಬೇಕು. ಸಾಲಿ ಬಿಟ್ಟ ಕೂಡಲೆ ಕೈಯೊಳಗಿನ ಪಾಟಿಯನ್ನು ಶಿಕ್ಕಂತೆ ಬೀಸುತ್ತ ಬುಬ್ಬರನ್ನೊಬ್ಬರು ಬೆನ್ನಟ್ಟುತ್ತ, ಬೈಯುತ್ತ, ಬಡಿದಾಡುತ್ತ, ಬದರಾಡುತ್ತ, ಚೀರಾಡುತ್ತ ಹುಡುದಿ ಹಾಕುತ್ತ, ಹೋಗುವರೋ; ಗುರುಹಿರಿಯರ ಮಾತನ್ನು ಲಕ್ಷಿಸದೆ ಮನಬಂದಂತೆ ಮಂಗಾಟ ಮಾಡುವರೋ, ಎಂಬವನ್ನು ತಿಳುಕೊಳ್ಳುತ್ತಿರಬೇಕು. ವಾಡಿಕೆಯಾಗಿ ಶಿಕ್ಷೆಯ ಭೀತಿಯಿಂದ ವಿನೇಯತ್ವವನ್ನು ಕಾಯ್ದುಕೊಂಡಿರುವಂಥ ಸಾಲಿಗಳಲ್ಲಿ ಈ ಕುಚೇಷ್ಟೆಗಳು ಕಣ್ಣಿಗೆ ಬೀಳುವವು. ಆದರೆ ಪ್ರೀತಿ ಸದೊಬ್ಬೀಧಗಳಿಂದ ಈ ತರದ ನಡಾವಳಿಗೆ ಅವರು ಮೆಚ್ಚದಂತೆಯೂ ಸಣ್ಣ ಸಣ್ಣ ಕೆಲಸಗಳಲ್ಲಿ ಸಹ ತಾಳ್ಮೆಯೂ ಸಭ್ಯತನವೂ ಸ್ವಾಭಿಮಾನವೂ ಅವರಲ್ಲಿ ಕಂಡುಬರುವಂತೆಯೂ

ಮಾಸ್ತರರು ಅಗ್ರಹ ಪಡತಕ್ಕದ್ದು. ಇದರಿಂದ ಅವರಲ್ಲಿ ವಿನಯವೂ, ದಾಕ್ಷಿಣ್ಯವೂ, ಸ್ವಾಭಿಮಾನವೂ ಹುಟ್ಟುವವು.

೪. ಅವರು ಆಟದ ಸ್ಥಳದಲ್ಲಿದ್ದಾಗ್ಗೆ ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಗಳನ್ನು ಲಕ್ಷವಿಟ್ಟು ಮಾಡುವರೋ ಹಿರೇ ಹುದ್ರಿಗೆ ವಿಧೇಯರಾಗಿ ನಡಕೊಳ್ಳುವರೋ, ಒಬ್ಬರಿಗೊಬ್ಬರು ನೆರವಾಗುವರೋ, ಜತೆಯವರಿಂದಾದ ತಪ್ಪನ್ನು ಕ್ಷಮಿಸಿ ದೊಡ್ಡ ಮನಸ್ಸಿನಿಂದ ನಡಿಯುವರೋ, ವಾದ ಹುಟ್ಟಲಾಗಿ ಪಂಚರ ತೀರ್ಪಿಗೆ ಸಮ್ಮತಿಸುವರೋ, ಇಲ್ಲವೆ ಬಬ್ಬರಮೇಲೊಬ್ಬರು ಬೀಳುವರೋ, ಹಟಹಿಡಿದು ದ್ವೇಷ ಬಳಸುವರೋ ಅದೇಮೇರೆಗೆ ಗಂಡು ಹುಡುಗರು ಹೆಣ್ಣು ಹುಡುಗರ ಸಂಗಡ ಸಭ್ಯತನದಿಂದ ನಡಿಯುವರೋ, ದೊಡ್ಡವರು ಸಣ್ಣವರ ಮಾತನ್ನು ಪ್ರೀತಿಯಿಂದ ನಡಿಸುವರೋ, ಹೆಣ್ಣು ಹುಡುಗರು ಹಿಂದೆ ಬರುತ್ತಿದ್ದರೆ ತಾವು ಬದಿಗಾಗಿ ಅವರಿಗೆ ಹಾದಿಬಿಡುವರೋ, ಆಡಬಂದ ಸಣ್ಣ ಹುಡುಗರನ್ನು ಹಿಂದೆಬಿಟ್ಟು ತಾವು ಹೊರಟು ಹೋಗುವರೋ, ಇಲ್ಲವೆ ಅವರನ್ನೊಡಗೊಂಡು ಹೋಗುವರೋ, ಆಟದ ಸಾಮಾನುಗಳನ್ನು ಅತ್ತಿತ್ತ ಬಿಸಾಟ ಮನೆಯ ಹಾದಿ ಹಿಡಿಯುವರೋ, ಇಲ್ಲವೆ ಅವುಗಳನ್ನು ಎತ್ತಿತಕ್ಕ ಸ್ಥಳದಲ್ಲಿ ಜೋಪಾನದಿಂದ ಬಯ್ದಿಡುವರೋ, ಮುಂತಾದವುಗಳನ್ನು ಎಚ್ಚರದಿಂದ ನೋಡುತ್ತಿರಬೇಕು. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಸ್ವಭಾವವು ತಿಳಿದು ಅವಿನಯ, ತುಂಟುತನ, ಹಟ, ಉರುಮಾರಿತನ, ಮೊದಲಾದ ದುರ್ಗುಣಗಳಿದ್ದರೆ ಅವುಗಳನ್ನು ತಿದ್ದಲನುವಾಗುತ್ತದೆ.

೫. ಶಿಕ್ಷಕರು ತಮ್ಮ ತಮ್ಮ ವರ್ಗದೊಳಗಿನ ಯಾವ ನೊಬ್ಬ ಹುಡುಗನು ನೀತಿಯ ಮಾರ್ಗಕ್ಕೆ ಕುಂದು ತರು

ವಂಥ ತಪ್ಪು ಮಾಡಿದಕೂಡಲೇ ಲಕ್ಷಗೊಟ್ಟು ಅದನ್ನು ತಿದ್ದುವಂತೆ ಮಾಡುವದು ಮುಖ್ಯ ಮಾಸ್ತರರ ಕೆಲಸವಾಗಿದೆ. ಬಹುಶಃ ಮುಖ್ಯ ಮಾಸ್ತರರು ಟ್ರೇನ್ಡರಿರುತ್ತಾರೆ. ಇಂಥವರ ಸಾಲೆಗಳನ್ನು ಅಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳುವದಕ್ಕೆ ಹೋದಾಗ್ಗೆ, ವಿದ್ಯಾರ್ಥಿಗಳು ಬಬ್ಬರ ಪಾಟಿಯಮೇಲಿನದನ್ನು ಮತ್ತೊಬ್ಬರು ಉತಾರಿಸಿಕೊಳ್ಳುವದು, ಬಬ್ಬರಿಗೊಬ್ಬರು ಮಾತಾಡುವದು, ಸನ್ನೆಮಾಡುವದು, ಮುಂತಾದ ಕೃತ್ಯಗಳನ್ನು ಮಾಸ್ತರರು ನೋಡಿದಾಗ್ಯಾದರೂ ನೋಡದವರಹಾಗೆ ಸುಮ್ಮನಿರುತ್ತಾರೆ; ಇಷ್ಟೇ ಅಲ್ಲ, ಅಧಿಕಾರಿಗಳು ಬಮ್ಮೊಮ್ಮೆ ತಾವೇ ನೋಡಿ ಮಾಸ್ತರರಿಗೆ ತಿಳಿಸಿದರೆ ಸಹ ಅವಕ್ಕೆ ಬಪ್ಪಿಕೊಳ್ಳದೆ ಸುಮ್ಮನೆ ಇತ್ತಂಡವಾದ ಮಾಡುತ್ತ ಕೂಡ್ರುವದು ನಮಗೆ ಗೊತ್ತುಂಟು. ಇದು ಎಷ್ಟು ಆಯೋಗ್ಯವೆಂಬವದನ್ನು ಪ್ರತಿಯೊಬ್ಬ ಮಾಸ್ತರನೇ ವಿಚಾರಿಸತಕ್ಕದ್ದು. ವಿದ್ಯಾರ್ಥಿಗಳು ಕಲಿತ ವಿಷಯಗಳಲ್ಲಿ ಬಂದು ವೇಳೆ ನಾವಾಸಾದರೆ ಸಾಲೆಗೆ ಕುಂದು ಬರದು; ಆದರೆ ಅವರು ಅಪ್ರಮಾಣಿಕರೂ ಮೋಸಗಾರರೂ ಎಂದು ಕಂಡುಬಂದರೆ ಸಾಲೆಗೂ ಶಾಲಾಮಾಸ್ತರರಿಗೂ ಅವರ ಶಿಕ್ಷಣಕ್ಕೂ ಕುಂದು ತಪ್ಪದು.

೬. ಅಭ್ಯಾಸ ನಡೆದಾಗ ವಿದ್ಯಾರ್ಥಿಗಳು ಉತ್ಸಾಹವುಳ್ಳವರೂ ಮನಸ್ಸುಗೊಟ್ಟು ಕಲಿಯುವವರೂ ತಮ್ಮ ಕೆಲಸಗಳನ್ನು ಕೈಲಾವಮಟ್ಟಿಗೆ ತಾವೇ ಮಾಡಲಿಕ್ಕೆ ಹವಣಿಸುವವರೂ ಇರುವರೋ, ಇಲ್ಲವೆ ಸೋಮಾರಿಗಳಾದದರಿಂದ ಅವರಿಗೆ ಕೆಲಸವನ್ನು ತೀವ್ರಮಾಡಿರಿ ಎಂದು ಮೇಲಿಂದಮೇಲೆ ಹೇಳಬೇಕಾಗುವದೋ, ಕಾಲುಮೇಜುಗಳನ್ನಪ್ಪಳಿಸಿ ಸಿಟ್ಟು ಮಾಡಿ ಅಭ್ಯಾಸಕ್ಕೆ ಲಕ್ಷಗೊಡಿರೆಂದು ಹೇಳಬೇಕಾ

ಗುವದೋ, ವಿದ್ಯಾರ್ಥಿಗಳು ಅಪ್ಪಣೆ ಇಲ್ಲದೆ ನಡುನಡುವೆ ಹೊರಟು ಹೋಗುವರೋ, ಈ ಸಂಗತಿಗಳಿಗೆ ಲಕ್ಷಗೊಡ ಬೇಕು. ಕೆಲವು ಮಾಸ್ತರರು ಶುದ್ಧ ಬರಿಸುವಾಗ್ಗೆ ತೀರ ಸೋ ಮಾರಿಯಾದ ಹುಡುಗನು ಬರೆಯುವತನಕ ಹಾದೀ ನೋ ಡಿ, ಬರೆಯ ಹೇಳುತ್ತಿರುತ್ತಾರೆ, ಇದರಿಂದ ಅವನು ಚುರು ಕನಾಗುವದಕ್ಕೆ ಬದಲಾಗಿ ಲಕ್ಷಗೊಡುವಂಥ ಹುಡುಗರು ಸಹ ದುರ್ಲಕ್ಷ ಮಾಡಹತ್ತುತ್ತಾರೆ.

೭. ವಿದ್ಯಾರ್ಥಿಗಳು ಚುರುಕರೂ ಚಟುವಟಿಕೆಯುಳ್ಳವ ರೂ ಇರುತ್ತಾರೋ ಅಥವಾ ಸೋಮಾರಿಗಳಾಗಿ ಹೊಯಿದಾ ಡುತ್ತ ಶರೀರಾಭಿವೃದ್ಧಿಗೆ ಅಪಾಯವಾಗುವಹಾಗೆ ಕಾಲು ಮುದುಡಿಕೊಂಡು ಕಾಲುಮೇಲೆ ಕಾಲು ಹೇರಿಕೊಂಡು, ಇಲ್ಲವೆ ಬುಬ್ಬರಮೇಲೊಬ್ಬರು ಬರಿಗಿಕೊಂಡು ಕೂಡ್ರುವ ರೋ ಎಂಬವನ್ನು ನೋಡುತ್ತಿರಬೇಕು.

ಮೇಲಿನ ಸೂಚನೆಗಳಿಂದ ನೀತಿ ಶಿಕ್ಷಣದ ಕೆಲಸವಲ್ಲಿ ಮಾಸ್ತರರಿಗೆ ತಕ್ಕಮಟ್ಟಿಗೆ ಸಹಾಯವಾಗಬಹುದೆಂದು ನೆನ ಸುತ್ತೇವೆ. ಇವರಲ್ಲಿ ವಿವರಿಸಿವ ಗುಣಗಳು ವಿದ್ಯಾರ್ಥಿಗಳಿಗೆ ಹತ್ತಬೇಕಾದರೆ ಶಿಕ್ಷಕರಾದರೂ ನೀತಿವಂತರೂ, ಬುದ್ಧಿವಂ ತರೂ, ಕರ್ತವ್ಯನಿಷ್ಠರೂ ಮನಮುಟ್ಟಿ ಕೆಲಸ ಮಾಡುವ ವರೂ ಇರಲಿಕ್ಕೆ ಬೇಕು. ಸೃಷ್ಟ ಪದಾರ್ಥಗಳಿಗೂ ಕೃತ್ರಿ ಮ ಪದಾರ್ಥಗಳಿಗೂ ಇರುವ ಭೇದವನ್ನೂ, ಸೃಷ್ಟ ಪದಾ ರ್ಥಗಳ ಪೂರ್ಣತ್ವವನ್ನೂ ಪರಸ್ಪರ ಪ್ರಯೋಜಕತ್ವವ ನ್ನೂ, ಆ ಪದಾರ್ಥಗಳ ನಿರ್ಮಿಸಿದವನ ಅತರ್ಕ್ಯವಾದ ಜಾ ಣ್ಮೆಯನ್ನೂ ವಿದ್ಯಾರ್ಥಿಗಳಿಗೆ ಯಾವಾಗಲೂ ಅವರು ಬಿಡಿ ದು ಹೇಳುತ್ತಿರಬೇಕು. ಸೃಷ್ಟ ಪದಾರ್ಥಗಳ ನಿಯಮಾ ನುಸರಣವನ್ನು ಮತ್ತು ಪರಸ್ಪರ ಪ್ರಯೋಜಕತ್ವವನ್ನು

ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆಲೆಗೊಳಿಸಿದರೆ ಸೃಷ್ಟಿಯಲ್ಲಿ ಶ್ರೇಷ್ಠವಾದ ಮನುಷ್ಯನೆಂಬ ತಮ್ಮ ಬಿರುದಿಗೆ ತಕ್ಕಂತೆಯೂ ಸೃಷ್ಟಿಕರ್ತನ ಉದ್ದೇಶಕ್ಕೆ ಅನುರೂಪವಾಗಿಯೂ ಅವರು ನಡೆಯುವರು ಅಂದರೆ ಸ್ವಪರಹಿತಸಾಧಕರೂ, ಪರೋಪಕಾರಪ್ರಿಯರೂ, ಪರಪೀಡಾ ಪರಾಙ್ಮುಖರೂ, ಧಾರ್ಮಿಕರೂ ಆಗುವರೆಂಬದಕ್ಕೆ ಸಂದೇಹವಿಲ್ಲ.

HISTORY.

ಇತಿಹಾಸ.

(೬೪ನೇ ಪುಟದಿಂದ ಮುಂದೆ ಸಾಗಿದ್ದು.)

ಮೇಲೆ ಹೇಳಿರುವಂಥ ಸತ್ಪುರುಷರು ಯಾವದಾವದರೊಂದು ದೇಶದೊಳಗೆ ದೇವರ ಅಂತಃಕರಣದಿಂದ ಒಮ್ಮೊಮ್ಮೆ ಹುಟ್ಟುತ್ತಾರೆ. ಅನೇಕ ಜನರು ಅವರ ವರ್ತನಕ್ರಮವನ್ನು ನೋಡಿಕೊಂಡು ಅದರಂತೆ ತಾವೂ ನಡೆದು ಹೆಸರಿಗೆ ಬರುತ್ತಾರೆ. ಅವರು ತೀರಿದರೆಂದರೆ ಆಗಿ ಹೋಯಿತು. ಇತಿಹಾಸ, ಚರಿತ್ರ ಮುಂತಾದವುಗಳನ್ನು ಬರೆದಿಡುವ ಸಾಂಪ್ರದಾಯವಿಲ್ಲದಿದ್ದರೆ ೫೦।೬೦ ವರ್ಷಗಳಲ್ಲಿಯೇ ಅವರ ಸುದ್ದಿಯು ಸಹ ಯಾರಿಗೂ ಇಲ್ಲದಂತೆ ಆಗಿಹೋಗುವದು. ಆ ಮೇಲೆ ಮುಂದಿನ ಸಂತತಿಯವರಲ್ಲಿ ಉತ್ಸಾಹ ಹುಟ್ಟುವ ಬಗೆಹ್ಯಾಗೆ? ಮತ್ತು ಆ ದೇಶದ ಹಿಂದಿನ ಗೌರವವು ಹ್ಯಾಗೆ ಸ್ಥಿರವಾಗಿ ನಿಲ್ಲುವದು? ಇತಿಹಾಸದಿಂದ ಬೇರೆ ಉಪಯೋಗವೇನು ಇಲ್ಲವೆಂದು ಭಾವಿಸಿದರೂ ಇದೊಂದು ಉಪಯೋಗವು ಕಡಿಮೆ ಯೋಗ್ಯತೆಯುಳ್ಳದ್ದೋ? ಹೋಮರನೆಂಬ ಕವಿಯು ಅಕಿಲೀಸನ ಪರಾಕ್ರಮಗಳನ್ನು ಬಣ್ಣಿಸದಿದ್ದರೆ ಜಗದ್ವಿಖ್ಯಾತನಾದ ಸಿಕಂದರನು ಹೆಸರಿಗೆ ಬರುತ್ತಿದ್ದನೋ? ವ್ಯಾಸನು ಪಾಂಡವರ ಕೌರ್ಯಾದಿ

ಯೊಂದಿ ಗುಣಗಳನ್ನು ವರ್ಣಿಸದಿದ್ದರೆ, ಶಿವಾಜಿಯು ಸಾಹಸ ವೂತಿ ಮುಸಲ್ಮಾನರಿಂದ ರಾಜ್ಯಲಕ್ಷ್ಮಿಯನ್ನು ತಿರುಗಿ ಕಸುಕೊಳ್ಳುತ್ತಿದ್ದನೋ? ತಿಕಂದರನ ಚರಿತ್ರವೇ ಇಲ್ಲದಿದ್ದರೆ ಸೀರಘರನು ಇಷ್ಟು ಹೆಸರು ಪಡಿಯುತ್ತಿದ್ದನೋ? ಸೀಝರನ ಇತಿಹಾಸವು ಇಲ್ಲದಿದ್ದರೆ ನೆಪೋಲಿಯೇನನ ಕೀರ್ತಿಯು ಇಷ್ಟು ಹಬ್ಬುತ್ತಿತ್ತೊ? ಶಿವಾಜಿಮಹಾರಾಜನ ಹೆಸರು ಅವನ ಹಿಂದೆ ಉಳಿಯದಿದ್ದರೆ, ಅವನ ಮಗನು ಕೊಲ್ಲಲ್ಪಟ್ಟ ರಾಜಸಂತತಿಯೂ ರಾಜಧಾನಿಯೂ ವೈರಿಗಳ ಕೈಸೇರಿ ದೇಶವೆಲ್ಲ ವಿಲ್ಲೀಂಭವಿಯವಾದಾಗ್ಯೂ ಮರಾಠೀ ಜನರು ದಿಲ್ಲಿಯ ಅವರಂಗಜೇಬ ಬಾದಶಹನನ್ನು ಜೇರಿಗೆ ತಂದು ಜೀವಾ ಉಳಿಸಿಕೊಳ್ಳುವದಕ್ಕೆ ಅಹಮದನಗರಕ್ಕೆ ಅವನು ಓಡಿ ಹೋಗುವಂತೆ ಮಾಡುತ್ತಿದ್ದರೋ? ದೊಡ್ಡ ಜಾಜೀರಾಯನು ದಾಭಾಡೇನು ಎಬ್ಬಿಸಿದ ಬಂಡನ್ನು ಅಣಗಿಸಿ ವೊಗಲ ಸರದಾರನ ಹೆಮ್ಮೆಯನ್ನೂ ಹೈದರಾಬಾದದ ನಿಜಾಮನ ಸೊಕ್ಕನ್ನೂ ಮುರಿಯುತ್ತಿದ್ದನೋ? ರಘುನಾಥರಾಯನು ಗಿಲಚಿಯರನ್ನು ಬೆನ್ನಟ್ಟಿ ಅಟಕ್ಕದ ಆಚೆಗೆ ಓಡಿಸಿ ಬಿಡುತ್ತಿದ್ದನೋ? ಇಡೀ ಜಗತ್ತಿಗೆ ಮಿಗಿಲಾದ ಇಂಗ್ಲಿಷರಿಗೆ ಸಹ ಹಣಿಯದಂಥ ಹೈದರನನ್ನು ದೊಡ್ಡ ಮೂಢವರಾಯನು ಬಾರಿಬಾರಿಗೆ ಬೆನ್ನಟ್ಟಿ ದಿಕ್ಕಾಪಾಲಾಗಿ ಓಡಿಸುತ್ತಿದ್ದನೋ? ಪುಕ್ಕನೂ ತಿಳಿಗೇಡಿಯೂ ಎಂದು ಹೆಸರಾದ ಕಡೇ ಪೇಶವೆಯು ತನ್ನ ಅರಸುಮನೆತನಕ್ಕೆ ಕುಂದು ತಂದು ಪಲಾಯನ ಹೇಳಿಸಿದಾಗ್ಯಾದರೂ ವೈರಿಗಳ ಮೇಲೆ ಒಬ್ಬನೇ ಸಾಗಿಹೋದಂಥ ಆ ಅಸಹಾಯಶೂರನಾದ ಬಾಪೂಗೋಖಲೇನು ಅಷ್ಟಿಯ ಕಡುಭಯಂಕರವಾದ ರಣವನ್ನಿ ಹೋರಾಡಿ ಬಿದ್ದು ಸಾಯುತ್ತಿದ್ದನೋ? ಈ ಅತ್ಯದ್ಭುತವಾದ ಕೃತ್ಯಗಳೆಲ್ಲ ಅನುಕರಣದ ಫಲಗಳಾಗಿವೆ.

ಈ ಜನರು ಆಗಿ ಹೋದ ಮೇಲೆ ಕಾಲಾವಧಿಯಿಂದ ಅವರ ನೆನಪು ಸಹ ಉಳಿಯುವದಿಲ್ಲ; ಆದರೆ ಇಂಥವರ ಹೆಸರು ಬಹುಕಾಲ ಉಳಿಯಲಿಕ್ಕೆ ಇತಿಹಾಸವು ಅಗತ್ಯವುಳ್ಳದ್ದದೆ. ಬಂದು ಮೇಳೆ ದೇಶದ ಸ್ಥಿತಿಯು ತೀರಾ ಬದಲಾಗಿ ಹೋದರೂ ಅನವ ಚರಿತ್ರಗಳನ್ನು ಓದಿಕೊಂಡು ಮುಂದೆ ಯಾರಿಗಾದರೂ ಹುರುಪು ಹುಟ್ಟಬಹುದು. ಪ್ರಾಚೀನಕಾಲದ ಗ್ರೀಕ ರೋಮನ ರಾಜ್ಯಗಳೂ ಇತ್ತಕಡಿಯ ಇಂಗ್ಲಂಡ ಫ್ರಾನ್ಸ ಮುಂತಾದ ರಾಜ್ಯಗಳೂ ಇಷ್ಟು ದಿವಸಗಳವರೆಗೆ ಸ್ಥಿರವಾಗಿ ನಿಂತದ್ದಕ್ಕೆ ಇತಿಹಾಸವು ಬಹು ಮುಖ್ಯಕಾರಣವಾಗಿರುತ್ತದೆಂಬದಕ್ಕೆ ಸಂಶಯವಿಲ್ಲ. ಎಲ್ಲ ದೇಶಗಳಲ್ಲಿ ಶೂರರೂ ರಾಜ್ಯ ಕಾರ್ಯಧುರಂಧರರೂ ಉಂಟಾಗಲಿಕ್ಕೆ ಅನುಕೂಲವಿರುವದಿಲ್ಲೆಂದು ಕೆಲವರ ಮತ ಉಂಟು, ಇದು ಸತ್ಯವದೆ. ಇಷ್ಟರಿಂದಲೇ ಇತಿಹಾಸವ ಉಪಯೋಗವು ಗೌಣವಾದದ್ದೆಂದು ಅನ್ನಕೂಡದು. ಸಾವಿರಗಟ್ಟಲೆ, ಬಮ್ಮೊಮ್ಮೆ ಲಕ್ಷಗಟ್ಟಲೆ ಜನರು ಗುರುವಿನ ಉಪಗ್ರಹಗಳನ್ನೂ ಶನಿಯ ವಲಯವನ್ನೂ ದುರ್ಬೀನಿನೊಳಗಿಂದ ಆಗಾಗ್ಗೆ ನೋಡುತ್ತಾರೆ. ಇದರಿಂದ ಆ ಉಪಗ್ರಹಗಳೂ ಆ ವಲಯವೂ ತಮ್ಮ ವಶವಾಗುವಂತೆ ಅವರಿಗೆ ತೋರುತ್ತಿರುತ್ತದೆಯೋ? ಇಲ್ಲ. ಉಪಗ್ರಹಗಳನ್ನೂ ವಲಯಗಳನ್ನೂ ನೋಡಿ ಸೃಷ್ಟಿಕರ್ತನ ಚಾತುರ್ಯವು ಅವರ ಮನಸಿನಲ್ಲಿ ಬಿಂಬಿಸುವದರಿಂದಾಗುವ ಲಾಭವು ಅವುಗಳು ವಶವಾಗುವದರಿಂದಾಗುವ ಲಾಭಕ್ಕಿಂತ ಸಾವಿರ ಪಾಲು ಹೆಚ್ಚಾದದ್ದಲ್ಲವೋ? ಇದೇಮೇರೆಗೆ ವಿಕಂದರಬಾವಶಹನ ಅಥವಾ ಶಿವಾಜಿಯ ಪರಾಕ್ರಮಗಳನ್ನೂ ಸಾಮರ್ಥ್ಯವನ್ನೂ ಓದಿದರೆ, ಮನುಷ್ಯನ ಬುದ್ಧಿ ಬಲವು ಎಷ್ಟು ಇರುತ್ತದೆಂಬದೂ, ಬಮ್ಮೊಮ್ಮೆ ಒಬ್ಬ ಮನುಷ್ಯನೇ ಅಪರಿಮಿತ ಜನರ ಬಳಿತು ಹೀನಗಳಿಗೆ ಹ್ಯಾಗೆ ಕಾರಣ

ನಾಗುತ್ತಾನೆಂಬದೂ ಸ್ಪಷ್ಟವಾಗಿ ತಿಳಿಯುವದು. ನೋಡಿರಿ, ಇಡೀ ಯುರೋಪ ಖಂಡವು ಅಂಕಿತವಾದಾಗ್ಯೂ ನೆಪೋಲಿಯೋನನ ಆಶೆಯು ಕಡಿಮೆಯಾಗದೆ ಮತ್ತೂ ಹೆಚ್ಚಾಯಿತು. ಕಟ್ಟಕಡಿಗೆ ಐದೂವರಿ ವರ್ಷದಲ್ಲಿಯೇ ಅವನ ಹಾಡು ಏನಾಯಿತು? ದೊಡ್ಡ ದೊಡ್ಡ ಅರಸರನ್ನು ಸಹ ಮಣ್ಣು ಮುಕ್ಕಿಸಿದಂಥ ಆ ನೆಪೋಲಿಯೋನನು ದೈವಗತಿಯೊಂದು ಪ್ರತಿಕೂಲವಾದಕೂಡಲೆ ಒಂದು ಮೂಲೆಯೊಳಗಿನ ನಡುಗಡ್ಡೆಯಲ್ಲಿ ಹೋಗಿ ಬೀಳಬೇಕಾಯಿತು. ಅವನು ಜೀವಂತನಿರುವಾಗ್ಗೆ ಅವನಶರೀರವನ್ನು ನೋಡಿದಕೂಡಲೆ ಇಡೀ ಯುರೋಪ ಖಂಡವು ಗದಗುಟ್ಟಿ ನಡಗುತ್ತಿತ್ತು. ಆದರೆ ಸತ್ತಮೇಲೆ ಅವನ ಶರೀರವನ್ನು ಅವನ ರಾಜಧಾನಿಯಲ್ಲಿಯೇ ಹೂಳಿಡಬೇಕಾದರೆ ಅವನ ಹಗೆಗಳ ಅಪ್ಪಣೆಯನ್ನು ಪಡೆಯಬೇಕಾಯಿತು! ಹರಹರಾ! ಲಕ್ಷಾವಧಿಜನರನ್ನು ನಾಶಮಾಡಿ ಅವನು ತನ್ನೊಂದಿಗೆ ಏನು ಕಟ್ಟಕೊಂಡು ಹೋದನು? ಇಷ್ಟು ಅಗಾಧವಾದ ಬುದ್ಧಿಬಲಕ್ಕೆ ತುಸುವಾದರೂ ಪರೋಪಕಾರವ ಸಂಸರ್ಗವಿದ್ದರೆ ಈ ಜಗತ್ತಿಗೆ ಎಷ್ಟು ಹಿತವಾಗುತ್ತಿತ್ತು? ಶಿವಾಜಿಮಹಾರಾಜನ ಚರಿತ್ರವನ್ನು ನೋಡಿರಿ; ತಂದೆಯು ಅವನನ್ನು ಅವನ ತಾಯಿಯೊಂದಿಗೆ ವಾನವಡಿಯಲ್ಲಿ ಇಟ್ಟರಲು, ದಾದೋಜಿಕೊಂಡದೇವನು ಕಲಿಸಿದ ತುಸು ವಿದ್ಯದಿಂದಲೇ ಅವನು ಎಷ್ಟು ಅತ್ಯದ್ಭುತವಾದ ಕಾರ್ಯಗಳನ್ನು ಮಾಡಿದನು! ಸುಮಾರು ಸಾವಿರ ವರ್ಷಗಳವರೆಗೆ ಅಸ್ತಂಗತವಾದಂಥ ಹಿಂದು ಜನರ ರಾಜ್ಯವೈಭವವು ಪುನಃ ಮೂವಳವ ಗುಡ್ಡದಮೇಲೆ ಉದಯಿಸಿತು! ಅವನ ಜೀವದ ಗೆಳೆಯರಾದ ತಾನಾಜಿ ಮತ್ತು ಸೂರ್ಯಾಜಿ ಎಂಬವರು ಥರಮೂಪಿಲಿಯ ಕಾಳಗದಲ್ಲಿ ಹೆಸರು ಪಡೆದ

ಟಿಯೋನಿದಾಸನೆಂಬ ಕಲಿಯನ್ನು ಸಹ ನಾಚಿಸಿದರು! ಇಡೀ ಪೃಥ್ವಿಯಲ್ಲಿ ಕೀರ್ತಿಗೊಂಡಂಥ ಮತ್ತು ಮೊಗಲ ಸಾಮ್ರಾಜ್ಯದ ಆಗರವಾದಂಥ ದಿಲ್ಲಿಯ ಪಟ್ಟಣವನ್ನು ಸಹ ಅವನು ಎರಡು ಸಾರೆ ನಿರ್ಭಯದಿಂದ ಸುಲಿದನು. ವಿಜಾ ಪುರವನ್ನೆಂತು ಹೌ ಹೌ ಆನ್ನುವದರೊಳಗಾಗಿ ಹಾಳುಮಾ ಡಿ ಶಿವಾಜಿ ಎಂಬುವವನು ಬಬ್ಬನೋ ಇಬ್ಬರೋ ಎಂಬ ಭ್ರಾಂತಿಯು ಗರ್ವದಿಂದ ಮುದವೇರಿದ ಆ ಮ್ಲೆಂಛರಿಗೆ ಬೀಳುವಂತೆ ಮಾಡಿಬಿಟ್ಟನು. ಇದು ಎಂಥ ಶೌರ್ಯದ ಕೆಲಸವು! ಇದಕ್ಕೂ ಹೆಚ್ಚು ಸ್ತುತಿಗೆ ಪಾತ್ರವಾದ ಇನ್ನೊಂ ದು ಅವನಲ್ಲಿದ್ದ ಗುಣವೇನೆಂದರೆ ಸದಾಚರಣಪ್ರೀತಿಯು. ಸ್ಥೂಲವಾಗಿ "ಲಾಭಾಲ್ಲೋಭಃ ಪ್ರವರ್ತತೇ" ಅಂದ ರೆ ಲಾಭವು ಹೆಚ್ಚಿಚ್ಚು ಆದಂತೆ ಲೋಭವು ಹೆಚ್ಚಿಚ್ಚಾಗು ತ್ತ ಹೋಗುತ್ತದೆ. ಆವದರಿಂದ ಇದ್ದಷ್ಟರಲ್ಲಿಯೇ ತೃಪ್ತ ನಾಗಿರುವ ಕೂಲಿಕಾರನು ಸಹ ದೊಡ್ಡ ದೊಡ್ಡ ಅರಸರಿಗಿಂ ತ ಸಂತುಷ್ಟನಾಗಿರುವನು; ಎಂಬ ಮಾತಿಗೆ ಎನೂ ಸಂಶಯ ವಿಲ್ಲ. ಈ ಮೇರೆಗೆ, ಹಿತದ ಅನೇಕ ಸಂಗತಿಗಳು ಮನ ಸಿನಲ್ಲಿ ಅಂಕುರಿಸಿದರೆ ಅವರಿಂದ ಮನುಷ್ಯನಿಗೆ ದೊಡ್ಡ ಅಧಿಕಾರ ಪ್ರಾಪ್ತಿಗಿಂತ ಹೆಚ್ಚು ಲಾಭವಾಗಲಿಕ್ಕಿಲ್ಲವೋ? ಮೇಲೆ ಹೇಳಿದ ಯಾವತ್ತು ಕಾರಣಗಳಿಂದ ಇತಿಹಾಸವನ್ನು ಓದುವದರಿಂದ ಮನಸಿಗೆ ಉನ್ನತಿಯೂ ಸಮಾಧಾನವೂ ದೊರಕುತ್ತವೆ.

ಇತಿಹಾಸದಿಂದ ಆಗುವ ನಾಲ್ಕನೇ ಲಾಭವೇನೆಂದರೆ:— ಮನೋರಂಜನವು. ಬೇರೆ ಬೇರೆ ದೇಶಗಳಲ್ಲಿ ಸಂಭವಿಸಿದಂ ಥ ವೃತ್ತಾಂತಗಳನ್ನು ತಿಳುಕೊಳ್ಳುವವರಿಂದಲೂ ಅದರ ಬ ಗ್ಗೆ ವಿಚಾರ ಮಾಡುವವರಿಂದಲೂ ಮೇಲೆ ವಿವರಿಸಿದಂತೆ

ಜಿಜ್ಞಾಸಾವೃತ್ತಿಯು ಸಮಾಧಾನ ಹೊಂದುವದಂತು ನಿಜವೇ; ಮತ್ತು ಇತಿಹಾಸವು ತಕ್ಕ ಕೌಶಲ್ಯದಿಂದ ಬರಿಯಲ್ಪಟ್ಟಿದ್ದರೆ ಅವನ್ನು ಓದುವದರಿಂದ ಸಂತೋಷವಾದರೂ ಆಗುತ್ತದೆ. ಈ ಮೂದರಿಯ ಇತಿಹಾಸದ ಗ್ರಂಥಗಳು ಗ್ರೀಕ, ಲಾತಿನ್, ಫಾರ್ಸೀ ಭಾಷೆಗಳಲ್ಲಿ ಉಂಟು. ಇತ್ತಿತ್ತಲಾಗಿ ಹ್ಯೂಮ್ ಗಿಬನ್ ಮೆಕಾಲೆ ಎಂಬ ಹೆಸರಾದ ಗ್ರಂಥಕಾರರು ಬರೆದ ಇಂಗ್ಲಿಷ ಇತಿಹಾಸಗಳು ಬಣ್ಣಿಸತಕ್ಕ ಗ್ರಂಥವುಗಳಾಗಿವೆ. ಇಂಥ ಇತಿಹಾಸಗಳ ಭಾಷಾಸರಣಿ, ಯಥಾಸ್ಥಿತ ಗ್ರಂಥರಚನೆ, ಕಥಾನಕವ ಸಂಬಂಧ, ವೌಢವಿಚಾರ, ತರತರದ ಸಂಗತಿಗಳನ್ನು ನಡುನಡುವೆ ಸೇರಿಸುವ ಜಾಣತನ, ಇವು ಹೆಚ್ಚು ಕಡಿಮೆ ಇದ್ದಂತೆ ಗ್ರಂಥಗಳು ಜನರಿಗೆ ಹೆಚ್ಚು ಕಡಿಮೆ ಪ್ರಿಯವಾಗುತ್ತವೆ.

(ಮುಂದಕ್ಕೆ ಸಾಗುವದು)

MAXIMS.

ಹಿತ ವಚನಗಳು.

ನ್ಯೂಆರ್ಲೀನ್ಸ್ ಪಟ್ಟಣದಲ್ಲಿಯ ಜೌನ್ ಎಮ್ ಡೊನಾಗ್ ಎಂಬವನೊಬ್ಬ ಹೆಸರಾದ ಕೋಟ್ಯಾಧೀಶನು ಕೆಳಗೆ ಬರೆದ ನೀತಿಯ ವಚನಗಳನ್ನನುಸರಿಸಿ ತನ್ನ ಆಯುಷ್ಯ ಕ್ರಮವನ್ನು ನಡಿಸಿವಲ್ಲದೆ ಅವುಗಳನ್ನು ತನ್ನ ಗೋರಿಯ ಮೇಲೆಯೂ ಬರಿಸಿದ್ದಾನೆ. ಅವು ಯಾವವೆಂದರೆ:—

೧. ನಿಮ್ಮ ಅಸ್ತಿತ್ವಕ್ಕೆ ಆಧಾರಭೂತವಾದ ಸಂಗತಿಗಳಲ್ಲಿ ದುಡಿಯೋಣವು ಬಂದಾಗಿದೆಂಬ ಮಾತನ್ನು ಮರಿಯಬೇಡಿ. ವೇಳೆಯು ಬಂಗಾರಕ್ಕೆ ಸರಿಯಾವದ್ದು, ಬಂದು ನಿಮಿಷವನ್ನಾದರೂ ವ್ಯರ್ಥಗಳೆಯದೆ ಯಾವಾಗಲು ಕೆಲಸದಲ್ಲಿ ತೊಡಗಿರ್ರಿ.

೨. ಅನ್ಯರು ನಿಮ್ಮನ್ನು ಹ್ಯಾಗೆ ನಡಿಸಿಕೊಳ್ಳಬೇಕೆಂದು

ಬಯಸುತ್ತೀರೋ, ಅದರಂತೆ ನೀವೂ ಅನ್ಯರನ್ನು ನಡಿಸಿಕೊಳ್ಳಿರಿ.

೩. ಈ ಹೊತ್ತಿನ ಕೆಲಸವನ್ನು ನಾಳಿಗೆ ಹಾಕಬೇಡಿರಿ.

೪. ನಿನ್ನ ಕೈಲಾಗುವ ಕೆಲಸವನ್ನು ಮತ್ತೊಬ್ಬರಿಗೆ ಎಂದೂ ಹೇಳಬೇಡಿರಿ.

೫. ಪರರ ಒಡವೆಯನ್ನು ಎಂದೂ ಬಯಸಬೇಡಿರಿ.

೬. ಅಲಕ್ಷ ಮಾಡುವಷ್ಟು ಕ್ಷುಲ್ಲಕವಾದ ಸಂಗತಿಗಳು ಯಾವವೂ ಇಲ್ಲೆಂಬದನ್ನು ಮರಿಯಬೇಡಿರಿ; ಅಂದರೆ ಯಾವದೊಂದು ಸಂಗತಿಯು ಎಷ್ಟೇ ಕ್ಷುಲ್ಲಕವಾಗಿ ತೋರಿದಾಗ್ಯೂ ಅದಕ್ಕೆ ದುರ್ಲಕ್ಷ ಮಾಡಬೇಡಿರಿ.

೭. ನಿನ್ನ ಮೊದಲಿನ ಪ್ರಯತ್ನವು ಕೈಗೂಡದಿದ್ದರೆ ಅಷ್ಟಕ್ಕೆ ಎದೆಗುಂದಿ ಕೈಮುಚ್ಚಿಕೊಂಡು ಕೂಡ್ರಬೇಡಿರಿ.

೮. ನಿಷ್ಪ್ರಯೋಜನದ ಕೆಲಸಕ್ಕೆ ಕೈಹಾಕಬೇಡಿರಿ.

೯. ನಿನ್ನ ಪ್ರಪಂಚದ ಕಾರ್ಯಗಳನ್ನು ನಿಯಮದಿಂದ ನಡಿಸಿರಿ.

೧೦. ನಡಿಯುವ ಕಾಲಕ್ಕೆ ಕೈಲಾದಷ್ಟು ಬಳಿತು ಮಾಡಲಿಕ್ಕೆ ಜಪ್ಪಿಸಿರಿ.

೧೧. ನಿನ್ನ ಸುಖಸಾಧನಗಳಲ್ಲಿ ಯಾವದೊಂದನ್ನು ಕಡಿಮೆ ಮಾಡಿಕೊಳ್ಳಬೇಡಿರಿ; ಆದರೆ ಒಣ ಡಂಭಾಚಾರಕ್ಕೂ ಅಟ್ಟಹಾಸಕ್ಕೂ ಬೀಳಬೇಡಿರಿ.

೧೨. ನೀವು ಜೀವದಿಂದಿರುವ ಮಟ್ಟಿಗೂ ಕರ್ತವ್ಯನಿಷ್ಠರಾಗಿ ನಡಿಯುತ್ತಿರ್ರಿ.

NOTES ON GRAMMAR.

ವಾಕ್ಯಗಳನ್ನು ಪರೀಕ್ಷಿಸುವದೂ, ತಿದ್ದುವದೂ.

ಕನ್ನಡ ಭಾಷೆಯಲ್ಲಿ ಗ್ರಂಥಗಳು ತೀರ ಕಡಿಮೆಯಾಗಿ

ರುವವೆಂಬದು ವಿದ್ಯಾಖಾತೆಯ ಮುಖ್ಯಾಧಿಕಾರಗಳ ಲಕ್ಷಕ್ಕೆ ಬಂದದರಿಂದ ಅವರು ಕನ್ನಡದಲ್ಲಿ ಗ್ರಂಥಗಳನ್ನು ಬರೆಯುವವರಿಗೆ ತುಸು ದಿವಸಗಳಿಂದ ಇತ್ತಲಾಗಿ ಉತ್ತೇಜನ ಕೊಡತೊಡಗಿದ್ದಾರೆ. ಈ ಉತ್ತೇಜನದಿಂದ ವಿದ್ಯಾಖಾತೆಯೊಳಗಿನ ಹಲವು ಜನರು ಗ್ರಂಥಗಳನ್ನು ಬರೆಯಲಿಕ್ಕೆ ಪ್ರಯತ್ನಿಸಹತ್ತಿದ್ದಾರೆ. ಆದರೆ ವ್ಯಾಕರಣದ ನಿಯಮಗಳನ್ನು ಓದಿ ಲಕ್ಷದಲ್ಲಿಟ್ಟು, ಭಾಷಾಪದ್ಧತಿಯನ್ನು ಚನ್ನಾಗಿ ತಿಳಿದುಕೊಂಡು, ಮಾನ್ಯರಾದ ಗ್ರಂಥಕಾರರ ಬರಹದ ಸರಣಿಯನ್ನು ನೋಡಿ, ಕನ್ನಡ ಗ್ರಂಥಗಳನ್ನು ಬರೆಯುವವರು ಅಪರೂಪ. ಮೂತಾಡಿದಂತೆ ವಾಕ್ಯಗಳನ್ನು ಬರೆಯುತ್ತ ಹೋದರೆ ಅದೆಲ್ಲ ಗ್ರಂಥಕ್ಕೆ ತಕ್ಕ ಭಾಷೆಯಾಗಲಾರದು. ಇತ್ತಲಾಗಿ ಬರೆಯಲ್ಪಟ್ಟ ಕನ್ನಡ ಪುಸ್ತಕಗಳೊಳಗಿನ ವಾಕ್ಯಗಳಲ್ಲಿ ದೋಷಗಳು ಅಲ್ಲಲ್ಲಿ ಕಂಡುಬರುತ್ತವೆ. ಇದಲ್ಲದೆ ಹೊಸದಾಗಿ ನಿಬಂಧಗಳನ್ನು ಬರೆಯುತ್ತಿರುವ ವಿದ್ಯಾರ್ಥಿಗಳಂತೂ ಎಷ್ಟೋ ತಪ್ಪುಗಳನ್ನು ಮಾಡುತ್ತಾರೆ. ಈಗ ನಾವು ನೋಡುವ ಕನ್ನಡ ವರ್ತಮಾನಪತ್ರಗಳ ಭಾಷೆಯೊಳಗೂ ಹಲವು ದೋಷಗಳು ಕಂಡುಬರುತ್ತವೆ. ಇದೇ ಪ್ರಕಾರ ಬಹುಕಾಲ ನಡೆದದೆ. ಅದರ ಪರಿಣಾಮವು ಏನಾಗುವದೋ ತಿಳಿಯುವದಿಲ್ಲ. ಅದರಿಂದ ಮೇಲೆ ತೋರಿಸಿದ ಮೂರು ತರದ ಬರಹಗಳಲ್ಲಿಯೂ ತೋರುವ ತಪ್ಪಿನ ವಾಕ್ಯಗಳನ್ನು ಹುಡುಕಿ, ಅವುಗಳ ಗುಣದೋಷಗಳ ವಿಷಯಕ್ಕೆ ಚರ್ಚೆ ನಡಿಸಿ ಅವನ್ನು ತಿದ್ದಿ ಆ ಸಂಬಂಧದಿಂದುಂಟಾದ ನಿಯಮಗಳನ್ನು ನಮ್ಮ ಕನ್ನಡ ಶಾಲೆಗಳ ಮಾಸ್ತರರು ಅಸಿಸ್ಟಂಟ ಮಾಸ್ತರರು, ವಿದ್ಯಾರ್ಥಿಗಳು ಮುಂತಾದವರಿಗೆ ತಿಳಿಯುವಂತೆ ಮಾಡಿದರೆ ಅವರಿಗೆಲ್ಲ ಈ ತರದ ಮಾತ ವಿವಾದಗಳನ್ನು ನಡಿಸುವ ಲವಲವಿಕೆಯುಂಟಾಗುವದು. ಅದರಿಂದ ಹೊಸದಾ

ಗಿ ನಿಬಂಧ ಬರೆಯುವವರಿಗೂ, ಗ್ರಂಥ ಬರೆಯುವವರಿಗೂ ಸಹಾಯವಾಗಿ ಮೇಲೆ ವಿವರಿಸಿದ ಮೂರು ಪ್ರಕಾರದ ಬರಹಗಳ ದೋಷಗಳು ಕಡಿಮೆಯಾಗಬಹುದೆಂದು ತೋರುತ್ತದೆ.

ವಾಕ್ಯಗಳನ್ನು ಪರೀಕ್ಷಿಸಬೇಕಾದರೆ ಧ್ಯಾನದಲ್ಲಿಡತಕ್ಕ ಕೆಲವು ನಿಯಮಗಳನ್ನು ಕೆಳಗೆ ಬರೆಯುತ್ತೇವೆ.

ವಾಕ್ಯದೋಷ ಪದದೋಷ ಮುಂತಾದವು.

(೧) ಆಖ್ಯಾಖ್ಯಾತ ಪದಗಳ ಪುರುಷ ಲಿಂಗವಚನಗಳು ಸರಿಯಾಗಿವೆಯೋ ಇಲ್ಲೊ?

(೨) ವಾಕ್ಯದಲ್ಲಿ ಅರೆ ಸಮಾಸಗಳುಂಟೋ ಹ್ಯಾಗೆ?

(೩) ಬಂದ ಪದಗಳೇ ಪುನಃ ಪುನಃ ಬಂದಿರುತ್ತವೋ ಹ್ಯಾಗೆ?

(೪) ಪ್ರಯೋಗಗಳಿಗೆ ಸರಿಯಾಗಿ ಕರ್ತೃ ಕರ್ಮಾದಿ ಕಾರಕಗಳಿಗೆ ವಿಭಕ್ತಿ ರೂಪಗಳು ಇರುವವೋ ಇಲ್ಲೋ?

(೫) ಪ್ರತಿಯೊಂದು ಪದದ ರೂಪಸಿದ್ಧಿಯು ಸರಿಯಾಗಿರುವದೋ? ಅಂದರೆ ಪ್ರತ್ಯಯ ಹತ್ತುವಾಗ ನಿಯಮಗಳಿಗೆ ಅನುಸರಿಸಿ ಲೋಪಾಗಮಾದೇಶಗಳು ಆಗಿವೆಯೋ?

(೬) ಬಂದಕ್ಕೊಂದು ಹತ್ತರದಲ್ಲಿರತಕ್ಕ ಪದಗಳು ದೂರವಾಗಿರುವದರಿಂದ ಅರ್ಥಕ್ಕೆ ಸಂಶಯ ಬರುವ ಹಾಗೆ ಅದೋ ಹ್ಯಾಗೆ?

(೭) ಸ್ವಭಾಷೆಯ ಶಬ್ದಗಳು ಸಿಗುವ ಹಾಗಿರಲಿಕ್ಕೆ ಪರಭಾಷೆಯ ಶಬ್ದಗಳು ಬಹಳವಾಗಿ ಬಂದವೋ ಹ್ಯಾಗೆ?

(೮) ಗ್ರಾಮ್ಯಜನರು ಮಾತ್ರ ಉಪಯೋಗಿಸುವ ಶಬ್ದಗಳು ವಾಕ್ಯಗಳಲ್ಲಿ ಬಹಳವಾಗಿರುವವೋ ಹ್ಯಾಗೆ?

(೯) ಸ್ವಭಾಷೆಯಲ್ಲಿರುವ ಸರಳವಾಕ್ಯ ಪದ್ಧತಿಯನ್ನು ಬಿಟ್ಟು ಅನ್ಯ ಭಾಷೆಯ ಪದ್ಧತಿಯಂತೆ ವಾಕ್ಯಗಳನ್ನು ಬರೆವವರಿಂದ ಅವು ವಿಲಕ್ಷಣವಾಗಿರುವವೋ?

(೧೦) ಬಂದೇ ವಿಭಕ್ತಿಯು ಎರಡು ಮೂರು ಪದಗಳು

ಸೊಲಾಗಿ ಬಂದವರಿಂದ ವಾಕ್ಯಾರ್ಥಕ್ಕೆ ತೊಂದರೆಯಾಗುವದೋ ಹ್ಯಾಗೆ?

ಅರ್ಥಪೋಷಗಳು.

೧. ವಾಕ್ಯಾರ್ಥಗಳಲ್ಲಿ ಪೂರ್ವಾಪರವಿರೋಧ ಉಂಟೋ ಹ್ಯಾಗೆ?

೨. ಒಮ್ಮೆ ಹೇಳಿದ ಅರ್ಥವೇ ರೂಪಾಂತರದ ವಾಕ್ಯದಿಂದ ಪುನಃ ಹೇಳಲ್ಪಟ್ಟಿರುವದೋ ಹ್ಯಾಗೆ?

೩. ವಾಕ್ಯಾರ್ಥವು ಲೋಕರೂಢಿಯ ವಿರುದ್ಧವಾಗಿ, ಇಲ್ಲವೆ ಸುಳ್ಳಾಗಿ ಇರುವದೋ ಹ್ಯಾಗೆ?

೪. ವಾಕ್ಯಾರ್ಥಗಳಲ್ಲಿ ಕ್ರಮ ಉಂಟೋ ಇಲ್ಲ್ಲೋ? ಅಂದರೆ ಮೊದಲು ಹೇಳತಕ್ಕದ್ದು ಮೊದಲು, ಹಿಂದುಗಡೆಯಲ್ಲಿ ಹೇಳತಕ್ಕದ್ದು ಹಿಂದುಗಡೆ ಹೇಳಲ್ಪಟ್ಟಿರುವದೋ? ವ್ಯತ್ಯಾಸವಾಗಿರುವದೋ?

೫. ಆರಂಭಿಸಿದ ವಿಷಯವೇ ಮುಂದೆ ಸಾಗಿಬಿಯೋ ವಿಷಯಾಂತರವಾಗಿದೆಯೋ?

೬. ವಾಕ್ಯದೊಳಗಿರುವ ಸಾಮ್ಯ, ವೈಷಮ್ಯಾಂತ, ಉದಾಹರಣ, ಮುಂತಾದವು ಒಪ್ಪುವಂತೆ ಅವೆಯೋ ಇಲ್ಲ್ಲೋ?

೭. ಬಂದು ಸಂಗತಿಯನ್ನು ಕುರಿತು ಬರೆಯುವಾಗ, ಕಾರಣವಿಲ್ಲದೆ ಯಾವದಾವರೊಂದು ಸಂಗತಿಯು ಇಲ್ಲವೆ ಪದವು ನಡುವೆ ಬಂದಿರುವದೋ ಹ್ಯಾಗೆ?

ಈ ಸಂಗತಿಗಳಲ್ಲದೆ ಇನ್ನೂ ಕೆಲವು ಸಂಗತಿಗಳುಂಟು. ಅವನ್ನು ಮುಂದೆ ವಾಕ್ಯಗಳನ್ನು ತಿದ್ದುವಾಗ ಅಲ್ಲಿಂದಲ್ಲೆ ಹೇಳುವೆವು. ಇನ್ನು ಕೆಲವು ವಾಕ್ಯಗಳನ್ನು ಬರೆದು ಅವನ್ನು ತಿದ್ದೋಣ.

(ಮುಂದಕ್ಕೆ ಸಾಗುವದು)

ಪ್ರಭಾಷಣ ಗೌರವಗಳ
ಜೀ. ಶಿ. ಕ. ಗಂ. ಶಾಲಾ ಪಾಟೀಲದಲ್ಲಿ. (ಹಾ॥ಹಾವೆ

ಶಾಲಾಪತ್ರಕ.

ಪದ್ಯಂ.

ಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಯಸುತ್ತಂ ಪ್ರತಿವಾಸದಾದಿಗೊಲವಿಂವೀಪತ್ರಮಂ ಮುದ್ರಿಸಿ ॥
ಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ಯಿಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೬.] ಎಪ್ರಿಲ ೧೮೯೧ [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ವರ್ಹಾಡವ ವಿದ್ಯಾಖಾತೆಯ ಡೈರೆಕ್ಟರರಾದ ಮೆಹಬ್ಬಾನ ಶ್ರೀರಾವು ಭಿಕಾಜಿ ಜಹಾರ ಸಾಹೇಬರು ಕೆಲವು ದಿನಸಗಳ ಕೆಳಗೆ ರಜೆಯನ್ನು ಪಡಕೊಂಡಾಗ್ಗೆ ಅವರ ಕೆಲಸಕ್ಕೆ ಎಲ್ಫಿನ್ ಸ್ಟನ್ ಕಾಲೇಜದ ಇಂಗ್ಲಿಷ ಪ್ರೊಫೆಸರರಾದ ಬಿ. ಬ್ಯಾರೆಟ್ ಸಾಹೇಬರನ್ನು ನೇಮಿಸಿವ್ವರು. ಅವರು ೧೮೯೦ನೇ ಇಸವಿಯ ಜೂನ ತಿಂಗಳಲ್ಲಿ ಮಾಡಿವ ವಾರ್ಷಿಕ ರಿಪೋರ್ಟನಲ್ಲಿ ಕೆಲವು ಸಾಮಾನ್ಯವಾವ ಶಾಲಾ ದೋಷಗಳನ್ನು ತೋರಿಸಿರುತ್ತಾರೆ. ಅವುಗಳಲ್ಲಿ ಬಂದೆರಡನ್ನು ಕೆಳಗೆ ವಿವರಿಸುತ್ತೇವೆ.

ಅವರು ಮಿಡಲ್ (ಅಂದರೆ ಅ. ವ್ಹ.) ಸ್ಕೂಲುಗಳ ಮತ್ತು ಪ್ರಾಯಮರಿ (ಪ್ರಾಥಮಿಕ ಶಿಕ್ಷಣವ) ಸ್ಕೂಲುಗಳ ವಿಷಯವಾಗಿ ಬರೆವದ್ದೇನಂದರೆ:—ಇವೆರಡೂ ವರ್ಗದ ಸಾಲಿಗಳಲ್ಲಿ ವಾಚನವು ಸಮಾಧಾನಕರವಾಗಿರುವದಿಲ್ಲ. ಹುಡುಗ

ರು ತಮ್ಮ ಪಾಠಗಳನ್ನು ಎಷ್ಟು ಮಾತ್ರವು ತಿಳುಕೊಳ್ಳ
ಗಿಳಿಗಳಂತೆ ಓದುವರು. ಓದಿದ್ದು ಓದುವವರಿಗೂ ಕೇಳುವ
ರಿಗೂ ಚನ್ನಾಗಿ ತಿಳಿಯಲಿಕ್ಕೆ ಬೇಕು; ಆದರೆ ಈ ಹು
ಗರು ಸರಳವಾಗಿ ಓದಿದ್ದನ್ನು ಕೇಳಿ ಅದರ ಅರ್ಥವು ಅ
ಗೆ ಚನ್ನಾಗಿ ಮನದಟ್ಟಾಗಿರುವದೆಂದು ತಿಳುಕೊಂಡರೆ ಬ
ಡ್ಡ ತಪ್ಪಾಗಬಹುದು. ಅ. ವ್ಹ. ಸಾಲಿಗಳಲ್ಲಿ ಹುಡುಗರು ಸ
ಳವಾಗಿ ಓದುವರು, ಕಠಿಣ ಶಬ್ದಗಳಿಗೆ ತಕ್ಕ ಪ್ರತಿ ಶಬ್ದ
ಳನ್ನು ಹೇಳುವರು; ಆದರೆ ಇದಕ್ಕೂ ಹೆಚ್ಚಿಗೆ ಯಾರ
ರೂ ವಿಚಾರ ಮಾಡಿದರೆ ಅವರು ಹುಡುಗರ ಅಪೂರ್ಣ ಜ್ಞ
ನವನ್ನು ಕಂಡು ಆಶ್ಚರ್ಯ ಪಡಬಹುದು. ಬಂದು ಶ
ಯಲ್ಲಿ ಪಾಠ ಓದಿಸುವಾಗ ಒಬ್ಬ ಹುಡುಗನು "T
boys used to visit a sandy beach because
was a wonderful place for shells" ಈ ವಾಕ್ಯ
ನ್ನು ನೆಟ್ಟಗೆ ಓದಿದ್ದಲ್ಲದೆ wonderful ಎಂದರೆ remar
:able ಎಂಬ ತಕ್ಕ ಅರ್ಥವನ್ನಾದರೂ ಹೇಳಿದನು. ಆ
wonderful ಎಂದರೆ ನಿನಗೇನು ತಿಳಿಯಿತು ನಿನ್ನ ಸ್ವ
ಭಾಷೆಯಲ್ಲಿ ಹೇಳೆಂದು ಕೇಳಲು ಅವನು चमत्कारिक ಎಂ
ಹೇಳಿದನು. ಇದರಿಂದ ಆ ವಾಕ್ಯದ ಅರ್ಥವು ಅವನಿಗೆ
ಮನದಟ್ಟಾಗಿರುವದೆಂಬದು ಸಹಜವದೆ. ಬೇರೆ ಹುಡುಗ
ರರೂ ವಿಚಾರ ಮಾಡಲಿಲ್ಲ ಒಬ್ಬನು ಹೇಳಿದ್ದನ್ನೇ ಹೇ
ದನು. ಮತ್ತೊಂದು ಶಾಲೆಯಲ್ಲಿ "My wife was in t
house and I was without" ಎಂಬ ವಾಕ್ಯವನ್ನು ಓ
ದಿ ಅದರೊಳಗೆ without ಶಬ್ದದ ಅರ್ಥವೇನೆಂದು ಕೇ
ಳಿದ್ದಕ್ಕೆ शिवाय (ಹೊರತು) ಎಂದು ಬಹು ಮಂದಿ ವಿದ್ಯಾ
ರ್ಥಿಗಳು ಹೇಳಿದರು. ಇದು ಬಹುತ್ವ ಅತಿಶಯೋಕ್ತಿಯ
ತೋರುವದು, ಆದರೆ ಇದು ನಾವು ಮನಗಂಡ ಮಾ

ವರ್ಗಣಿ ವಸೂಲು.

	ರೂ.	ಅ.	ಪೈ.
ರಾ. ಸಾ. ಡಿಪೂಟಿ ಎ. ಇನಸ್ಪೆಕ್ಟರ ಧಾರವಾಡ ಇನೆರ ಕಡಿಂದ.	೧೧೪	೦	
೨. ಸಾ. ಡಿಪೂಟಿ ಎ. ಇನಸ್ಪೆಕ್ಟರ ಕಾನಡಾ ಇನರ ಕಡಿಂದ.	೧೧೪	೦	

ಧಾರವಾಡ ಜಿಲ್ಲೆ.

ಶಟಗಿ ತಾಲೂಕ ನೂಸ್ತರರಿಂದ			
ವಾಡ ಮುನಶಿಪಾಲಿಟಿ ೧೪೯೧೧೯೦ ಸಾಲಿ ಮೊದಲನೇ ತಿಮಾಹಿ ಬಾಬತ್ತು.	...	೬	೦
		೯	೦ ೯

ಕೊರವಾರ ಜಿಲ್ಲೆ.

ನರ ತಾಲೂಕ ನೂಸ್ತರರಿಂದ ಅಕ್ಟೋಬರ, ನವೆಂಬರ, ಡಿಶೆಂಬರ ೧೪೯೧೧೯೦ ನೇ ಸಾ ಲಾಬತ್ತು.		೬	೦

ಕೆರುಕ್ಕುಟನು

ಾಮುಪ್ಪಾ ಕವಿ ಇ-ಪ್ಪೈ ತೆಜ್ಜ ತೆಯಿ ಂಪವು ನಕ್ಕು—,,-ಪ್ಪ ಲಿಂಬೀಕಾ ನಕ್ಕಿತು, ಎಂಬ ಅಪ್ಪೈರವರಿಗೆ.	೦೧೫	೦	

ವನ್ನು ಕೊಡ

ಡಿ ನಕ್ಕಿತೆಂದು ಒತಪ್ಪು ಇದ್ದರೆ ನೂಸ್ತರ ಜನರು ಅಗತ್ಯ

ಮತ್ತೊಂದು ನಿ

ಕನ್ನಡ ಕೈಪಿಡಿ ಎಂಬ ವ್ಯಾಕರಣದ ಉತ್ತರ

ಯಾವತ್ತು ಕನ್ನಡ ಭಾಷೆಯ ಅಭಿಮಾನಿಗಳಿಗೂ,
ಸ್ತರ ಅನಿವಾರ್ಯವಾಗಿ ಮಾಸ್ತರ ಜನರಿಗೂ, ವಿದ್ಯಾರ್ಥಿಗಳಿಗೂ
ತಿಳಿಸುವದೇನೆಂದರೆ:—ಕೈಪಿಡಿಯ ಪೂರ್ವಾರ್ಧವನ್ನು ಓದಿ
ಎಷ್ಟೋ ಜನರು ಅದರ ಉತ್ತರಾರ್ಧವನ್ನು ಬೇಗ ಮುಗಿ
ಸಬೇಕೆಂದು ನಮಗೆ ತಿಳಿಸಿದ್ದರಿಂದ, ಅದನ್ನು ಬಳಿಕ ಪ್ರ
ಳಿಗಳಿಂದ ಮುದ್ರಿಸಿ ಸಿದ್ಧ ಮಾಡಿರುತ್ತೇವೆ. ರಾಯಲ್ ಆ
ಪಕಪ ತ್ರಿಸಾಂಜಿಯ ೧೯೬ ಪುಟಗಳುಳ್ಳ ಪುಸ್ತಕವಾಗಿದೆ.
ಕಾದವರು ವ್ಯಾಲ್ಯುಪೇಬಲ ಪೋಸ್ಟಿನಿಂದ ಪುಸ್ತಕಗಳ
ತರಿಸಿಕೊಳ್ಳಬಹುದು. ಪುಸ್ತಕ ಬೇಡುವವರು ಕೆಳಗೆ
ಮಾಡುವವರು ಪತ್ರವ ಕಳುಹಿಸಬೇಕು.

ಈ ಭಾಗದಲ್ಲಿ ಹೊಸಗನ್ನಡ ಹೊಸಗನ್ನಡ ವಾಕ್ಯ
ಯನಿಯಮಗಳು ಬೇರಿಸಪದ್ಧತಿ, ಪಾಚಕನಪದ್ಧತಿ,
ರ್ಣಯ, ಸಂಸ್ಕೃತ ಕನ್ನಡಗಳಭೇದ, ಗ್ರಂಥದ
ವ್ಯಾಕರಣ ಹೇಳುವದು, ಮುಂತಾದವೆಷ್ಟೋ ವಿಷಯಗಳ
ವದೆ. ಪುಸ್ತಕದ ಬೆಲೆ ಮುಂತಾದ್ದು—

ಉತ್ತರಾರ್ಧ ಕೈಪಿಡಿಯಬೆಲೆ.

ಸಾದಾ ಬೈಂಡಿನದು
ಪಕ್ಕಾ ಬೈಂಡಿನದು
ಟಪಾಲ ಖರ್ಚು

ಪೂರ್ವಾರ್ಧದ ಕೈ[illegible] was in the

ಸಾದಾ
ಪಕಾ ಬೈ[illegible]
ಟಪಾಲ

ಇದಲ್ಲದೆ ವ್ಯಾಲ್ಯ
ತ್ತದೆ. ತಿಳಿಯು

ಪೂರ್ವಾರ್ಧದ ಕೈಪಿಡಿಯ ಪೂರ್ವಾರ್ಧವನ್ನು ಓದಿ
ಸಾಕ್ಯವನ್ನು ಓ[illegible]
[illegible]ದು ಕೇ[illegible]

ಳೆ ವಿದ್ಯಾರ್ಥಿ
ಯೋಕ್ತಿಯನ್ನು
ನಗಂಡ ಮುತ್ತು

ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕಬ್ಬಿಣಕ್ಕೆ ಪ್ರತಿ
ನವನ್ನು ಹೇಳಿದರೆ ತಮ್ಮ ಕೆಲಸವಾಯಿತೆಂದು ಮಾಸ್ತ
ಜನರು ನೆನಸುವಂತೆ ತೋರುತ್ತದೆ. ಪಾಠದಿಂದ ಯಾವ
ವ್ಯದ ಮಾತು ಬೈಲಿಗೆ ಬಂತು, ಅದರಿಂದ ತಮಗೆ ಪ್ರಯೋ
ನವೇನು, ಇವೇ ಮುಂತಾದ ಸಂಗತಿಗಳನ್ನು ತಿಳಿಸಿ ಹೇಳು
ರ ಕಡೆಗೆ ಪಾಡಿಕೆಯಾಗಿ ಮಾಸ್ತರ ಜನರು ಲಕ್ಷ ಕೊ
ವಂತೆ ತೋರಲಿಲ್ಲ. ಯಾಕೆಂದರೆ ಇಂಥ ಪ್ರಶ್ನೆಗಳನ್ನು
ಳಲಾಗಿ ವಿದ್ಯಾರ್ಥಿಗಳು ಉತ್ತರವನ್ನೇ ಕೊಡಲಾರದೆ
ನ್ಮುನಿರುವರು, ಒಪ್ಪತ್ತು ಕೊಟ್ಟರೂ ಅದು ಅಸಂಬದ್ಧ
ಗಿರುವದು. ಬಮ್ಮೊಮ್ಮೆ ಆ ಉತ್ತರವನ್ನು ಕೇಳಿ ನಗ
ುವದು. ಬಂದು ಶಾಲೆಯಲ್ಲಿ "ಸಿಂಹವೂ ಇಲಿಯೂ"
ಬ ಪಾಠವನ್ನು ಬಂದು ವರ್ಗದ ವಿದ್ಯಾರ್ಥಿಗಳಿಂದ ಓದಿ
ಸಿದು. ಓದುವದಾದ ಮೇಲೆ ಈ ಪಾಠದಿಂದ ನೀವೇನು
ತಿರೆಂದು ಕೇಳಿದ್ದಕ್ಕೆ ಇಬ್ಬರು ಮಾತ್ರ ಉತ್ತರವನ್ನು
ಡಲಿಕ್ಕೆ ಯತ್ನ ಮಾಡಿದರು. ಬಬ್ಬನು ಬರೆಯಲಿಕ್ಕೆ ಕಲಿ
ಸಿಂತಲೂ ಮತ್ತೊಬ್ಬನು ವಿದ್ಯವನ್ನು ಕಲಿತೆವೆಂತಲೂ
ಳಿದರು. ಎರಡನೆಯವನಿಗೆ ಯಾವ ವಿದ್ಯವೆಂದು ಕೇಳ
ಎಲ್ಲ ವಿದ್ಯವೆಂದು ಉಸುರಿದನು. "ಸಮಯ ಬಂದಾಗ
ನಗೆ ಪ್ರತ್ಯುಪಕಾರವನ್ನು ಮಾಡುವೆನು, ಎಂದು (ಇಲಿ
ು) ಕೃತಜ್ಞತೆಯಿಂದ ನುಡಿಯಿತು. ಆ ಮಾತು ಕೇಳಿ
ವು ನಕ್ಕು—" ಈ ವಾಕ್ಯವನ್ನು ಓದಿಸಿ ಸಿಂಹವು ಯಾ
ನಕ್ಕಿತು, ಎಂದು ಕೇಳಲಾಗಿ ಬಬ್ಬನು ಮಾತ್ರ ಉತ್ತರ
ನ್ನು ಕೊಡಲು ಯತ್ನಿಸಿ ಇಲಿ ಮಾತಾಡುವದನ್ನು ನೋ
ನಕ್ಕಿತೆಂದು ಹೇಳಿದನು.

ಮತ್ತೊಂದು ಶಾಲೆಯಲ್ಲಿ "ಜಲಮನುಷ್ಯನೂ ಕಾಡು

ಟಿಗನೊ " ಎಂಬ ಪಾಠವನ್ನು ವಿದ್ಯಾರ್ಥಿಗಳು ಓದಿದರು ಆಗ ಅವರಿಗೆ, ಬಂಗಾರದ ಕೊಡ್ಲಿಯನ್ನೂ ಬೆಳ್ಳಿಯ ಕೊಡ್ಲಿಯನ್ನೂ ಬಿಟ್ಟು ತನ್ನ ಕಬ್ಬಿಣದ ಕೊಡ್ಲಿಯನ್ನೇ ಗಟ್ಟಿ ಹಿಡಿದು ತಕ್ಕೊಂಡ ಮನುಷ್ಯನು ಎಂಥವನು, ಅವನ ಸ್ವಭಾವ ಎಂಥಾದ್ದು, ಎಂದು ಕೇಳಲಾಗಿ ಒಬ್ಬನು ಅವನು ಒಡ ಮನುಷ್ಯನೆಂಬೂ ಮತ್ತು ಕೆಲವರು ಅವನು ಜಾಣ ಮನುಷ್ಯನೆಂತಲೂ ಹೇಳಿದರು.

ಪ್ರಾಥಮಿಕ ಶಾಲೆಗಳಲ್ಲಿ ಓದೋಣವಾದರೂ ಸಂತೋಷಕರವಾಗಿರುವದಿಲ್ಲ. ವಾಡಿಕೆಯಾಗಿ ವಿದ್ಯಾರ್ಥಿಗಳು ಧನಿ ಗೆದು ಓದುವರು, ಇಲ್ಲವೆ ಬಂದೇ ಸ್ವರದಿಂದ ಓದುವರು. ಭೂಗೋಲದ ಅಭ್ಯಾಸವಾದರೂ ಇದೇ ಮೇರೆಗೆ ನಿಪ್ಪ್ರಯೋಜನಕರವಾಗಿರುವದು. ಭೂಗೋಲ ಬಾಯಪಾಠ ಬಂದಾಗ್ಯೂ ಕಾಶಿಯಿಂದ ರಾಮೇಶ್ವರ ಯಾವ ದಿಕ್ಕಿಗೆ, ತಾನು ಇರುವ ಹಳ್ಳಿಯಿಂದ ಇಲಾಖೆಯ ಮುಖ್ಯ ಪಟ್ಟಣಕ್ಕೆ ಹೋಗಬೇಕಾದರೆ ಹಾದಿಯಲ್ಲಿ ಯಾವ ಹೊಳೆಗಳನ್ನು ದಾಟಬೇಕಾಗುತ್ತದೆ, ಯಾವಯಾವ ಊರು ಹತ್ತುವವು, ಇವರ ಜ್ಞಾನವೇನೂ ಇರುವದಿಲ್ಲ. ನಕಾಶದ ಮೇಲೆ ಭೂಗೋಲದೊಳಗೆ ಹೇಳಿದ ಯಾವತ್ತು ಊರುಗಳನ್ನು ತಪ್ಪದೆ ತೋರಿಸಲಿಕ್ಕೆ ಬಂದಾಗ್ಯೂ ಹೋಳಕರ, ಗಾಯಕವಾಡ, ಮುಂತಾದ ಹೆಸರುಗಳನ್ನು ಅರಿಯದಂಥ ಪುಡುಗರನ್ನೂ ಕಾಣಬಹುದು. "

ಈ ದೊಷಗಳನ್ನು ಮಾಸ್ತರ ಜನರು ಆಗ್ರಹಪೂರ್ವಕವಾಗಿ ದೂರವಾಡತಕ್ಕದ್ದು. ವಿದ್ಯಾರ್ಥಿಗಳಿಗೆ ವಿಚಾರದ ಚಟ ಹಚ್ಚುವದೇ ಮಾಸ್ತರರ ಮುಖ್ಯ ಕರ್ತವ್ಯವು. ಓದಿದ ಸಂಗತಿಗಳಿಂದ ಆಗುವ ಪ್ರಯೋಜನವನ್ನು ತೋರಿಸಿ ಜ್ಞಾನ

ಸಂಪಾದನೇಚ್ಛೆಯನ್ನು ಎಚ್ಚರ ಗೊಳಿಸಿದರೆ, ಈ ಕೆಲಸವು ಕೈಗೂಡುವದು ಅಸಾಧ್ಯವಲ್ಲ. ಮೂಸ್ತರ ಜನರು ಹುಡುಗರ ಕಲ್ಯಾಣಕ್ಕೆ ಲಕ್ಷಕೊಟ್ಟು ತಮ್ಮ ಕೆಲಸವನ್ನು ಮನಮುಟ್ಟಿ ನಿಷ್ಠೆಯಿಂದ ಮಾಡಿದರೆ ಯಶವೂ ಕೀರ್ತಿಯೂ ತಪ್ಪವ್ರ.

ನ್ಯೂಯಾರ್ಕ ಪಟ್ಟಣದಲ್ಲಿ ಎರಡು ಆನೆಗಳನ್ನು ತಂದಿದ್ದಾರಂತೆ. ಅವುಗಳಲ್ಲಿ ದೊಡ್ಡದು ೩೬ ಇಂಚು, ಸಣ್ಣದು ೬ ಇಂಚು ಎತ್ತರ ಇರುತ್ತದೆ. ಅವು ಆರು ವರ್ಷದವವೆ. ಆ ವುಗಳ ಬಗ್ಗೆ ಸೋಜಿಗದ ಸಂಗತಿ ಏನಂದರೆ ಅವುಗಳ ತಲೆ ಬೆನ್ನು ಮತ್ತು ಕಾಲು ಇವುಗಳ ಮೇಲೆ ಮೂರು ಇಂಚು ಉದ್ದನ್ನ ದಟ್ಟ ಕೂದಲುಗಳವೆ. ಇಷ್ಟು ಸಣ್ಣ ಮತ್ತು ಕೂದಲುಳ್ಳ ಆನಿಗಳು ಮೊದಲು ಯಾರಿಗೂ ಸಿಕ್ಕಿದ್ದಿಲ್ಲ.

ಕಾರದಾಸದನದ ವೃತ್ತಾಂತವನ್ನು ನಮ್ಮ ವಾಚಕರಿಗೆ ಈ ಮೊದಲು ತಿಳಿಸಿರುತ್ತೇವೆ. ಆ ಸದನದ ಎನೇ ವಾರ್ಷಿಕ ಸಮಾರಂಭವು ಕಳೆದ ಬುಧವಾರ ತಾ॥ ೧೧ನೇ ದಿವಸ ಪುಣೆಯಲ್ಲಿ ಆಯಿತು. ಈ ಸಮಾರಂಭಕ್ಕೆ ಏತದ್ದೇಶೀಯ ಅನೇಕ ಸ್ತ್ರೀಪುರುಷರೂ ಹಲವು ಯುರೋಪಿಯನ್ ಸ್ತ್ರೀ ಪುರುಷರೂ ಬಂದಿದ್ದರು. ಅಧ್ಯಕ್ಷಸ್ಥಾನವನ್ನು ಸೌಭಾಗ್ಯವತಿ ರಮಾಬಾಯಿ ರಾನಡೆ ಇವರು ಸ್ವೀಕರಿಸಿದ್ದರು. ಇವರು ಸಮಾರಂಭದ ಕೊನೆಗೆ ಸಮಯೋಚಿತ ಭಾಷಣ ಮಾಡಿ ಸಭೆಯ ಕೆಲಸವನ್ನು ಮುಗಿಸಿದರು. ನಮ್ಮ ಹಿಂದೂ ಸ್ತ್ರೀಯರು ಬರಬರುತ್ತಾ ಇಂಥ ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಅಧ್ಯಕ್ಷಸ್ಥಾನವನ್ನು ಅಂಗೀಕರಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವದನ್ನು ನೋಡಿ ಯಾರಿಗೆ

ಸಂತೋಷವಾಗಲಿಕ್ಕಿಲ್ಲ? ಸದ್ಯಕ್ಕೆ ಸದನದಲ್ಲಿ ೪೩ ಮಂದಿ ಸ್ತ್ರೀ ವಿದ್ಯಾರ್ಥಿನಿಯರಿದ್ದಾರೆ; ಅವರಲ್ಲಿ ೩೦ ಜನ ವಿಧವೆಯರು, ೬ ಜನ ಸಧವೆಯಾದವರು, ೩ ಜನ ಮದುವೆಯಾಗದವರು ಇರುತ್ತಾರೆ. ಸದನದ ಖರ್ಚನ್ನು ಪಂಡಿತಾ ರಮಾಬಾಯಿ ಮುಕ್ತಿ ಅವೇರಿಕದ ಜನರ ವರ್ಗಣಿಯಿಂದ ಸಾಗಿಸುತ್ತಿದ್ದಾರೆ. ಆದರೆ ಈ ಸದನಕ್ಕೆ ಉದಾರಾಶ್ರಯವನ್ನು ಕೊಟ್ಟು ಈ ದೇಶದಲ್ಲಿ ಸ್ತ್ರೀ ಶಿಕ್ಷಣವನ್ನು ಹಬ್ಬಿಸುವದು ನಮ್ಮ ಜನರ ಕರ್ತವ್ಯವಾಗಿರುತ್ತದೆ. ಸೌ. ರಮಾಬಾಯಿ ರಾನಡೆ ಇವರು ಸೂಚಿಸಿದಂತೆ ಅಲ್ಲಿರುವ ಒಬ್ಬೊಬ್ಬ ವಿದ್ಯಾರ್ಥಿನಿಯ ಖರ್ಚನ್ನು ಒಬ್ಬೊಬ್ಬ ಸದ್ಗೃಹಸ್ಥರು ಕೊಡುವದಕ್ಕೆ ಒಪ್ಪಿಕೊಂಡರೆ ಅಮೇರಿಕದವರ ಮೋರೆ ನೋಡುವ ಪ್ರಸಂಗವು ತಪ್ಪುವದು.

ನಮ್ಮ ಇಲಾಖೆಯ ಗವರ್ನರರಾದ ನಾಮದಾರ ಲಾರ್ಡ ಯಾವಿಸ ಧೊರೆಗಳು ಮಾರ್ಚ ೩೦ನೇ ತಾರೀಖಿನ ದಿವಸ ರಾತ್ರಿ ೧೦ ಘಂಟೆಗೆ ಮುಂಬಯಿಯಿಂದ ಹೊರಟು ಮುಧ್ಯವಲ್ಲಿ ಮುಕ್ಕಾಮು ಮಾಡುತ್ತ ಮಾಡುತ್ತ ಏಪ್ರಿಲ ೧೮ನೇ ತಾರೀಖಿಗೆ ಧಾರವಾಡಕ್ಕೆ ಬರುವರು. ಅಲ್ಲಿಂದ ಹೊರಟು ಮುಂದೆ ತಾ॥ ೧೯ನೇ ದಿವಸ ಹುಬ್ಬಳ್ಳಿಗೆ, ತಾ॥ ೨೦ನೇ ದಿವಸ ವಿಜಾಪುರಕ್ಕೆ ತಾ॥ ೨೧ನೇ ದಿವಸ ಬೆಳಗಾವಿಗೆ, ತಾ॥ ೨೨ನೇ ದಿವಸ ಮಿರಜೆಯ ಮೇಲಿಂದ ಕೊಲ್ಹಾಪುರಕ್ಕೆ ಹೋಗುವರು. ಅಲ್ಲಿ ಎರಡು ದಿವಸ ನಿಂತು ತಾ॥ ೨೫ನೇ ದಿವಸ ಕೊಲ್ಹಾಪುರದಿಂದ ಹೊರಟು ಪುನಃ ಮಿರಜೆ ಮತ್ತು ವಾತಾರ ಮಾರ್ಗವಾಗಿ ಮಹಾಬಳೇಶ್ವರಕ್ಕೆ ಹೋಗುವರು.

ಕೆಳಗೆ ಬರೆವ ಪಟ್ಟಣಗಳ ಜನಸಂಖ್ಯೆಯು ಹೋದ ಶಾ
ನಸುಮಾರಿಯಿಂದ ತಿಳಿದದೆ. ಅದರ ವಿವರ:—

ಪಟ್ಟಣ.	ಜನಸಂಖ್ಯೆ.	
	೧೮೮೧.	೧೮೯೧.
ಕಲಕತ್ತಾ ...	೪೫೯೯೦೦	೭೪೦೦೦೦
ಮುಂಬಯಿ ...	೭೬೪೦೦೦	೮೦೪೪೬೪
ಪುಣೆ ...	೮೮೬೦೦	೧೦೮೬೪೭
ಧಾರವಾಡ ...	೦೭೦೦೦	೪೦೬೭೦
ಬೆಳಗಾಂವ ಶಹರ ...	೦೦೦೦೦	೦೭೯೪೦
ಸ. ಕ್ಯಾಂಟೋನ್ಮೆಂಟ	.....	೧೦೦೪೯

HINTS ON MORAL TEACHING.

ನೀತಿಶಿಕ್ಷಣದ ಬಗ್ಗೆ ಸೂಚನೆಗಳು.

ಕೆಲವು ದಿವಸಗಳ ಹಿಂದೆ ಶಿಕ್ಷಣವೆಂದರೆ ಬರೀ ಓದಲಿಕ್ಕೆ ಬರೆಯಲಿಕ್ಕ ಲೆಕ್ಕ ಮಾಡಲಿಕ್ಕೆ ಕಲಿಸುವದೆಂದು ಜನರು ನಂ ಬುತಿದ್ದರು. ಇತ್ತಿತ್ತ ಪಾಶ್ಚಿಮಾತ್ಯ ಸುಧಾರಣೆಯು ಹಬ್ಬು ಗೊಂಡಹಾಗೆ ಶಿಕ್ಷಣದ ನಿಜಸ್ವರೂಪವು ಬೈಲಿಗೆ ಬಂದು ಚಿ ಕ್ಕದೊಡ್ಡವರಿಗೆ ಅದರ ವ್ಯಾಪಕಾರ್ಥವು ಗೊತ್ತಾಗಿದೆ. ಮ ನುಷ್ಯನೆಂಬ ಬಹುಮಾನದ ಬಿರುದಿಗೆ ತಕ್ಕಂಥ ಕರ್ತವ್ಯ ಗಳನ್ನು ಸರಿಯಾಗಿ ಮಾಡುವ ಸಾಮರ್ಥ್ಯವನ್ನು ವಿದ್ಯಾ ರ್ಥಿಗಳಲ್ಲಿ ಹುಟ್ಟಿಸುವಂಥ ಕಾರ್ಯವೇ ಶಿಕ್ಷಣವೆಂತಲೂ ಅ ದರಲ್ಲಿ ನೀತಿಶಿಕ್ಷಣ, ಬುದ್ಧಿಶಿಕ್ಷಣ, ಶಾರೀರಶಿಕ್ಷಣ ಎಂಬ ಮೂರು ಮುಖ್ಯ ಭಾಗಗಳಿರುತ್ತವೆಂತಲೂ ಶಿಕ್ಷಣದ ಕೆಲಸ ದಲ್ಲಿ ಸ್ವಲ್ಪಮಾತ್ರ ಪರಿಶ್ರಮ ಮಾಡಿದವರಿಗೆ ಸಹ ಈ

ಗ್ಗೆ ಗೊತ್ತಾಗಿದೆ. ಬುದ್ಧಿಶಿಕ್ಷಣದ ವಿಷಯದಲ್ಲಿ ಬಹುತರ ಎ
ಲ್ಲ ಮಾಸ್ತರ ಜನರಿಗೆ ಪೂರ್ಣಜ್ಞಾನವಾಗದಿದ್ದರೂ ಅಲ್ಪ ಸ್ವ
ಲ್ಪ ಜ್ಞಾನವಾದರೂ ಆಗಿರುತ್ತದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ.
ಆದರೆ ನೀತಿಶಿಕ್ಷಣದ ಸಂಬಂಧದಿಂದ ಬಹು ಜನರಿಗೆ ತಕ್ಕ
ಷ್ಟು ಜ್ಞಾನವಾಗಿರುವದಿಲ್ಲ. ಕೆಲವರು ನೀತಿಶಿಕ್ಷಣವೆಂದರೆ
ಬಂದು ಅಗಾಧವಾದ ವಿಷಯವೆಂದು ಆಲೋಚಿಸಿ ಉಪಾಯ
ಗಾಣದೆ ಕಂಗೆಡುವರು. ಆದರೆ ಅದು ಗೌರವದ ವಿಷಯ
ವಾದಾಗ್ಯೂ ಅವರು ಹೆದರಿ ಕೈಮುಚ್ಚಿಕೊಂಡು ಕೂಡ್ರುವ
ಕಾರಣವಿಲ್ಲ. ಮನುಷ್ಯರ ಪರಸ್ಪರ ವ್ಯವಹಾರಗಳು ಸು
ಸೂತ್ರವಾಗಿ ಸಾಗಿಸಲಿಕ್ಕೆ ಪ್ರಯೋಜನಕರವಾದ ನಿಯಮ
ಗಳ ಸಮೂಹವೇ ನೀತಿಶಾಸ್ತ್ರವೆಂದು ತುಸು ವಿಚಾರದಿಂದ
ಅವರಿಗೆ ತಿಳಿಯುವದು; ಮತ್ತು ತಮ್ಮ ವಿದ್ಯಾರ್ಥಿಗಳು
ನೀತಿವಂತರಾಗುವ ಹಾಗೆ ಯತ್ನಮಾಡುವ ಧೈರ್ಯವು ಅ
ವರಲ್ಲಿ ಹುಟ್ಟುವದು. ನೀತಿಯಬೀಜಾರೋಪಣವು ಸಾ
ಲಿಯುಲ್ಲಿಯೇ ಆಗತಕ್ಕದ್ದು. ಮನಸ್ಸು ಕೋಮಲವಿದ್ದಾಗ್ಗೆ
ಅದನ್ನು ಬಲಿಸುವದು ಸುಲಭವು; ಆದದರಿಂದ ಸತ್‌ಶಿಕ್ಷಕರು
ಮಾಡತಕ್ಕ ಕೆಲಸಗಳಲ್ಲಿ ಇದು ಹೆಚ್ಚು ಗೌರವದ್ದೂ ಅವ
ಶ್ಯಾವದ್ದೂ ಎಂದರೂ ಸಲ್ಲುವದು. ಈ ಕೆಲಸವು ನುಡಿಗಿಂ
ತ ನಡೆಯನ್ನೇ ಹೆಚ್ಚು ಅವಲಂಬಿಸಿರುವದು. ಎಚ್ಚರದಿಂ
ದ ಈ ಕೆಲಸವನ್ನು ಕೈಕೊಂಡರೆ ಇದು ಎಷ್ಟು ಮಾತ್ರ
ವೂ ಕ್ಲೇಶಕರವೆನಿಸದು. ನೀತಿವಂತನಾದ ಮಾಸ್ತರನು ವಿ
ದ್ಯಾರ್ಥಿಗಳ ದುರ್ಗುಣ ದುರಾಚಾರಗಳನ್ನು ಗೊತ್ತುಪ
ಡಿಸಿ ಸ್ಥಿರತ್ವದಿಂದ ಅವುಗಳನ್ನು ಹೋಗಲಾಡಿಸಿದರೆ ಶಾಲೆ
ಯಲ್ಲಿ ನೀತಿಯು ನೆಲೆಗೊಂಡು ಶಿಕ್ಷಣದ ಬಂದು ಅಂಗವು
ತಕ್ಕಮಟ್ಟಿಗೆ ಪೂರ್ಣವಾಗುವದೆಂಬದಕ್ಕೆ ಏನೂ ಸಂದೇ
ಹವಿಲ್ಲ.

ಶಿಕ್ಷಕರು ಬಳ್ಳೇ ನಡತೆಯುವರೂ ಕೋಪುಲಾಂತಃಕರ
ಾವರೂ, ಉಲ್ಲಾಸವುಳ್ಳವರೂ ಯಾವಾಗಲೂ ಆನಂದವೃ
ತ್ತಿಯಿಂದ ಇರುವವರೂ ಧಾರ್ಮಿಕರೂ ಆಗಿ ವಿದ್ಯಾರ್ಥಿಗಳ
ಮನೋವಿಕಾರಗಳನ್ನು ತಿಳುಕೊಳ್ಳುತ್ತಾ ಸದ್ಬುದ್ಧಿ ಸದುದ್ದೇ
ಶಗಳಿಗೆ ಬಲಗೊಡುತ್ತಾ ದುರ್ಬುದ್ಧಿ ದುಷ್ಟವಿಚಾರಗಳನ್ನು
ನಿರೊರಸಿ ಕಿತ್ತುಹಾಕುತ್ತಾ, ಸದ್ಭಾವ ಸದಾಚಾರಗಳನ್ನು
ಬೆಳೆಗೊಳಿಸುತ್ತಾ ಇರಬೇಕು. ಇದಲ್ಲದೆ ವ್ಯಾಪಾರಸ್ಥರು ವ
ರ್ಷವರ್ಷಕ್ಕೆ ಅಡಾವೆ ತೆಗೆದು ತಮ್ಮ ವ್ಯಾಪಾರದ ಸ್ಥಿತಿಯ
ನ್ನು ಕಂಡುಕೊಳ್ಳುವಂತೆ ಮಾಸ್ತರ ಜನರಾದರೂ ನೀತಿಯ
ವಿಷಯದಲ್ಲಿ ತಮ್ಮ ಶಾಲೆಯು ಎಷ್ಟು ಮುಂದರಿಸಿರುವದೆಂಬ
ವನ್ನು ಆಗಾಗ್ಗೆ ಪರೀಕ್ಷಿಸುತ್ತಿರಬೇಕು. ಈ ಪರೀಕ್ಷಣವ
ನ್ನು ಕುರಿತು ಕೆಲವು ಸೂಚನೆಗಳನ್ನು ಕೆಳಗೆ ಬರೆಯು
ತ್ತೇವೆ.

೧. ಗಣಿತ, ಇತಿಹಾಸ, ವ್ಯಾಕರಣ ಮುಂತಾದ ವಿಷಯು
ಗಳ ಕೆಲವು ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು ಬಿ
ಡಿಸಲಿಕ್ಕೆ ಹೇಳಿದಾಗ್ಗೆ ಅವರು ತಮ್ಮ ತಮ್ಮ ಕೆಲಸಗಳನ್ನು
ಪ್ರಾಮಾಣಿಕತನದಿಂದ ಮಾಡುವರೋ, ಇಲ್ಲವೆ ಯಾವದಾವ
ರೊಂದು ನೆವಮಾಡಿ ತಮ್ಮ ಸ್ಥಳಬಿಟ್ಟು ಬಾರಿಬಾರಿಗೆ ಏ
ಳುವರೋ, ಅತ್ತಿತ್ತ ಸರಿದಾಡುವರೋ, ಎಡಕ್ಕೂ ಬಲ
ಕ್ಕೂ ನೋಡುವರೋ, ಬಬ್ಬರಿಗೊಬ್ಬರು ಸನ್ನೆಗಳಿಂದಾಗ
ಲಿ ಅನ್ಯರೀತಿಯಿಂದಾಗಲಿ ಕೇಳುಹೇಳುವರೋ ಎಂಬವನ್ನು
ಎಚ್ಚರದಿಂದ ನೋಡಬೇಕು. ಸ್ಥಳಬಿಟ್ಟು ಸುಮ್ಮಸುಮ್ಮನೇ
ಉಲುಕುವದು, ಅತ್ತ ಇತ್ತ ನೋಡುವದು, ಮುಂತಾದ ಕೃತ್ಯ
ಗಳು ಅಪ್ರಾಮಾಣಿಕತನದ ಕುರುಹುಗಳು; ಇವು ಬಣಡಾ
ಲು, ಡಾಂಭಿಕತನ, ಮೋಸ, ಮುಂತಾದ ದುರ್ಭಾವನೆಗಳನ್ನು

ಸೂಚಿಸುತ್ತವೆ. ಇವುಗಳನ್ನು ಮಾಸ್ತರರು ನಿಲ್ಲಿಸಲು ಯ
ಸತಕ್ಕದ್ದು. ಅದೇಮೇರೆಗೆ ಹಲಿಗೆಗಳನ್ನು ನೋಡುವಾ
ಮಿಸಮೀಪವಲ್ಲಿ ಕೂತಂಥ ಹುಡುಗರು ಬಂದೇ ಪ್ರಕಾ
ತಪ್ಪನ್ನು ಮಾಡಿರುವರೋ, ಅವರು ಮಾಡಿದ ರೀತಿಗ
ಉತ್ತರಗಳೂ ಬಂದಕ್ಕೊಂಮು ಪೂರಾ ಹೋಲುವವೋ
ಬದನ್ನು ಜಾಗ್ರತೆಯಿಂದ ನೋಡುತ್ತಿರಬೇಕು. ಇದರಿ
ಹುಡುಗರಲ್ಲಿ ಸತ್ಯವಂತಿಕೆ, ಸ್ವಾವಲಂಬನ ಎಂಬ ಮೇಲ
ಗುಣಗಳು ಎಷ್ಟರಮಟ್ಟಿಗೆ ಹುಟ್ಟಿರುತ್ತವೆಂಬದು ಮಾ
ರರಿಗೆ ತಿಳಿಯುವದು.

೨. ಹುಡುಗರು ದಿನಾಲು ಕೈಕಾಲು ಮೋರೆಗಳನ
ತೊಳಕೊಂಡು ಸ್ವಚ್ಛವಾದ ಉಡುತೊಡಿಗೆಗಳನ್ನು ಹಾ
ಕೊಂಡು ಬರುತ್ತಾರೋ ಇಲ್ಲೋ ಎಂಬದನ್ನು ಲಕ್ಷ್ಯ
ರ್ವಕವಾಗಿ ನೋಡುತ್ತಿರಬೇಕು. ಬೆಲೆಯುಳ್ಳ ಬಟ್ಟೆಗಳ
ಇರಲಿಕ್ಕೆಬೇಕೆಂಬ ಅರ್ಥವಲ್ಲ; ಅದರೆ ಇದ್ದಬಟ್ಟೆಗಳ
ಸ್ವಚ್ಛವಾಗಿರಬೇಕು. ಅಭ್ಯಾಸದ ಉಪಕರಣಗಳು ಅಂದ
ಪಾಟಿ, ಪೆನಸಿಲು, ಪುಸ್ತಕ ಮುಂತಾದವುಗಳು ಅವರ ಹ
ತ್ತರ ಇರುತ್ತವೆಯೋ, ಬಂದು ಅಭ್ಯಾಸವು ಮುಗಿದಕೂಡ
ಲೆ ಅವರು ತಮ್ಮ ತಮ್ಮ ಬಿಡಿವೆಗಳನ್ನು ವ್ಯವಸ್ಥಿತವಾ
ತಕ್ಕಸ್ಥಳದಲ್ಲಿಟ್ಟು ಮತ್ತೊಂದು ಪಾಠದ ಸಾಹಿತ್ಯಗಳನ್ನು
ಜಾಗ್ರತೆಯಿಂದ ತೆಗೆದುಕೊಳ್ಳುವರೋ, ನಕಾಶಗಳನ್ನು ಕಡ
ದಂತೆ ಉಪಯೋಗಿಸುವರೋ, ಇವೇ ಮುಂತಾದ ಸಂಗತಿ
ಗಳನ್ನು ನೋಡುತ್ತಿರಬೇಕು. ಇದರಿಂದ ಹುಡುಗರಲ್ಲಿ ಸ್ವ
ಚ್ಛತೆ, ಓರಣ, ಕೆಲಸವಲ್ಲಿ ಪ್ರೀತಿ, ಮುಂತಾದ ಗುಣಗಳು
ಎಷ್ಟರಮಟ್ಟಿಗೆ ಹುಟ್ಟಿರುತ್ತವೆಂಬದು ತಿಳಿಯುವದು. ಸಾಲಿ
ಯ ಅಂಗಳವೂ ಅದರ ಸುತ್ತುಮುತ್ತಲಿನ ಸ್ಥಳವೂ ಹಸನು
ಇರುವವೋ, ವಿದ್ಯಾರ್ಥಿಗಳು ಗೊತ್ತು ಮಾಡಿಟ್ಟ ಸ್ಥಳದ

ಲ್ಲಿ ಮೂತ್ರಕ್ಕೆ ಹೋಗುವರೋ, ಹೊರಗೆ ಹೋದಾಗ್ಗೆ ಶಾಲೆಯ ಗೋಡೆಯ ಮೇಲೆ ಏಡು, ಬಳಪ ಪೆನ್ಸಿಲು ಇವುಗಳಿಂದ ಏನಾದರೂ ಬರೆಯುವರೋ, ಕಾಗದಗಳನ್ನು ಪರಿಮ ಅತ್ತಿತ್ತ ಹಾರಿಬಿಡುವರೋ, ಇವುಗಳಿಗೂ ಇಂಥ ಬೇರೆ ಸಂಗತಿಗಳಿಗೂ ಮಾಸ್ತರರು ಲಕ್ಷ್ಯಕೊಡಬೇಕಾಗ್ಗುತ್ತದೆ. ಇವುಗಳನ್ನು ಶಿಕ್ಷೆಯ ಭೀತಿಯಿಂದ ನಿಲ್ಲಿಸಿದಷ್ಟಕ್ಕೆ ಶಿಕ್ಷಕರ ಕೆಲಸವು ತೀರಿತು. ಸದ್ಬೋಧದಿಂದ ಈ ಕೆಲಸಗಳು ಕೆಟ್ಟವೆಂದು ಮನಗಾಣಿಸಿಕೊಟ್ಟು, ಅವರ ಮನಸು ಈ ಕೆಲಸಗಳಿಗೆ ಒಲಿಯದಂತೆ ಶಿಕ್ಷಕರು ಮಾಡಬೇಕಾಗ್ಗುತ್ತದೆ.

೩. ಹುಡುಗರು ಮಾಸ್ತರರಿಗೂ, ಮೇಲಾಧಿಕಾರಿಗಳಿಗೂ, ಊರೊಳಗಿನ ಸಭ್ಯಗೃಹಸ್ಥರಿಗೂ ತಾಯಿತಂದೆಗಳಿಗೂ ಮಾನಕೊಡುವರೋ ಇಲ್ಲೋ ಎಂಬವನ್ನು ನೋಡಬೇಕು; ಅವರ ಸಂಗಡ ಮರ್ಯಾದೆಯಿಂದ ಮಾತಾಡುವ ಹಾಗೆ ಆಗ್ರಹಪೂರ್ವಕವಾಗಿ ಹೇಳಬೇಕು. ಸಾಲಿ ಬಿಟ್ಟ ಕೂಡಲೆ ಕೈಯೊಳಗಿನ ಪಾಟಿಯನ್ನು ಶಿಕ್ಕಂತೆ ಬೀಸುತ್ತ ಬುಬ್ಬರನ್ನೊಬ್ಬರು ಬೆನ್ನಟ್ಟುತ್ತ, ಬೈಯುತ್ತ, ಬಡಿದಾಡುತ್ತ, ಬದರಾಡುತ್ತ, ಚೀರಾಡುತ್ತ ಹುಡುದಿ ಹಾಕುತ್ತ, ಹೋಗುವರೋ; ಗುರುಹಿರಿಯರ ಮಾತನ್ನು ಲೆಕ್ಕಿಸದೆ ಮನಬಂದಂತೆ ಮುಂಗಾಟ ಮಾಡುವರೋ, ಎಂಬವನ್ನು ತಿಳುಕೊಳ್ಳುತ್ತಿರಬೇಕು. ವಾಡಿಕೆಯಾಗಿ ಶಿಕ್ಷೆಯ ಭೀತಿಯಿಂದ ವಿನೀತತ್ವವನ್ನು ಕಾಯ್ದುಕೊಂಡಿರುವಂಥ ಸಾಲಿಗಳಲ್ಲಿ ಈ ಕುಚೇಷ್ಟೆಗಳು ಕಣ್ಣಿಗೆ ಬೀಳುವವು. ಆದರೆ ಪ್ರೀತಿ ಸದ್ಬೋಧಗಳಿಂದ ಈ ತರದ ನಡಾವಳಿಗೆ ಅವರು ಮೆಚ್ಚದಂತೆಯೂ ಸಣ್ಣ ಸಣ್ಣ ಕೆಲಸಗಳಲ್ಲಿ ಸಹ ತಾಳ್ಮೆಯೂ ಸಭ್ಯತನವೂ ಸ್ವಾಭಿಮಾನವೂ ಅವರಲ್ಲಿ ಕಂಡುಬರುವಂತೆಯೂ

ಮಾಸ್ತರರು ಅಗ್ರಹ ಪಡತಕ್ಕದ್ದು. ಇದರಿಂದ ಅವರಲ್ಲಿ ವಿನಯವೂ, ದಾಕ್ಷಿಣ್ಯವೂ, ಸ್ವಾಭಿಮಾನವೂ ಹುಟ್ಟುವವು.

೪. ಅವರು ಆಟವ ಸ್ಥಳದಲ್ಲಿದ್ದಾಗ್ಗೆ ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಗಳನ್ನು ಲಕ್ಷವಿಟ್ಟು ಮಾಡುವರೋ ಹಿರೇ ಹುದ್ರಿಗೆ ವಿಧೇಯರಾಗಿ ನಡಕೊಳ್ಳುವರೋ, ಬುಬ್ಬರಿಗೊಟ್ಟರು ನೆರವಾಗುವರೋ, ಜತೆಯವರಿಂದಾದ ತಪ್ಪನ್ನು ಕ್ಷಮಿಸಿ ದೊಡ್ಡ ಮನಸ್ಸಿನಿಂದ ನಡಿಯುವರೋ, ವಾದ ಹುಟ್ಟಲಾಗಿ ಪಂಚರ ತೀರ್ಪಿಗೆ ಸಮ್ಮತಿಸುವರೋ, ಇಲ್ಲನೆ ಬುಬ್ಬರಮೇಲೊಬ್ಬರು ಬೀಳುವರೋ, ಹಟಹಿಡಿದು ದ್ವೇಷ ಬಳಸುವರೋ ಅದೇಮೇರೆಗೆ ಗಂಡು ಹುಡುಗರು ಹೆಣ್ಣು ಹುಡುಗರ ಸಂಗಡ ಸಭ್ಯತನದಿಂದ ನಡಿಯುವರೋ, ದೊಡ್ಡವರು ಸಣ್ಣವರ ಮಾತನ್ನು ಪ್ರೀತಿಯಿಂದ ನಡಿಸುವರೋ, ಹೆಣ್ಣು ಹುಡುಗರು ಹಿಂದೆ ಬರುತ್ತಿದ್ದರೆ ತಾವು ಬವಿಗಾಗಿ ಅವರಿಗೆ ಹಾದಿಬಿಡುವರೋ, ಅಡಬಂದ ಸಣ್ಣ ಹುಡುಗರನ್ನು ಹಿಂದೆಬಿಟ್ಟು ತಾವು ಹೊರಟು ಹೋಗುವರೋ, ಇಲ್ಲವೆ ಅವರನ್ನೊಡಗೊಂಡು ಹೋಗುವರೋ, ಆಟವ ಸಾಮಾನುಗಳನ್ನು ಅತ್ತಿತ್ತ ಬಿಸಾಟ ಮನೆಯ ಹಾದಿ ಹಿಡಿಯುವರೋ, ಇಲ್ಲವೆ ಅವುಗಳನ್ನು ಎತ್ತಿತಕ್ಕ ಸ್ಥಳದಲ್ಲಿ ಜೋಪಾನದಿಂದ ಬಯ್ಸಿಡುವರೋ, ಮುಂತಾದವುಗಳನ್ನು ಎಚ್ಚರದಿಂದ ನೋಡುತ್ತಿರಬೇಕು. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಸ್ವಭಾವವು ತಿಳಿದು ಅವಿನಯ, ತುಂಟುತನ, ಹಟ, ಉರುಮಾರಿತನ, ಮೊದಲಾದ ದುರ್ಗುಣಗಳಿದ್ದರೆ ಅವುಗಳನ್ನು ತಿದ್ದಲನುವಾಗುತ್ತದೆ.

೫. ಶಿಕ್ಷಕರು ತಮ್ಮ ತಮ್ಮ ವರ್ಗದೊಳಗಿನ ಯಾವ ನೊಬ್ಬ ಹುಡುಗನು ನೀತಿಯ ಮಾರ್ಗಕ್ಕೆ ಕುಂದು ತರು

ಮಂಥ ತಪ್ಪು ಮಾಡಿದಕೂಡಲೇ ಲಕ್ಷಗೊಟ್ಟು ಅದನ್ನು ತಿದ್ದುವಂತೆ ಮಾಡುವದು ಮುಖ್ಯ ಮಾಸ್ತರರ ಕೆಲಸವಾಗಿದೆ. ಬಹುಶಃ ಮುಖ್ಯ ಮಾಸ್ತರರು ಟ್ರೇನ್ಡರಿರುತ್ತಾರೆ. ಇಂಥ ವರ ಸಾಲೆಗಳನ್ನು ಅಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳುವ ವಕ್ಕೆ ಹೋದಾಗ್ಗೆ, ವಿದ್ಯಾರ್ಥಿಗಳು ಬಬ್ಬರ ಪಾಟಯಮೇಲಿನವನ್ನು ಮತ್ತೊಬ್ಬರು ಉತಾರಿಸಿಕೊಳ್ಳುವದು, ಬಬ್ಬರಿಗೊಬ್ಬರು ಮಾತಾಡುವದು, ಸನ್ನೆಮಾಡುವದು, ಮುಂತಾದ ಕೃತ್ಯಗಳನ್ನು ಮಾಸ್ತರರು ನೋಡಿದಾಗ್ಯಾದರೂ ನೋಡದವರಹಾಗೆ ಸುಮ್ಮನಿರುತ್ತಾರೆ; ಇಷ್ಟೇ ಅಲ್ಲ, ಅಧಿಕಾರಿಗಳು ಬಮ್ಮೊಮ್ಮೆ ತಾವೇ ನೋಡಿ ಮಾಸ್ತರರಿಗೆ ತಿಳಿಸಿದರೆ ಸಹ ಅವಕ್ಕೆ ಬಪ್ಪಿಕೊಳ್ಳದೆ ಸುಮ್ಮನೆ ಇತ್ತಂಡವಾದ ಮಾಡುತ್ತ ಕೂಡ್ರುವದು ನಮಗೆ ಗೊತ್ತುಂಟು. ಇದು ಎಷ್ಟು ಅಯೋಗ್ಯವೆಂಬವನ್ನು ಪ್ರತಿಯೊಬ್ಬ ಮಾಸ್ತರನೇ ವಿಚಾರಿಸತಕ್ಕದ್ದು. ವಿದ್ಯಾರ್ಥಿಗಳು ಕಲಿತ ವಿಷಯಗಳಲ್ಲಿ ಬಂದು ಪೇಳೆನಾಪಾಸಾದರೆ ಸಾಲೆಗೆ ಕುಂದು ಬರದು; ಆದರೆ ಅವರು ಅಪ್ರಮಾಣಿಕರೂ ಮೋಸಗಾರರೂ ಎಂದು ಕಂಡುಬಂದರೆ ಸಾಲೆಗೂ ಶಾಲಾಮಾಸ್ತರರಿಗೂ ಅವರ ಶಿಕ್ಷಣಕ್ಕೂ ಕುಂದು ತಪ್ಪದು.

೬. ಅಭ್ಯಾಸ ನಡೆದಾಗ ವಿದ್ಯಾರ್ಥಿಗಳು ಉತ್ಸಾಹವುಳ್ಳವರೂ ಮನಸುಗೊಟ್ಟು ಕಲಿಯುವವರೂ ತಮ್ಮ ಕೆಲಸಗಳನ್ನು ಕ್ರಮವಮಟ್ಟಿಗೆ ತಾವೇ ಮಾಡಲಿಕ್ಕೆ ಹವಣಿಸುವವರೂ ಇರುವರೋ, ಇಲ್ಲವೆ ಸೋಮಾರಿಗಳಾದದರಿಂದ ಅವರಿಗೆ ಕೆಲಸವನ್ನು ತೀವ್ರಮಾಡಿರಿ ಎಂದು ಮೇಲಿಂದಮೇಲೆ ಹೇಳಬೇಕಾಗುವದೋ, ಕಾಲುಮೇಜುಗಳನ್ನಪ್ಪಳಿಸಿ ಸಿಟ್ಟು ಮಾಡಿ ಅಭ್ಯಾಸಕ್ಕೆ ಲಕ್ಷಗೊಡಿರೆಂದು ಹೇಳಬೇಕಾ

ಗುವದೋ, ವಿದ್ಯಾರ್ಥಿಗಳು ಅಪ್ಪಣೆ ಇಲ್ಲದೆ ನಡುನಡುವ ಹೊರಟು ಹೋಗುವರೋ, ಈ ಸಂಗತಿಗಳಿಗೆ ಲಕ್ಷಗೊಡ ಬೇಕು. ಕೆಲವು ಮಾಸ್ತರರು ಶುದ್ಧಬರಿಸುವಾಗ್ಗೆ ತೀರ ಸೋ ಮಾರಿಯಾದ ಹುಡುಗನು ಬರೆಯುವತನಕ ಹಾದೀ ನೋ ಡಿ, ಬರೆಯ ಹೇಳುತ್ತಿರುತ್ತಾರೆ, ಇದರಿಂದ ಅವನು ಚುರು ಕನಾಗುವದಕ್ಕೆ ಬದಲಾಗಿ ಲಕ್ಷಗೊಡುವಂಥ ಹುಡುಗರು ಸಹ ದುರ್ಲಕ್ಷ ಮಾಡಹತ್ತುತ್ತಾರೆ.

೩. ವಿದ್ಯಾರ್ಥಿಗಳು ಚುರುಕರೂ ಚಟುವಟಿಕೆಯುಳ್ಳವ ರೂ ಇರುತ್ತಾರೋ ಅಥವಾ ಸೋಮಾರಿಗಳಾಗಿ ಹೊಯಿದಾ ಡುತ್ತ ಶರೀರಾಭಿವೃದ್ಧಿಗೆ ಅಪಾಯವಾಗುವಹಾಗೆ ಕಾಲು ಮುದುಡಿಕೊಂಡು ಕಾಲುಮೇಲೆ ಕಾಲು ಹೇರಿಕೊಂಡು, ಇಲ್ಲನೆ ಬಬ್ಬರಮೇಲೊಬ್ಬರು ಬರಿಗಿಕೊಂಡು ಕೂಡ್ರುವ ರೋ ಎಂಬವನ್ನು ನೋಡುತ್ತಿರಬೇಕು.

ಮೇಲಿನ ಸೂಚನೆಗಳಿಂದ ನೀತಿ ಶಿಕ್ಷಣದ ಕೆಲಸದಲ್ಲಿ ಮಾಸ್ತರರಿಗೆ ತಕ್ಕಮಟ್ಟಿಗೆ ಸಹಾಯವಾಗಬಹುದೆಂದು ನೆನ ಸುತ್ತೇವೆ. ಇವರಲ್ಲಿ ವಿವರಿಸಿವ ಗುಣಗಳು ವಿದ್ಯಾರ್ಥಿಗಳಿಗೆ ಹತ್ತಬೇಕಾವರೆ ಶಿಕ್ಷಕರಾದರೂ ನೀತಿವಂತರೂ, ಬುದ್ಧಿವಂ ತರೂ, ಕರ್ತವ್ಯನಿಷ್ಠರೂ ಮನಮುಟ್ಟಿ ಕೆಲಸ ಮಾಡುವ ವರೂ ಇರಲಿಕ್ಕೆ ಬೇಕು. ಸೃಷ್ಟಿ ಪದಾರ್ಥಗಳಿಗೂ ಕೃತ್ರಿ ಮ ಪದಾರ್ಥಗಳಿಗೂ ಇರುವ ಭೇದವನ್ನೂ, ಸೃಷ್ಟಿ ಪದಾ ರ್ಥಗಳ ಪೂರ್ಣತ್ವವನ್ನೂ ಪರಸ್ಪರ ಪ್ರಯೋಜಕತ್ವವ ನ್ನೂ, ಆ ಪದಾರ್ಥಗಳ ನಿರ್ಮಿಸಿದವನ ಅತರ್ಕ್ಯವಾದ ಜಾ ಣ್ಮೆಯನ್ನೂ ವಿದ್ಯಾರ್ಥಿಗಳಿಗೆ ಯಾವಾಗಲೂ ಅವರು ಬಿಡ ದು ಹೇಳುತ್ತಿರಬೇಕು. ಸೃಷ್ಟಿ ಪದಾರ್ಥಗಳ ನಿಯಮಾ ನುಸರಣವನ್ನೂ ಮತ್ತು ಪರಸ್ಪರ ಪ್ರಯೋಜಕತ್ವವನ್ನು

ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆಲೆಗೊಳಿಸಿದರೆ ಸೃಷ್ಟಿಯಲ್ಲಿ ಶ್ರೇಷ್ಠವಾದ ಮನುಷ್ಯಎಂಬ ತಮ್ಮ ಬಿರುದಿಗೆ ತಕ್ಕಂತೆಯೂ ಸೃಷ್ಟಿಕರ್ತನ ಉದ್ದೇಶಕ್ಕೆ ಅನುರೂಪವಾಗಿಯೂ ಅವರು ನಡಿಯುವರು ಅಂದರೆ ಸ್ವಪರಹಿತಸಾಧಕರೂ, ಪರೋಪಕಾರಪ್ರಿಯರೂ, ಪರಪೀಡಾ ಪರಾಙ್ಮುಖರೂ, ಧಾರ್ಮಿಕರೂ ಆಗುವರೆಂಬದಕ್ಕೆ ಸಂದೇಹವಿಲ್ಲ.

HISTORY.

ಇತಿಹಾಸ.

(ಕಳೆದ ಪುಟದಿಂದ ಮುಂದೆ ಸಾಗಿದ್ದು.)

ಮೇಲೆ ಹೇಳಿರುವಂಥ ಸತ್ಪುರುಷರು ಯಾವದಾವರೊಂದು ದೇಶದೊಳಗೆ ದೇವರ ಅಂತಃಕರಣದಿಂದ ಒಮ್ಮೊಮ್ಮೆ ಹುಟ್ಟುತ್ತಾರೆ. ಅನೇಕ ಜನರು ಅವರ ವರ್ತನೆಕ್ರಮವನ್ನು ನೋಡಿಕೊಂಡು ಅದರಂತೆ ತಾವೂ ನಡೆದು ಹೆಸರಿಗೆ ಬರುತ್ತಾರೆ. ಅವರು ತೀರಿದರೆಂದರೆ ಆಗಿ ಹೋಯಿತು. ಇತಿಹಾಸ, ಚರಿತ್ರ ಮುಂತಾದವುಗಳನ್ನು ಬರೆದಿಡುವ ಸಾಂಪ್ರದಾಯವಿಲ್ಲದಿದ್ದರೆ ೫೦।೬೦ ವರ್ಷಗಳಲ್ಲಿಯೇ ಅವರ ಸುದ್ದಿಯು ಸಹ ಯಾರಿಗೂ ಇಲ್ಲದಂತೆ ಆಗಿಹೋಗುವದು. ಆ ಮೇಲೆ ಮುಂದಿನ ಸಂತತಿಯವರಲ್ಲಿ ಉತ್ಸಾಹ ಹುಟ್ಟುವ ಬಗೆಹ್ಯಾಗೆ? ಮತ್ತು ಆ ದೇಶದ ಹಿಂದಿನ ಗೌರವವು ಹ್ಯಾಗೆ ಸ್ಥಿರವಾಗಿ ನಿಲ್ಲುವದು? ಇತಿಹಾಸದಿಂದ ಬೇರೆ ಉಪಯೋಗವೇನು ಇಲ್ಲವೆಂದು ಭಾವಿಸಿದರೂ ಇದೊಂದು ಉಪಯೋಗವು ಕಡಿಮೆ ಯೋಗ್ಯತೆಯುಳ್ಳದ್ದೋ? ಹೋಮರನೆಂಬ ಕವಿಯು ಅಕಿಲೀಸನ ಪರಾಕ್ರಮಗಳನ್ನು ವರ್ಣಿಸದಿದ್ದರೆ ಜಗದ್ವಿಖ್ಯಾತನಾದ ಸಿಕಂದರನು ಹೆಸರಿಗೆ ಬರುತ್ತಿದ್ದನೋ? ವ್ಯಾಸನು ಪಾಂಡವರ ಶೌರ್ಯೌದಾ

ಯೌವನದಿ ಗುಣಗಳನ್ನು ವರ್ಣಿಸದಿದ್ದರೆ, ಶಿವಾಜಿಯು ಸಾಹಸ ಮಾತಿ ಮುಸಲ್ಮಾನರಿಂದ ರಾಜ್ಯಲಕ್ಷ್ಮಿಯನ್ನು ತೆರುಗಿ ಕಸುಕೊಳ್ಳುತ್ತಿದ್ದನೋ? ಶಿಕಂದರನ ಚರಿತ್ರವೇ ಇಲ್ಲದಿದ್ದರೆ ಸೀಸರನು ಇಷ್ಟು ಹೆಸರು ಪಡಿಯುತ್ತಿದ್ದನೋ? ಸೀಸರನ ಇತಿಹಾಸವು ಇಲ್ಲದಿದ್ದರೆ ನೆಪೋಲಿಯೇನನ ಕೀರ್ತಿಯು ಇಷ್ಟು ಹಬ್ಬುತ್ತಿತ್ತೋ? ಶಿವಾಜಿಮಹಾರಾಜನ ಹೆಸರು ಅವನ ಹಿಂದೆ ಉಳಿಯದಿದ್ದರೆ, ಅವನ ಮಗನು ಕೊಲ್ಲಲ್ಪಟ್ಟ ರಾಜಸಂತತಿಯೂ ರಾಜಧಾನಿಯೂ ವೈರಿಗಳ ಕೈಶೇರಿ ದೇಶವೆಲ್ಲ ಮ್ಲೇಂಛಮಯವಾದಾಗ್ಯೂ ಮರಾಠೀ ಜನರು ದಿಲ್ಲಿಯ ಅವರಂಗಜೇಬ ಬಾದಶಹನನ್ನು ಜೇರಿಗೆ ತಂದು ಜೀವಾ ಉಳಿಸಿಕೊಳ್ಳುವವಕ್ಕೆ ಅಹಮದನಗರಕ್ಕೆ ಅವನು ಓಡಿ ಹೋಗುವಂತೆ ಮಾಡುತ್ತಿದ್ದರೋ? ದೊಡ್ಡ ಜಾಜೀ ರಾಯನು ದಾಭಾಡೇನು ಎಬ್ಬಿಸಿದ ಬಂಡನ್ನು ಅಣಗಿಸಿ ಮೊಗಲ ಸರದಾರನ ಹೆಮ್ಮೆಯನ್ನೂ ಹೈದರಾಬಾದದ ನಿಜಾಮನ ಸೊಕ್ಕನ್ನೂ ಮುರಿಯುತ್ತಿದ್ದನೋ? ರಘು ನಾಥರಾಯನು ಗಿಲಚಿಯರನ್ನು ಬೆನ್ನಟ್ಟಿ ಅಟಕ್ಕದ ಆಚೆಗೆ ಓಡಿಸಿ ಬಿಡುತ್ತಿದ್ದನೋ? ಇಡೀ ಜಗತ್ತಿಗೆ ಮಿಗಿಲಾದ ಇಂಗ್ಲಿಷರಿಗೆ ಸಹ ಹಣಿಯದಂಥ ಹೈದರನನ್ನು ದೊಡ್ಡ ಮೂಫವರಾಯನು ಬಾರಿಬಾರಿಗೆ ಬೆನ್ನಟ್ಟಿ ದಿಕ್ಕಾಪಾಲಾಗಿ ಓಡಿಸುತ್ತಿದ್ದನೋ? ಪುಕ್ಕನೂ ತಿಳಿಗೇಡಿಯೂ ಎಂದು ಹೆಸರಾದ ಕಡೇ ಪೇಶವೆಯು ತನ್ನ ಅರಸುಮನೆತನಕ್ಕೆ ಕುಂದು ತಂದು ಪಲಾಯನ ಹೇಳಿಸಿದಾಗ್ಯಾದರೂ ವೈರಿಗಳ ಪೀಳಿಗೆ ಬಬ್ಬನೇ ಸಾಗಿಹೋದಂಥ ಆ ಅಸಹಾಯಶೂರನಾದ ಬಾಪೂಗೋಖಲೇನು ಅಷ್ಟಿಯ ಕಡುಭಯಂಕರವಾದ ರಣವನ್ನಿ ಹೋರಾಡಿ ಬಿದ್ದು ಸಾಯುತ್ತಿದ್ದನೋ? ಈ ಅತ್ಯದ್ಭುತವಾದ ಕೃತ್ಯಗಳೆಲ್ಲ ಅನುಕರಣದ ಫಲಗಳಾಗಿವೆ.

ಈ ಜನರು ಆಗಿ ಹೋದ ಮೇಲೆ ಕಾಲಾವಧಿಯಿಂದ ಅವರ ನೆನಪು ಸಹ ಉಳಿಯುವದಿಲ್ಲ; ಆದರೆ ಇಂಥವರ ಹೆಸರು ಬಹುಕಾಲ ಉಳಿಯಲಿಕ್ಕೆ ಇತಿಹಾಸವು ಅಗತ್ಯವುಳ್ಳದ್ದದೆ. ಬಂದು ಮೇಳೆ ದೇಶದ ಸ್ಥಿತಿಯು ತೀರಾ ಬದಲಾಗಿ ಹೋದರೂ ಅವರ ಚರಿತ್ರಗಳನ್ನು ಓದಿಕೊಂಡು ಮುಂದೆ ಯಾರಿಗಾದರೂ ಹುರುಪು ಹುಟ್ಟಬಹುದು. ಪ್ರಾಚೀನಕಾಲದ ಗ್ರೀಕ ರೋಮನ ರಾಜ್ಯಗಳೂ ಇತ್ತ್ತಕಡೆಯ ಇಂಗ್ಲಂಡ ಫ್ರಾನ್ಸ ಮುಂತಾದ ರಾಜ್ಯಗಳೂ ಇಷ್ಟು ದಿವಸಗಳವರೆಗೆ ಸ್ಥಿರವಾಗಿ ನಿಂತದ್ದಕ್ಕೆ ಇತಿಹಾಸವು ಬಂದು ಮುಖ್ಯಕಾರಣವಾಗಿರುತ್ತದೆಂಬದಕ್ಕೆ ಸಂಶಯವಿಲ್ಲ. ಎಲ್ಲ ದೇಶಗಳಲ್ಲಿ ಶೂರರೂ ರಾಜ್ಯ ಕಾರ್ಯಧುರಂಧರರೂ ಉಂಟಾಗಲಿಕ್ಕೆ ಅನುಕೂಲವಿರುವದಿಲ್ಲೆಂದು ಕೆಲವರ ಮತ ಉಂಟು, ಇದು ಸತ್ಯವದೆ. ಇಷ್ಟರಿಂದಲೇ ಇತಿಹಾಸದ ಉಪಯೋಗವು ಗೌಣವಾದದ್ದೆಂದು ಅನ್ನಕೂಡದು. ಸಾವಿರಗಟ್ಟಲೆ, ಬಹ್ಮೊಮ್ಮೆ ಲಕ್ಷಗಟ್ಟಲೆ ಜನರು ಗುರುವಿನ ಉಪಗ್ರಹಗಳನ್ನೂ ಶನಿಯ ವಲಯವನ್ನೂ ದುರ್ಬೀನಿನೊಳಗಿಂದ ಆಗಾಗ್ಗೆ ನೋಡುತ್ತಾರೆ. ಇದರಿಂದ ಆ ಉಪಗ್ರಹಗಳೂ ಆ ವಲಯವೂ ತಮ್ಮ ವಶವಾಗುವಂತೆ ಅವರಿಗೆ ತೋರುತ್ತಿರುತ್ತದೆಯೋ? ಇಲ್ಲ. ಉಪಗ್ರಹಗಳನ್ನೂ ವಲಯಗಳನ್ನೂ ನೋಡಿ ಸೃಷ್ಟಿಕರ್ತನ ಚಾತುರ್ಯವು ಅವರ ಮನಸಿನಲ್ಲಿ ಬಿಂಬಿಸುವದರಿಂದಾಗುವ ಲಾಭವು ಅವುಗಳು ವಶವಾಗುವದರಿಂದಾಗುವ ಲಾಭಕ್ಕಿಂತ ಸಾವಿರ ಪಾಲು ಹೆಚ್ಚಾದವದ್ದಲ್ಲವೋ? ಇದೇಮೇರೆಗೆ ಶಿಕಂದರಬಾದಶಹನ ಅಥವಾ ಶಿವಾಜಿಯ ಪರಾಕ್ರಮಗಳನ್ನೂ ಸಾಮರ್ಥ್ಯವನ್ನೂ ಓದಿದರೆ, ಮನುಷ್ಯನ ಬುದ್ಧಿಬಲವು ಎಷ್ಟು ಇರುತ್ತದೆಂಬದೂ, ಬಹ್ಮೊಮ್ಮೆ ಒಬ್ಬ ಮನುಷ್ಯನೇ ಅಪರಿಮಿತ ಜನರ ಬಳಿತು ಹೀನಗಳಿಗೆ ಹ್ಯಾಗೆ ಕಾರಣ

ನಾಗುತ್ತಾನೆಂಬದೂ ಸ್ಪಷ್ಟವಾಗಿ ತಿಳಿಯುವದು. ನೋಡಿರಿ, ಇಡೀ ಯುರೋಪ ಖಂಡವು ಅಂಕಿತವಾದಾಗ್ಯೂ ನೆಪೋಲಿಯೋನನ ಆಶೆಯು ಕಡಿಮೆಯಾಗದೆ ಮತ್ತೂ ಹೆಚ್ಚಾಯಿತು. ಕಟ್ಟಕಡಿಗೆ ಬಂದೂವರಿ ವರ್ಷದಲ್ಲಿಯೇ ಅವನ ಹಾಡು ಏನಾಯಿತು? ದೊಡ್ಡ ದೊಡ್ಡ ಅರಸರನ್ನು ಸಹ ಮಣ್ಣುಮುಕ್ಕಿಸಿದಂಥ ಆ ನೆಪೋಲಿಯೋನನು ದೈವಗತಿಯೊಂದು ಪ್ರತಿಕೂಲವಾದಕೂಡಲೆ ಬಂದು ಮೂಲೆಯೊಳಗಿನ ನಡುಗಡ್ಡೆಯಲ್ಲಿ ಹೋಗಿ ಬೀಳಬೇಕಾಯಿತು. ಅವನು ಜೀವಂತನಿರುವಾಗ್ಗೆ ಅವನಶರೀರವನ್ನು ನೋಡಿದಕೂಡಲೆ ಇಡೀ ಯುರೋಪ ಖಂಡವು ಗದಗುಟ್ಟ ನಡಗುತ್ತಿತ್ತು. ಆದರೆ ಸತ್ತಮೇಲೆ ಅವನ ಶರೀರವನ್ನು ಅವನ ರಾಜಧಾನಿಯಲ್ಲಿಯೇ ಹೂಳಿಡಬೇಕಾದರೆ ಅವನ ಹಗೆಗಳ ಅಪ್ಪಣೆಯನ್ನು ಪಡೆಯಬೇಕಾಯಿತು? ಹರಹರಾ! ಲಕ್ಷಾವಧಿಜನರನ್ನು ನಾಕವೊಡಿ ಅವನು ತನ್ನೊಂದಿಗೆ ಏನು ಕಟ್ಟಕೊಂಡು ಹೋದನು? ಇಷ್ಟು ಅಗಾಧವಾದ ಬುದ್ಧಿಬಲಕ್ಕೆ ತುಸುವಾದರೂ ಪರೋಪಕಾರದ ಸಂಸರ್ಗವಿದ್ದರೆ ಈ ಜಗತ್ತಿಗೆ ಎಷ್ಟು ಹಿತವಾಗುತ್ತಿತ್ತು? ಶಿವಾಜಿಮಹಾರಾಜನ ಚರಿತ್ರವನ್ನು ನೋಡಿರಿ; ತಂದೆಯು ಅವನನ್ನು ಅವನ ತಾಯಿಯೊಂದಿಗೆ ವಾನವಡಿಯಲ್ಲಿ ಇಟ್ಟರಲು, ದಾದೋಜಿಕೊಂಡದೇವನು ಕಲಿಸಿದ ತುಸು ವಿದ್ಯದಿಂದಲೇ ಅವನು ಎಷ್ಟು ಅತ್ಯದ್ಭುತವಾದ ಕಾರ್ಯಗಳನ್ನು ಮಾಡಿದನು! ಸುಮಾರು ಸಾವಿರ ವರ್ಷಗಳವರೆಗೆ ಅಸ್ತಂಗತವಾದಂಥ ಹಿಂದು ಜನರ ರಾಜ್ಯವೈಭವವು ಪುನಃ ಮೂವಳವ ಗುಡ್ಡದಮೇಲೆ ಉದಯಿಸಿತು! ಅವನ ಜೀವದ ಗೆಳೆಯರಾದ ತಾನಾಜಿ ಮತ್ತು ಸೂಯರ್ಾಜಿ ಎಂಬವರು ಥರಮೂಪಿಲಿಯ ಕಾಳಗದಲ್ಲಿ ಹೆಸರು ಪಡೆದ

ಲಿಯೋನಿದಾಸನೆಂಬ ಕಲಿಯನ್ನು ಸಹ ನಾಚಿಸಿದರು! ಇಡೀ ಪೃಥ್ವಿಯಲ್ಲಿ ಕೀರ್ತಿಗೊಂಡಂಥ ಮತ್ತು ಮೊಗಲ ಸಾಮ್ರಾಜ್ಯದ ಆಗರವಾದಂಥ ದಿಲ್ಲಿಯ ಪಟ್ಟಣವನ್ನು ಸಹ ಅವನು ಎರಡು ಸಾರೆ ನಿರ್ಭಯದಿಂದ ಸುಲಿದನು. ಪಿಡಾ ಪುರವನ್ನೆಂತು ಹೌ ಹೌ ಆನ್ನುವದರೊಳಗಾಗಿ ಹಾಳುಮಾ ಡಿ ಶಿವಾಜಿ ಎಂಬುವವನು ಒಬ್ಬನೋ ಇಬ್ಬರೋ ಎಂಬ ಭ್ರಾಂತಿಯು ಗರ್ವದಿಂದ ಮುದವೇರಿದ ಆ ಮ್ಲೆಂಛರಿಗೆ ಬೀಳುವಂತೆ ಮಾಡಿಬಿಟ್ಟನು. ಇದು ಎಂಥ ಶೌರ್ಯದ ಕೆಲಸವು! ಇವಕ್ಕೂ ಹೆಚ್ಚು ಸ್ತುತಿಗೆ ಪಾತ್ರವಾದ ಇನ್ನೂ ದು ಅವನಲ್ಲಿನ ಗುಣವೇನೆಂದರೆ ಸದಾಚರಣಪ್ರೀತಿಯು. ಸಾಧಾರಣವಾಗಿ "ಲಾಭಾಲ್ಲೋಭಃ ಪ್ರವರ್ತತೇ" ಅಂದರೆ ಲಾಭವು ಹೆಚ್ಚಿಚ್ಚು ಆದಂತೆ ಲೋಭವು ಹೆಚ್ಚಿಚ್ಚಾಗುತ್ತ ಹೋಗುತ್ತದೆ. ಆವದರಿಂದ ಇದ್ದಷ್ಟರಲ್ಲಿಯೇ ತೃಪ್ತನಾಗಿರುವ ಕೂಲಿಕಾರನು ಸಹ ದೊಡ್ಡ ದೊಡ್ಡ ಅರಸರಿಗಿಂತ ಸಂತುಷ್ಟನಾಗಿರುವನು; ಎಂಬ ಮಾತಿಗೆ ಎನೂ ಸಂಶಯವಿಲ್ಲ. ಈ ಮೇರೆಗೆ, ಹಿತವ ಅನೇಕ ಸಂಗತಿಗಳು ಮನಸಿನಲ್ಲಿ ಅಂಕುರಿಸಿದರೆ ಅದರಿಂದ ಮನುಷ್ಯನಿಗೆ ದೊಡ್ಡ ಅಧಿಕಾರ ಪ್ರಾಪ್ತಿಗಿಂತ ಹೆಚ್ಚು ಲಾಭವಾಗಲಿಕ್ಕಿಲ್ಲವೋ? ಮೇಲೆ ಹೇಳಿದ ಯಾವತ್ತು ಕಾರಣಗಳಿಂದ ಇತಿಹಾಸವನ್ನು ಓದುವವರಿಂದ ಮನಸಿಗೆ ಉನ್ನತಿಯೂ ಸಮಾಧಾನವೂ ದೊರಕುತ್ತವೆ.

ಇತಿಹಾಸದಿಂದ ಆಗುವ ನಾಲ್ಕನೇ ಲಾಭವೇನಂದರೆ:— ಮನೋರಂಜನವು. ಬೇರೆ ಬೇರೆ ದೇಶಗಳಲ್ಲಿ ಸಂಭವಿಸಿದಂಥ ವೃತ್ತಾಂತಗಳನ್ನು ತಿಳುಕೊಳ್ಳುವದರಿಂದಲೂ ಅದರ ಬಗ್ಗೆ ವಿಚಾರ ಮಾಡುವದರಿಂದಲೂ ಮೇಲೆ ವಿವರಿಸಿದಂತೆ

ಜಿಜ್ಞಾಸಾವೃತ್ತಿಯು ಸಮಾಧಾನ ಹೊಂದುವದಂತು ನಿಜವೇ. ಮತ್ತು ಇತಿಹಾಸವು ತಕ್ಕ ಕೌಶಲ್ಯದಿಂದ ಬರಿಯಲ್ಪಟ್ಟಿದ್ದರೆ ಅವನ್ನು ಓದುವದರಿಂದ ಸಂತೋಷವಾದರೂ ಆಗುತ್ತದೆ. ಈ ಮೂದರಿಯ ಇತಿಹಾಸದ ಗ್ರಂಥಗಳು ಗ್ರೀಕ, ಲಾತಿನ್, ಫಾರ್ಸೀ ಭಾಷೆಗಳಲ್ಲಿ ಉಂಟು. ಇತ್ತೀಚ್ಛಲಾಗಿ ಹ್ಯೂಮ್ ಗಿಬನ್ ಮೆಕಾಲೆ ಎಂಬ ಹೆಸರಾದ ಗ್ರಂಥಕಾರರು ಬರೆದ ಇಂಗ್ಲಿಷ ಇತಿಹಾಸಗಳು ಬಣ್ಣಿಸತಕ್ಕ ಗ್ರಂಥವುಗಳಾಗಿವೆ. ಇಂಥ ಇತಿಹಾಸಗಳ ಭಾಷಾಸರಣಿ, ಯಥಾಸ್ಥಿತ ಗ್ರಂಥರಚನೆ, ಕಥಾನಕದ ಸಂಬಂಧ, ವೌಢವಿಚಾರ, ತರತರದ ಸಂಗತಿಗಳನ್ನು ನಡುನಡುವೆ ಸೇರಿಸುವ ಜಾಣತನ, ಇವು ಹೆಚ್ಚು ಕಡಿಮೆ ಇದ್ದಂತೆ ಗ್ರಂಥಗಳು ಜನರಿಗೆ ಹೆಚ್ಚು ಕಡಿಮೆ ಪ್ರಿಯವಾಗುತ್ತವೆ.

(ಮುಂದಕ್ಕೆ ಸಾಗುವದು)

MAXIMS.

ಹಿತ ವಚನಗಳು.

ನ್ಯೂಆರ್ಲೀನ್ಸ್ ಪಟ್ಟಣದಲ್ಲಿಯ ಜೌನ್ ಎಮ್ ಡೊನಾಗ್ ಎಂಬುವನೊಬ್ಬ ಹೆಸರಾದ ಕೋಟ್ಯಾಧೀಶನು ಕೆಳಗೆ ಬರೆದ ನೀತಿಯ ವಚನಗಳನ್ನನುಸರಿಸಿ ತನ್ನ ಆಯುಷ್ಯ ಕ್ರಮವನ್ನು ನೆಡಿಸಿವ್ವಲ್ಲದೆ ಅವುಗಳನ್ನು ತನ್ನ ಗೋರಿಯ ಮೇಲೆಯೂ ಬರಿಸಿದ್ದಾನೆ. ಅವು ಯಾವವೆಂದರೆ:—

೧. ನಿಮ್ಮ ಅಸ್ತಿತ್ವಕ್ಕೆ ಆಧಾರಭೂತವಾದ ಸಂಗತಿಗಳಲ್ಲಿ ಮಿಡಿಯೋಣವು ಬಂದಾಗಿದೆಂಬ ಮಾತನ್ನು ಮರಿಯಬೇಡಿ. ವೇಳೆಯು ಬಂಗಾರಕ್ಕೆ ಸರಿಯಾವದ್ದು. ಬಂದು ನಿಮಿಷವನ್ನಾದರೂ ವ್ಯರ್ಥಗಳೆಯದೆ ಯಾವಾಗಲು ಕೆಲಸದಲ್ಲಿ ತೊಡಗಿರ್ರಿ.

೨. ಅನ್ಯರು ನಿಮ್ಮನ್ನು ಹ್ಯಾಗೆ ನಡಿಸಿಕೊಳ್ಳಬೇಕೆಂದು

ಬಯಸುತ್ತೀರೋ, ಅದರಂತೆ ನೀವೂ ಅನ್ಯರನ್ನು ನಡಿಸಿಕೊಳ್ಳಿರಿ.

೩. ಈ ಹೊತ್ತಿನ ಕೆಲಸವನ್ನು ನಾಳಿಗೆ ಹಾಕಬೇಡಿರಿ.

೪. ನಿಮ್ಮ ಕೈಲಾಗುವ ಕೆಲಸವನ್ನು ಮತ್ತೊಬ್ಬರಿಗೆ ಎಂದೂ ಹೇಳಬೇಡಿರಿ.

೫. ಪರರ ಬಡವೆಯನ್ನು ಎಂದೂ ಬಯಸಬೇಡಿರಿ.

೬. ಅಲಕ್ಷ ಮಾಡುವಷ್ಟು ಕ್ಷುಲ್ಲಕವಾದ ಸಂಗತಿಗಳು ಯಾವವೂ ಇಲ್ಲೆಂಬದನ್ನು ಮರಿಯಬೇಡಿರಿ; ಅಂದರೆ ಯಾವದೊಂದು ಸಂಗತಿಯು ಎಷ್ಟು ಕ್ಷುಲ್ಲಕವಾಗಿ ತೋರಿದಾಗ್ಯೂ ಅದಕ್ಕೆ ದುರ್ಲಕ್ಷ ಮಾಡಬೇಡಿರಿ.

೭. ನಿಮ್ಮ ಮೊದಲಿನ ಪ್ರಯತ್ನವು ಕೈಗೂಡದಿದ್ದರೆ ಅಷ್ಟಕ್ಕೆ ಎದೆಗುಂದಿ ಕೈಮುಚ್ಚಿಕೊಂಡು ಕೂಡ್ರಬೇಡಿರಿ.

೮. ನಿಷ್ಪ್ರಯೋಜನದ ಕೆಲಸಕ್ಕೆ ಕೈಹಾಕಬೇಡಿರಿ.

೯. ನಿಮ್ಮ ಪ್ರಪಂಚದ ಕಾರ್ಯಗಳನ್ನು ನಿಯಮದಿಂದ ಸಾಗಿಸಿರಿ.

೧೦. ನಡಿಯುವ ಕಾಲಕ್ಕೆ ಕೈಲಾದಷ್ಟು ಬಳಿತು ಮಾಡಲಿಕ್ಕೆ ಜಪ್ಪಿಸಿರಿ.

೧೧. ನಿಮ್ಮ ಸುಖಸಾಧನೆಗಳಲ್ಲಿ ಯಾವದೊಂದನ್ನು ಕಡಿಮೆ ಮಾಡಿಕೊಳ್ಳಬೇಡಿರಿ; ಆದರೆ ಒಣ ಡಂಭಾಚಾರಕ್ಕೂ ಅಟ್ಟಹಾಸಕ್ಕೂ ಬೀಳಬೇಡಿರಿ.

೧೨. ನೀವು ಜೀವದಿಂದಿರುವ ಮಟ್ಟಿಗೂ ಕರ್ತವ್ಯನಿಷ್ಠರಾಗಿ ದುಡಿಯುತ್ತಿರ್ರಿ.

NOTES ON GRAMMAR.

ವಾಕ್ಯಗಳನ್ನು ಪರೀಕ್ಷಿಸುವದೂ, ತಿದ್ದುವದೂ.

ಕನ್ನಡ ಭಾಷೆಯಲ್ಲಿ ಗ್ರಂಥಗಳು ತೀರ ಕಡಿಮೆಯಾಗಿ

ರುವವೆಂಬವು ವಿದ್ಯಾಖಾತೆಯ ಮುಖ್ಯಾಧಿಕಾರಗಳ ಲಕ್ಷಕ್ಕೆ ಬಂದವರಿಂದ ಅವರು ಕನ್ನಡದಲ್ಲಿ ಗ್ರಂಥಗಳನ್ನು ಬರೆಯುವವರಿಗೆ ತುಸು ದಿವಸಗಳಿಂದ ಇತ್ತಲಾಗಿ ಉತ್ತೇಜನ ಕೊಡತೊಡಗಿದ್ದಾರೆ. ಈ ಉತ್ತೇಜನದಿಂದ ವಿದ್ಯಾಖಾತೆಯೊಳಗಿನ ಹಲವು ಜನರು ಗ್ರಂಥಗಳನ್ನು ಬರೆಯಲಿಕ್ಕೆ ಪ್ರಯತ್ನಿಸಹತ್ತಿದ್ದಾರೆ. ಅವರೆ ವ್ಯಾಕರಣದ ನಿಯಮಗಳನ್ನು ಬಿಟ್ಟಿ ಲಕ್ಷದಲ್ಲಿಟ್ಟು, ಭಾಷಾಪದ್ಧತಿಯೆನ್ನು ಚನ್ನಾಗಿ ತಿಳಿದುಕೊಂಡು, ಮಾನ್ಯರಾದ ಗ್ರಂಥಕಾರರ ಬರಹದ ಸರಣಿಯನ್ನು ನೋಡಿ, ಕನ್ನಡ ಗ್ರಂಥಗಳನ್ನು ಬರೆಯುವವರು ಅಪರೂಪ. ಮಾತಾಡಿದಂತೆ ವಾಕ್ಯಗಳನ್ನು ಬರೆಯುತ್ತ ಹೋದರೆ ಅದೆಲ್ಲ ಗ್ರಂಥಕ್ಕೆ ತಕ್ಕ ಭಾಷೆಯಾಗಲಾರದು. ಇತ್ತಲಾಗಿ ಬರೆಯಲ್ಪಟ್ಟ ಕನ್ನಡ ಪುಸ್ತಕಗಳೊಳಗಿನ ವಾಕ್ಯಗಳಲ್ಲಿ ದೋಷಗಳು ಅಲ್ಲಲ್ಲಿ ಕಂಡುಬರುತ್ತವೆ. ಇದಲ್ಲದೆ ಹೊಸದಾಗಿ ನಿಬಂಧಗಳನ್ನು ಬರೆಯುತ್ತಿರುವ ವಿದ್ಯಾರ್ಥಿಗಳಂತೂ ಎಷ್ಟೋ ತಪ್ಪುಗಳನ್ನು ಮಾಡುತ್ತಾರೆ. ಈಗ ನಾವು ನೋಡುವ ಕನ್ನಡ ವರ್ತಮಾನಪತ್ರಗಳ ಭಾಷೆಯಲ್ಲಿಗೂ ಹಲವು ದೋಷಗಳು ಕಂಡುಬರುತ್ತವೆ. ಇದೇ ಪ್ರಕಾರ ಬಹುಕಾಲ ನಡೆದದೆ. ಅವರ ಪರಿಣಾಮವು ಏನಾಗುವದೋ ತಿಳಿಯುವದಿಲ್ಲ. ಅವರಿಂದ ಮುಂದೆ ತೋರಿಸಿದ ಮೂರು ತರದ ಬರಹಗಳಲ್ಲಿಯೂ ತೋರುವ ತಪ್ಪಿನ ವಾಕ್ಯಗಳನ್ನು ಹುಡುಕಿ, ಅವುಗಳ ಗುಣದೋಷಗಳ ವಿಷಯಕ್ಕೆ ಚರ್ಚೆ ನಡಿಸಿ ಅವನ್ನು ತಿದ್ದಿ ಆ ಸಂಬಂಧದಿಂದುಂಟಾದ ನಿಯಮಗಳನ್ನು ನಮ್ಮ ಕನ್ನಡ ಶಾಲೆಗಳ ಮಾಸ್ತರರು ಅಸಿಸ್ಟಂಟ ಮಾಸ್ತರರು, ವಿದ್ಯಾರ್ಥಿಗಳು ಮುಂತಾದವರಿಗೆ ತಿಳಿಯುವಂತೆ ಮಾಡಿದರೆ ಅವರಿಗೆಲ್ಲ ಈ ತರದ ಮಾತ ವಿವಾದಗಳನ್ನು ನಡಿಸುವ ಲವಲವಿಕೆಯುಂಟಾಗುವದು. ಆದರಿಂದ ಹೊಸದಾ

ಗಿ ನಿಬಂಧ ಬರೆಯುವವರಿಗೂ, ಗ್ರಂಥ ಬರೆಯುವವರಿಗೂ ಸಹಾಯವಾಗಿ ಮೇಲೆ ವಿವರಿಸಿದ ಮೂರು ಪ್ರಕಾರದ ಬರಹಗಳ ದೋಷಗಳು ಕಡಿಮೆಯಾಗಬಹುದೆಂದು ತೋರುತ್ತದೆ.

ವಾಕ್ಯಗಳನ್ನು ಪರೀಕ್ಷಿಸಬೇಕಾದರೆ ಧ್ಯಾನವಲ್ಲಿಡತಕ್ಕ ಕೆಲವು ನಿಯಮಗಳನ್ನು ಕೆಳಗೆ ಬರೆಯುತ್ತೇವೆ.

ವಾಕ್ಯದೋಷ ಪದದೋಷ ಮುಂತಾದವು.

(೧) ಆಖ್ಯಾಖ್ಯಾತ ಪದಗಳ ಪುರುಷ ಲಿಂಗವಚನಗಳು ಸರಿಯಾಗಿವೆಯೋ ಇಲ್ಲೊ?

(೨) ವಾಕ್ಯದಲ್ಲಿ ಅರೆ ಸಮಾಸಗಳುಂಟೋ ಹ್ಯಾಗೆ?

(೩) ಬಂದ ಪದಗಳೇ ಪುನಃ ಪುನಃ ಬಂದಿರುತ್ತವೋ ಹ್ಯಾಗೆ?

(೪) ಪ್ರಯೋಗಗಳಿಗೆ ಸರಿಯಾಗಿ ಕರ್ತೃ ಕರ್ಮಾದಿ ಕಾರಕಗಳಿಗೆ ವಿಭಕ್ತಿ ರೂಪಗಳು ಇರುವವೋ ಇಲ್ಲೋ?

(೫) ಪ್ರತಿಯೊಂದು ಪದದ ರೂಪಸಿದ್ಧಿಯು ಸರಿಯಾಗಿರುವದೋ? ಅಂದರೆ ಪ್ರತ್ಯಯ ಹತ್ತುವಾಗ ನಿಯಮಗಳಿಗೆ ಅನುಸರಿಸಿ ಲೋಪಾಗಮಾದೇಶಗಳು ಆಗಿವೆಯೋ?

(೬) ಬಂಪಕ್ಕೊಂದು ಹತ್ತಿರದಲ್ಲಿರತಕ್ಕ ಪದಗಳು ದೂರವಾಗಿರುವದರಿಂದ ಅರ್ಥಕ್ಕೆ ಸಂಶಯ ಬರುವ ಹಾಗೆ ಆದೋ ಹ್ಯಾಗೆ?

(೭) ಸ್ವಭಾಷೆಯ ಶಬ್ದಗಳು ಸಿಗುವ ಹಾಗಿರಲಿಕ್ಕೆ ಪರ ಭಾಷೆಯ ಶಬ್ದಗಳು ಬಹಳವಾಗಿ ಬಂದವೋ ಹ್ಯಾಗೆ?

(೮) ಗ್ರಾಮ್ಯಜನರು ಮಾತ್ರ ಉಪಯೋಗಿಸುವ ಶಬ್ದಗಳು ವಾಕ್ಯಗಳಲ್ಲಿ ಬಹಳವಾಗಿರುವವೋ ಹ್ಯಾಗೆ?

(೯) ಸ್ವಭಾಷೆಯಲ್ಲಿರುವ ಸರಳವಾಕ್ಯ ಪದ್ಧತಿಯನ್ನು ಬಿಟ್ಟು ಅನ್ಯ ಭಾಷೆಯ ಪದ್ಧತಿಯಂತೆ ವಾಕ್ಯಗಳನ್ನು ಬರೆವವರಿಂದ ಅವು ವಿಲಕ್ಷಣವಾಗಿರುವವೋ?

(೧೦) ಬಂದೇ ವಿಭಕ್ತಿಯ ಎರಡು ಮೂರು ಪದಗಳು

ಸೂಲಾಗಿ ಬಂದವರಿಂದ ವಾಕ್ಯಾರ್ಥಕ್ಕೆ ತೊಂದರೆಯಾಗುವುದೋ ಹ್ಯಾಗೆ?

ಅರ್ಥದೋಷಗಳು.

೧. ವಾಕ್ಯಾರ್ಥಗಳಲ್ಲಿ ಪೂರ್ವಾಪರವಿರೋಧ ಉಂಟೋ ಹ್ಯಾಗೆ?

೨. ಒಮ್ಮೆ ಹೇಳಿದ ಅರ್ಥವೇ ರೂಪಾಂತರದ ವಾಕ್ಯದಿಂದ ಪುನಃ ಹೇಳಲ್ಪಟ್ಟಿರುವದೋ ಹ್ಯಾಗೆ?

೩. ವಾಕ್ಯಾರ್ಥವು ಲೋಕರೂಢಿಯ ವಿರುದ್ಧವಾಗಿ, ಇನ್ನೇನೆ ಸುಳ್ಳಾಗಿ ಇರುವದೋ ಹ್ಯಾಗೆ?

೪. ವಾಕ್ಯಾರ್ಥಗಳಲ್ಲಿ ಕ್ರಮ ಉಂಟೋ ಇಲ್ಲ್ಲೋ? ಅಂದರೆ ಮೊದಲು ಹೇಳತಕ್ಕದ್ದು ಮೊದಲು, ಹಿಂದುಗಡೆಯಲ್ಲಿ ಹೇಳತಕ್ಕದ್ದು ಹಿಂದುಗಡೆ ಹೇಳಲ್ಪಟ್ಟಿರುವದೋ? ವ್ಯತ್ಯಾಸವಾಗಿರುವದೋ?

೫. ಆರಂಭಿಸಿದ ವಿಷಯವೇ ಮುಂದೆ ಸಾಗಿದೆಯೋ ವಿಷಯಾಂತರವಾಗಿದೆಯೋ?

೬. ವಾಕ್ಯದೊಳಗಿರುವ ಸಾಮ್ಯ, ದೃಷ್ಟಾಂತ, ಉದಾಹರಣ, ಮುಂತಾದವು ಒಪ್ಪುವಂತೆ ಅವೆಯೋ ಇಲ್ಲ್ಲೋ?

೭. ಬಂದು ಸಂಗತಿಯನ್ನು ಕುರಿತು ಬರೆಯುವಾಗ, ಕಾರಣವಿಲ್ಲದೆ ಯಾವದಾವರೊಂದು ಸಂಗತಿಯು ಇಲ್ಲವೆ ಪದವು ನಡುವೆ ಬಂದಿರುವದೋ ಹ್ಯಾಗೆ?

ಈ ಸಂಗತಿಗಳಲ್ಲದೆ ಇನ್ನೂ ಕೆಲವು ಸಂಗತಿಗಳುಂಟು. ಅವನ್ನು ಮುಂದೆ ವಾಕ್ಯಗಳನ್ನು ತಿದ್ದುವಾಗ ಅಲ್ಲಿಂದಲ್ಲಿಗೆ ಹೇಳುವೆವು. ಇನ್ನು ಕೆಲವು ವಾಕ್ಯಗಳನ್ನು ಬರೆದು ಅವನ್ನು ತಿದ್ದೋಣ.

(ಮುಂದಕ್ಕೆ ಸಾಗುವದು)

ಶಾಲಾಪತ್ರಕ.

ಪದ್ಯ.

ಪ್ರಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ
ಬಯಸುತ್ತುಂ ಪ್ರತಿವಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯವಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ವಯಿಯಿಂದೋಷವತಿದ್ದನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೬.] ಮಾರ್ಚ ೧೮೫೧ [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಮುಂಬಯಿ ಇಲಾಖೆಯ ಸರಕಾರದವರು ವಿಕ್ಟೋರಿಯಾ ಟೆಕ್ನಿಕಲ್ ಇನಸ್ಟಿಟವೆಂಬ ಕಲಾಕೌಶಲ್ಯದ ಶಾಲೆಯ ವಿದ್ಯಾರ್ಥಿಗಳಿಗೆ ಮುಂಬಯಿ ಬೊಯಿಲರ ಆಕ್ಟಿನ ನಿಯಮಗಳಿಗೆ ಅನುಸಾರವಾಗಿ ಆಗುವ ೨ನೇ ೩ನೇ ಗ್ರೇಡ ಎಂಜಿನಿಯರ ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆ ಕೊಟ್ಟದ್ದಾರೆ. ಇವರಿಂದ ಆ ಶಾಲೆಯು ಲೋಕಪ್ರಿಯವಾಗಿ ಬಳ್ಳೇ ಊರ್ಜಿತ ಸ್ಥಿತಿಯನ್ನು ಹೊಂದುವದೆಂದು ಹೇಳಬಹುದು.

ಸಂಯುಕ್ತ ಸಂಸ್ಥಾನಗಳೊಳಗಿನ ಕಾನ್ಸಾಸ ಪ್ರಾಂತದ ಗ್ರೀನ್ಸಬರೋ ಎಂಬ ಹಳ್ಳಿಯಲ್ಲಿ ಬಿದ್ದಿರುವ ಉಲ್ಕೆಗಳ ಬಗ್ಗೆ ವಾಷಿಬರ್ನ ಕಾಲೇಜದ ಪ್ರೊಫೇಸರರಾದ ಡಬ್ಲ್ಯು ಕೇಗ್ರಿನ್ ಇವರು ತಿಳಿಸುವದೇನಂದರೆ:—ಈ ಉಲ್ಕೆಗಳು ಬಿದ್ದ ಬಹಳ ದಿವಸವಾಗಿಲ್ಲ, ಆದರೂ ಅವುಗಳು ಬಿದ್ದ ಇಸ್ವಿಯು ನಿಶ್ಚಯವಾಗಿ ಗೊತ್ತಾಗುವದಿಲ್ಲ. ಈ ಉಲ್ಕೆಗಳು ಸು

ಮೂರು ೨೦೦ ಇರಬಹುದು. ಇವುಗಳಲ್ಲಿ ಹೆಚ್ಚು ಭಾರವಾದವರ ತೂಕವು ೪೬೬ ಪೌಂಡು ಇರುತ್ತದೆ. ಜನರು ಇವುಗಳಲ್ಲಿ ಕೆಲವನ್ನು ಸಣ್ಣ ಸಣ್ಣ ಬೀದಿಗಳ ಅಂಚಿಗೆ ಅಲ್ಲಲ್ಲಿಗೆ ನಿಲ್ಲಿಸಿರುತ್ತಾರೆ. ಇವುಗಳ ಮೇಲ್ಮೈಯು ತಗ್ಗುಳ್ಳದ್ದಾಗಿದ್ದು ಸುಟ್ಟಂತೆ ತೋರುತ್ತದೆ. ಓಲಿವ್ಹಾಯಿನ್, ಟ್ರವೋಲಾಯಟ್, ನಿಕ್ಕೆಲ್ ಮಿಶ್ರಿತವಾದ ಕಬ್ಬಿಣಗಳೇ ಇವುಗಳ ಪ್ರಕೃತ್ಯಂಶಗಳಾಗಿವೆ.

ಅಮೇರಿಕಾ ಖಂಡದಲ್ಲಿ ಅಲ್ವಿನ್ ಜಿ. ಕ್ಲಾರ್ಕನೆಂಬ ಗೃಹಸ್ಥನು ಬಹು ಅದ್ಭುತವಾದ ದುರ್ಬೀನು ಮಾಡತಕ್ಕವನಿದ್ದಾನೆ. ಅವಕ್ಕೆ ಕೂಡ್ರಿಸುವದಕ್ಕೆ ೧೦ ಫೂಟು ಪರಿಘವೂ ೪ ಫೂಟು ೩ ಇಂಚು ವ್ಯಾಸವೂ ಇರುವಂಥ ಲೆನ್ಸು (ಹರಳ)ನ್ನು ಪಾರಿಸ ಪಟ್ಟಣವಲ್ಲಿರುವ ಶಿಲ್ಪಿಗರಿಂದ ಮಾಡಿಸಿ ಅಗ್ನಿನಾವಿನಿಂದ ಪಾಸಿಫಿಕ್ ಮಹಾಸಾಗರದ ದಂಡಿಗೆ ಹೈದಿರುತ್ತಾನೆ. ಅವನ್ನು ಹೈಯುವ ವೆಚ್ಚವೇ ೩,೦೦೦ ಪೌಂಡು ಆಗಿದೆ. ಅವಕ್ಕೆ ೫೦,೦೦೦ ಪೌಂಡು ಬೆಲೆ ಬಿದ್ದದೆ. ಕೆಲವು ವಾರಗಳ ಹಿಂದೆ ಅದನ್ನು ನೋಡುವದಕ್ಕಾಗಿ ಬಂದು ದೊಡ್ಡ ಜನಸಮೂಹವು ಕೂಡಿತ್ತು. ಈ ದುರ್ಬೀನು ಸಿದ್ಧವಾಗಲಿಕ್ಕೆ ಎರಡು ವರ್ಷಗಳು ಬೇಕು. ಇದು ಸಿದ್ಧವಾದ ಮೇಲೆ ಇದರೊಳಗಿಂದ ಚಂದ್ರನನ್ನು ನೋಡಿದರೆ ಪೃಥ್ವಿಯಿಂದ ೨,೩೮,೮೦೦ ಮೈಲು ಅಂತರದಲ್ಲಿರುವ ಚಂದ್ರನು ೧೮೦ ಮೈಲು ಅಂತರದಲ್ಲಿಯೇ ಕಾಣಿಸುವನು. ಬಂದು ವೇಳೆ ಅವನ ಪೃಷ್ಠಭಾಗದ ಮೇಲೆ ಪಟ್ಟಣಗಳೂ ದೊಡ್ಡ ದೊಡ್ಡ ಇಮಾರತುಗಳು ಇದ್ದರೆ ಅವು ಈ ಅದ್ಭುತವಾದ ಕನ್ನಡಿಯೊಳಗಿಂದ ಸ್ಪಷ್ಟವಾಗಿ ಕಾಣಿಸಬಹುದು.

ಹಿಂದುಸ್ತಾನದ ಅಡಿವಿಗಳನ್ನು ಜನರು ಕ್ರಮೇಣ ಕಡಿದು ಹಾಳು ಮಾಡಿದ್ದರಿಂದ ಮಳೆಯು ಕಡಿಕಡಿಮೆಯಾಗಿ ಹಿಂದುಸ್ತಾನದಲ್ಲಿ ಆಗಾಗ್ಗೆ ಬಂದಿಲ್ಲ ಬಂದು ಕಡಿಗೆ ಬರ ಬೀಳುತ್ತದೆಂದು ಬಲ್ಲವರು ಸಪ್ರಮಾಣವಾಗಿ ಸ್ಥಾಪಿಸಿರುವರು. ಆದರಿಂದ ಸರಕಾರವವರು ಅಡಿವಿಗಳನ್ನು ತಮ್ಮಿಂದಾದಷ್ಟು ಬೆಳಸಹತ್ತಿದ್ದಾರೆ. ೧೮೫೫ನೇ ವರ್ಷ ಸರಕಾರದವರು ಕಾದಿಟ್ಟ ಅಡವಿಯು ೧೫,೬೦೪ ಚಚೌಕು ಮೈಲು ಮಾತ್ರ ಇತ್ತು. ಆದರೆ ಆ ವರ್ಷ ಬರಗಾಲ ಬಿದ್ದು ಪ್ರಾಣಹಾನಿ ಸಂಭವಿಸಿದ್ದರಿಂದ ಸರಕಾರದವರು ಅಡವಿ ಬೆಳಸುವ ಉಪಾಯವನ್ನಾದರೂ ಕೈಕೊಂಡು ಅದನ್ನು ಹೆಚ್ಚಿಸಹತ್ತಿದರು. ೧೮೮೦ನೇ ವರ್ಷ ಮಧ್ಯಪ್ರಾಂತದಲ್ಲಿ ಅಡಿವಿಯನ್ನು ೫೧,೪೭೪ ಚ. ಮೈಲುಗಳ ವರೆಗೆ ಹೆಚ್ಚಿಸಿದರು. ಈ ಪ್ರಾಂತದಲ್ಲಿರುವಷ್ಟು ವಿಶಾಲವಾದ ಅಡವಿಗಳು ಹಿಂದುಸ್ತಾನದ ಯಾವ ಭಾಗದಲ್ಲಿಯೂ ಇಲ್ಲ. ೧೮೮೯ನೇ ವರ್ಷದ ಅಂತ್ಯದಲ್ಲಿ ಹಿಂದುಸ್ತಾನದೊಳಗಿನ ಅಡವಿಗಳ ವಿಸ್ತಾರವು ಒಟ್ಟು ೨೪೨,೯೧೩ ಚಚೌಕು ಮೈಲು ಇತ್ತು.

ಇಂಡಿಯನ್ ಪಿನಲಕೋಡದ ೩೭೫ನೇ ಕಲಮಿನ ಅಪವಾದದಲ್ಲಿ ಗಂಡನು ಹತ್ತು ವರ್ಷ ಮೀರಿದ ತನ್ನ ಹೆಂಡತಿಯೊಡನೆ ಸಂಭೋಗ ಮಾಡಿದರೆ ಅದು ಬಲಾತ್ಕಾರದ ಸಂಭೋಗವೆನಿಸದು ಎಂದು ಬರೆದದೆ. ಆದರೆ ಇತ್ತಲಾಗಿ ಕಲಕತ್ತೆಯಲ್ಲಿ ಬಬ್ಬ ದುರುಳನು ಎಳ ಪ್ರಾಯದ (ಹನ್ನೆರಡು ವರ್ಷದ) ತನ್ನ ಹೆಂಡತಿಯೊಡನೆ ಸಂಭೋಗ ಮಾಡಿ ಆ ಬಡಪ ಪ್ರಾಣಿಯನ್ನು ಯಮಪುರಕ್ಕೆ ಅಟ್ಟಿದನು. ಇಂಥ ಕೆಲವು ಕಾರಣಗಳಿಂದ ಸರಕಾರದ ಲೀಗಲ ಮೆಂಬರರಾದ ಸ್ಟೀಟು

ಧೊರೆಗಳು ಈ ನಿಯಮದಲ್ಲಿ ಹೇಳಿದ ೧೦ ವರ್ಷಕ್ಕೆ
ದಲಾಗಿ ೧೨ ವರ್ಷ ಹಾಕಬೇಕೆಂದು ಯೋಚಿಸಿ ಬಂದು
ಯದೆಯ ಮಸೂದೆಯನ್ನು ಕಾಯದೆ ಕೌನ್ಸಿಲಿನ ಮುಂ
ತಂದಿರುತ್ತಾರೆ. ಈ ಸಮ್ಮತಿಯ ವಯಸ್ಸಿನ ಸಂಬಂಧ
ಂದ ಹಿಂದು ಜನರಲ್ಲಿ ಎರಡು ತಂಡಗಳಾಗಿರುತ್ತವೆ. ಸುಧಾ
ಣೆಗೆ ಎರಡೂ ತಂಡದವರು ಪ್ರತಿಕೂಲವಾಗಿರುವಂತೆ ತೋ
ವದಿಲ್ಲ. ಆದರೆ ಈ ಕಾಯದೆಗೆ ಹಿಂದು ಮುಸಲ್ಮಾನ
ಪ್ರಜೆಗಳಲ್ಲಿ ಬಹು ಜನರು ಸಮ್ಮತಿಸಿದ್ದಂತೆ ತೋರುತ್ತದೆ.

ಬೇರೆ ಬೇರೆ ಜನಾಂಗದವರು ವಾರದ ಬೇರೆ ಬೇರೆ ದಿವಸ
ಗಳನ್ನು ಪವಿತ್ರವೆಂದು ಎಣಿಸುತ್ತಾರೆ. ಅದು ಹ್ಯಾಗಂದರೆ:—
ಕ್ರಿಸ್ತು ಜನರು ಆದಿತ್ಯವಾರ, ಗ್ರೀಕಚರ್ಚದವರು ಸೋ
ಮವಾರ, ಪಾರ್ಸೀ ಜನರು ಮಂಗಳವಾರ, ಅಸೀರಿಯನ್ನ
ರು ಬುಧವಾರ, ಇಜಿಪ್ತದವರು ಗುರುವಾರ, ತುರ್ಕರು ಶುಕ್ರ
ವಾರ, ಯಹೂದಿಯರು ಶನಿವಾರ; ಮತ್ತು ಆಯಾ ದಿವಸಗಳಲ್ಲಿ
ಆ ಜನರು ಕೆಲಸ ಮಾಡುವದಿಲ್ಲ.

ಬಬ್ಬ ಹುಟ್ಟುತೊದಲನು ಕೆಳಗೆ ಕಾಣಿಸಿದ ಉಪಾಯ
ದಿಂದ ಪೂರಾ ಗುಣವಾದನು. ಅದು ಹ್ಯಾಗಂದರೆ:—ಅವನು
ಎರಡು ತಾಸುಗಳವರೆಗೆ ಹಲ್ಲುಗಳನ್ನು ಘಟ್ಟಿಯಾಗಿ ಬತ್ತಿಹಿ
ಡಿದು ಪುಸ್ತಕವನ್ನು ಬದರಿ ಓದುತ್ತಿದ್ದನು. ಅವನು ಒಸ
ಡಿಗಳನ್ನು ಕದಲಿಸದೆ ತುಟಿಗಳನ್ನು ಮಾತ್ರ ಅಲ್ಲಾಡಿಸಿ ಸಾ
ವಕಾಶವಾಗಿಯೂ ಸ್ಪಷ್ಟವಾಗಿಯೂ ಓದುತ್ತಿದ್ದನು. ಇದೇ
ಮೇರೆಗೆ ೫೫ ದಿವಸಕ್ಕೊಮ್ಮೆ ಬಂದು ತಿಂಗಳವರೆಗೆ, ಆ
ಮೇಲೆ ೧೫ ದಿವಸಕ್ಕೊಮ್ಮೆ ಕೆಲವು ತಿಂಗಳುಗಳವರೆಗೆ ಮಾ
ಡಲಾಗಿ ಅವನ ತೊದಲು ಪೂರಾ ತಿದ್ದಲ್ಪಟ್ಟಿತು ಅವನು ಮು

ತೊಟ್ಟಿಬ್ಬರ ಕೂಡ ಮಾತಾಡುವಾಗ ತೊವಲಿಸದಂತೆ ಜಾಗ್ರತೆ ಪಟ್ಟು ಬಂದೊಂದೇ ನುಡಿಯನ್ನು ಸ್ಪಷ್ಟವಾಗಿ ಉಚ್ಚರಿಸುತ್ತಿದ್ದನು. ಮೊದಲು ಓದುವಾಗ್ಗೆ ಮಾತ್ರ ನಾಲಿಗೆಯೂ ದವಡಿಗಳೂ ನೋಯುತ್ತವೆ ಸರಿ, ಆಮೇಲೆ ತುಸು ರೂಢಿಯಾದ ಮೇಲೆ ಬಾಯಿ ಬಿಚ್ಚಿ ಮಾತಾಡಬಹುದು. ಇದೇಪ್ರಕಾರ ಬಂದೇಸವನೆ ಸಾಧಿಸಿದರೆ ನಿಶ್ಚಯವಾಗಿ ತೊದಲು ನಿಂತು ಹೋಗುವದು. ಇದರ ಅನುಭವವನ್ನು ತೊದಲರು ತೆಗೆದು ಕೊಳ್ಳಬಹುದು.

ಮಿ. ಸ್ಟ್ಯಾನಲೆ ಎಂಬ ಗೃಹಸ್ಥನು ಆಫ್ರಿಕ ಖಂಡದಲ್ಲಿ ಅನೇಕ ಶೋಧಗಳನ್ನು ಮಾಡಿದಂತೆ ಅಮೇರಿಕದ ಮಿಸ್ಸಿಸಿ ಲೆಲ್ಯಾನ್ ಎಂಬವಳು ಆ ಅಪ್ರಸಿದ್ಧ ಖಂಡದೊಳಗೆ ಪ್ರವಾಸ ಮಾಡತಕ್ಕವಳಿದ್ದಾಳೆ. ಅವಳು ಮೊದಲು ಜಂಜೇಬಾರಕ್ಕೆ ಹೋಗುವಳು. ಅಲ್ಲಿಂದ ಮುಂಝೂರಿಬೀಕ ಮಾರ್ಗವಾಗಿ ಆಫ್ರಿಕಾ ಖಂಡದ ಮಧ್ಯ ಪ್ರದೇಶವನ್ನು ಪ್ರವೇಶಿಸಿ ಅಲ್ಲಿರುವ ಕಾಡು ಜನರ ಧರ್ಮ, ನಡೆನುಡಿ, ಆಚಾರ ವಿಚಾರ ಮುಂತಾದವುಗಳನ್ನು ನೋಡಿಕೊಂಡು ಬರತಕ್ಕವಳಷ್ಟೇ ಅಲ್ಲ; ಆದರೆ ಆ ಕಾಡು ಜನರ ಮಾತುಗಳನ್ನು ತನ್ನ ದೇಶದವರ ಕಿವಿಗೆ ಹಾಕಬೇಕೆಂಬ ಉದ್ದೇಶದಿಂದ ತನ್ನ ಸಂಗಡ ಫೊನೋಗ್ರಾಫವೆಂಬ ಧ್ವನಿಗ್ರಾಹಕಯಂತ್ರವನ್ನು ತೆಗೆದು ಅವಳಲ್ಲಿ ಅವರ ಮಾತುಗಳನ್ನು ಸಂಗ್ರಹಿಸಿಕೊಂಡು ಬರುವಳಂತೆ. ಅವಳು ತನ್ನೊಂದಿಗೆ ಕೆಲವು ಆಬರನ್ನೂ, ಹತ್ತೀ ಹೆಂಗಸರನ್ನೂ ಕೆಲವು ಶಿಪಾಯರನ್ನೂ ಕರಕೊಂಡು ಹೋಗತಕ್ಕವಳಿದ್ದಾಳೆ.

UNIVERSITY CONVOCATION SPEECHES.

ಯುನಿವರ್ಸಿಟಿಯ ಪದವಿದಾನಸಮಾರಂಭಕಾಲದ ಅಧ್ಯಕ್ಷರ ಭಾಷಣಗಳು.

ನಮ್ಮ ಯುನಿವರ್ಸಿಟಿಯ ಪದವಿದಾನ ಸಮಾರಂಭವು ಈಚೆಯ ಜಾನೆವಾರಿಯ ೨೦ನೇ ತಾರೀಖಿಗೆ ಆಯಿತು. ಇಲಾಖೆಯ ಗವರ್ನರರೂ ಫೆಲ್ಲೊಗಳೂ ಆದ ಲಾರ್ಡ ಹಾರಿಸ್ ಧೊರೆಗಳು ಬೇರೆ ಕೆಲಸದಲ್ಲಿ ತೊಡಗಿದ್ದರಿಂದ ಅಧ್ಯಕ್ಷಸ್ಥಾನವನ್ನು ವ್ಹಾಯಿಸ್ ಫೆಲ್ಲೊಗಳು ಅಲಂಕರಿಸಿದ್ದರು. ಅವರು ತತ್ಕಾಲೋಚಿತವಾಗಿ ಮಾಡಿದ ಸಂಭಾಷಣೆಯ ಮುಖ್ಯ ಮಾತುಗಳು ಯಾವವೆಂದರೆ:—

೧. ಯುನಿವರ್ಸಿಟಿಯ ಮೊದಲನೇ ಪದವಿದಾನ ಸಮಾರಂಭವು ೧೮೬೮ನೇ ವರ್ಷದಲ್ಲಿ ಆಯಿತು. ಆಗ್ಗೆ ೪ ಜನರಿಗೆ ಮಾತ್ರ ಯುನಿವರ್ಸಿಟಿಯ ಪದವಿಗಳು ದೊರೆದವು. ೧೮೭೦ನೇ ವರ್ಷದಲ್ಲಿ ೩೩ ಜನರಿಗೆ, ೧೮೭೦ನೇ ವರ್ಷದಲ್ಲಿ ೨೪ ಜನರಿಗೆ, ೧೮೭೦ನೇ ವರ್ಷದಲ್ಲಿ ೧೮೨ ಜನರಿಗೆ, ನಡಿಯುವ ವರ್ಷದಲ್ಲಿ ೧೮೪ ಜನರಿಗೆ ಪದವಿಗಳು ದೊರೆದವು. ಇವರಿಂದ ವಿದ್ಯಾಭಿವೃದ್ಧಿಯು ಭರಭರಿಯಿಂದ ಸಾಗುತ್ತಲಿದೆಯೆಂದು ವ್ಯಕ್ತವಾಗುತ್ತದೆ.

೨. ಯುನಿವರ್ಸಿಟಿಯ ಕಾರ್ಯಕರ್ತರೆಲ್ಲರು ಇವತ್ತಿನವರೆಗೆ ಗಂಡಸರೇ ಇದ್ದರು. ಆದರೆ ನಡೆಯುವ ವರ್ಷ ಡಾಕ್ಟರ ಪೀಚಿ ಫಿಪ್ಸನ್ ಎಂಬ ಧೊರೆಸಾನಿಯವರನ್ನು ಸರಕಾರದವರು ಫೆಲ್ಲೊ† ನೇಮಿಸಿದ್ದು ಬಂದು ಅಭಿನಂದನೀಯವಾದ ಸಂಗತಿಯೇ ಸರಿ. ಇವರು ಸ್ತ್ರೀಯರ ಉನ್ನತಿಯ ವಿಷಯದಲ್ಲಿ ಮಾಡಿದ ಸಾಹಸವು ಎಲ್ಲರಿಗೂ ಗೊತ್ತುಂಟು. ಇವರಿಗೆ ಮಾಡಿದ ಬಹುಮಾನದಿಂದ ಯುನಿವರ್ಸಿಟಿಗೂ ಭೂಷಣ

† ಯುನಿವರ್ಸಿಟಿಯ ಕಾರ್ಯಕರ್ತರ ಬಿರುದು.

ಬಂತು. ಹೆಂಗಸರಿಗೆ ಇಂಥ ಬಹುಮಾನವನ್ನು ಕೊಟ್ಟು ತಮ್ಮ ಉದಾರ ಬುದ್ಧಿಯನ್ನು ವ್ಯಕ್ತಪಡಿಸಿದ ಯುನಿವರ್ಸಿಟಿಗಳು ಬಹು ಸ್ವಲ್ಪ ಉಂಟು.

೩. ಬಿ. ಯ. ಎಲ್. ಎಲ್. ಬಿ. ಪರೀಕ್ಷೆಗಳಲ್ಲಿ ಕೆಲವು ಹಿತಕರವಾದ ಏರ್ಪಾಡುಗಳು ಆಗಿರುತ್ತವೆ. ಅದರಿಂದ ಸರಕಾರದ ಬೇರೆ ಬೇರೆ ಖಾತೆಗಳಲ್ಲಿ ಮುಖ್ಯವಾಗಿ ನ್ಯಾಯಖಾತೆಯಲ್ಲಿ ತೋರುತ್ತಲಿರುವ ಸುಧಾರಣೆಯು ಮತ್ತಿಷ್ಟು ಬಲಗೊಳ್ಳುವದೆಂದು ಹೇಳಬಹುದು.

೪. ಮ್ಯಾಟ್ರಿಕ್ಯುಲೇಶನ ಪರೀಕ್ಷೆಯ ಉಮೇದವಾರರ ಸಂಖ್ಯೆಯು ವರ್ಷ ವರ್ಷ ಬೆಳೆಯುತ್ತ ನಡೆದದೆ. ಈ ಜನರಲ್ಲಿ ಕೆಲವರು ಹೆಚ್ಚಿನ ಅಭ್ಯಾಸ ಮಾಡತಕ್ಕವರು; ಕೆಲವರು ಸರಕಾರೀ ನೌಕರಿಯಲ್ಲಿ ಸೇರತಕ್ಕವರು. ಆದರೆ ಈ ಎರಡೂ ಕೆಲಸಗಳಿಗೆ ಅವರು ತಕ್ಕವರಿರುವದಿಲ್ಲೆಂದು ಪರೀಕ್ಷೆಯ ಪರಿಣಾಮದಿಂದಲೂ ಕಾಲೇಜಿನ ಪ್ರೊಫೇಸರರ ಹೇಳಿಕೆಯಿಂದಲೂ ತಿಳಿಯುತ್ತದೆ. ಈ ಪರೀಕ್ಷೆಯನ್ನೇ ಬಂದುಮಾಡಬೇಕೆಂದು ಕೆಲವು ಅಧಿಕಾರಸ್ಥರು ಸೂಚಿಸುತ್ತಾರೆ. ಈ ವಿಷಯದಲ್ಲಿ ಯುನಿವರ್ಸಿಟಿಯವರು ಚನ್ನಾಗಿ ವಿಚಾರಮಾಡಿ ಯಾವದೊಂದು ವ್ಯವಸ್ಥೆಯನ್ನು ಬೇಗನೇ ಮಾಡುವರು.

೫. ಕಳೆದ ವರ್ಷದಲ್ಲಿ ೬೬, ೪೫೫ ರುಪಾಯಿಗಳನ್ನು ಬೇರೆ ಬೇರೆ ಸದ್ಗೃಹಸ್ಥರು ಯುನಿವರ್ಸಿಟಿಗೆ ಕಾಣಿಕೆಯಾಗಿ ಕೊಟ್ಟರು. ಯುನಿವರ್ಸಿಟಿಗೆ ಈ ಹಣವನ್ನು ಕೊಟ್ಟವರೆಲ್ಲರ ಉದ್ದೇಶವು ಬಹುತರ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪು ಕೊಡುವದೇ ಇರುತ್ತದೆ. ಈ ಉದ್ದೇಶದ ಕಾಣಿಕೆಗಳಿಂದ ವಿದ್ಯಾರ್ಥಿಗಳಿಗೆ ಸಹಾಯವಾದಾಗ [illegible] ಯುನಿವರ್ಸಿಟಿಯಲ್ಲಿ ಅವಶ್ಯವಾಗಿ ದೂರಮಾಡತಕ್ಕ [illegible] ಕೂರತೆಗಳು ಉಳಿದಿರುತ್ತವೆ. ತೋಟದ ಸುತ್ತ [illegible] ನಿಲ್ಲಿಸದೇ

ಕಾದರೆ ಯುನಿವರ್ಸಿಟಿಯ ಕೈಯಲ್ಲಿ ದುಡ್ಡಿಲ್ಲ. ರಾಜಾಬಾಯಿ ಟಾವರವ ಮೇಲೆ ಇಟ್ಟಿರುವ ದೊಡ್ಡ ಘಡಿಯಾರದಿಂದ ರಾತ್ರಿಕಾಲದಲ್ಲಿ ಜನರಿಗೆ ಉಪಯೋಗವಾಗುವಂತೆ ದೀಪ ಹಚ್ಚಬೇಕಾದರೆ ಅದಕ್ಕೆ ಸಾಮರ್ಥ್ಯವಿಲ್ಲ. ಅದರ ಲೈಬ್ರರಿಯಲ್ಲಿ ತಕ್ಕಷ್ಟು ಪುಸ್ತಕ ಸಂಗ್ರಹವಿಲ್ಲ. ಆದದರಿಂದ ಇನ್ನು ಮುಂದೆ ಕಾಣಿಕೆಗಳನ್ನು ಕೊಡತಕ್ಕವರು ಈ ಕೊರತೆಗಳನ್ನು ದೂರಪಡಿಸುವದನ್ನು ಮರಿಯಬಾರದು. ಈ ಕೆಲಸಕ್ಕಾಗಿ ಯುನಿವರ್ಸಿಟಿ ಪರೀಕ್ಷೆಗಳ ಫೀಗಳನ್ನಾದರೂ ಹೆಚ್ಚಿಸಬಹುದು.

ಕಳೆದ ಜಾನೆವಾರಿ ೭ನೇ ತಾರೀಖಿನ ದಿವಸ ಕಲಕತ್ತಾ ಯುನಿವರ್ಸಿಟಿಯ ಪದವಿದಾನ ಸಮಾರಂಭವು ಸಿನೇಟಮಂದಿರವಲ್ಲಿ ಆಯಿತು. ಒಟ್ಟು ೫೬೬ ಜನರಿಗೆ ಪದವಿಗಳು ಕೊಡಲ್ಪಟ್ಟವು. ಅವರಲ್ಲಿ ನಾಲ್ಕು ಸ್ತ್ರೀಯರು ಬಿ. ಏ. ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಆ ಕಾಲಕ್ಕೆ ವೈಸ್ರಾಯಿಸ ಚಾನ್ಸಲರರು ತಮ್ಮ ವ್ಯಾಖ್ಯಾನದಲ್ಲಿ ಹೇಳಿದ ಅತಿಗೌರವದ ಸಂಗತಿಗಳು ಯಾವವಂದರೆ:—

೧. ಇವತ್ತಿನವರೆಗೆ ಕಲಕತ್ತಾಯುನಿವರ್ಸಿಟಿಯ ಎಲ್ಲ ಫೆಲೊಗಳನ್ನು ನೇಮಿಸುವ ಅಧಿಕಾರವು ಹಿಂದುಸ್ತಾನದ ಗವರ್ನರ ಜನರಲ್ ಇನ್ ಕೌನ್ಸಿಲ್ ಇವರ ಕಡೆಗಿತ್ತು; ಅದರೆ ಎಫ್. ಎ. ಪದವಿಯನ್ನೂ ಅದರಂಥ ಬೇರೆ ಪದವಿಯನ್ನೂ ಪಡೆದಂಥ ಗೃಹಸ್ಥರಿಗೆ ಹೊಸದಾಗಿ ನೇಮಿಸತಕ್ಕ ಫೆಲೋ ಜನರ ಸಂಖ್ಯೆಯ ೫ ಅಂದರೆ ಇಬ್ಬರನ್ನು ಆರಿಸುವ ಅಧಿಕಾರವು ಕೊಡಲ್ಪಟ್ಟಿತು. ಅವರು ಈ ಅಧಿಕಾರವನ್ನು ಚನ್ನಾಗಿ ತಿಳಿದು ಕೊಂಡು ಕಳೆದ ಜಾನೆವಾರಿಯ ೧೧ನೇ ತಾರೀಖಿನ ದಿವಸ ಆ ಫೆಲೊಗಳನ್ನು ನೇಮಿಸುವ ಕೆಲಸದಲ್ಲಿ ತೋರಿಸಿ

ದ ಜ್ಞಾನತನವನ್ನೂ ಆತುರವನ್ನೂ ನೋಡಿ ಮೆ॥ ಚಾನ್ಸೆಲ
ರ ಧೊರೆಗಳವರಿಗೆ ಬಹುಸಂತೋಷವಾಗಿದೆ.

೬. ಪ್ರೊಫೇಸರರು ತಾವು ಕಲಿಸುವಂಥ ವಿಷಯಗಳಲ್ಲಿ
ಯುನಿವ್ಹರ್ಸಿಟಿಯ ಪರೀಕ್ಷಕರು ಇರಕೂಡದೆಂಬ ನಿಯ
†
ಮವನ್ನು ಸಿಂಡಿಕೇಟದವರು ಹೋದವರ್ಷ ಮಾಡಿದ್ದಾರೆ.
ಇವರ ಮೇಲಿಂದ ಪರೀಕ್ಷಕರ ಪ್ರಾಮಾಣಿಕತನಕ್ಕೆ ಕುಂದು
ಬರುತ್ತದೆಂದು ತಿಳಿಯಲಾಗದು. ಯಾವದಾದರೊಂದು ವಿಷ
ಯವನ್ನು ಕಲಿಸುವಂಥ ಪ್ರೊಫೇಸರರೇ ಆ ವಿಷಯದಲ್ಲಿ ಪ
ರೀಕ್ಷಕರಿದ್ದರೆ, ಅವರ ಕೈಯೊಳಗಿನ ವಿದ್ಯಾರ್ಥಿಗಳಿಗೆ ಅ
ನ್ಯ ವಿದ್ಯಾರ್ಥಿಗಳಿಗಿಂತ ಹೆಚ್ಚು ಆದಾಯವಾಗುವ ಸಂಭವ
ಉಂಟು. ಇದನ್ನು ನಿಲ್ಲಿಸುವದೇ ಆ ನಿಯಮದ ಮುಖ್ಯ ಉ
ದ್ದೇಶವಿರುತ್ತದೆ.

೫. ಸುಧಾರಣೆಯಾಗಬೇಕಾದರೆ ದೇಶಭಾಷೆಗಳನ್ನು
ಯುನಿವ್ಹರ್ಸಿಟಿಯ ಪರೀಕ್ಷೆಗಳಲ್ಲಿ ಶೇರಿಸಲಿಕ್ಕೆ* ಬೇಕು. ಬಂಗಾ
ಲೀ, ಉರ್ದು, ಹಿಂದೀ ಭಾಷೆಗಳು ಬಳ್ಳೇ ಸ್ಥಿತಿಯಲ್ಲಿದ್ದು ಅ
ವು ಯುನಿವ್ಹರ್ಸಿಟಿಯಲ್ಲಿ ಶೇರಿಸಲ್ಪಡಲಿಕ್ಕೆ ತಕ್ಕವುಗಳಾಗಿವೆ.

೪. ಪರೀಕ್ಷೆಯ ಪ್ರಶ್ನದ ಕಾಗವಗಳು ತಕ್ಕಷ್ಟಕ್ಕಿಂತ
ಹೆಚ್ಚು ಉದ್ದ, ಗಡಚು ಇರುವದರಿಂದ ವಿದ್ಯಾರ್ಥಿಗಳು ತ
ಮ್ಮ ವಿಷಯಗಳನ್ನು ತಿಳುಕೊಳ್ಳದೆ ಬಾಯಪಾಠ ಮಾಡಲು

---

† ಫೆಲ್ಲೋ ಜನರಸಭೆಗೆ ಸಿನೇಟ, ಮತ್ತು ಪ್ರಮುಖ ಫೆಲ್ಲೊಗಳ
ನ್ನು ಶೇರಿಸಿ ನಿರ್ಮಿಸಿದ ವ್ಯವಸ್ಥಾಪಕಸಭೆಗೆ ಸಿಂಡಿಕೇಟ ಎಂದು ಹೆಸ
ರುಗಳುಂಟು.

* ಕನ್ನಡ ಭಾಷೆಯನ್ನು ನಮ್ಮ ಯುನಿವ್ಹರ್ಸಿಟಿಯಲ್ಲಿ ಶೇರಿಸಬೇ
ಕೆಂದು ನಾವು ಎರಡು ವರ್ಷಗಳ ಹಿಂದೆ ಮಾಡಿದಪ್ರಯತ್ನವು ಸಫಲವಾ
ಗಲಿಲ್ಲ; ಅದರ ಈ ಕೋರಿಕೆಯು ಬೇಗನೆ ಕೈಗೂಡಬಹುದೆಂದು ತೋ
ರುತ್ತದೆ.

ದ್ಯೋಗಿಸುತ್ತಾರೆ. ಈ ಕೆಟ್ಟ ಪದ್ಧತಿಯನ್ನು ಮುರಿದ್ಯಾ ಅವರ ವಿಚಾರಶಕ್ತಿಯನ್ನು ಬೆಳಿಸಬೇಕಾದರೆ ಪ್ರಶ್ನದ ಕಾಗದಗಳು ಹೆಚ್ಚು ಉದ್ದ ಅಥವಾ ಗಡಚು ಇರದಂತೆ ಸಿಂಡಿಕೇಟವರು ಎಚ್ಚರ ಪಡತಕ್ಕದ್ದು. †

HISTORY.

ಇತಿಹಾಸ.

(೧೪ನೇ ಪುಟದಿಂದ ಮುಂದೆಸಾಗಿದ್ದು.)

ಮೇಲೆ ಹೇಳಿದ ಇತಿಹಾಸದ ಪ್ರಯೋಜನವು ಮುಖ್ಯ ಪ್ರಯೋಜನಗಳಲ್ಲಿ ಎಲ್ಲಕ್ಕು ಮೊದಲಿನದೂ ಸಾಧಾರಣವಾದದೂ ಸಣ್ಣದೂ ಇದ್ದಾಗ್ಯಾದರೂ ಇತಿಹಾಸದ ಮೂಲಾರಂಭಕ್ಕೆ ಅದೇ ಬೀಜರೂಪವಾಗಿದೆ. ಅದಕ್ಕೂ ಹೆಚ್ಚಿನ ಉಪಯೋಗವು ಯಾವದಂದರೆ, ನೀತಿಬೋಧವು. ಸಜ್ಜನರಿಗೆ ಜಯವೂ ದುರ್ಜನರಿಗೆ ಅಪಜಯವೂ ವಾಡಿಕೆಯಾಗಿ ಆಗುತ್ತಿರುವದು ಇತಿಹಾಸದಲ್ಲಿ ಕಂಡು ಬರದಿದ್ದರೂ ಸರ್ವ ಸಾಧಾರಣ ಮಾನದಿಂದ ನೋಡಿದರೆ ಈ ನಿಯಮವು ವ್ಯಕ್ತವಾಗುತ್ತದೆ. ಇದಲ್ಲದೆ ಸದಾಚರಣೆಯಿಂದ ನಡೆಯುವವನಿಗೆ ಯಾವಾಗಲೂ ಕಲ್ಯಾಣವಾಗದಿದ್ದರೂ ದುರಾಚರಣೆಯಿಂದ ನಡೆಯುವವನಿಗೆ ಯಾವಾಗಲೂ ಕಲ್ಯಾಣವೇ ಆಗುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಸೂಕ್ಷ್ಮವಾಗಿ ವಿಚಾರಿಸಿದರೆ ಎಲ್ಲ ಬಗೆಯಿಂದ ಮನುಷ್ಯನಿಗೆ ಕಲ್ಯಾಣವಾಗಬೇಕಾದರೆ ಉತ್ತಮ ಮಾರ್ಗವನ್ನು ಅವಲಂಬಿಸುವದೇ ಪ್ರಶಸ್ತವಾದ

† ಈ ಸೂಚನೆಯು ಬಹಳ ಪ್ರಯೋಜನಕರವಾದದ್ದದೆ. ಇದನ್ನು ಮಾಸ್ತರರೂ ಪರೀಕ್ಷಕರೂ ಲಕ್ಷದಲ್ಲಿಡತಕ್ಕದ್ದು, ವಿದ್ಯಾರ್ಥಿಗಳ ಶಕ್ತಿಯನ್ನು ಮೀರಿದ ಪ್ರಶ್ನಗಳಿಂದ ಅವರ ಜ್ಞಾನಾಭಿವೃದ್ಧಿಗೆ ಅಡ್ಡಿಯಾಗುತ್ತದೆ.

ಉಪಾಯವೆಂದು ತೋರುತ್ತದೆ; ಕುಮಾರ್ಗದಿಂದ ಅದು ಸಂಭವಿಸುವದು ಅಶಕ್ಯವು. ಇದೇ ಮೇರೆಗೆ ದೊಡ್ಡ ದೊಡ್ಡ ಪ್ರಸಂಗಗಳಲ್ಲಿಯೂ ಧೈರ್ಯ ಬಿಡದೆ ಸದಾಚರಣೆಯಿಂದಲೇ ನಡಿಯುವಂಥ ಪುರುಷರಿಗೆ ಸಂಕಟಸಮಯದಲ್ಲಿ ಸಹಾಯವಾಗುವಂಥ ಸುಖವು ದುರ್ಮಾರ್ಗಿಗಳಿಗೆ ಅವರ ಉತ್ಕರ್ಷಕಾಲದಲ್ಲಿ ಸಹ ಆಗುವದಿಲ್ಲ. ಸಾರಾಂಶ, ಈ ಸಂಸಾರವೆಂಬ ಮಹಾನಾಟಕದಲ್ಲಿ ಆರಂಭದಿಂದ ಇವತ್ತಿನ ವರೆಗೆ ಆಗಿ ಹೋದ ಮುಖ್ಯ ಎಲ್ಲ ಪಾತ್ರಗಳನ್ನು ಕುರಿತು ಸಾವಧಾನದಿಂದ ವಿಚಾರ ಮಾಡಿದರೆ, ಉಚ್ಚ ಮಾರ್ಗವು ಯಾವದು, ನೀಚ ಮಾರ್ಗವು ಯಾವದು, ಎಂಬವನ್ನು ಸುಜ್ಞ ಪುರುಷನು ಕೂಡಲೆ ತಿಳಿಕೊಳ್ಳುವನು. ಸಹಸ್ರಾವಧಿ ಜನರ ಅನುಭವವು ಸ್ವಲ್ಪದರಲ್ಲಿಯೇ ಅವನಿಗೆ ಆಗುವದು. ಇದರಿಂದ ಅವನ ಬುದ್ಧಿಯು ಬೆಳೆಯುವದು. ಅವನು ವಿಚಾರವಂತನೂ ದೃಢನಿಶ್ಚಯವುಳ್ಳವನೂ ಇದ್ದರೆ ಬೇಗನೇ ಯಾವನಾದರೊಬ್ಬನ ಕಿತ್ತೆಯನ್ನು ಹಿಡಿದು, ನಾವಿಗರು ಧ್ರುವ ನಕ್ಷತ್ರವನ್ನು ನೋಡಿ ತಮ್ಮ ಹಡಗವನ್ನು ನಡಿಸುವಂತೆ, ತಾನು ಆದುಕೊಂಡ ಮನುಷ್ಯನ ಚರಿತ್ರವನ್ನು ನೋಡಿಕೊಂಡು ತನ್ನ ಆಯುಷ್ಯಕ್ರಮವನ್ನು ಅವನಂತೆ ಇಡುವನು. ಈ ಪ್ರಕಾರ ಇತಿಹಾಸದಿಂದ ಸದುಪದೇಶವು ಸಿಗುತ್ತದೆ. ಈ ಕಾರಣದಿಂದಲೇ ಒಬ್ಬ ದೊಡ್ಡ ಗ್ರಂಥಕಾರನು ' ಇತಿಹಾಸವು ಪ್ರತ್ಯಕ್ಷವಾಗಿ ಉದಾಹರಣೆಗಳನ್ನು ತೋರಿಸಿ ಮಾಡಿದ ಉಪದೇಶವಿರುತ್ತದೆ' ಎಂದು ದಿಟವಾಗಿ ಹೇಳಿದ್ದಾನೆ.

ಇತಿಹಾಸವು ಮನಸಿಗೆ ಉನ್ನತಿಯನ್ನೂ ಪ್ರಸನ್ನತೆಯನ್ನೂ ಕೊಡುತ್ತದೆ. ಅಂದರೆ ಅವನ್ನು ಯಾವಾಗಲೂ ಓದುವದರಿಂದ ಚಿತ್ತವು ಶಾಂತವೂ ಸ್ಥಿರವೂ ಆಗುವದಲ್ಲದೆ, ವಿಚಾ

ಲವೂ ಆಗುತ್ತದೆ. ಬಬ್ಬ ಚತುರ ಗ್ರಂಥಕಾರನು ಈ ವಿಷಯ
ದಲ್ಲಿ ಬರೆಯುವದೇನಂದರೆ:—ಇತಿಹಾಸವು ಈ ಜಗತ್ತಿನಲ್ಲಿ
ಹಿಂವಕ್ಕೆ ಆಗಿ ಹೋದಂಥ ಮಹಾ ಪುರುಷರ ಚರಿತ್ರವಿರುತ್ತ
ದೆ. ಇಂಥ ಪುರುಷರು ಮಾಡಿದಂಥ ಕೃತ್ಯಗಳಿಂವಲೇ ಅದು
ತುಂಬಿ ಅವೆ. ಅವುಗಳನ್ನೆಲ್ಲ ಬತ್ತಟ್ಟಗೆ ತೆಗಿದರೆ ಅದರಲ್ಲಿ ಏ
ನು ಉಳಿಯುವದು? ಏನೂ ಉಳಿಯುವದಿಲ್ಲ. ಅದದರಿಂದ ಈ
ಜಗತ್ತಿಗೆ ಕಾಂತಿಯನ್ನು ಕೊಡುವಂಥ ಉತ್ತಮೋತ್ತಮ ರ
ತ್ನಗಳು ಭಿನ್ನ ಭಿನ್ನ ದೇಶಗಳಲ್ಲಿ ಉತ್ಪನ್ನವಾದಾಗ್ಯೂ ಅ
ವುಗಳನ್ನೆಲ್ಲ ಬಟ್ಟುಗೂಡಿಸಿ, ಅವುಗಳ ಸಹವಾಸವು ನಿರಂತರ
ಆಗುವಂತೆ ಮಾಡಿಕೊಂಡರೆ ಅದರಿಂದ ಆಗುವ ಲಾಭಕ್ಕೆ ಇ
ನ್ನೊಂದು ಲಾಭವು ಜೋಡಾಗಬಹುದೇ? ಪ್ಲ್ಯೂಟಾರ್ಕ
ನೆಂಬ ಬಬ್ಬ ಹೆಸರಾವ ಇತಿಹಾಸಕಾರನು ಗ್ರೀಸ ದೇಶದಲ್ಲಿ ಆ
ಗಿ ಹೋದನು. ಅವನಿಂವ ರಚಿಸಲ್ಪಟ್ಟ ಬಳ್ಳೀ ಹೆಸರಾದಂಥ
ಇಡೀ ಜಗತ್ತಿನ ಪ್ರೀತಿಗೆ ಪಾತ್ರವಾದಂಥ ಗ್ರಂಥವು ಯಾವ
ದಂವರೆ, 'ಮಹಾ ಪುರುಷರ ಚರಿತ್ರವು.' ಅದರಲ್ಲಿ ಅವನು
ಗ್ರೀಸ ಮತ್ತು ಇತಾಲಿ ದೇಶಗಳಲ್ಲಿ ಸಂಭವಿಸಿದಂಥ ದೊಡ್ಡ
ದೊಡ್ಡ ಸಂಗತಿಗಳನ್ನು ವರ್ಣಿಸಿದ್ದಾನೆ. ಅವನು ಅದರ ಪ್ರ
ಸ್ತಾವನೆಯಲ್ಲಿ ಬರೆದದ್ದೇನಂದರೆ:—ನಾನು ಈ ಜನರ ಮೇ
ಲಾದ ಚರಿತ್ರವನ್ನು ಕುರಿತು ಲಕ್ಷ್ಯಪೂರ್ವಕವಾಗಿ ವಿಚಾರ
ಮಾಡಿದ್ದರಿಂದ ನನಗಾದ ಲಾಭವನ್ನು ವರ್ಣಿಸಲಾರೆನು. ನನ್ನ
ಮನಸ್ಸು ಕುಮಾರ್ಗವಕಡೆಗೆ ಹರಿಯಹತ್ತಿದಾಗ್ಗೆ, ಅಥವಾ ಸ
ದಾಚಾರವಬಗ್ಗೆ ನನ್ನಲ್ಲಿ ಉತ್ಸಾಹವು ಕಡಿಮೆಯಾದಾಗ್ಗೆ ನಾ
ನು ಅವರ ಚರಿತ್ರವನ್ನು ಓದುತ್ತಿದ್ದೆನು; ಇದರಿಂದ ನನಗೆ ಹೊ
ಸ ಉಮೇದು ಬರುತ್ತಿತ್ತು. ಸತ್ಯವಾಗಮದ ಮಹಿಮೆಯು
ಇದೇಮೇರೆಗೆ ಇರುತ್ತದೆಂಬ ಮಾತು ಸುಳ್ಳಲ್ಲ. ನಮ್ಮ

ದೇಶವಲ್ಲಿ ಆಗಿ ಹೋದಂಥ ದೊಡ್ಡ ದೊಡ್ಡ ಕವಿಗಳು ಇದೇ ಮಹಿಮೆಯನ್ನು ಕುರಿತು ಅನೇಕ ದೃಷ್ಟಾಂತಗಳನ್ನು ಕೊಟ್ಟು ಬಹು ಸರಸವಾಗಿ ಬರೆದಿದ್ದಾರೆ. ಆ ದೃಷ್ಟಾಂತಗಳಲ್ಲಿ ತು ಕಾರಾಮು ಮುಂತಾದ ಕವಿಗಳು ಕೊಟ್ಟಂಥ ಉಪಮೆಗಳಲ್ಲಿ ಮೇಲಾದ ' ಲೋಹ ಸ್ಪರ್ಶಮಣಿಗಳ ' ಉಪಮೆ ಈಸ್ಥಳದಲ್ಲಿ ಹೇಳಲಿಕ್ಕೆ ಯೋಗ್ಯವಾದದ್ದು. 'ಕಬ್ಬಿಣವು ಸ್ವಭಾವತಃ ಎಷ್ಟು ಕೀಳತರದ್ದಿರುತ್ತದೆ, ಮತ್ತು ತೋರಿಕೆಯಲ್ಲಿ ಎಷ್ಟು ನೀಚವಿರುತ್ತದೆ, ನೋಡಿರಿ; ಆದರೆ ಪರುಸುಗಲ್ಲಿನ ಸಂಸರ್ಗವು ಅವಕ್ಕೆ ಆದ ಕೂಡಲೇ ಎಲ್ಲ ಧಾತುಗಳಲ್ಲಿ ಮೇಲಾದದ್ದೆಂದು ಅನಿಸಿಕೊಂಡಂಥ ಸುವರ್ಣದ ಗುಣವು ಅದರಲ್ಲಿ ಬರುತ್ತದೆ.' ಅದರಂತೆ ಮನುಷ್ಯನು ಊಚ ನೀಚನಾಗುವದು ಎಷ್ಟೋ ಅಂಶಗಳಲ್ಲಿ ಅವನಿಗೆ ಪ್ರಾಪ್ತವಾದ ಸಹವಾಸದ ಫಲವೇ ಇರುತ್ತದೆ. ಎಷ್ಟೋ ಜನರು ಅದು ನಿಶ್ಚಯವಾಗಿ ಸಹವಾಸದ ಫಲವೇ ಇರುತ್ತದೆಂದು ಬಡಂಬಡುತ್ತಾರೆ. ಇಂಗ್ಲಂದ ದೇಶವಲ್ಲಿ ಸುಮಾರು ಇನ್ನೂರು ವರ್ಷಗಳ ಪೂರ್ವದಲ್ಲಿ ಲಾಕ್‌ನೆಂಬ ಬಬ್ಬ ಪ್ರಖ್ಯಾತ ತತ್ವಜ್ಞಾನಿಯು ಆಗಿಹೋದನು. ಅವನು ಈ ಮತವನ್ನು ಪ್ರಸ್ತಾಪಿಸಿದನು. ಈ ಮತಾನುಯಾಯಿಗಳ ಅಭಿಪ್ರಾಯವೇನೆಂದರೆ:—ಮನುಷ್ಯನ ಮನಸು ಹೊದಲು ಬಂದು ಸ್ವಚ್ಛವಾದ ಕನ್ನಡಿಯಂತೆ ಅಥವಾ ಬಿಳಿ ಕಾಗದದ ಹಾಗೆ ಇರುತ್ತದೆ. ಅದಕ್ಕೆ ಹೊದಲು ಬಳ್ಳೀದು ಕೆಟ್ಟದು ಎಂಬ ಸಂಸ್ಕಾರವೇನೂ ಇರುವದಿಲ್ಲ. ಮುಂದೆ ಅವಕ್ಕೆ ಸ್ಥಿತಿವಿಶೇಷಾನುರೂಪದಿಂದ ಅವುಗಳ ಸಹವಾಸ ಉಂಟಾಗಿ ಅದು ಬಳ್ಳೀದರ ಕಡಿಗೆ ಇಲ್ಲವೆ ಕೆಟ್ಟದರ ಕಡಿಗೆ ಬಲಿಯುತ್ತದೆ. ನೆರೆಯ ಪದಾರ್ಥಗಳ ಸ್ಥಿತಿಗೆ ಸರಿಯಾಗಿ ಆಗಾಗ್ಗೆ ಮನಸು ಬಳ್ಳೀ ಅಥವಾ ಕೆಟ್ಟ ವಿಕಾ

ರವನ್ನು ಹೊಂದುತ್ತದೆಂಬ ಮಾತು ದಿಟವದೆ. ಕೆಳಗೆ ಅಚ ತರಿಸಿದ ವಚನವು ಈ ಅರ್ಥವನ್ನೇ ವ್ಯಕ್ತ ಪಡಿಸುತ್ತದೆ.

"अतृणे पतितो वन्हिः स्वयमेवोपशाम्यति" ।

'ಹುಲ್ಲು (ಸುಡೋ ಪದಾರ್ಥಗಳು) ಇಲ್ಲದ ಸ್ಥಲದಲ್ಲಿ ಬಿದ್ದ ಬೆಂಕಿಯು ತನ್ನಷ್ಟಕ್ಕೇ ಆರುತ್ತದೆ' ಇದೇ ಮೇರೆಗೆ ಮನುಷ್ಯನ ಬಳ್ಳೇ ಅಥವಾ ಕೆಟ್ಟ ಗುಣಗಳು ಪೂರ್ಣವಾಗಿ ವಿಕಾಸ ಹೊಂದಲಿಕ್ಕೆ ಆಯಾತರದ ಸ್ಥಿತಿಯು ಅನುಕೂಲತೆಯು ಬೇಕಾಗುತ್ತದೆ. ನೋಡಿರಿ, ಸವ್ಯಕ್ಕೆ ನಮ್ಮ ದೇಶದಲ್ಲಿ ಶಿವಾಜಿಯಂತೆ ಅಥವಾ ಹೈದರನಂತೆ ರಾಜ್ಯಕರ್ತರು ಯಾಕೆ ಹುಟ್ಟುವದಿಲ್ಲ? ಇಲ್ಲವೆ ನಾನಾಫಡನವೀಸನಂತೆ ರಾಜಕಾರ್ಯಧುರಂಧರನು ಯಾಕೆ ಆಗುವದಿಲ್ಲ? ಇದರ ಕಾರಣವೇನಂದರೆ, ಅವಕ್ಕೆ ತಕ್ಕ ಗುಣವುಳ್ಳ ಜನರು ಇದ್ದಾಗ್ಯಾದರೂ ಆ ಗುಣ ವಿಕಾಸವಾಗಲಿಕ್ಕೆ ಯೋಗ್ಯವಾದ ಅವಕಾಶವು ಇಲ್ಲವೇ ಇಲ್ಲ. ಈ ಮಾತು ಅಕ್ಷರಶಃ ನಿಜವದೆ. ಯಾವದೊಂದು ಹುಟ್ಟುಗುಣವು ಸ್ಫುಟವಾಗಿ ತೋರಲಿಕ್ಕೆ ತಕ್ಕ ಸ್ಥಿತಿಯು ಮನುಷ್ಯನಿಗೆ ಅನುಕೂಲವಾಗಿರಬೇಕಾಗುತ್ತದೆ; ಮತ್ತು ಈ ಸ್ಥಿತಿವಿಶೇಷದೊಳಗಿನ ದೊಡ್ಡ ತತ್ವವೇನಂದರೆ:— ಅಂಥಾ ಮಹಾ ಪುರುಷರ ಸಹವಾಸವು. ಈ ಸಹವಾಸವು ಜಗತ್ತಿನಲ್ಲಿ ಆಗಿಹೋದಂಥ ವಿಖ್ಯಾತ ಪುರುಷರಿಗೆ ಇರದಿದ್ದರೆ, ಅವರು ಅಷ್ಟು ಕೀರ್ತಿಯುಳ್ಳವರು ಎಂದಿಗೂ ಆಗುತ್ತಿರಲಿಲ್ಲ. ಮೊನ್ನೆ ಮೊನ್ನಿನ ಬಂದು ಉದಾಹರಣೆಯನ್ನು ತೆಗೆದುಕೊಳ್ಳೋಣ—೧೪೯೭ ನೇ ಇಸವಿಯಲ್ಲಿ ತೀರಿಕೊಂಡಂಥ ಇಂಗ್ಲಂದವಲ್ಲಿಯ ಬಳ್ಳೇ ಪ್ರಸಿದ್ಧ ಗ್ರಂಥಕಾರನಾದ ಜಾನ್‌ಸ್ಟ್ಯಾಲರ್ಟಮಿಲ್ ಇವನಿಗೆ ತಂದಿಯು ಸಹವಾಸವಿಲ್ಲದಿದ್ದರೆ ಅವನ ಬುದ್ಧಿಯು ಇಷ್ಟು ಪರಿಪಕ್ವವು ಆಗು

ತ್ತಿತ್ತೋ? ನಿಶ್ಚಯವಾಗಿ ಆಗುತ್ತಿದ್ದಿಲ್ಲ. ಕುಬೇರ ಬುದ್ಧಿ ಯುವನಾದದರಿಂದ ಅವನು ಹ್ಯಾಗಾದರೂ ಪ್ರಸಿದ್ಧಿಗೆ ಬರುತ್ತಿದ್ದನೆಂಬದು ನಿರ್ವಿವಾದವಿದ್ದರೂ, ಇಷ್ಟು ಮಿತಿಮೀರಿದ ಕೀರ್ತಿಯನ್ನು ಅವನು ಎಂದಿಗೂ ಸಂಪಾದಿಸುತ್ತಿದ್ದಿಲ್ಲ. ಈ ವಿದ್ವನ್ಮಣಿಯು ತನ್ನ ಗ್ರಂಥದಲ್ಲಿ ಬರೆದದ್ದೇನೆಂದರೆ:— "ನಾನೊಬ್ಬನೇ ಇಪ್ಪತ್ತೈದು ವರ್ಷ ದುಡಿದು ಸಂಪಾದಿಸಬ ಹುದಾದ ಜ್ಞಾನವು ನನ್ನ ತಂದೆಯ ಶಿಕ್ಷಣದಿಂದ ನನಗೆ ಬಂ ದಿರಡು ವರ್ಷಗಳಲ್ಲಿ ಅನಾಯಾಸವಾಗಿ ದೊರೆಯಿತು." ಇದೇ ನೋರೆಗೆ ಪ್ರಾಚೀನ ಕಾಲದ ಕಿಕಂದರ, ಹಾನಿಬಲ, ಸಿಪಿಯೋ ಮುಂತಾದವರ ಮತ್ತು ಅರ್ವಾಚೀನ ಕಾಲದಲ್ಲಿ ನಮ್ಮ ದೇಶದೊಳಗೆ ಹೆಸರು ಪಡೆದ ದೊಡ್ಡ ಬಾಜೀರಾವ, ಟಪ್ಪೂಸು ಲ್ತಾನ, ಮುಂತಾದವರ ಉದಾಹರಣೆಗಳನ್ನು ಕೊಡಬಹುದು. ಅವರಿಂದ ಸಂಗತಿವಿಶೇಷದ ಫಲವು ಅಚಿಂತ್ಯವಿರುತ್ತದೆ. ಇ ದರ ಕಾರಣವನ್ನು ಹುಡುಕಹೋದರೆ ಅದು ಬಹು ಗೂಢವ ದೆಂಬುತಿಲ್ಲ. ಮನುಷ್ಯನಿಗೆ ಜಗತ್ತಿನೊಳಗಿನ ವ್ಯವಹಾರ ಗಳು ತುಸು ತುಸು ತಿಳಿಯಲಿಕ್ಕೆ ಹತ್ತಿದ ಕೂಡಲೆ ಅವ ನ ಕೈಯಿಂದ ಯಾವದಾದರೊಂದು ವ್ಯಾಪಾರವು ನಿಶ್ಚಯವಾ ಗಿ ಆಗಲೇ ಬೇಕು. ಅವನು ಯಾವದಾದರೊಂದು ಕೃತ್ಯ ವನ್ನು ಮಾಡದೆ ಕೈಮುಚ್ಚಿಕೊಂಡು ಕೂಡುವದು ಎಂದಿ ಗೂ ಆಗುವದಿಲ್ಲ. ಹಾಗಾದರೆ, ಅವನು ಹ್ಯಾಗೆ ವರ್ತಿಸ ಬೇಕು? ಸಹಜವಾಗಿಯೇ ಎಡಬಲದಲ್ಲಿರುವವರ ಆಚರ ಣೆಯಂತೆಯೇ ಅವನು ನಡೆಯುವನೆಂಬದು ಸ್ಪಷ್ಟವದೆ. ಅದರ ರಿಂದ ಹುಡುಗರಲ್ಲಿ ತಾಯಿ ತಂದೆಗಳ ಗುಣಗಳು—ಮುಖ್ಯ ವಾಗಿ ತಾಯಿಯ ಗುಣಗಳು—ತೋರುವಷ್ಟು ಮತ್ತಾರ ಗು ಣಗಳು ತೋರುವದಿಲ್ಲ. ಮನುಷ್ಯನ ಪ್ರವೃತ್ತಿಯು, ಅನುಕ

ರಣನನ್ನು ಇಷ್ಟ ಸಹಜವಾಗಿಯೂ ಇಷ್ಟ ಬಲವಾಗಿಯೂ ಮಾಡುವದು ಇರಲಾಗಿ ಚಿಕ್ಕಂದಿನಿಂದ ಇತಿಹಾಸ, ದೊಡ್ಡವರ ಚರಿತ್ರ ಮುಂತಾದವುಗಳನ್ನು ಓದುವದರಿಂದ ಎಷ್ಟು ಲಾಭವಾಗಬಹುದೆಂಬದು ಮೇಲೆಯೇ ತೋರುತ್ತದೆ. ಮಹಾಪುರುಷರ ಸಹವಾಸದಲ್ಲಿ ಯಾವಾಗಲೂ ಇರುವಷ್ಟು ಪುಣ್ಯವಂತನು ಸಾವಿರಕೊಬ್ಬನಿರಬಹುದು. ಮಿಕ್ಕವರಿಗೆ ವಿಪರೀತ ಗುಣಗಳುಳ್ಳ ಜನರ ಸಹವಾಸವಿರುವದೇ ಬಹಳ!! ಅಂದಮೇಲೆ ಇಂಥವರ ಸಹವಾಸದಿಂದ ಮನುಷ್ಯನಿಗೆ ಎಷ್ಟು ಹಾನಿಯಾಗುವದೆಂಬವನ್ನು ಇಲ್ಲಿ ಬೇರೆ ಹೇಳುವ ಕಾರಣವಿಲ್ಲ.

EXCURSION TO KOLHAPUR.

ಕೊಲ್ಹಾಪುರದ ಪ್ರವಾಸವು.

(೪೬ನೇ ಪುಟದಿಂದ ಮುಂದೆ ಸಾಗಿದ್ದು.)

೨. ಉಪಯೋಗ—ಈ ತಡಸಲಿನಲ್ಲಿ ಬೀಳುವ ಪ್ರವಾಹದ ಸಹಾಯದಿಂದ ಅಲ್ಲಿ ಬಂದು ನೂಲು ತೆಗೆಯುವ ಯಂತ್ರವನ್ನು ರಚಿಸಿವ್ದಾರೆ. ತಡಸಲಿನ ಮೇಲ್ಪಡೆಯಲ್ಲಿ ಕೆಲವು ಅಂತರದ ಮೇಲೆ ಹೊಳೆಯ ಪ್ರವಾಹದ ಕೆಲವು ಭಾಗವನ್ನು ತಿರುಗಿಸಿ ಅದರ ವೇಗವನ್ನು ಬಲಪಡಿಸುವದಕ್ಕಾಗಿ ಅದನ್ನು ಮೇಲ್ಬಾಗದಿಂದ ಬುಡದ ವರೆಗೆ ನಡಿಸಿದ ೨—೩ ಫೂಟು ವ್ಯಾಸವುಳ್ಳ ಬಾದು ಕಬ್ಬಿಣದ ಬಂಬಿನಲ್ಲಿ ಬಿಟ್ಟಿರುತ್ತಾರೆ. ಈ ಬಂಬಿನೊಳಗಿಂದ ನೀರು ಸೂಕಪ್ಪ ವೇಗದಿಂದ ಹೊರ ಬೀಳುವ ಸ್ಥಳವಲ್ಲಿ ಬಂದು ಮನೆಯನ್ನು ಕಟ್ಟಿರುತ್ತಾರೆ. ಅದರಲ್ಲಿ ೧೨—೧೬ ಮೊಳ ವ್ಯಾಸವುಳ್ಳ ೩ ಚಕ್ರಗಳು ಅವೆ ಈ ಯಂತ್ರಕ್ಕೆ "ಟರಬಾಯಿನ್ ಮಷಿನರಿ" ಎಂಬ ಹೆಸರುಂಟು. ಯಂತ್ರದ ೩ ಚಕ್ರಗಳಿಗೆ ನೀರಿನ ವೇಗದಿಂದ

ಅತಿ ಭಯಂಕರವಾದ ಗತಿಯು ದೊರೆಯುತ್ತದೆ. ಮೇಲೆ ಹೇಳಿದ ಕಬ್ಬಿಣದ ಬಂಬಿನೊಳಗಿಂದ ನೀರು ಹೊರಬೀಳುವ ಸ್ಥಳದಲ್ಲಿ ಎರಡು ಶಕ್ತಿಗಳು ಕೆಲಸಮಾಡುವಂತೆ ತೋರುತ್ತವೆ. ಅವು ಯಾವವೆಂದರೆ—೧ ಗುರುತ್ವಾಕರ್ಷಣದಿಂದುಂಟಾಗುವ ಪ್ರವಾಹದ ವೇಗ, ೨ ವಿಸ್ತಾರವಾಗಿ ಹರಿಯುವ ಪ್ರವಾಹವನ್ನು ಬಂಬಿನೊಳಗೆ ತಂದು ಆಕುಂಚಿತ ಮಾಡಿದ್ದರಿಂದ ಅದು ಹೊರಬೀಳುವ ಸ್ಥಳದಲ್ಲಿ ಹುಟ್ಟುವ ಶಕ್ತಿ.

ಇಲ್ಲಿ ನೋಡಿದ ಮತ್ತೊಂದು ಚಮತ್ಕಾರದ ಸಂಗತಿ ಏನೆಂದರೆ—"ಸಮುದ್ರದ ಪ್ರವಾಹದಿಂದ ಗುಂಡುಗಳು ಬಂಡೆಗಳಲ್ಲಿ ಬಡವಾಡಿ ದೊಡ್ಡ ಗೂಡುಗಳನ್ನು ಹುಟ್ಟಿಸುತ್ತವೆ" ಎಂಬವನ್ನು ನಾವು ಪ್ರಾಕೃತಿಕ ಭೂಗೋಲಶಾಸ್ತ್ರದಲ್ಲಿ ಓದಿದ್ದೇವಷ್ಟೇ; ಇಲ್ಲಿ ಆ ಸಂಗತಿಯು ಪ್ರತ್ಯಕ್ಷವಾಗಿ ಕಾಣಿಸಿತು. ಈ ಸ್ಥಳದಲ್ಲಿ ಹೊಳೆಯ ಪ್ರವಾಹದಿಂದ ಬಂಡೆಗಳಲ್ಲಿ ಗುಂಡುಗಳು ಬಡದಾಡಿ ೫।೬ ಘಾಟು ಆಳವಾದ ವರ್ತುಳಾಕಾರದ ಎಷ್ಟೋ ತಗ್ಗುಗಳು ಕಣ್ಣಿಗೆ ಬಿದ್ದವು. ಇದರಿಂದ ನಾವು ಓದಿದ್ದರ ಪ್ರತ್ಯಕ್ಷತೆಯಾದಂತೆ ಆಯಿತು.

ತರುವಾಯ ಗುಡಿಯಲ್ಲಿ ಭೋಜನ ತೀರಿಸಿಕೊಂಡು ನಮ್ಮ ಯಾವತ್ತು ಗಂಟುಗಳನ್ನು ಸ್ಟೇಷನಕ್ಕೆ ಕಳುಹಿಸಿ ಎಲ್ಲರೂ ಕೂಡಿಕೊಂಡು ಅಲ್ಲೇ ಸಮೀಪವಿರುವ ಘಟಪ್ರಭಾ ನದಿಯ ಸೇತುವೆಯನ್ನು ನೋಡಬೇಕೆಂದು ಹೋದೆವು. ಈ ಸೇತುವಿಗೆ ೪೧ ಕಮಾನುಗಳಿವೆ. ಇದರ ಉದ್ದಳತೆ ಸುಮಾರು ೨ ಮೈಲು ಕಂಬಗಳು ಕಲ್ಲಿನವು. ಉಳಿದ ಯಾವತ್ತು ಕಟ್ಟಣೆಯು ಕಬ್ಬಿಣದ್ದಿರುತ್ತದೆ. ಈ ಸೇತುವೆಗೆ ಸಮೀಪವಾಗಿ ಬಂದು ದೊಡ್ಡ ಗೋಡೆಯನ್ನು ಕಟ್ಟಿ ಹಳೇ ಪ್ರವಾಹದ ಕೆಲವು ಭಾಗವನ್ನು ಕಾಲುವೆಯ ರೂಪದಿಂದ ಮುಂದೆ ಕಳುಹಿಸಿರುತ್ತಾರೆ.

ನಮ್ಮ ಹಿಂದುಸ್ತಾನವು ಬಂದು ದೇಶವಾದಾಗ್ಯೂ ಅದರ ಹವೆಯು ಬಂದೇ ಸಮನಾಗಿಲ್ಲ. ಹವೆಯ ಸಂಬಂಧದಿಂದ ವಿಚಾರಿಸಲಾಗಿ ಇದು ಬಂದು ದೊಡ್ಡ ಖಂಡವೆಂದರೂ ಸಲ್ಲುವದು. ಈ ದೇಶದ ಕೆಲವು ಭಾಗಗಳ ಮೇಲೆ ಮಳೆಯು ತಪ್ಪದೆ ವಿಪುಲವಾಗಿ ಬೀಳುತ್ತದೆ. ಕೆಲವು ಶೀಮೆಗಳಲ್ಲಿ ಬೀಳುವದೇ ಇಲ್ಲ, ಕೆಲವು ಶೀಮೆಗಳಲ್ಲಿ ಅನಿಶ್ಚಿತವಾದದ್ದು, ಇವುಗಳಲ್ಲಿ ಅನಿಶ್ಚಿತವಾದ ಮಳೆಯ ಪ್ರದೇಶವೇ ಹೆಚ್ಚು. ಈ ಪ್ರಕಾರ ಮಳೆಯ ಕೊರತೆಯಿಂದ ಆಗಾಗ್ಗೆ ಬರಗಾಲವು ಬಂದಿಲ್ಲ ಬಂದು ಕಡಿಗೆ ಬಿದ್ದೀಬೀಳುತ್ತದೆ. ಈ ಕೊರತೆಯನ್ನು ದೂರಪಡಿಸುವದಕ್ಕಾಗಿ ಬಹು ದಿವಸಗಳಿಂದ ಕಾಲುವೆಗಳನ್ನು ಕಟ್ಟುವ ಕೆಲಸವು ನಡೆದಿರುವದು. ಗಂಗಾ, ಕಾವೇರಿ ಹೊಳೆಗಳ ಕಾಲುವೆಗಳನ್ನು ದೇಶೀ ಅರಸರು ಕಟ್ಟಿಸಿದ್ದು ಪ್ರಸಿದ್ಧವೇ ಉಂಟು. ನಮ್ಮ ಪ್ರಾಂತದಲ್ಲಿ ತುಂಗಭದ್ರಾ ನದಿಗೆ ವಿಜಯನಗರದ ಅರಸರು ಕಾಲುವೆ ಕಟ್ಟಿಸಿರುವರೆಂದು ನಾವು ಕೇಳುತ್ತೇವೆ. ಹಂಪಿಯಲ್ಲಿ ಈ ಕಾಲುವೆಯನ್ನು ಈಗ್ಗಾಲ್ಯವರೂ ಕಾಣಬಹುದೆಂದು ಹೇಳುತ್ತಾರೆ. ಇಂಗ್ಲಿಷ ಸರಕಾರದವರು ಈ ಕಾಲುವೆ ಕಟ್ಟುವ ರೀತಿಯನ್ನು ನೀರು ಹಂಚಿಕೊಡುವ ಕ್ರಮವನ್ನು ಬಲಪಡಿಸಿದ್ದಲ್ಲದೆ ಹೊಗೆ ಬಂಡಿಯೆಂಬ ಮೇಲಾವ ಸಾಧನವನ್ನು ಯೋಜಿಸಿ ಬರಗಾಲದ ಭೀತಿಯನ್ನು ತಕ್ಕವಮಟ್ಟಿಗೆ ಹೋಗಲಾಡಿಸಿರುತ್ತಾರೆ. ಗೋಕಾಂವಿಯ ಗೋಡೆಯ ಆಚೆಗೆ ನಿಂತಿರುವ ನೀರಿನ ಸಂಚಯವು ಬಂದು ಸಣ್ಣ ಸರೋವರದಂತೆ ಕಂಗೊಳಿಸುತ್ತದೆ. ಇದರ ಕೆಳಗೆ ೩ಂ ಮೈಲುಗಳವರೆಗೆ ಭೂಮಿಯು ಸಾಗುವಳಿಯಾಗಬಹುದೆಂದು ಹೇಳುತ್ತಾರೆ.

ಇವನ್ನೆಲ್ಲ ನೋಡಿಕೊಂಡು, ಗೋಕಾಂವಿಯ ಸ್ಟೇಶನಕ್ಕೆ ಹೋದೆವು. ಅಷ್ಟರೊಳಗೆ ಹೊಗೆ ಬಂಡಿಯ ವೇಳೆಯು

ವಿಳಂಬ ಹೋದದ್ದರಿಂದ ರಾತ್ರಿ ಸ್ಟೇಶನದಲ್ಲಿಯೇ ಮಲಗಿಕೊಂಡೆವು. ಅಲ್ಲಿಯ ಸ್ಟೇಶನ ಮಾಸ್ತರರು ನಮಗೆ ಎಲ್ಲಪ್ರಕಾರದ ಅನುಕೂಲತೆಗಳನ್ನು ಚನ್ನಾಗಿ ಮಾಡಿಕೊಟ್ಟರು. ಮುಂಜಾನೆ ಎದ್ದು ಸ್ನಾನ, ಫಲಾಹಾರಗಳನ್ನು ತೀರಿಸಿಕೊಂಡು ೪ ಗಂಟೆಗೆ ಹೊಗೆ ಬಂಡಿಯಲ್ಲಿ ಕುಳಿತು ೧೦ ಗಂಟೆಗೆ ನಾವು ಮಿರಜಿಗೆ ಹೋದೆವು. ಈಊರ ಸ್ಟೇಶನಕ್ಕೆ ಸಮೀಪವಾಗಿ ಅಲ್ಲಿಯ ಸಂಸ್ಥಾನಿಕರಿಂದ ಕಟ್ಟಿಸಲ್ಪಟ್ಟ ಒಂದು ಧರ್ಮಶಾಲೆಯುದೆ. ಇದರ ಹತ್ತರ ಪ್ರವಾಸಿಕರಿಗೆ ಸಾಲುವಷ್ಟು ನೀರಿನ ಪೂರೈಕೆಯುಳ್ಳ ಎರಡು ಹೌಮಗಳಿರುತ್ತವೆ. ಅವುಗಳಲ್ಲಿ ಒಂದು ಬ್ರಾಹ್ಮಣರದು, ಮತ್ತೊಂದು ಉಳಿದ ಜಾತಿಯವರದು. ಈ ಧರ್ಮಶಾಲೆಯಲ್ಲಿ ಅಡಿಗಿ ಮಾಡಿಕೊಳ್ಳಲಿಕ್ಕೆ ಎರಡು ಕೋಣೆಗಳುಂಟು. ಅವುಗಳಲ್ಲಿ ಬಲಿ, ಬಚ್ಚಲ ಮುಂತಾದ ಎಲ್ಲಬಗೆಯ ಸಾಧನೆಗಳುಂಟು. ಈ ಧರ್ಮಶಾಲೆಯ ಕಟ್ಟಣೆ ಕಲ್ಲಿನದು; ನಮ್ಮ ಎಲ್ಲ ಜನರಿಗೆ ಕೂಡ್ರಲಿಕ್ಕೂ ಮಲಗಲಿಕ್ಕೂ ಸಾಕಷ್ಟು ತಾಣ ಉಳ್ಳದ್ದಾಯಿತು. ಇದನ್ನು ಉಡುಗ ಸಾರಿಸಲಿಕ್ಕೂ, ಕಾಯಲಿಕ್ಕೂ ಒಬ್ಬ ಮನುಷ್ಯನಿದ್ದಾನೆ. ಅವನ ಹತ್ತರ ೧೦—೧೫ ಮಂದಿಯ ಅಡಿಗೆಯ ಪಾತ್ರೆಗಳು ಪ್ರವಾಸಿಕರ ಉಪಯೋಗಕ್ಕಾಗಿ ಸಂಸ್ಥಾನಿಕರಿಂದ ಇಡಲ್ಪಟ್ಟಿರುತ್ತವೆ.

ನಾವೆಲ್ಲರು ಬಚ್ಚಿ ಬಂದು ಊಟ ಮುಂತಾದವುಗಳನ್ನು ಮಾಡಿಕೊಂಡು ಸಾಯಂಕಾಲದ ೪½ ಗಂಟೆಗೆ ಪಟ್ಟಣವನ್ನು ನೋಡಲಿಕ್ಕೆ ಹೋದೆವು, ಇಲ್ಲಿ ನೋಡತಕ್ಕ ಸ್ಥಳಗಳು ಎರಡು. ಮೀರಾಸಾಹೆರ ಮಸೀದೆ, ಟೌನಹಾಲ, (ನಗರಮಂದಿರ.)

ಮೀರಾಸಾಹೇಬರ ಮಸೀದೆಯು ಪೂರ್ವಮುಖವಾಗಿರುತ್ತದೆ. ಮಸೀದೆಯ ಮಹಾದ್ವಾರವನ್ನು ದಾಟಿದ ಕೂಡಲೆ ಬಾನು ದೊಡ್ಡ ಚೌಕು ಅದೆ, ಅವರ ಸುತ್ತಲೂ ಕಲ್ಲಿನಿಂದ

ಕಟ್ಟವ ಎಷ್ಟೋ ಮೌಳಿಗಳುಂಟು. ಇದರ ಎರಡನೇ ಸುತ್ತಿಗಿ ಲವ ಬಳಮಗ್ಗಲಿಗೆ ಮತ್ತೊಂದು ಚೌಕವಿರುತ್ತದೆ. ಈ ಚೌಕಿನಿಂದ ಸಿನೇ ಬಾಗಿಲ ದಾಟಿ ಬಳಭಾಗದ ಸಣ್ಣ ಮಸೀ ದೆಯಲ್ಲಿ ೩ ಗೋರಿಗಳುಂಟು. ಇವು ಶಮೆನಾ, ಮೀರಾ ಎಂಬ ಇಬ್ಬರು ಅಣ್ಣ ತಮ್ಮಂದಿರವು, ಎಂದು ಅಲ್ಲಿಯ ಮು ಸಲ್ಮಾನರು ಹೇಳುತ್ತಾರೆ. ಈ ಮಸೀದಿಗೆ ಬಂದು ದೊಡ್ಡ ಗುಮಟು ಇರುತ್ತದೆ. ಅದು ಸುಮಾರು ೭—೮ ಮೈಲು ದೂರದಿಂದ ಕಾಣಿಸುವಷ್ಟು ಎತ್ತರವಾಗಿದೆ.

ನಗರಮಂದಿರ (ಟೌನಹಾಲ) ಈ ಮನೆಯು ಪಶ್ಚಿಮಾ ಭಿ ಮುಖವಾಗಿರುತ್ತದೆ. ಬಳಭಾಗದಲ್ಲಿರುವ ಅಂಗಳವು ತ ರತರವ ಗಿಡಗಳಿಂದ ಭೂಷಿಸಲ್ಪಟ್ಟಿದೆ. ಇಡೀ ಮನೆಯು ಅಷ್ಟ ಕೋನಾಕೃತಿ ಇದ್ದು ಕಟ್ಟಣೆಯೆಲ್ಲಾ ಕಲ್ಲಿನದೇ ಇರುತ್ತ ದೆ. ಮಧ್ಯದಲ್ಲಿ ಬಂದು ದೊಡ್ಡ ಕೋಣೆಯೂ ಅದರ ಎರಡೂ ಮಗ್ಗಲಿಗೆ ಎರಡೆರಡು ಸಣ್ಣ ಕೋಣೆಗಳೂ ಇರುತ್ತವೆ. ದೊಡ್ಡ ಕೋಣೆಯು ಕೆಲವು ಕೆಂಪು, ಬಿಳೀ, ಸಂಗಮರವ ರೀಕಲ್ಲುಗಳಿಂದ ಮಾಡಲ್ಪಟ್ಟಿರುತ್ತದೆ. ಈ ಕೋಣೆಯ ಗೋ ಡೆಗೆ ಅಲ್ಲಿಯ ಸಂಸ್ಥಾನಿಕರ ಚಿತ್ರಗಳನ್ನು ತೂಗಗಟ್ಟಿರುತ್ತಾ ರೆ. ಬದಿಗಿರುವ ಕೋಣೆಗಳಲ್ಲಿ ಯಾವತ್ತು ಪಶು ಜಾತಿಯ ಗೊಂಬೆಗಳನ್ನೂ ಎಲ್ಲ ಜಾತಿಯ ಕೃತ್ರಿಮ ಹಣ್ಣು ಹಂಪಲ ಗಳನ್ನೂ ಇಟ್ಟಿರುತ್ತಾರೆ. ಅವೆಲ್ಲ ಸಜೀವ ಪಶುಗಳಂತೆಯೂ ಗಿಡಗಳಿಂದ ಕೊಯ್ದು ತಂದ ಫಲಗಳಂತೆಯೂ ತೋರುತ್ತಿ ರುವ ಕಾರಣ ಅವುಗಳನ್ನು ಮಾಡಿದವರ ಕೌಶಲ್ಯವನ್ನು ಬಣ್ಣಿಸಲಳವಲ್ಲ ಈ ಮನೆಯ ಬಂದು ಬದಿಯಲ್ಲಿ ಬಂದು ದೀ ರ್ಘ ವರ್ತುಲಾಕಾರವಾದ ಹೌದು ಉಂಟು. ಅದರ ಮಧ್ಯದ ಲ್ಲಿ ಬಾವು ಕಾರಂಜಿಯಿಂದ ನೀರು ಸರ್ವದಾ ಪುಟ್ಟಿಯುತ್ತಿ

ುತ್ತಾರೆ. ಆ ಹೊಂಡದೊಳಗಿನ ನೀರನ್ನೂ ಕಾರಂಜಿಯಿಂ
ಆ ನೀರು ಪುಟಿಯುವದನ್ನೂ ಆ ಹೊಂಡದ ಸುತ್ತಲಿರು
ಸಣ್ಣ ಗಿಡಗಳ ಸಾಲನ್ನೂ ನೋಡಿ ಮನಸ್ಸಿಗೆ ಅಲ್ಹಾದ
ಾಗುತ್ತದೆ. ಈ ಹೊಂಡದಸುತ್ತಲೂ ಕೆಲವು ಅಂತರದ ಮೇ
ಪೌಳಿಗಳಂತೆ ಸಾಲಾಗಿ ಸಣ್ಣ ಸಣ್ಣ ಕೋಣೆಗಳಿರುತ್ತವೆ.
ತಿಯೊಂದು ಕೋಣೆಯ ಮುಂಭಾಗದಲ್ಲಿ ಕಬ್ಬಿಣದ ಗಜ
ಳ ಕಟಾಂಜನಗಳನ್ನು ನಿಲ್ಲಿಸಿರುತ್ತಾರೆ. ಈ ಕೋಣೆ
ಳಲ್ಲಿ ಮಂಗ, ಎರಳೆ, ನರಿ, ಕಡಿವಿ, ಜಿಂಗಳೀಕ, ಮುಂ
ದ ಪಶುಗಳನ್ನು ಐಮಬಣ್ಣದ ಗಿಳಿಗಳನ್ನೂ ಐಮಬ
ದ ಗುಬ್ಬಿಗಳನ್ನೂ ನೋಡಬಹುದು. ಕೋಣೆಯ
ುಂದೆ ಯಾರಾದರೂ ನೋಡಲಿಕ್ಕೆ ಬಂದರೆ ಅದರೊಳಗಿನ
ಾಣಿಗಳು ಕಟಾಂಜನದ ಹತ್ತರ ಬಂದು ತಮ್ಮನ್ನೂ ಹೊ
ಗೆ ತೆಗೆಯುವರೋ ಏನೋ ಎಂಬ ನಂಬಿಗೆಯಿಂದ ನೋ
ಬಂದವರ ಮೋರೆಗಳನ್ನು ಮಿಕಿಮಿಕಿ ನೋಡುತ್ತವೆ. ಮು
ನ್ತೊಂದು ಸ್ಥಳದಲ್ಲಿ ಕನ್ನಡಿಯಿಂದ ಮಾಡಿದ್ದೊಂದು ಬೌ
ಾವ ಪೆಟ್ಟಿಗೆಯದೆ, ಅದರೊಳಗೆ ಬಂದು ಚಕ್ಕವದೆ, ಅದರ
ುೀಲೆ ಬಂದು ಬಿಳೀ ಇಲಿಯು ಕೂತು ಆ ಚಕ್ಕವನ್ನು ತಿ
ಗಿಸುತ್ತದೆ.

ಈ ಎಲ್ಲ ಚಮತ್ಕಾರಗಳನ್ನು ನೋಡಿ, ಅನಂದದಿಂದ
ೂ, ಆಶ್ಚರ್ಯದಿಂದಲೂ, ಚಕಿತರಾದೆವು. ಅಲ್ಲಿಂದ ಆ ಸಂಸ್ಥಾ
ದ ರಾಜವಾಡೆ, ನ್ಯಾಯಾಸ್ಥಾನ, ತಾಲೀಮುಖಾನೆ, ಶೀಗ
ಪತಿ ಮುಂತಾದ ಕೆಲವು ಪ್ರಸಿದ್ಧ ದೇವಾಲಯಗಳು, ಇವು
ಳನ್ನೆಲ್ಲ ನೋಡಿಕೊಂಡು ನಾವು ಇಳಿದ ಧರ್ಮಶಾಲೆಗೆ
ಂದೆವು. ಅದೇ ದಿವಸ ರಾತ್ರಿ ೧೦ ಬಡಿಯುವ ಸಮಯಕ್ಕೆ
ೂಲ್ಹಾಪೂರಕ್ಕೆ ಹೊರಟೆವು. ಮಿರಜೆಯಿಂದ ಕೊಲ್ಹಾಪೂರ

೩. ಉತ್ತರಗಳನ್ನು ಅಸ್ಪಷ್ಟವಾಗಿ ತಿಳಿಯುವ ಹಾಗೆ ಮಾಡಿಯಗೊಡುವವರಿಂದ ಆಗುವ ಪರಿಣಾಮಗಳನ್ನು ವಿವರಿಸಿರಿ.

೪. ಪೃಥಕ್ಕರಣ ಪದ್ಧತಿಗೂ ಏಕೀಕರಣ ಪದ್ಧತಿಗೂ ಭೇದವೇನು? ವ್ಯಾಕರಣದ ಉದಾಹರಣೆಗಳನ್ನು ತಕ್ಕೊಂಡು ನಿಮ್ಮ ಉತ್ತರವನ್ನು ಸ್ಪಷ್ಟೀಕರಿಸಿರಿ.

೫. ವಜಾಬಾಕಿ ಕಲಿಯುವಾಗ ವಿದ್ಯಾರ್ಥಿಗಳಿಗೆ ತಟ್ಟುವ ನಾಲ್ಕು ತೊಂದರೆಗಳನ್ನು ಸ್ಪಷ್ಟೀಕರಿಸುವಂಥಾದೊಂದು ಉದಾಹರಣೆಯನ್ನು ರಚಿಸಿ ಅದನ್ನು ವಿವರಿಸಿರಿ.

೬. ಸ್ವಾವಲಂಬನ ಮತ್ತು ದೀರ್ಘೋದ್ಯೋಗ ಇವೆರಡು ಗುಣಗಳನ್ನು ಬಲ ಪಡಿಸುವದರಲ್ಲಿ ಸಾಲಿಯ ಕೆಲಸದಿಂದ ಹ್ಯಾಗೆ ಸಹಾಯವಾಗುವದು?

೭. "ಯಾವಾಗಿನ ಕೆಲಸ ಆವಾಗ್ಗೇ ಮಾಡಬೇಕು, ಮತ್ತು ಎಲ್ಲಿಯ ಪದಾರ್ಥ ಅಲ್ಲಿಯೇ ಇಡಬೇಕು ಅಂದರೆ ಚಂದ" ಈ ವಾಕ್ಯವನ್ನು ಸ್ಪಷ್ಟೀಕರಿಸಿರಿ. ಶಿಕ್ಷಣದಲ್ಲಿ ಇದರ ಗೌರವವಿಟ್ಟಿರುತ್ತದೆಂಬದನ್ನು ವಿವರಿಸಿರಿ. ಮುಖ್ಯವಾಗಿ ವಾಚನ ಪುಸ್ತಕದಲ್ಲಿ ಇದರ ಉಪಯೋಗವೇನು?

೮. ಶುದ್ಧ ಬರಹವನ್ನು ಸ್ಲೇಟಿನ ಮೇಲೆಯೇ ಬರಿಸುವದರಿಂದ ವಿದ್ಯಾರ್ಥಿಗಳಿಗೆ ಮೂರು ದುರ್ಗುಣಗಳು ಹತ್ತುವವು. ಅವು ಯಾವವು? ನಿಮ್ಮ ಉತ್ತರವನ್ನು ಕಾರಣ ಸಹಿತವಾಗಿ ಬರೀರಿ.

೯. (ಅ) ಶಾಲೆಯ ವೇಳೆ ಮತ್ತು ಅದರ ವ್ಯವಸ್ಥೆ.
(ಬ) ಚಾರ್ಜ ಕೊಡುವದೂ ತಕ್ಕೊಳ್ಳುವದೂ.
(ಕ) ವೇಳಾಪತ್ರಕವನ್ನು ರಚಿಸುವದು.

ಇವುಗಳನ್ನು ಕುರಿತು ಕೋಡಿನಲ್ಲಿಕೊಟ್ಟ ನಿಯಮಗಳನ್ನು ಬರೀರಿ.

೧೦. ನಿಮ್ಮ ಶಾಲೆಯು ೬೦ ಹುಡುಗರಿಗೆ ಸಾಕಾಗುವಷ್ಟು ಅದೆ, ಅದರ ಸ್ಪೇಶಲ್ ರಿಪೇರಿಯು ಪಂಚರ ಸಹಾಯದಿಂದ ನೀವೇ ಮಾಡಿಸತಕ್ಕದ್ದೆಂದು ತಿಳಿದು ಬಂದು ಅಂದಾಜ ಪತ್ರಕವನ್ನು ತಯಾರಿಸಿರಿ.

ಕನ್ನಡಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೨೬.] ಮಾರ್ಚ ೧೮೯೧. [ಸಂಚಿಕೆ ೩.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೪೯
೨. ಯುನಿವ್ಹರ್ಸಿಟಿಯ ಪದವಿದಾನ ಸಮಾರಂಭಕಾಲದ ಅಧ್ಯಕ್ಷರ ಭಾಷಣಗಳು. ೫೪
೩. ಇತಿಹಾಸ. ೫೮
೪. ಕೊಲ್ಹಾಪುರದ ಪ್ರವಾಸವು. ೬೪
೫. ಧಾರವಾಡ ಟ್ರೇನಿಂಗಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ೧೮೯೦—ಶಿಕ್ಷಣಪದ್ಧತಿ. ೭೦

CONTENTS.

1. Educational Intelligence and Useful Notes ... 49
2. University Convocation Speeches 54
3. History. 58
4. Excursion to Kolhapur 64
5. Dharwar Training College Certificate Examination Question Papers1890—Method 70

DHARWAR:
PRINTED AT THE KARANTIC BOOK DEPOT PRESS,
1891.

ಕನ್ನಡ ಶಾಲಾಪತ್ರಿಕೆಯ ವರ್ಗಣಿ ವರ್ಷಕ್ಕೆ ಮುಂಗಡ ... ೧೫ ಆಣೆ.
ಒಂದು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ.	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಶಾಲಾಪತ್ರಿಕೆಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಕಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇ ನ್ನೂಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಿಸಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಿಕೆ.

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿವಾಸವಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸೆಯದಿಂವಿತ್ತಪೆನೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ಪಯಿಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥ ೧ ॥

ಪುಸ್ತಕ ೨೬.] ಮೂರ್ಜ ೧೪೯೧ [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯ ಸರಕಾರದವರು ವಿಕ್ಟೋರಿಯಾ ಟೆಕ್ನಿಕಲ್ ಇನಸ್ಟಿಟ್ಯೂಟವೆಂಬ ಕಲಾಕೌಶಲ್ಯದ ಶಾಲೆಯು ವಿದ್ಯಾರ್ಥಿಗಳಿಗೆ ಮುಂಬಯಿ ಬೊಯಿಲರ ಆಕ್ಟಿನ ನಿಯಮಗಳಿಗೆ ಅನುಸಾರವಾಗಿ ಆಗುವ ಎನೇ ಇನೇ ಗ್ರೇಡ ಎಂಜಿನಿಯರ ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆ ಕೊಟ್ಟಿದ್ದಾರೆ. ಇವರಿಂದ ಆ ಶಾಲೆಯು ಲೋಕಪ್ರಿಯವಾಗಿ ಬಳ್ಳೀ ಊರ್ಜಿತ ಸ್ಥಿತಿಯನ್ನು ಹೊಂದುವದೆಂದು ಹೇಳಬಹುದು.

ಸಂಯುಕ್ತ ಸಂಸ್ಥಾನಗಳೊಳಗಿನ ಕಾನ್ಸಾಸ ಪ್ರಾಂತದ ಇನ್ನೆಬರೋ ಎಂಬ ಹಳ್ಳಿಯಲ್ಲಿ ಬಿದ್ದಿರುವ ಉಲ್ಕೆಗಳ ಸ್ವಾಷಿಬರ್ನ ಕಾಲೇಜಿನ ಪ್ರೊಫೇಸರರಾದ ಡಬ್ಲ್ಯು ಗ್ರಿನ್ ಇವರು ತಿಳಿಸುವದೇನೆಂದರೆ:—ಈ ಉಲ್ಕೆಗಳು ಬಿಡಬಹಳ ದಿವಸವಾಗಿಲ್ಲ, ಆದರೂ ಅವುಗಳು ಬಿದ್ದ ಇಸ್ವಿ ನಿಶ್ಚಯವಾಗಿ ಗೊತ್ತಾಗುವದಿಲ್ಲ. ಈ ಉಲ್ಕೆಗಳು ಸು

ಮೂರು ೨೦ ಇರಬಹುದು. ಇವುಗಳಲ್ಲಿ ಹೆಚ್ಚು ಭಾಶೆರಷ್ಯ
ದದ್ದರ ತೂಕವು ೪೬೬ ಪೌಂಡು ಇರುತ್ತದೆ. ಜನರು ಇವು
ಗಳಲ್ಲಿ ಕೆಲವನ್ನು ಸಣ್ಣ ಸಣ್ಣ ಬೀದಿಗಳ ಅಂಚಿಗೆ ಅಲ್ಲಲ್ಲಿಗೆ
ನಿಲ್ಲಿಸಿರುತ್ತಾರೆ. ಇವುಗಳ ಮೇಲ್ಮೈಯು ತಗ್ಗುಳ್ಳದಾ
ಗಿದ್ದು ಸುಟ್ಟಂತೆ ತೋರುತ್ತದೆ. ಓಲಿವ್ಹಾಯಿನ್, ಟ್ರಮ್ಬೋಲ್ಸ್
ಯಟ್, ನಿಕೆಲ್ ಮಿಶ್ರಿತವಾದ ಕಬ್ಬಿಣಗಳೇ ಇವುಗಳ ಪ್ರ
ಕೃತ್ಯಂಶಗಳಾಗಿವೆ.

ಅಮೇರಿಕಾ ಖಂಡದಲ್ಲಿ ಅಲ್ವಿನ್ ಜಿ. ಕ್ಲಾರ್ಕನೆಂಬ ಗೃ
ಹಸ್ಥನು ಬಂದು ಅದ್ಭುತವಾದ ದುರ್ಬೀನು ಮಾಡತಕ್ಕವ
ನಿದ್ದಾನೆ. ಅವಕ್ಕೆ ಕೂಡ್ರಿಸುವದಕ್ಕೆ ೧೦ ಫೂಟು ಪರಿಘವೂ ೪
ಫೂಟು ೩ ಇಂಚು ವ್ಯಾಸವೂ ಇರುವಂಥ ಲೆನ್ಸು (ಹರಳ)
ನ್ನು ಪಾರಿಸ ಪಟ್ಟಣದಲ್ಲಿರುವ ಶಿಲ್ಪಿಗರಿಂದ ಮಾಡಿಸಿ ಅಗ್ನಿ
ನಾವಿನಿಂದ ಪಾಸಿಫಿಕ್ ಮಹಾಸಾಗರದ ದಂಡಿಗೆ ಸೈದಿರುತ್ತಾ
ನೆ. ಅದನ್ನು ಸೈಯುವ ಪೆಚ್ಚವೇ ೩,೦೦೦ ಪೌಂಡು ಆಗಿದೆ.
ಅವಕ್ಕೆ ೭೦,೦೦೦ ಪೌಂಡು ಬೆಲೆ ಬಿದ್ದದೆ. ಕೆಲವು ವಾರಗಳ
ಹಿಂದೆ ಅದನ್ನು ನೋಡುವದಕ್ಕಾಗಿ ಬಂದು ದೊಡ್ಡ ಜನಸ
ಮೂಹವು ಕೂಡಿತ್ತು. ಈ ದುರ್ಬೀನು ಸಿದ್ಧವಾಗಲಿಕ್ಕೆ
ಎರಡು ವರ್ಷಗಳು ಬೇಕು. ಇದು ಸಿದ್ಧವಾದ ಮೇಲೆ ಇ
ದರೊಳಗಿಂದ ಚಂದ್ರನನ್ನು ನೋಡಿದರೆ ಪೃಥ್ವಿಯಿಂದ
೨,೩೮,೮೦೦ ಮೈಲು ಅಂತರದಲ್ಲಿರುವ ಚಂದ್ರನು ೧೦೦
ಮೈಲು ಅಂತರದಲ್ಲಿಯೇ ಕಾಣಿಸುವನು. ಬಂದು ವೇಳೆ ಚ
ಂದ್ರನ ಪೃಷ್ಠಭಾಗದ ಮೇಲೆ ಪಟ್ಟಣಗಳೂ ದೊಡ್ಡ ದೊ
ಡ್ಡ ಇಮಾರತುಗಳು ಇದ್ದರೆ ಅವು ಈ ಅದ್ಭುತವಾದ ಕನ್ನ
ಡಿಯೊಳಗಿಂದ ಸ್ಪಷ್ಟವಾಗಿ ಕಾಣಿಸಬಹುದು.

ಹಿಂದುಸ್ತಾನದ ಅಡಿವಿಗಳನ್ನು ಜನರು ಕ್ರಮೇಣ ಕಡಿ
ದು ಹಾಳು ಮಾಡಿದ್ದರಿಂದ ಮಳೆಯು ಕಡಿಕಡಿಮೆಯಾಗಿ
ಹಿಂದುಸ್ತಾನದಲ್ಲಿ ಆಗಾಗ್ಗೆ ಬಂದಿಲ್ಲ ಬಂದು ಕಡಿಗೆ ಬರ ಬೇ
ಸುತ್ತದೆಂದು ಬಲ್ಲವರು ಸಪ್ರಮಾಣವಾಗಿ ಸ್ಥಾಪಿಸಿರುವರು.
ಇದರಿಂದ ಸರಕಾರದವರು ಅಡಿವೆಗಳನ್ನು ತಮ್ಮಿಂದಾದಷ್ಟು
ಬೆಳಿಸಹತ್ತಿದ್ದಾರೆ. ೧೮೭೫ನೇ ವರ್ಷ ಸರಕಾರದವರು ಕಾ
ಯಿಟ್ಟ ಅಡಿವೆಯು ೧೫,೭೦೪ ಚಚೌ೯ಕು ಮೈಲು ಮಾತ್ರ
ಇತ್ತು. ಆದರೆ ಆ ವರ್ಷ ಬರಗಾಲ ಬಿದ್ದು ಪ್ರಾಣಹಾನಿ
ಸಂಭವಿಸಿದ್ದರಿಂದ ಸರಕಾರದವರು ಅಡಿವೆ ಬೆಳಿಸುವ ಉಪಾ
ಯವನ್ನಾದರೂ ಕೈಕೊಂಡು ಅದನ್ನು ಹೆಚ್ಚಿಸಹತ್ತಿದರು.
೧೮೮೦ನೇ ವರ್ಷ ಮಧ್ಯಪ್ರಾಂತದಲ್ಲಿ ಅಡಿವೆಯನ್ನು
೫೦,೪೭೪ ಚ. ಮೈಲುಗಳ ವರೆಗೆ ಹೆಚ್ಚಿಸಿದರು. ಈ ಪ್ರಾಂತ
ದಲ್ಲಿರುವಷ್ಟು ವಿಶಾಲವಾದ ಅಡಿವೆಗಳು ಹಿಂದುಸ್ತಾನದ ಯಾ
ವ ಭಾಗದಲ್ಲಿಯೂ ಇಲ್ಲ. ೧೮೮೯ನೇ ವರ್ಷದ ಅಂತ್ಯದಲ್ಲಿ
ಹಿಂದುಸ್ತಾನದೊಳಗಿನ ಅಡಿವೆಗಳ ವಿಸ್ತಾರವು ಬಟ್ಟು
೭೨,೯೧೭ ಚಚೌ೯ಕು ಮೈಲು ಇತ್ತು.

ಇಂಡಿಯನ್ ಪಿನಲಕೋಡದ ೩೭೫ನೇ ಕಲಮಿನ ಅ
ರ್ಥದಲ್ಲಿ ಗಂಡನು ಹತ್ತು ವರ್ಷ ಮೀರಿದ ತನ್ನ ಹೆಂಡತಿ
ಯೊಡನೆ ಸಂಭೋಗ ಮಾಡಿದರೆ ಅದು ಬಲಾತ್ಕಾರದ ಸಂ
ಭೋಗವೆನಿಸದು ಎಂದು ಬರೆದದೆ. ಆದರೆ ಇತ್ತಲಾಗಿ ಕ
ಲಕತ್ತೆಯಲ್ಲಿ ಒಬ್ಬ ದುರುಳನು ಎಳೆ ಪ್ರಾಯದ (ಹನ್ನೆರಡು
ವರ್ಷದ) ತನ್ನ ಹೆಂಡತಿಯೊಡನೆ ಸಂಭೋಗ ಮಾಡಿ ಆ ಬಡ
ಪ್ರಾಣಿಯನ್ನು ಯಮಪುರಕ್ಕೆ ಅಟ್ಟಿದನು. ಇಂಥ ಕೆಲವು
ಕಾರಣಗಳಿಂದ ಸರಕಾರದ ಶ್ರೀಗಲ ಮೆಂಬರರಾದ ಸ್ಕ್ರೀಬ

ಲ ಧೊರೆಗಳು ಈ ನಿಯಮವಲ್ಲಿ ಹೇಳಿದ ೧೦ ವರ್ಷಕ್ಕೆ ಬದಲಾಗಿ ೧೨ ವರ್ಷ ಹಾಕಬೇಕೆಂದು ಯೋಚಿಸಿ ಬಂದ್ದೆ ಕಾಯದೆಯು ಮಸೂದೆಯನ್ನು ಕಾಯದೆ ಕೌನ್ಸಿಲಿನ ಮುಂದೆ ತಂದಿರುತ್ತಾರೆ. ಈ ಸಮ್ಮತಿಯು ವಯಸ್ಸಿನ ಸಂಬಂಧದಿಂದ ಹಿಂದು ಜನರಲ್ಲಿ ಎರಡು ತಂಡಗಳಾಗಿರುತ್ತವೆ. ಸುಧಾರಣೆಗೆ ಎರಡೂ ತಂಡದವರು ಪ್ರತಿಕೂಲವಾಗಿರುವಂತೆ ತೋರುವದಿಲ್ಲ. ಆದರೆ ಈ ಕಾಯದೆಗೆ ಹಿಂದು ಮುಸಲ್ಮಾನ ಪ್ರಜೆಗಳಲ್ಲಿ ಬಹು ಜನರು ಸಮ್ಮತಿಸಿಲ್ಲದಂತೆ ತೋರುತ್ತದೆ.

ಬೇರೆ ಬೇರೆ ಜನಾಂಗದವರು ವಾರದ ಬೇರೆ ಬೇರೆ ದಿವಸಗಳನ್ನು ಪವಿತ್ರವೆಂದು ಎಣಿಸುತ್ತಾರೆ. ಅದು ಹ್ಯಾಗಂದರೆ:— ಖ್ರಿಸ್ತು ಜನರು ಆದಿತ್ಯವಾರ, ಗ್ರೀಕ ಚರ್ಚಿನವರು ಸೋಮವಾರ, ಪಾರ್ಸೀ ಜನರು ಮಂಗಳವಾರ, ಅಬೀರಿಯನ್ನರು ಬುಧವಾರ, ಇಜಿಪ್ತದವರು ಗುರುವಾರ, ತುರ್ಕರು ಶುಕ್ರವಾರ, ಯಹುದಿಯರು ಶನಿವಾರ; ಮತ್ತು ಆಯಾ ದಿವಸಗಳಲ್ಲಿ ಆ ಜನರು ಕೆಲಸ ಮಾಡುವದಿಲ್ಲ.

ಒಬ್ಬ ಹುಟ್ಟುತೊದಲನು ಕೆಳಗೆ ಕಾಣಿಸಿದ ಉಪಾಯದಿಂದ ಪೂರಾ ಗುಣವಾದನು. ಅದು ಹ್ಯಾಗಂದರೆ:—ಅವನು ಎರಡು ತಾಸುಗಳವರೆಗೆ ಹಲ್ಲುಗಳನ್ನು ಘಟ್ಟಿಯಾಗಿ ಬತ್ತಿಪಿಡಿದು ಪುಸ್ತಕವನ್ನು ಒದರಿ ಓದುತ್ತಿದ್ದನು. ಅವನು ಬಿಡಿಗಳನ್ನು ಕದಲಿಸದೆ ತುಟಿಗಳನ್ನು ಮಾತ್ರ ಅಲ್ಲಾಡಿಸಿ ಸುವಕಾಶವಾಗಿಯೂ ಸ್ಪಷ್ಟವಾಗಿಯೂ ಓದುತ್ತಿದ್ದನು. ಇದೇ ಮೇರೆಗೆ ೪೧೬ ದಿವಸಕ್ಕೊಮ್ಮೆ ಬಂದು ತಿಂಗಳವರೆಗೆ, ೫೫ ಮೇಲೆ ೧೫೭ ದಿವಸಕ್ಕೊಮ್ಮೆ ಕೆಲವು ತಿಂಗಳುಗಳವರೆಗೆ ಮಾಡಲಾಗಿ ಅವನ ತೊದಲು ಪೂರಾ ತಿದ್ದಲ್ಪಟ್ಟಿತು. ಅವನು ಈ

ತೊಟ್ಟಿಬ್ಬರ ಕೂಡ ಮಾತಾಡುವಾಗ ತೊದಲಿಸದಂತೆ ಜಾಗ್ರತೆ ಪಟ್ಟು ಬಂದೊಂದೇ ನುಡಿಯನ್ನು ಸ್ಪಷ್ಟವಾಗಿ ಉಚ್ಚರಿಸುತ್ತಿದ್ದನು. ಮೊವಲು ಓದುವಾಗ್ಗೆ ಮಾತ್ರ ನಾಲಿಗೆಯೂ ದವಡಿಗಳೂ ನೋಯುತ್ತವೆ ಸರಿ, ಆದರೆ ತುಸು ರೂಢಿಯಾದ ಮೇಲೆ ಬಾಯಿ ಬಿಚ್ಚಿ ಮಾತಾಡಬಹುದು. ಇದೇಪ್ರಕಾರ ಬಂದೀಸವನೆ ಸಾಧಿಸಿದರೆ ನಿಶ್ಚಯವಾಗಿ ತೊದಲು ನಿಂತು ಹೋಗುವದು. ಇದರ ಅನುಭವವನ್ನು ತೊದಲರು ತೆಗೆದು ಕೊಳ್ಳಬಹುದು.

ಮಿ. ಸ್ಟ್ಯಾನಲೆ ಎಂಬ ಗೃಹಸ್ಥನು ಆಫ್ರಿಕ ಖಂಡದಲ್ಲಿ ಅನೇಕ ಶೋಧಗಳನ್ನು ಮಾಡಿದಂತೆ ಅಮೇರಿಕದ ಮಿಸ್ಸೆಸ್ ಶೆಲ್ಡನ್ ಎಂಬವಳು ಆ ಅಪ್ರಸಿದ್ಧ ಖಂಡದೊಳಗೆ ಪ್ರವಾಸ ಮಾಡತಕ್ಕವಳಿದ್ದಾಳೆ. ಅವಳು ಮೊದಲು ಜಂಜೀಬಾರಕ್ಕೆ ಹೋಗುವಳು. ಅಲ್ಲಿಂದ ಮುಂಬೂರಿಬೀಕ ಮಾರ್ಗವಾಗಿ ಆಫ್ರಿಕಾ ಖಂಡದ ಮಧ್ಯ ಪ್ರದೇಶವನ್ನು ಪ್ರವೇಶಿಸಿ ಅಲ್ಲಿರುವ ಕಾಡು ಜನರ ಧರ್ಮ, ನಡೆನುಡಿ, ಆಚಾರ ವಿಚಾರ ಮುಂತಾದವುಗಳನ್ನು ನೋಡಿಕೊಂಡು ಬರತಕ್ಕವಳಷ್ಟೇ ಅಲ್ಲ; ಆದರೆ ಆ ಕಾಡು ಜನರ ಮಾತುಗಳನ್ನು ತನ್ನ ದೇಶದವರ ಕಿವಿಗೆ ಹಾಕಬೇಕೆಂಬ ಉದ್ದೇಶದಿಂದ ತನ್ನ ಸಂಗಡ ಫೊನೋಗ್ರಾಫವೆಂಬ ಧ್ವನಿಗ್ರಾಹಕ ಯಂತ್ರವನ್ನು ಮೈದು ಅವರಲ್ಲಿ ಅವರ ಮಾತುಗಳನ್ನು ಸಂಗ್ರಹಿಸಿಕೊಂಡು ಬರುವಳಂತೆ. ಅವಳು ತನ್ನೊಂದಿಗೆ ಕೆಲವು ಅರಬರನ್ನೂ, ಪನಸೀ ಹೆಂಗಸರನ್ನೂ ಕೆಲವು ಶಿಪಾಯರನ್ನೂ ಕರಕೊಂಡು ಹೋಗತಕ್ಕವಳಿದ್ದಾಳೆ.

UNIVERSITY CONVOCATION SPEECHES. — ಯುನಿವ್ಹರ್ಸಿಟಿಯ ಪದವಿದಾನಸಮಾರಂಭಕಾಲದ ಅಧ್ಯಕ್ಷರ ಭಾಷಣಗಳು.

ನಮ್ಮ ಯುನಿವ್ಹರ್ಸಿಟಿಯ ಪದವಿದಾನ ಸಮಾರಂಭವ ಕಳೆದ ಜಾನೆವಾರಿಯ ೬ನೇ ತಾರೀಖಿಗೆ ಆಯಿತು. ಇಲ ಬೆಯ ಗವ್ಹರ್ನರರೂ ಚಾನ್ಸಲರರೂ ಆದ ಲಾರ್ಡ ಹಾರಿಸ ಧೊರೆತನಗಳು ಬೇರೆ ಕೆಲಸದಲ್ಲಿ ತೊಡಗಿದ್ದರಿಂದ ಅಧ್ಯಕ್ಷಸ್ಥ ನನನ್ನು ವ್ಹಾಯಿಸ್ ಚಾನ್ಸಲರರು ಅಲಂಕರಿಸಿದ್ದರು. ಅವರ ತತ್ಕಾಲೋಚಿತವಾಗಿ ಮಾಡಿದ ಸಂಭಾಷಣೆಯ ಮುಖ್ಯ ಮಾತುಗಳು ಯಾವವಂದರೆ:—

೧. ಯುನಿವ್ಹರ್ಸಿಟಿಯ ಮೊದಲನೇ ಪದವಿದಾನ ಸಮಾ ರಂಭವು ೧೮೬೫ನೇ ವರ್ಷದಲ್ಲಿ ಆಯಿತು. ಆಗ್ಗೆ ೮ ಜನ ರಿಗೆ ಮಾತ್ರ ಯುನಿವ್ಹರ್ಸಿಟಿಯ ಪದವಿಗಳು ದೊರೆದವು. ೧೮೬೫ನೇ ವರ್ಷದಲ್ಲಿ ೩೩ ಜನರಿಗೆ, ೧೮೮೦ನೇ ವರ್ಷದಲ್ಲಿ ೯೮ ಜನರಿಗೆ, ೧೮೯೦ನೇ ವರ್ಷದಲ್ಲಿ ೧೮೦ ಜನರಿಗೆ, ನಿ ಯುವ ವರ್ಷದಲ್ಲಿ ೧೮೪ ಜನರಿಗೆ ಪದವಿಗಳು ದೊರೆದವು ಇವರಿಂದ ವಿದ್ಯಾಭಿವೃದ್ಧಿಯು ಭರಭರಿಯಿಂದ ಸಾಗುತ್ತಲಿ ದೆಂದು ವ್ಯಕ್ತವಾಗುತ್ತದೆ.

೨. ಯುನಿವ್ಹರ್ಸಿಟಿಯ ಕಾರ್ಯಕರ್ತರೆಲ್ಲರು ಇವತ್ತಿ ನವರೆಗೆ ಗಂಡಸರೇ ಇದ್ದರು. ಆದರೆ ನಡೆಯುವ ವರ್ಷ ದಾ ಕ್ಟರ ಪೀಚಿ ಫಿಪ್ಸನ್ ಎಂಬ ಧೊರೆಸಾನಿಯವರನ್ನು ಸರಕಾ ರವರು ಫೆಲೊ † ನೇಮಿಸಿದ್ದು ಬಂದು ಅಭಿನಂದನೀಯವಾದ ಸಂಗತಿಯೇ ಸರಿ. ಇವರು ಸ್ತ್ರೀಯರ ಉನ್ನತಿಯ ವಿಷಯ ದಲ್ಲಿ ಮಾಡಿದ ಸಾಹಸವು ಎಲ್ಲರಿಗೂ ಗೊತ್ತುಂಟು. ಇವರಿಗ ಮಾಡಿದ ಬಹುಮಾನದಿಂದ ಯುನಿವ್ಹರ್ಸಿಟಿಗೂ ಭೂಷಣ

† ಯುನಿವ್ಹರ್ಸಿಟಿಯ ಕಾರ್ಯಕರ್ತರ ಬಿರುದು.

ಬಂತು. ಹೆಂಗಸರಿಗೆ ಇಂಥ ಬಹುಮಾನವನ್ನು ಕೊಟ್ಟು ತಮ್ಮ ಉದಾರ ಬುದ್ಧಿಯನ್ನು ವ್ಯಕ್ತಪಡಿಸಿದ ಯುನಿವರ್ಸಿಟಿಗಳು ಬಹು ಸ್ವಲ್ಪ ಉಂಟು.

೩. ಬಿ. ಯೆ. ಎಲ್. ಎಲ್. ಬಿ. ಪರೀಕ್ಷೆಗಳಲ್ಲಿ ಕೆಲವು ಹಿತಕರವಾದ ಏರ್ಪಾಡುಗಳು ಆಗಿರುತ್ತವೆ. ಅದರಿಂದ ಸರಕಾರದ ಬೇರೆ ಬೇರೆ ಖಾತೆಗಳಲ್ಲಿ ಮುಖ್ಯವಾಗಿ ನ್ಯಾಯಖಾತೆಯಲ್ಲಿ ತೋರುತ್ತಲಿರುವ ಸುಧಾರಣೆಯು ಮತ್ತಿಷ್ಟು ಬಲಗೊಳ್ಳುವದೆಂದು ಹೇಳಬಹುದು.

೪. ಮ್ಯಾಟ್ರಿಕ್ಯುಲೇಶನ ಪರೀಕ್ಷೆಯ ಉಮೇದವಾರರ ಸಂಖ್ಯೆಯು ವರ್ಷ ವರ್ಷ ಬೆಳೆಯುತ್ತ ನಡೆದದೆ. ಈ ಜನರಲ್ಲಿ ಕೆಲವರು ಹೆಚ್ಚಿನ ಅಭ್ಯಾಸ ಮಾಡತಕ್ಕವರು; ಕೆಲವರು ಸರಕಾರೀ ನೌಕರಿಯಲ್ಲಿ ಸೇರತಕ್ಕವರು. ಆದರೆ ಈ ಎರಡೂ ಕೆಲಸಗಳಿಗೆ ಅವರು ತಕ್ಕವರಿರುವದಿಲ್ಲೆಂದು ಪರೀಕ್ಷೆಯ ಪರಿಣಾಮದಿಂದಲೂ ಕಾಲೇಜದ ಪ್ರೊಫೇಸರರ ಹೇಳಿಕೆಯಿಂದಲೂ ತಿಳಿಯುತ್ತದೆ. ಈ ಪರೀಕ್ಷೆಯನ್ನೇ ಬಂದುಮಾಡಬೇಕೆಂದು ಕೆಲವು ಅಧಿಕಾರಸ್ಥರು ಸೂಚಿಸುತ್ತಾರೆ. ಈ ವಿಷಯದಲ್ಲಿ ಯುನಿವರ್ಸಿಟಿಯವರು ಚನ್ನಾಗಿ ವಿಚಾರಮಾಡಿ ಯಾವದೊಂದು ವ್ಯವಸ್ಥೆಯನ್ನು ಬೇಗನೇ ಮಾಡುವರು.

೫. ಕಳೆದ ವರ್ಷದಲ್ಲಿ ೩೬, ೪೫೫ ರುಪಾಯಿಗಳನ್ನು ಬೇರೆ ಬೇರೆ ಸದ್ಗೃಹಸ್ಥರು ಯುನಿವರ್ಸಿಟಿಗೆ ಕಾಣಿಕೆಯಾಗಿ ಕೊಟ್ಟರು. ಯುನಿವರ್ಸಿಟಿಗೆ ಈ ಹಣವನ್ನು ಕೊಟ್ಟವರೆಲ್ಲರ ಉದ್ದೇಶವು ಬಹುತರ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪು ಕೊಡುವದೇ ಇರುತ್ತದೆ. ಈ ಉದ್ದೇಶದ ಕಾಣಿಕೆಗಳಿಂದ ವಿದ್ಯಾರ್ಥಿಗಳಿಗೆ ಸಹಾಯವಾದಾಗ್ಯೂ ಯುನಿವರ್ಸಿಟಿಯಲ್ಲಿ ಅವಶ್ಯವಾಗಿ ಮೂರಮಾಡತಕ್ಕ ಕೆಲವು ಕೊರತೆಗಳು ಉಳಿದಿರುತ್ತವೆ. ತೋಟದ ಸುತ್ತ ಕಟಾಂಜನ ನಿಲ್ಲಿಸದೇ

ಕಾದರೆ ಯುನಿವರ್ಸಿಟಿಯು ಕೈಯಲ್ಲಿ ದುಡ್ಡಿಲ್ಲ. ರಾಜ್ಯೋಭ್ಯಾ
ಯಿ ಟಾವರವ ಮೇಲೆ ಇಟ್ಟಿರುವ ದೊಡ್ಡ ಫಡಿಯಾರದಿಂದ
ರಾತ್ರಿಕಾಲದಲ್ಲಿ ಜನರಿಗೆ ಉಪಯೋಗವಾಗುವಂತೆ ದೀಪ
ಹಚ್ಚಬೇಕಾದರೆ ಅದಕ್ಕೆ ಸಾಮರ್ಥ್ಯವಿಲ್ಲ. ಅದರ ಲೈಬ್ರ
ರಿಯಲ್ಲಿ ತಕ್ಕಷ್ಟು ಪುಸ್ತಕ ಸಂಗ್ರಹವಿಲ್ಲ. ಆದದರಿಂದ ಇನ್ನು
ಮುಂದೆ ಕಾಣಿಕೆಗಳನ್ನು ಕೊಡತಕ್ಕವರು ಈ ಕೊರತೆಗ
ಳನ್ನು ದೂರಪಡಿಸುವವನ್ನು ಮರಿಯಬಾರದು. ಈ ಕೆಲಸ
ಕ್ಕಾಗಿ ಯುನಿವರ್ಸಿಟಿ ಪರೀಕ್ಷೆಗಳ ಫೀಗಳನ್ನಾದರೂ ಹೆ
ಚ್ಚಿಸಬಹುದು.

ಕಳೆದ ಜಾನೆವಾರಿ ೦೪ನೇ ತಾರೀಖಿನ ದಿವಸ ಕಲಕ
ತ್ತಾ ಯುನಿವರ್ಸಿಟಿಯ ಪದವಿದಾನ ಸಮಾರಂಭವು ಸಿನೇ
ಟಮಂದಿರವಲ್ಲಿ ಆಯಿತು. ಒಟ್ಟು ೩೬೬ ಜನರಿಗೆ ಪದವಿಗ
ಳು ಕೊಡಲ್ಪಟ್ಟವು. ಅವರಲ್ಲಿ ನಾಲ್ಕು ಸ್ತ್ರೀಯರು ಬಿ. ಏ.
ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಆ ಕಾಲಕ್ಕೆ ವೈಸ್ರಾಯಿಸ್ ಜಾನ್ಸ
ಲರರು ತಮ್ಮ ವ್ಯಾಖ್ಯಾನದಲ್ಲಿ ಹೇಳಿದ ಅತಿಗೌರವದ ಸಂಗ
ತಿಗಳು ಯಾವವಂದರೆ:—

೧. ಇವತ್ತಿನವರೆಗೆ ಕಲಕತ್ತಾಯುನಿವರ್ಸಿಟಿಯು ಎಲ್ಲ
ಫೆಲೊಗಳನ್ನು ನೇಮಿಸುವ ಅಧಿಕಾರವು ಹಿಂದುಸ್ತಾನದ ಗವ್ಹ
ರ್ನರ ಜನರಲ್ ಇನ್ ಕೌನ್ಸಿಲ್ ಇವರ ಕಡೆಗಿತ್ತು; ಆದರೆ ಎ
ಮ್. ಎ. ಪದವಿಯನ್ನೂ ಅದರಂಥ ಬೇರೆ ಪದವಿಯನ್ನೂ ಪಡೆ
ದಂಥ ಗೃಹಸ್ಥರಿಗೆ ಹೊಸದಾಗಿ ನೇಮಿಸತಕ್ಕ ಫೆಲೋ ಜನಗ
ಸಂಖ್ಯೆಯ ೫ ಅಂದರೆ ಇಬ್ಬರನ್ನು ಆರಿಸುವ ಅಧಿಕಾರವ
ಕೊಡಲ್ಪಟ್ಟಿತು. ಅವರು ಈ ಅಧಿಕಾರವನ್ನು ಜನ್ಮಾಗಿ ತ
ಳಿದು ಕೊಂಡು ಕಳೆದ ಜಾನೆವಾರಿಯ ೧೧ನೇ ತಾರೀಖಿನ
ದಿವಸ ಆ ಫೆಲೊಗಳನ್ನು ನೇಮಿಸುವ ಕೆಲಸದಲ್ಲಿ ತೋರಿಸಿ

ದ ಜ್ಞಾನತನವನ್ನೂ ಅತುರವನ್ನೂ ನೋಡಿ ಮೆ ॥ ಚಾನ್ಸಲ ರ್ ಫೊರೆಗಳವರಿಗೆ ಬಹುಸಂತೋಷವಾಗಿದೆ.

೨. ಪ್ರೊಫೇಸರರು ತಾವು ಕಲಿಸುವಂಥ ವಿಷಯುಗಳಲ್ಲಿ ಯುನಿವ್ಹರ್ಸಿಟಿಯ ಪರೀಕ್ಷಕರು ಇರಕೂಡದೆಂಬ ನಿಯಮವನ್ನು ಸಿಂಡಿಕೇಟವರು ಹೋದವರ್ಷ ಮಾಡಿದ್ದಾರೆ. ಇವರ ಮೇಲಿಂದ ಪರೀಕ್ಷಕರ ಪ್ರಾಮಾಣಿಕತನಕ್ಕೆ ಕುಂದು ಬರುತ್ತದೆಂದು ತಿಳಿಯಲಾಗದು. ಯಾವದಾದರೊಂದು ವಿಷಯವನ್ನು ಕಲಿಸುವಂಥ ಪ್ರೊಫೇಸರರೇ ಆ ವಿಷಯದಲ್ಲಿ ಪರೀಕ್ಷಕರಿದ್ದರೆ, ಅವರ ಕೈಯೊಳಗಿನ ವಿದ್ಯಾರ್ಥಿಗಳಿಗೆ ಅನ್ಯ ವಿದ್ಯಾರ್ಥಿಗಳಿಗಿಂತ ಹೆಚ್ಚು ಅದಾಯವಾಗುವ ಸಂಭವ ಉಂಟು. ಇವನ್ನು ನಿಲ್ಲಿಸುವದೇ ಆ ನಿಯಮದ ಮುಖ್ಯ ಉದ್ದೇಶವಿರುತ್ತದೆ.

೩. ಸುಧಾರಣೆಯಾಗಬೇಕಾದರೆ ದೇಶಭಾಷೆಗಳನ್ನು ಯುನಿವ್ಹರ್ಸಿಟಿಯ ಪರೀಕ್ಷೆಗಳಲ್ಲಿ ಕೇರಿಸಲಿಕ್ಕೆ* ಬೇಕು. ಬಂಗಾಲೀ, ಉರ್ದು, ಹಿಂದೀ ಭಾಷೆಗಳು ಬಳ್ಳೇ ಸ್ಥಿತಿಯಲ್ಲಿದ್ದು ಅವು ಯುನಿವ್ಹರ್ಸಿಟಿಯಲ್ಲಿ ಕೇರಿಸಲ್ಪಡಲಿಕ್ಕೆ ತಕ್ಕವುಗಳಾಗಿವೆ.

೪. ಪರೀಕ್ಷೆಯ ಪ್ರಶ್ನವ ಕಾಗವಗಳು ತಕ್ಕಷ್ಟಕ್ಕಿಂತ ಹೆಚ್ಚು ಉದ್ದ, ಗಡಚು ಇರುವದರಿಂದ ವಿದ್ಯಾರ್ಥಿಗಳು ತಮ್ಮ ವಿಷಯುಗಳನ್ನು ತಿಳುಕೊಳ್ಳದೆ ಬಾಯಪಾಠ ಮಾಡಲು

---

† ಫಲೋ ಜನರಸಭೆಗೆ ಸಿನೇಟ, ಮತ್ತು ಪ್ರಮುಖ ಫಲೊಗಳನ್ನು ಕೇರಿಸಿ ನಿರ್ಮಿಸಿದ ವ್ಯವಸ್ಥಾಪಕಸಭೆಗೆ ಸಿಂಡಿಕೇಟ ಎಂಬ ಹೆಸರುಗಳುಂಟು.

* ಕನ್ನಡ ಭಾಷೆಯನ್ನು ನಮ್ಮ ಯುನಿವ್ಹರ್ಸಿಟಿಯಲ್ಲಿ ಕೇರಿಸಬೇಕೆಂದು ನಾವು ಎರಡು ವರ್ಷಗಳ ಹಿಂದೆ ಮಾಡಿದಪ್ರಯತ್ನವು ಸಫಲವಾಗಲಿಲ್ಲ; ಆದರೆ ಈ ಕೋರಿಕೆಯು ಬೇಗನೆ ಕೈಗೂಡಬಹುದೆಂದು ತೋರುತ್ತದೆ.

ದ್ಯೋಗಿಸುತ್ತಾರೆ. ಈ ಕೆಟ್ಟ ಪದ್ಧತಿಯನ್ನು ಮುರಿದ ಅವರ ವಿಚಾರಶಕ್ತಿಯನ್ನು ಬೆಳಿಸಬೇಕಾದರೆ ಪ್ರಶ್ನದ ಕ್ರಮಗಳು ಹೆಚ್ಚು ಉದ್ದ ಅಥವಾ ಗಡಚು ಇರದಂತೆ ನಿಂ[illegible]
†
ಕೇಟವರು ಎಚ್ಚರ ಪಡತಕ್ಕದ್ದು.

HISTORY.

ಇತಿಹಾಸ.

(೧೪ನೇ ಪುಟದಿಂದ ಮುಂದೆಸಾಗಿದ್ದು.)

ಮೇಲೆ ಹೇಳಿದ ಇತಿಹಾಸದ ಪ್ರಯೋಜನವು ಮುಖ್ಯ ಪ್ರಯೋಜನಗಳಲ್ಲಿ ಎಲ್ಲಕ್ಕು ಮೊದಲಿನದೂ ಸಾಧಾರಣವೂ ಸಣ್ಣದೂ ಇದಾಗ್ಯಾವರೂ ಇತಿಹಾಸದ ಮೂಲಾರಂಭಕ್ಕೆ ಅದೇ ಬೀಜರೂಪವಾಗಿದೆ. ಅದಕ್ಕೂ ಹೆಚ್ಚಿನ ಉಪಯೋಗವು ಯಾವದಂದರೆ, ನೀತಿಬೋಧವು. ಸಜ್ಜನರಿಗೆ ಜಯವೂ ದುರ್ಜನರಿಗೆ ಅಪಜಯವೂ ಪಾಡಿಕೆಯಾಗಿ ಆಗುತ್ತಿರುವದು ಇತಿಹಾಸವಲ್ಲಿ ಕಂಡು ಬರದಿದ್ದರೂ ಸರ್ವ ಸಾಧಾರಣ ಮಾನದಿಂದ ನೋಡಿದರೆ ಈ ನಿಯಮವು ವ್ಯಕ್ತವಾಗುತ್ತದೆ. ಇವಲ್ಲದೆ ಸದಾಚರಣೆಯಿಂದ ನಡೆಯುವವನಿಗೆ ಯಾವಾಗಲೂ ಕಲ್ಯಾಣವಾಗದಿದ್ದರೂ ದುರಾಚರಣೆಯಿಂದ ನಡೆಯುವವನಿಗೆ ಯಾವಾಗಲೂ ಕಲ್ಯಾಣವೇ ಆಗುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಸೂಕ್ಷ್ಮವಾಗಿ ವಿಚಾರಿಸಿದರೆ ಎಲ್ಲ ಬಗೆಯಿಂದ ಮನುಷ್ಯನಿಗೆ ಕಲ್ಯಾಣವಾಗಬೇಕಾದರೆ ಉತ್ತಮ ಮಾರ್ಗವನ್ನು ಅವಲಂಬಿಸುವದೇ ಪ್ರಶಸ್ತವಾಗಿ

† ಈ ಸೂಚನೆಯು ಬಹಳ ಪ್ರಯೋಜನಕರವಾದದ್ದು. ಇವನ್ನು ಮಾಸ್ತರರೂ ಪರೀಕ್ಷಕರೂ ಲಕ್ಷದಲ್ಲಿಡತಕ್ಕದ್ದು, ವಿದ್ಯಾರ್ಥಿಗಳ ಬುದ್ಧಿಯನ್ನು ವಿಸ್ತರಿಸುವ ಪ್ರಶ್ನೆಗಳಿಂದ ಅವರ ಜ್ಞಾನಾಭಿವೃದ್ಧಿಗೆ ಅಡ್ಡಿಯಾಗುತ್ತದೆ.

ಉಪ್ಪಾಯವೆಂದು ತೋರುತ್ತದೆ; ಕುಮಾರ್ಗದಿಂದ ಅನು ಸಂಭವಿಸುವದು ಅಶಕ್ಯವು. ಇದೇ ಮೇರೆಗೆ ದೊಡ್ಡ ದೊಡ್ಡ ಪ್ರಸಂಗಗಳಲ್ಲಿಯೂ ಧೈರ್ಯ ಬಿಡದೆ ಸದಾಚರಣೆಯಿಂದಲೇ ನಡಿಯುವಂಥ ಪುರುಷರಿಗೆ ಸಂಕಟ ಸಮಯದಲ್ಲಿ ಸಹಾಯ ಆಗುವಂಥ ಸುಖವು ದುರ್ಮಾರ್ಗಿಗಳಿಗೆ ಅವರ ಉತ್ಕರ್ಷ ಕಾಲದಲ್ಲಿ ಸಹ ಆಗುವದಿಲ್ಲ. ಸಾರಾಂಶ, ಈ ಸಂಸಾರವೆಂಬ ಮಹಾನಾಟಕದಲ್ಲಿ ಆರಂಭದಿಂದ ಇವತ್ತಿನ ವರೆಗೆ ಆಗಿ ಹೋದ ಮುಖ್ಯ ಎಲ್ಲ ಪಾತ್ರಗಳನ್ನು ಕುರಿತು ಸಾವಧಾನದಿಂದ ವಿಚಾರ ಮಾಡಿದರೆ, ಉತ್ತಮ ಮಾರ್ಗವು ಯಾವದು, ನೀಚ ಮಾರ್ಗವು ಯಾವದು, ಎಂಬವನ್ನು ಸುಜ್ಞ ಪುರುಷನು ಕೂಡಲೆ ತಿಳಿ ಕೊಳ್ಳುವನು. ಸಹಸ್ರಾವಧಿ ಜನರ ಅನುಭವವು ಸ್ವಲ್ಪದರಲ್ಲಿಯೇ ಅವನಿಗೆ ಆಗುವದು. ಇದರಿಂದ ಅವನ ಮುಂದೃಷ್ಟಿಯು ಬೆಳೆಯುವದು. ಅವನು ವಿಚಾರವಂತನೂ ವೃಥಸಿಶ್ಚಯವುಳವನೂ ಇದ್ದರೆ ಬೇಗನೇ ಯಾವನಾದರೊಬ್ಬನ ಕಿತ್ತೆಯನ್ನು ಹಿಡಿದು, ನಾವಿಗರು ಧ್ರುವ ನಕ್ಷತ್ರವನ್ನು ನೋಡಿ ತಮ್ಮ ಹಡಗವನ್ನು ನಡಿಸುವಂತೆ, ತಾನು ಆರಿಸಿಕೊಂಡ ಮನುಷ್ಯನ ಚರಿತ್ರವನ್ನು ನೋಡಿಕೊಂಡು ತನ್ನ ಆಯುಷ್ಯಕ್ರಮವನ್ನು ಅವನಂತೆ ಇಡುವನು. ಈ ಪ್ರಕಾರ ಇತಿಹಾಸವಂಥ ಸದುಪದೇಶವು ಸಿಗುತ್ತದೆ. ಈ ಕಾರಣದಿಂದಲೇ ಒಬ್ಬ ದೊಡ್ಡ ಗ್ರಂಥಕಾರನು 'ಇತಿಹಾಸವು ಪ್ರತ್ಯಕ್ಷವಾಗಿ ಉದಾಹರಣೆಗಳನ್ನು ತೋರಿಸಿ ಮಾಡಿದ ಉಪದೇಶವಿರುತ್ತದೆ' ಎಂದು ದಿಟವಾಗಿ ಹೇಳಿದ್ದಾನೆ.

ಇತಿಹಾಸವು ಮನಸಿಗೆ ಉನ್ನತಿಯನ್ನೂ ಪ್ರಸನ್ನತೆಯನ್ನೂ ಕೊಡುತ್ತದೆ. ಅಂದರೆ ಅವನ್ನು ಯಾವಾಗಲೂ ಓದುವದರಿಂದ ಚಿತ್ತವು ಶಾಂತವೂ ಸ್ಥಿರವೂ ಆಗುವದಲ್ಲದೆ, ವಿಚಾ

ಲವೂ ಆಗುತ್ತದೆ. ಬಬ್ಬ ಚತುರ ಗ್ರಂಥಕಾರನು ಈ ವಿಷಯ
ವಲ್ಲಿ ಬರೆಯುವದೇನಂದರೆ:—ಇತಿಹಾಸವು ಈ ಜಗತ್ತಿನಲ್ಲಿ
ಹಿಂವಕ್ಕೆ ಆಗಿ ಹೋಧಂಥ ಮಹಾ ಪುರುಷರ ಚರಿತ್ರವಿರುತ್ತ
ದೆ. ಇಂಥ ಪುರುಷರು ಮಾಡಿದಂಥ ಕೃತ್ಯಗಳಿಂದಲೇ ಅದು
ತುಂಬಿ ಅವೆ. ಅವುಗಳನ್ನೆಲ್ಲ ಬತ್ತಿಟ್ಟಗೆ ತೆಗಿದರೆ ಅದರಲ್ಲಿ ಏ
ನು ಉಳಿಯುವದು? ಏನೂ ಉಳಿಯುವದಿಲ್ಲ. ಆದದರಿಂದ ಈ
ಜಗತ್ತಿಗೆ ಕಾಂತಿಯನ್ನು ಕೊಡುವಂಥ ಉತ್ತಮೋತ್ತಮ ರ
ತ್ನಗಳು ಭಿನ್ನ ಭಿನ್ನ ದೇಶಗಳಲ್ಲಿ ಉತ್ಪನ್ನವಾದಾಗ್ಯೂ ಆ
ವುಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಸಹವಾಸವು ನಿರಂತರ
ಆಗುವಂತೆ ಮಾಡಿಕೊಂಡರೆ ಅದರಿಂದ ಆಗುವ ಲಾಭಕ್ಕೆ ಇ
ನ್ನೊಂದು ಲಾಭವು ಜೋಡಾಗಬಹುದೇ? ಪ್ಲ್ಯೂಟಾರ್ಕ
ನೆಂಬ ಬಬ್ಬ ಹೆಸರಾವ ಇತಿಹಾಸಕಾರನು ಗ್ರೀಸ ದೇಶದಲ್ಲಿ ಆ
ಗಿ ಹೋದನು. ಅವನಿಂದ ರಚಿಸಲ್ಪಟ್ಟ ಒಳ್ಳೇ ಹೆಸರಾದಂಥ
ಇತೀ ಜಗತ್ತಿನ ಖ್ಯಾತಿಗೆ ಪಾತ್ರವಾದಂಥ ಗ್ರಂಥವು ಯಾವ
ದಂದರೆ, 'ಮಹಾ ಪುರುಷರ ಚರಿತ್ರವು.' ಅದರಲ್ಲಿ ಅವನು
ಗ್ರೀಸ ಮತ್ತು ಇತಾಲಿ ದೇಶಗಳಲ್ಲಿ ಸಂಭವಿಸಿದಂಥ ದೊಡ್ಡ
ದೊಡ್ಡ ಸಂಗತಿಗಳನ್ನು ವರ್ಣಿಸಿದ್ದಾನೆ. ಅವನು ಆದರ ಪ್ರ
ಸ್ತಾವನೆಯಲ್ಲಿ ಬರೆದದ್ದೇನಂದರೆ:—ನಾನು ಈ ಜನರ ಮೇ
ಲಾದ ಚರಿತ್ರವನ್ನು ಕುರಿತು ಲಕ್ಷ್ಯಪೂರ್ವಕವಾಗಿ ವಿಚಾರ
ಮಾಡಿದ್ದರಿಂದ ನನಗಾದ ಲಾಭವನ್ನು ವರ್ಣಿಸಲಾರೆನು. ನನ್ನ
ಮನಸು ಕುಮಾರ್ಗದಕಡೆಗೆ ಹರಿಯುವತ್ತಿದಾಗ್ಗೆ, ಅಥವಾ ಸ
ದಾಚಾರದಬಗ್ಗೆ ನನ್ನಲ್ಲಿ ಉತ್ಸಾಹವು ಕಡಿಮೆಯಾದಾಗ್ಗೆ ನಾ
ನು ಅವರ ಚರಿತ್ರವನ್ನು ಓದುತ್ತಿದ್ದೆನು; ಇದರಿಂದ ನನಗೆ ಹೊ
ಸ ಉಮೇದು ಬರುತ್ತಿತ್ತು. ಸತ್ಯವಾಗವಾದ ಮಹಿಮೆಯು
ಇವೇನೇರೆಗೆ ಇರುತ್ತದೆಂಬ ಮಾತು ಸುಳ್ಳಲ್ಲ. ನಮ್ಮ

ದೇಶದಲ್ಲಿ ಆಗಿ ಹೋದಂಥ ದೊಡ್ಡ ದೊಡ್ಡ ಕವಿಗಳು ಇದೇ ಮಹಿಮೆಯನ್ನು ಕುರಿತು ಅನೇಕ ದೃಷ್ಟಾಂತಗಳನ್ನು ಕೊಟ್ಟು ಬಹು ಸರಸವಾಗಿ ಬರೆದಿದ್ದಾರೆ. ಆ ದೃಷ್ಟಾಂತಗಳಲ್ಲಿ ಪು ಕಾರಾಮು ಮುಂತಾದ ಕವಿಗಳು ಕೊಟ್ಟಂಥ ಉಪಮೆಗಳಲ್ಲಿ ಮೀಲಾವ, ಲೋಹ ಸ್ಪರ್ಶಮಣಿಗಳ' ಉಪಮೆ ಈಸ್ಥಳದಲ್ಲಿ ಹೆಚ್ಚಳಲಿಕ್ಕೆ ಯೋಗ್ಯವಾದದ್ದು. 'ಕಬ್ಬಿಣವು ಸ್ವಭಾವತಃ ಎಷ್ಟು ಕೀಳತರದ್ದಿರುತ್ತದೆ, ಮತ್ತು ತೋರಿಕೆಯಲ್ಲಿ ಎಷ್ಟು ನೀಚವಿರುತ್ತದೆ, ನೋಡಿರಿ; ಅದರೆ ಪರುಸುಗಲ್ಲಿನ ಸಂಸರ್ಗವು ಅವಕ್ಕೆ ಆವ ಕೂಡಲೇ ಎಲ್ಲ ಧಾತುಗಳಲ್ಲಿ ಮೀಲಾದದ್ದೆಂದು ಅನಿಸಿಕೊಂಡಂಥ ಸುವರ್ಣವ ಗುಣವು ಅದರಲ್ಲಿ ಬರುತ್ತದೆ.' ಅದರಂತೆ ಮನುಷ್ಯನು ಊಚ ನೀಚನಾಗುವದು ಎಷ್ಟೋ ಅಂಶಗಳಲ್ಲಿ ಅವನಿಗೆ ಪ್ರಾಪ್ತವಾದ ಸಹವಾಸದ ಫಲವೇ ಇರುತ್ತದೆ. ಎಷ್ಟೋ ಜನರು ಅದು ನಿಶ್ಚಯವಾಗಿ ಸಹವಾಸದ ಫಲವೇ ಇರುತ್ತದೆಂದು ಬಡಂಬಡುತ್ತಾರೆ. ಇಂಗ್ಲಂದ ದೇಶದಲ್ಲಿ ಸುಮಾರು ಇನ್ನೂರು ವರ್ಷಗಳ ಪೂರ್ವದಲ್ಲಿ ಲಾಕ್‌ನೆಂಬ ಬುಬ್ಬ ಪ್ರಖ್ಯಾತ ತತ್ವಜ್ಞಾನಿಯು ಆಗಿಹೋದನು. ಅವನು ಈ ಮತವನ್ನು ಪ್ರಸ್ತಾಪಿಸಿದನು. ಈ ಮತಾನುಯಾಯಿಗಳ ಅಭಿಪ್ರಾಯವೇನಂದರೆ:—ಮನುಷ್ಯನ ಮನಸು ಹೊವಲು ಬಂದು ಸ್ವಚ್ಛವಾದ ಕನ್ನಡಿಯಂತೆ ಅಥವಾ ಬಿಳಿ ಕಾಗದದ ಹಾಗೆ ಇರುತ್ತದೆ. ಅದಕ್ಕೆ ಹೊದಲು ಬಳ್ಳೀದು ಕೆಟ್ಟದು ಎಂಬ ಸಂಸ್ಕಾರವೇನೂ ಇರುವದಿಲ್ಲ. ಮುಂದೆ ಅದಕ್ಕೆ ಸ್ಥಿತಿವಿಶೇಷಾನುರೂಪದಿಂದ ಅವುಗಳ ಸಹವಾಸ ಉಂಟಾಗಿ ಅದು ಬಳ್ಳೀವರ ಕಡಿಗೆ ಇಲ್ಲವೆ ಕೆಟ್ಟವರ ಕಡಿಗೆ ಬಲಿಯುತ್ತದೆ. ನೆರೆಯ ಪದಾರ್ಥಗಳ ಸ್ಥಿತಿಗೆ ಸರಿಯಾಗಿ ಆಗಾಗ್ಗೆ ಮನಸು ಬಳ್ಳೀ ಅಥವಾ ಕೆಟ್ಟ ವಿಕಾ

ರವನ್ನು ಹೊಂದುತ್ತದೆಂಬ ಮಾತು ದಿಟವದೆ. ಕೆಳಗೆ ಅಭಿ ಹಿತಿಸಿದ ವಚನವು ಈ ಅರ್ಥವನ್ನೇ ವ್ಯಕ್ತ ಪಡಿಸುತ್ತದೆ.

"अतृणे पतितो वन्हिः स्वयमेवोपशाम्यति"।

'ಹುಲ್ಲು (ಸುಡೋ ಪದಾರ್ಥಗಳು) ಇಲ್ಲದ ಸ್ಥಲದಲ್ಲಿ ಬಿದ್ದ ಬೆಂಕಿಯು ತನ್ನಷ್ಟಕ್ಕೇ ಆರುತ್ತದೆ' ಇದೇ ಮೇರೆಗೆ ಮನುಷ್ಯನ ಬಳ್ಳೇ ಅಥವಾ ಕೆಟ್ಟ ಗುಣಗಳು ಪೂರ್ಣವಾಗಿ ವಿಕಾಸ ಹೊಂದಲಿಕ್ಕೆ ಆಯಾತರದ ಸ್ಥಿತಿಯು ಅನುಕೂಲತೆಯು ಬೇಕಾಗುತ್ತದೆ. ನೋಡಿರಿ, ಸವ್ಯಕ್ಕೆ ನಮ್ಮ ದೇಶದಲ್ಲಿ ಶಿವಾಜಿಯಂತೆ ಅಥವಾ ಹೈದರನಂತೆ ರಾಜ್ಯಕರ್ತರು ಯಾಕೆ ಹುಟ್ಟುವದಿಲ್ಲ? ಇಲ್ಲವೆ ನಾನಾಫಡನವೀಸನಂತೆ ರಾಜಕಾರ್ಯಧುರಂಧರನು ಯಾಕೆ ಆಗುವದಿಲ್ಲ? ಇದರ ಕಾರಣವೇನೆಂದರೆ, ಅವಕ್ಕೆ ತಕ್ಕ ಗುಣವುಳ್ಳ ಜನರು ಇದ್ದಾಗ್ಯಾದರೂ ಆ ಗುಣ ವಿಕಾಸವಾಗಲಿಕ್ಕೆ ಯೋಗ್ಯವಾದ ಅವಕಾಶವು ಇಲ್ಲವೇ ಇಲ್ಲ. ಈ ಮಾತು ಅಕ್ಷರಶಃ ನಿಜವದೆ. ಯಾವದೊಂದು ಹುಟ್ಟುಗುಣವು ಸ್ಫುಟವಾಗಿ ತೋರಲಿಕ್ಕೆ ತಕ್ಕ ಸ್ಥಿತಿಯು ಮನುಷ್ಯನಿಗೆ ಅನುಕೂಲವಾಗಿರಬೇಕಾಗುತ್ತದೆ; ಮತ್ತು ಈ ಸ್ಥಿತಿವಿಶೇಷದೊಳಗಿನ ದೊಡ್ಡ ತತ್ವವೇನೆಂದರೆ:— ಅಂಥಾ ಮಹಾ ಪುರುಷರ ಸಹವಾಸವು. ಈ ಸಹವಾಸವು ಜಗತ್ತಿನಲ್ಲಿ ಆಗಿಹೋದಂಥ ವಿಖ್ಯಾತ ಪುರುಷರಿಗೆ ಇರದಿದ್ದರೆ, ಅವರು ಅಷ್ಟು ಕೀರ್ತಿಯುಳ್ಳವರು ಎಂದಿಗೂ ಆಗುತ್ತಿದ್ದಿಲ್ಲ. ಮೊನ್ನೆ ಮೊನ್ನಿನ ಬಂದು ಉದಾಹರಣೆಯನ್ನು ತೆಗೆದುಕೊಳ್ಳೋಣ—೧೮೮೭ ನೇ ಇಸವಿಯಲ್ಲಿ ತೀರಿಕೊಂಡ ಇಂಗ್ಲಂದವಲ್ಲಿಯ ಬಳ್ಳೇ ಪ್ರಸಿದ್ಧ ಗ್ರಂಥಕಾರನಾದ ಜಾನ್‌ಸ್ಟುಅರ್ಟ್‌ಮಿಲ್ ಇವನಿಗೆ ತಂದಿಯ ಸಹವಾಸವಿಲ್ಲದಿದ್ದರೆ ಅವನ ಬುದ್ಧಿಯು ಇಷ್ಟು ಪರಿಪಕ್ವವು ಆಗು

ತ್ತಿತ್ತೋ? ನಿಶ್ಚಯವಾಗಿ ಆಗುತ್ತಿದ್ದಿಲ್ಲ. ಕುಟಾಗ್ಸ್ ಬುದ್ಧಿಯವನಾದದರಿಂದ ಅವನು ಹ್ಯಾಗಾದರೂ ಪ್ರಸಿದ್ಧಿಗೆ ಬರುತ್ತಿದ್ದನೆಂಬದು ನಿರ್ವಿವಾದವಿದ್ದರೂ, ಇಷ್ಟು ಮಿತಿಮೀರಿದ ಕೀರ್ತಿಯನ್ನು ಅವನು ಎಂದಿಗೂ ಸಂಪಾದಿಸುತ್ತಿದ್ದಿಲ್ಲ. ಈ ವಿದ್ವನ್ಮಣಿಯು ತನ್ನ ಗ್ರಂಥದಲ್ಲಿ ಬರೆದದ್ದೇನಂದರೆ:— "ನಾನೊಬ್ಬನೇ ಇಪ್ಪತ್ತೈದು ವರ್ಷ ದುಡಿದು ಸಂಪಾದಿಸಬಹುದಾದ ಜ್ಞಾನವು ನನ್ನ ತಂದೆಯ ಶಿಕ್ಷಣದಿಂದ ನನಗೆ ಐದಾರು ವರ್ಷಗಳಲ್ಲಿ ಅನಾಯಾಸವಾಗಿ ದೊರೆಯಿತು." ಇದೇ ಪೇರೆಗೆ ಪ್ರಾಚೀನ ಕಾಲದ ಶಿಕಂದರ, ಹಾನಿಬಲ, ಸಿಹಿಯೋ ಮುಂತಾದವರ ಮತ್ತು ಅರ್ವಾಚೀನ ಕಾಲದಲ್ಲಿ ನಮ್ಮ ದೇಶದೊಳಗೆ ಹೆಸರು ಪಡೆದ ದೊಡ್ಡ ಬಾಜೀರಾವ, ಟಿಪ್ಪೂಸುಲ್ತಾನ, ಮುಂತಾದವರ ಉದಾಹರಣೆಗಳನ್ನು ಕೊಡಬಹುದು. ಆವವರಿಂದ ಸಂಗತಿವಿಕೇಷದ ಫಲವು ಅಚಿಂತ್ಯವಿರುತ್ತದೆ. ಇದರ ಕಾರಣವನ್ನು ಹುಡುಕಹೋದರೆ ಅದು ಬಹು ಗೂಢವೆದೆಂಬುತ್ತಿಲ್ಲ. ಮನುಷ್ಯನಿಗೆ ಜಗತ್ತಿನೊಳಗಿನ ವ್ಯವಹಾರಗಳು ತುಸು ತುಸು ತಿಳಿಯಲಿಕ್ಕೆ ಹತ್ತಿದ ಕೂಡಲೆ ಅವನ ಕೈಯಿಂದ ಯಾವದಾದರೊಂದು ವ್ಯಾಪಾರವು ನಿಶ್ಚಯವಾಗಿ ಆಗಲೇ ಬೇಕು. ಅವನು ಯಾವದಾದರೊಂದು ಕೃತ್ಯವನ್ನು ಮಾಡದೆ ಕೈಮುಚ್ಚಿಕೊಂಡು ಕೂಡ್ರುವದು ಎಂದಿಗೂ ಆಗುವದಿಲ್ಲ. ಹಾಗಾದರೆ, ಅವನು ಹ್ಯಾಗೆ ವರ್ತಿಸಬೇಕು? ಸಹಜವಾಗಿಯೇ ಎಡಬಲದಲ್ಲಿರುವವರ ಆಚರಣೆಯಂತೆಯೇ ಅವನು ನಡೆಯುವನೆಂಬದು ಸ್ಪಷ್ಟವದೆ. ಅದರಿಂದ ಹುಡುಗರಲ್ಲಿ ತಾಯಿ ತಂದೆಗಳ ಗುಣಗಳು—ಮುಖ್ಯವಾಗಿ ತಾಯಿಯ ಗುಣಗಳು—ತೋರುವಷ್ಟು ಮತ್ತಾರ್ಯರ ಗುಣಗಳು ತೋರುವದಿಲ್ಲ. ಮನುಷ್ಯನ ಪ್ರವೃತ್ತಿಯು, ಅನುಕ

ರಣನನ್ನು ಇಷ್ಟು ಸಹಜವಾಗಿಯೂ ಇಷ್ಟು ಬಲವಾಗಿಯೂ ಮಾಡುವದು ಇರಲಾಗಿ ಚಿಕ್ಕಂದಿನಿಂದ ಇತಿಹಾಸ, ದೊಡ್ಡವರ ಚರಿತ್ರ ಮುಂತಾದವುಗಳನ್ನು ಓದುವದರಿಂದ ಎಷ್ಟು ಲಾಭವಾಗಬಹುದೆಂಬದು ಮೇಲೆಯೇ ತೋರುತ್ತದೆ. ಮಹಾಪುರುಷರ ಸಹವಾಸವಲ್ಲಿ ಯಾವಾಗಲೂ ಇರುವಷ್ಟು ಪುಣ್ಯವಂತನು ಸಾವಿರಕೊಬ್ಬನಿರಬಹುದು. ಮಿಕ್ಕವರಿಗೆ ವಿಪರೀತ ಗುಣಗಳುಳ್ಳ ಜನರ ಸಹವಾಸವಿರುವದೇ ಬಹಳ!! ಅಂದಮೇಲೆ ಇಂಥವರ ಸಹವಾಸದಿಂದ ಮನುಷ್ಯನಿಗೆ ಎಷ್ಟು ಹಾನಿಯಾಗುವದೆಂಬದನ್ನು ಇಲ್ಲಿ ಜೇರೆ ಹೇಳುವ ಕಾರಣವಿಲ್ಲ.

EXCURSION TO KOLHAPUR.

ಕೊಲ್ಹಾಪುರದ ಪ್ರವಾಸವು.

(೪೬ನೇ ಪುಟದಿಂದ ಮುಂದೆ ಸಾಗಿದ್ದು.)

೨. ಉಪಯೋಗ—ಈ ತಡಸಲಿನಲ್ಲಿ ಜೀಳುವ ಪ್ರವಾಹದ ಸಹಾಯದಿಂದ ಅಲ್ಲಿ ಬಂದು ನೂಲು ತೆಗೆಯುವ ಯಂತ್ರವನ್ನು ರಚಿಸಿದ್ದಾರೆ. ತಡಸಲಿನ ಮೇಲ್ಗಡೆಯಲ್ಲಿ ಕೆಲವು ಅಂತರದ ಮೇಲೆ ಹೊಳೆಯ ಪ್ರವಾಹದ ಕೆಲವು ಭಾಗವನ್ನು ತಿರುಗಿಸಿ ಅದರ ವೇಗವನ್ನು ಬಲಪಡಿಸುವದಕ್ಕಾಗಿ ಅದನ್ನು ಮೇಲ್ಭಾಗದಿಂದ ಬುಡದ ವರೆಗೆ ನಡಿಸಿದ ೨—೩ ಫೂಟು ವ್ಯಾಸವುಳ್ಳ ಬಂದು ಕಬ್ಬಿಣದ ಬಂಬಿನಲ್ಲಿ ಬಿಟ್ಟಿರುತ್ತಾರೆ. ಈ ಬಂಬಿನೊಳಗಿಂದ ನೀರು ಸೂಕಷ್ಟು ವೇಗದಿಂದ ಹೊರ ಬೀಳುವ ಸ್ಥಳದಲ್ಲಿ ಬಂದು ಮನೆಯನ್ನು ಕಟ್ಟಿರುತ್ತಾರೆ. ಅದರಲ್ಲಿ ೧೨—೧೫ ಮೊಳ ವ್ಯಾಸವುಳ್ಳ ೩ ಚಕ್ರಗಳು ಅವೆ ಈ ಯಂತ್ರಕ್ಕೆ "ಟರಬಾಯಿನ್ ಮಷಿನರಿ" ಎಂಬ ಹೆಸರುಂಟು. ಯಂತ್ರದ ೩ ಚಕ್ರಗಳಿಗೆ ನೀರಿನ ವೇಗದಿಂದ

ಅತಿ ಭಯಂಕರವಾದ ಗತಿಯು ದೊರೆಯುತ್ತದೆ. ಮೇಲೆ ಹೇಳಿದ ಕಬ್ಬಿಣದ ಬಾಂಬಿನೊಳಗಿಂದ ನೀರು ಹೊರಬೀಳುವ ಸ್ಥಳದಲ್ಲಿ ಎರಡು ಶಕ್ತಿಗಳು ಕೆಲಸಮಾಡುವಂತೆ ತೋರುತ್ತವೆ. ಅವು ಯಾವವಂದರೆ—೧ ಗುರುತ್ವಾಕರ್ಷಣದಿಂದುಂಟಾಗುವ ಪ್ರವಾಹದ ವೇಗ, ೨ ವಿಸ್ತಾರವಾಗಿ ಹರಿಯುವ ಪ್ರವಾಹವನ್ನು ಬಾಂಬಿನೊಳಗೆ ತಂದು ಆಕುಂಚಿತ ಮಾಡಿದ್ದರಿಂದ ಅದು ಹೊರಬೀಳುವ ಸ್ಥಳದಲ್ಲಿ ಹುಟ್ಟುವ ಶಕ್ತಿ.

ಇಲ್ಲಿ ನೋಡಿದ ಮತ್ತೊಂದು ಚಮತ್ಕಾರದ ಸಂಗತಿ ಏನಂದರೆ—"ಸಮುದ್ರದ ಪ್ರವಾಹದಿಂದ ಗುಂಡುಗಳು ಬಂಡೆಗಳಲ್ಲಿ ಬಡವಾಡಿ ದೊಡ್ಡ ಗೊಡುಗಳನ್ನು ಹುಟ್ಟಿಸುತ್ತವೆ" ಎಂಬುವನ್ನು ನಾವು ಪ್ರಾಕೃತಿಕ ಭೂಗೋಲಶಾಸ್ತ್ರದಲ್ಲಿ ಓದಿದ್ದೀವಷ್ಟೇ; ಇಲ್ಲಿ ಆ ಸಂಗತಿಯು ಪ್ರತ್ಯಕ್ಷವಾಗಿ ಕಾಣಿಸಿತು. ಈ ಸ್ಥಳದಲ್ಲಿ ಹೊಳೆಯ ಪ್ರವಾಹದಿಂದ ಬಂಡೆಗಳಲ್ಲಿ ಗುಂಡುಗಳು ಬಡದಾಡಿ ೫।೬ ಫೂಟು ಆಳವಾದ ವರ್ತುಲಾಕಾರದ ಎಷ್ಟೋ ತಗ್ಗುಗಳು ಕಣ್ಣಿಗೆ ಬಿದ್ದವು. ಇದರಿಂದ ನಾವು ಓದಿದ್ದರ ಪ್ರತ್ಯಕ್ಷತೆಯಾದಂತೆ ಆಯಿತು.

ತರುವಾಯ ಗುಡಿಯಲ್ಲಿ ಭೋಜನ ತೀರಿಸಿಕೊಂಡು ನೆಮ್ಮ ಯಾವತ್ತು ಗಂಟುಗಳನ್ನು ಸ್ಟೀಶನಕ್ಕೆ ಕಳುಹಿಸಿ ಎಲ್ಲರೂ ಕೂಡಿಕೊಂಡು ಅಲ್ಲೇ ಸಮೀಪವಿರುವ ಫಟಪ್ರಭಾ ನದಿಯ ಸೇತುವೆಯನ್ನು ನೋಡಬೇಕೆಂದು ಹೋದೆವು. ಈ ಸೇತುವಿಗೆ ೪೧ ಕಮಾನುಗಳಿವೆ. ಇದರ ಉದ್ದಳತೆ ಸುಮಾರು ೩ ಮೈಲು ಕಂಬಗಳು ಕಲ್ಲಿನವು. ಉಳಿದ ಯಾವತ್ತು ಕಟ್ಟಣೆಯು ಕಬ್ಬಿಣದ್ದಿರುತ್ತದೆ. ಈ ಸೇತುವೆಗೆ ಸಮೀಪವಾಗಿ ಬಾಮು ದೊಡ್ಡ ಗೋಡೆಯನ್ನು ಕಟ್ಟಿ ಹಳ್ಳದ ಪ್ರವಾಹದ ಕೆಲವು ಭಾಗವನ್ನು ಕಾಲುವೆಯ ರೂಪದಿಂದ ಮುಂದೆ ಕಳುಹಿಸಿರುತ್ತಾರೆ.

ನಮ್ಮ ಹಿಂದುಸ್ತಾನವು ಬಂದು ದೇಶವಾದಾಗ್ಯೂ ಅನೇಕ ಹವೆಯು ಬೂದೇ ಸಮನಾಗಿಲ್ಲ. ಹವೆಯ ಸಂಬಂಧದಿಂದ ವಿ ಚಾರಿಸಲಾಗಿ ಇದು ಬಾಮು ದೊಡ್ಡ ಖಂಡವೆಂದರೂ ಸಲ್ಲುವ ದು. ಈ ದೇಶದ ಕೆಲವು ಭಾಗಗಳ ಮೇಲೆ ಮಳೆಯು ತ ಪ್ಪದೆ ವಿಪುಲವಾಗಿ ಬೀಳುತ್ತದೆ. ಕೆಲವು ಶೀಮೆಗಳಲ್ಲಿ ಬೀ ಳುವದೇ ಇಲ್ಲ, ಕೆಲವು ಶೀಮೆಗಳಲ್ಲಿ ಅನಿಶ್ಚಿತವಾದದ್ದು, ಇ ವುಗಳಲ್ಲಿ ಅನಿಶ್ಚಿತವಾದ ಮಳೆಯು ಪ್ರದೇಶವೇ ಹೆಚ್ಚು. ಈ ಪ್ರಕಾರ ಮಳೆಯು ಕೊರತೆಯಿಂದ ಆಗಾಗ್ಗೆ ಬರಗಾಲವು ಬಂ ದಿಲ್ಲ ಬಾಮು ಕಡಿಗೆ ಬಿದ್ದೀಬೀಳುತ್ತದೆ. ಈ ಕೊರತೆಯ ನ್ನು ದೂರಪಡಿಸುವದಕ್ಕಾಗಿ ಬಹು ದಿವಸಗಳಿಂದ ಕಾಲುವೆ ಗಳನ್ನು ಕಟ್ಟುವ ಕೆಲಸವು ನಡೆದಿರುವದು. ಗಂಗಾ, ಕಾ ವೇರಿ ಹೊಳೆಗಳ ಕಾಲುವೆಗಳನ್ನು ದೇಶೀ ಅರಸರು ಕಟ್ಟಿಸಿ ದ್ದು ಪ್ರಸಿದ್ಧವೇ ಉಂಟು. ನಮ್ಮ ಪ್ರಾಂತದಲ್ಲಿ ತುಂಗಭದ್ರಾ ನದಿಗೆ ವಿಜಯನಗರವ ಅರಸರು ಕಾಲುವೆ ಕಟ್ಟಿಸಿರುವರಂ ದು ನಾವು ಕೇಳುತ್ತೇವೆ. ಹಂಪಿಯಲ್ಲಿ ಈ ಕಾಲುವೆಯನ್ನು ಈಗ್ಗಾಲ್ಯವರೂ ಕಾಣಬಹುದೆಂದು ಹೇಳುತ್ತಾರೆ. ಇಂಗ್ಲಿಷ ಸರಕಾರದವರು ಈ ಕಾಲುವೆ ಕಟ್ಟುವ ರೀತಿಯನ್ನು ನೀ ರು ಹಂಚಿಕೊಡುವ ಕ್ರಮವನ್ನು ಬಲಪಡಿಸಿದ್ದಲ್ಲದೆ ಹೊಗೆ ಬಂಡಿಯೆಂಬ ಮೇಲಾವ ಸಾಧನವನ್ನು ಯೋಚಿಸಿ ಬರಗಾಲ ವ ಭೀತಿಯನ್ನು ತಕ್ಕಮಟ್ಟಿಗೆ ಹೋಗಲಾಡಿಸಿರುತ್ತಾರೆ. ಗೋಕಾಂವಿಯ ಗೋಜಿಯ ಲಕ್ಷಕ್ಕೆ ನಿಂತಿರುವ ನೀರಿನ ಸಂ ಚಯವು ಬಂದು ಸಣ್ಣ ಸರೋವರವಂತೆ ಕಂಗೊಳಿಸುತ್ತದೆ. ಇವರ ಕೆಳಗೆ ೩೦ ಮೈಲುಗಳವರೆಗೆ ಭೂಮಿಯು ಸಾಗುವ ಳಿಯಾಗಬಹುದೆಂದು ಹೇಳುತ್ತಾರೆ.

ಇವನ್ನೆಲ್ಲ ನೋಡಿಕೊಂಡು, ಗೋಕಾಂವಿಯ ಸ್ಟೇಶನ ಕ್ಕೆ ಹೋದೆವು. ಅಷ್ಟರೊಳಗೆ ಹೊಗೆ ಬಂಡಿಯ ವೇಳೆಯು

ವಿ[redacted]ಹೋದವ್ದರಿಂದ ರಾತ್ರಿ ಸ್ಟೇಶನದಲ್ಲಿಯೇ ಮಲಗಿಕೊಂ
ಡೆವು. ಅಲ್ಲಿಯ ಸ್ಟೇಶನ ಮಾಸ್ತರರು ನಮಗೆ ಎಲ್ಲಪ್ರಕಾರದ
ಅನುಕೂಲತೆಗಳನ್ನು ಚನ್ನಾಗಿ ಮಾಡಿಕೊಟ್ಟರು. ಮುಂಜಾ
ನೆ ಎದ್ದು ಸ್ನಾನ, ಫಲಾಹಾರಗಳನ್ನು ತೀರಿಸಿಕೊಂಡು ೪
ಗಂಟೆಗೆ ಹೊಗೆ ಬಂಡಿಯಲ್ಲಿ ಕುಳಿತು ೧೦ ಗಂಟೆಗೆ ನಾವು
ನಿರಜೆಗೆ ಹೋದೆವು. ಈಊರ ಸ್ಟೇಶನಕ್ಕೆ ಸಮೀಪವಾಗಿ
ಅಲ್ಲಿಯ ಸಂಸ್ಥಾನಿಕರಿಂದ ಕಟ್ಟಿಸಲ್ಪಟ್ಟ ಬಂದು ಧರ್ಮಶಾ
ಲೆಯುದೆ. ಇವರ ಹತ್ತರ ಪ್ರವಾಸಿಕರಿಗೆ ಸಾಲುವಷ್ಟು ನೀರಿ
ನ ಪೂರೈಕೆಯುಳ್ಳ ಎರಡು ಬಾವುಗಳಿರುತ್ತವೆ. ಅವುಗಳಲ್ಲಿ
ಒಂದು ಬ್ರಾಹ್ಮಣರದು, ಮತ್ತೊಂದು ಉಳಿದ ಜಾತಿಯವ
ರದು. ಈ ಧರ್ಮಶಾಲೆಯಲ್ಲಿ ಅಡಿಗಿ ಮಾಡಿಕೊಳ್ಳಲಿಕ್ಕೆ ಎರ
ಡು ಕೋಣೆಗಳುಂಟು. ಅವುಗಳಲ್ಲಿ ಬಲಿ, ಬಚ್ಚಲ ಮುಂತಾದ
ಎಲ್ಲಬಗೆಯ ಸಾಧನಗಳುಂಟು. ಈ ಧರ್ಮಶಾಲೆಯ ಕಟ್ಟ
ಡೆ ಕಲ್ಲಿನದು; ನಮ್ಮ ಎಲ್ಲ ಜನರಿಗೆ ಕೂಡ್ರಲಿಕ್ಕೂ ಮಲಗ
ಲಿಕ್ಕೂ ಸಾಕಷ್ಟು ತಾಣ ಉಳ್ಳದ್ದಾಯಿತು. ಇದನ್ನು ಉಡುಗ
ಸಾರಿಸಲಿಕ್ಕೂ, ಕಾಯಲಿಕ್ಕೂ ಒಬ್ಬ ಮನುಷ್ಯನಿದ್ದಾನೆ. ಅ
ವನ ಹತ್ತರ ೧೦—೧೫ ಮಂದಿಯ ಅಡಿಗೆಯ ಪಾತ್ರೆಗಳು
ಪ್ರವಾಸಿಕರ ಉಪಯೋಗಕ್ಕಾಗಿ ಸಂಸ್ಥಾನಿಕರಿಂದ ಇಡಲ್ಪ
ಟ್ಟಿರುತ್ತವೆ.

ನಾವೆಲ್ಲರು ಇಲ್ಲಿ ಬಂದು ಊಟ ಮುಂತಾದವುಗಳನ್ನು
ಮಾಡಿಕೊಂಡು ಸಾಯಂಕಾಲದ ೫ ಗಂಟೆಗೆ ಪಟ್ಟಣವನ್ನು
ನೋಡಲಿಕ್ಕೆ ಹೋದೆವು, ಇಲ್ಲಿ ನೋಡತಕ್ಕ ಸ್ಥಳಗಳು ಎರ
ಡು. ವಿೂರಾ ಸಾ॥ ರ ಮಶೀದಿ, ಟೌನಹಾಲ, (ನಗರಮಂದಿರ.)

ವಿೂರಾಸಾಹೇಬರ ಮಶೀದಿಯು ಪೂರ್ವಮುಖವಾಗಿರುತ್ತ
ದೆ. ಮಶೀದಿಯ ಮುಖಾದ್ವಾರವನ್ನು ದಾಟಿದ ಕೂಡಲೆ
ಒಂದು ದೊಡ್ಡ ಚೌಕು ಅದೆ, ಅದರ ಸುತ್ತಲೂ ಕಲ್ಲಿನಿಂದ

ಕಟ್ಟಿದ ಎಷ್ಟೋ ಪೌಳಿಗಳುಂಟು. ಇದರ ಎರಡನೇ ಭಾಗವಾಗಿ ಲದ ಬಳಮುಗ್ಗಲಿಗೆ ಮತ್ತೊಂದು ಚೌಕವಿರುತ್ತದೆ. ಈ ಚೌಕಿನಿಂದ ೩ನೇ ಬಾಗಿಲ ದಾಟಿ ಬಳಭಾಗದ ಸಣ್ಣ ಮಹೀದೆಯಲ್ಲಿ ೩ ಗೋರಿಗಳುಂಟು. ಇವು ಶಮೆನಾ, ಮಿಾರಾ ಎಂಬ ಇಬ್ಬರು ಅಣ್ಣತಮ್ಮಂದಿರವು, ಎಂದು ಅಲ್ಲಿಯ ಮುಸಲ್ಮಾನರು ಹೇಳುತ್ತಾರೆ. ಈ ಮಹೀದಿಗೆ ಬಂದು ದೊಡ್ಡ ಗುಮಟು ಇರುತ್ತದೆ. ಅದು ಸುಮಾರು ೩—೪ ಮೈಲು ದೂರದಿಂದ ಕಾಣಿಸುವಷ್ಟು ಎತ್ತರವಾಗಿದೆ.

ನಗರಮಂದಿರ (ಟೌನಹಾಲ) ಈ ಮನೆಯು ಪಶ್ಚಿಮಾಭಿ ಮುಖವಾಗಿರುತ್ತದೆ. ಬಳಭಾಗದಲ್ಲಿರುವ ಅಂಗಳವು ತರತರದ ಗಿಡಗಳಿಂದ ಭೂಷಿಸಲ್ಪಟ್ಟಿದೆ. ಇಡೀ ಮನೆಯು ಆಪ್ಟ ಕೋನಾಕೃತಿ ಇದ್ದು ಕಟ್ಟಣೆಯೆಲ್ಲಾ ಕಲ್ಲಿನದೇ ಇರುತ್ತದೆ. ಮಧ್ಯದಲ್ಲಿ ಬಂದು ದೊಡ್ಡ ಕೋಣೆಯೂ ಅದರ ಎರಡೂ ಮುಗ್ಗಲಿಗೆ ಎರಡೆರಡು ಸಣ್ಣ ಕೋಣೆಗಳೂ ಇರುತ್ತವೆ. ದೊಡ್ಡ ಕೋಣೆಯು ಕೆಲವು ಕೆಂಪು, ಬಿಳೀ, ಸಂಗಮರವರ ರೀಕಲ್ಲುಗಳಿಂದ ಮಾಡಲ್ಪಟ್ಟಿರುತ್ತದೆ. ಈ ಕೋಣೆಯ ಗೋಡೆಗೆ ಅಲ್ಲಿಯ ಸಂಸ್ಥಾನಿಕರ ಚಿತ್ರಗಳನ್ನು ತೂಗಗಟ್ಟಿರುತ್ತಾರೆ. ಬದಿಗಿರುವ ಕೋಣೆಗಳಲ್ಲಿ ಯಾವತ್ತು ಪಶು ಜಾತಿಯ ಗೊಂಬೆಗಳನ್ನೂ ಎಲ್ಲ ಜಾತಿಯ ಕೃತ್ರಿಮ ಹಣ್ಣು ಹಂಪಲಗಳನ್ನೂ ಇಟ್ಟಿರುತ್ತಾರೆ. ಅವೆಲ್ಲ ಸಜೀವ ಪಶುಗಳಂತೆಯೂ ಗಿಡಗಳಿಂದ ಕೊಯ್ದು ತಂದ ಫಲಗಳಂತೆಯೂ ತೋರುತ್ತಿರುವ ಕಾರಣ ಅವುಗಳನ್ನು ಮಾಡಿದವರ ಕೌಶಲ್ಯವನ್ನು ಬಣ್ಣಿಸಲಳವೆಲ್ಲ ಈ ಮನೆಯ ಬಂದು ಬದಿಯಲ್ಲಿ ಬಂದು ದೀರ್ಘ ವರ್ತುಲಾಕಾರವಾದ ಹೌಮ ಉಂಟು. ಅದರ ಮಧ್ಯದಲ್ಲಿ ಬಾವು ಕಾರಂಜಿಯಿಂದ ನೀರು ಸರ್ವದಾ ಪುಟಿಯುತ್ತಿ

ರುತ್ತದೆ. ಆ ಹೊಂಡದೊಳಗಿನ ನೀರನ್ನೂ ಕಾರಂಜಿಯಿಂ
ದ ಆ ನೀರು ಪುಟಿಯುವದನ್ನೂ ಆ ಹೊಂಡದ ಸುತ್ತಲಿರು
ವ ಸಣ್ಣ ಗಿಡಗಳ ಸಾಲನ್ನೂ ನೋಡಿ ಮನಸ್ಸಿಗೆ ಆಲ್ಹಾದ
ವಾಗುತ್ತದೆ. ಈ ಹೊಂಡದ ಸುತ್ತಲೂ ಕೆಲವು ಅಂತರದ ಮೇ
ಲೆ ಪೌಳಿಗಳಂತೆ ಸಾಲಾಗಿ ಸಣ್ಣ ಸಣ್ಣ ಕೋಣೆಗಳಿರುತ್ತದೆ.
ಪ್ರತಿಯೊಂದು ಕೋಣೆಯ ಮುಂಭಾಗದಲ್ಲಿ ಕಬ್ಬಿಣದ ಗಜ
ಗಳ ಕಟಾಂಜನಗಳನ್ನು ನಿಲ್ಲಿಸಿರುತ್ತಾರೆ. ಈ ಕೋಣೆ
ಗಳಲ್ಲಿ ಮಂಗ, ಎರಳೆ, ನರಿ, ಕಡವಿ, ಶಿಂಗಳೀಕ, ಮುಂ
ತಾದ ಪಶುಗಳನ್ನು ಐದುಬಣ್ಣದ ಗಿಳಿಗಳನ್ನೂ ಐದುಬ
ಣ್ಣದ ಗುಬ್ಬಿಗಳನ್ನೂ ನೋಡಬಹುದು. ಕೋಣೆಯ
ಮುಂದೆ ಯಾರಾದರೂ ನೋಡಲಿಕ್ಕೆ ಬಂದರೆ ಅದರೊಳಗಿನ
ಪ್ರಾಣಿಗಳು ಕಟಾಂಜನದ ಹತ್ತರ ಬಂದು ತಮ್ಮನ್ನೂ ಹೊ
ರಗೆ ತೆಗೆಯುವರೋ ಏನೋ ಎಂಬ ನಂಬಿಗೆಯಿಂದ ನೋ
ಡಬಂದವರ ಮೋರೆಗಳನ್ನು ಮಿಕಿಮಿಕಿ ನೋಡುತ್ತವೆ. ಮು
ತ್ತೊಂದು ಸ್ಥಳದಲ್ಲಿ ಕನ್ನಡಿಯಿಂದ ಮಾಡಿದ್ದೊಂದು ಚೌ
ಕಾವ ಪೆಟ್ಟಿಗೆಯದೆ, ಅದರೊಳಗೆ ಬಂದು ಚಕ್ರವದೆ, ಅದರ
ಮೇಲೆ ಬಂದು ಬಿಳೀ ಇಲಿಯು ಕೂತು ಆ ಚಕ್ರವನ್ನು ತಿ
ರಿಗಿಸುತ್ತದೆ.

ಈ ಎಲ್ಲ ಚಮತ್ಕಾರಗಳನ್ನು ನೋಡಿ, ಆನಂದದಿಂದ
ಲೂ, ಆಶ್ಚರ್ಯದಿಂದಲೂ, ಚಕಿತರಾದೆವು. ಅಲ್ಲಿಂದ ಆ ಸಂಸ್ಥಾ
ನದ ರಾಜವಾಡೆ, ನ್ಯಾಯಾಸ್ಥಾನ, ತಾಲೀಮುಖಾನೆ, ಶ್ರೀಗ
ಣಪತಿ ಮುಂತಾದ ಕೆಲವು ಪ್ರಸಿದ್ಧ ದೇವಾಲಯಗಳು, ಇವು
ಗಳನ್ನೆಲ್ಲ ನೋಡಿಕೊಂಡು ನಾವು ಇಳಿದ ಧರ್ಮಶಾಲೆಗೆ
ಬಂದೆವು. ಅದೇ ದಿವಸ ರಾತ್ರಿ ೧೦ ಬಡಿಯುವ ಸಮಯಕ್ಕೆ
ಕೊಲ್ಹಾಪೂರಕ್ಕೆ ಹೊರಟೆವು. ಮಿರಜಿಯಿಂದ ಕೊಲ್ಹಾಪ್ರಾ

ರಕ್ಕೆ ಹೊಗೆಬಂಡಿ ಇಲ್ಲದ ಮೂಲಕ ಎತ್ತಿನ ಬಂಡಿಗಳನ್ನು
ಮಾಡಿದ್ದೆವು. ಕುದುರೆಯು ಗಾಡಿಯಲ್ಲಿ ಕೂಡ್ಸಬೇಕೆಂಬ ಉ
ತ್ಸಾಹವುಳ್ಳ ಕೆಲವರು ಮಿತ್ರರು ಪ್ರತಿಯೊಂದು ಗಾಡಿ
ಶಿಷ್ಟರು ॥ ಬಾಡಿಗೆ ಕೊಟ್ಟು ಕುಳಿತು ಹೋದರು. ಚಕ್ಕ
ಗಳ ಬಾಡಿಗೆ ೦೫ ರುಪಾಯಿ. ಕುದುರೆಯ ಗಾಡಿಯು ೧
೫೧ ಬಡಿಯುವಾಗ್ಗೆ ಮಿರಜಿಯನ್ನು ಬಿಟ್ಟರೆ, ಬೆಳಗಿನ
೪ ಗಂಟೆಗೆ ಕೊಲ್ಹಾಪುರಕ್ಕೆ ಮುಟ್ಟುವದು. ಚಕ್ಕಡಿಗೆ ೧೨
ಕ್ಕಿಂತಲೂ ೪—೫ ತಾಸು ಹೆಚ್ಚು ವೇಳೆ ಬೇಕಾಗುವದು
ಎಲ್ಲರೂ ತಾರೀಖು ೦೭ ದಸಂಬರ ಸೆ೯೧೯೦ನೇ ದಿವಸ
ಸಾಯಂಕಾಲದ ೬ ಗಂಟೆಗೆ ಕರವೀರ ಪುರವಾಸಿಗಳಾದೆವು.

DHARWAR TRAINING COLLEGE CERTIFICATE EXAMINATION. 1890.

ಧಾರವಾಡ ಟ್ರೇನಿಂಗಕಾಲೇಜದ ಸರ್ಟಿಫಿಕೇಟು ಪರೀಕ್ಷೆಯು. ೧೮೯೦

ಶಿಕ್ಷಣ ಪದ್ಧತಿ.
೦ನೇ ವರ್ಷ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.

೧. "ಭಾವವೇ ಬಲವು" ಎಂಬುದನ್ನು ಸ್ಪಷ್ಟೀಕರಿಸಿರಿ.

೨. ತಮ್ಮ ಕೆಲಸದಲ್ಲಿ ಯಶ ಪಡೆಯಬೇಕಾದರೆ ಮಾಸ್ತರರು ಮುಖ್ಯವಾಗಿ ಯಾವಸಂಗತಿಗಳಿಗೆ ಲಕ್ಷ ಕೊಡಬೇಕು? ಯಾಕೆ?

೩. ಅಧ್ಯಾಪನ ಕಲೆಯ ಮೂರು ಸಂಗತಿಗಳು ಯಾವವು? ನಿಮ್ಮ ಉತ್ತರವನ್ನು ಕಾರಣಗಳೊಂದಿಗೆ ವಿವರಿಸಿರಿ.

೪, ಶಿಕ್ಷಣಕ್ಕೂ ಪರೀಕ್ಷೆಗೂ ಇರುವ ಭೇದಗಳನ್ನು ಉದಾಹರಣೆಯಿಂದ ಸ್ಪಷ್ಟೀಕರಿಸಿರಿ.

೫, ಮಾಚನಪುರ ನಾಮದಾಗ ವರ್ಗದೊಳಗಿನ ಹುಡುಗರೆಲ್ಲ

ಕೊಡುವಂತೆ ಮಾಡಬೇಕಾದರೆ ಕೆಲವು ಉಪಾಯಗಳುಂಟು-
ಆ ಉಪಾಯಗಳನ್ನು ಹೇಳಿರಿ.

. ಪದ್ಯಗಳನ್ನು ಪಾಠ ಮಾಡಲಿಕ್ಕೆ ಹೇಳುವದಕ್ಕಿಂತ ಮೊದ ೧೦
ನು ಮಾಡಬೇಕು? ಪದ್ಯಗಳನ್ನು ಪಾಠ ಮಾಡಿಸುವದರಿಂದ
ವ ಪ್ರಯೋಜನವೇನು?

. ವ್ಯಾಕರಣ ಕಲಿಸುವಾಗ ಯಾವ ಮೂರು ವಾಗರ್ಥಭೇ ೧೦
ನ್ನು ಮೊದಲು ಕಲಿಸುವಿರಿ? ಅವುಗಳನ್ನು ಹ್ಯಾಗೆ ಕಲಿ
ರೆಂಬದನ್ನು ಉದಾಹರಣೆಯಿಂದ ವಿವರಿಸಿರಿ.

. ವ್ಯಾಕರಣದ ಪಾಠ ನಡಿದಾಗ ಹುಡುಗರು ಬಹುತರವಾ ೪
ನುಮಾನದಿಂದ ಉತ್ತರಗಳನ್ನು ಕೊಡುತ್ತಾರೆ? ಈ ದುರ್ಗು
ಣವನ್ನು ತಪ್ಪಿಸಲಿಕ್ಕೆ ನೀವೇನು ಮಾಡುವಿರಿ?

೯. ವೇಳಾಪತ್ರಕವನ್ನು ರಚಿಸುವಾಗ ಯಾವ ಯಾವ ಸಂಗ ೧೦
ತಿಗಳಿಗೆ ಲಕ್ಷ ಕೊಡಲಿಕ್ಕೆ ಬೇಕು.

೧೦. (ಅ) ಸಾಲೀಮನೆ ಮತ್ತು ಲಾಯಬ್ರರಿ. ೧೦

(ಬ) ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ತಕ್ಕೊಳ್ಳುವದೂ ತೆಗೆಯುವದೂ; ವಿದ್ಯಾರ್ಥಿಗಳು ಬಿಟ್ಟು ಹೋಗು ವದೂ.

(ಕ) ಸರಕಾರಿಪತ್ರವ್ಯವಹಾರ ರಿಪ್ರೋಟ್ಸ್ ಮುಂತಾದ್ದು.

ಇವುಗಳ ವಿಷಯವಾಗಿ ಶಾಲಾ ಮಾಸ್ತರರ ಕೋಡಿನಲ್ಲಿ ವಿಧಿಸಿದ ನಿಯಮಗಳನ್ನು ಬರೀರಿ.

ಶಿಕ್ಷಣ ಪದ್ಧತಿ.

ಎನೇ ವರ್ಷ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. "ಗೊತ್ತು ಹಿಡಿ, ಹಿಂಬಾಲಿಸು, ಮುಂದಕ್ಕೆ ಬಯ್ಯು" ೧೦
ತತ್ವವನ್ನು ಪೂರ್ಣವಾಗಿ ವಿವರಿಸಿರಿ.

ಮನೆಯಲ್ಲಿ ಮುದಲಿಕ್ಕೆ ಕೊಡುವ ಪಾಠಗಳ ಸಂಬಂಧ ೧೦
ಮಾಸ್ತರರು ಯಾವ ತತ್ವಗಳನ್ನು ಅನುಸರಿಸತಕ್ಕದ್ದು.

೩. ಉತ್ತರಗಳನ್ನು ಅಸ್ಪಷ್ಟವಾಗಿ ತಿಳಿಯದ ಹಾಗೆ ನುಡಿಯಗೊಡುವದರಿಂದ ಆಗುವ ಪರಿಣಾಮಗಳನ್ನು ವಿವರಿಸಿರಿ.

೪. ಪೃಥಕ್ಕರಣ ಪದ್ಧತಿಗೂ ಏಕೀಕರಣ ಪದ್ಧತಿಗೂ ಭೇದವೇನು? ವ್ಯಾಕರಣದ ಉದಾಹರಣೆಗಳನ್ನು ತಕ್ಕೊಂಡು ನಿಮ್ಮ ಉತ್ತರವನ್ನು ಸ್ಪಷ್ಟೀಕರಿಸಿರಿ.

೫. ವಜಾಬಾಕಿ ಕಲಿಯುವಾಗ ವಿದ್ಯಾರ್ಥಿಗಳಿಗೆ ತಟ್ಟುವ ನಾಲ್ಕು ತೊಂದರೆಗಳನ್ನು ಸ್ಪಷ್ಟೀಕರಿಸುವಂಥಾದೊಂದು ಉದಾಹರಣೆಯನ್ನು ರಚಿಸಿ ಅದನ್ನು ವಿವರಿಸಿರಿ.

೬. ಸ್ವಾವಲಂಬನ ಮತ್ತು ದೀರ್ಘೋದ್ಯೋಗ ಇವೆರಡು ಗುಣಗಳನ್ನು ಬಲ ಪಡಿಸುವದರಲ್ಲಿ ಸಾಲಿಯ ಕೆಲಸದಿಂದ ಹ್ಯಾಗೆ ಸಹಾಯವಾಗುವದು?

೭. " ಯಾವಾಗಿನ ಕೆಲಸ ಆವಾಗ್ಗೇ ಮಾಡಬೇಕು, ಮತ್ತು ಎಲ್ಲಿಯ ಪದಾರ್ಥ ಅಲ್ಲಿಯೇ ಇಡಬೇಕು ಅಂದರೆ ಚಂದ " ಈ ವಾಕ್ಯವನ್ನು ಸ್ಪಷ್ಟೀಕರಿಸಿರಿ. ಶಿಕ್ಷಣದಲ್ಲಿ ಇದರ ಗೌರವವೆಷ್ಟಿರುತ್ತದೆಂಬದನ್ನು ವಿವರಿಸಿರಿ. ಮುಖ್ಯವಾಗಿ ಮಾಚಕನ ಪಾಠದಲ್ಲಿ ಇದರ ಉಪಯೋಗವೇನು?

೮. ಶುದ್ಧ ಬರಹವನ್ನು ಸ್ಲೇಟಿನ ಮೇಲೆಯೇ ಬರಿಸುವದರಿಂದ ವಿದ್ಯಾರ್ಥಿಗಳಿಗೆ ಮೂರು ದುರ್ಗುಣಗಳು ಹತ್ತುವವು. ಅವು ಯಾವವು? ನಿಮ್ಮ ಉತ್ತರವನ್ನು ಕಾರಣ ಸಹಿತವಾಗಿ ಬರೀರಿ.

೯. (ಅ) ಶಾಲೆಯ ವೇಳೆ ಮತ್ತು ಅದರ ವ್ಯವಸ್ಥೆ.
(ಬ) ಚಾರ್ಜ ಕೊಡುವದೂ ತಕ್ಕೊಳ್ಳುವದೂ.
(ಕ) ವೇತನಪತ್ರಕವನ್ನು ರಚಿಸುವದು.

ಇವುಗಳನ್ನು ಕುರಿತು ಕೋಡಿನಲ್ಲಿಕೊಟ್ಟ ನಿಯಮಗಳನ್ನು ಬರೀರಿ.

೧೦. ನಿಮ್ಮ ಶಾಲೆಯು ೬೦ ಹುಡುಗರಿಗೆ ಸಾಕಾಗುವಷ್ಟು ಅದೆ, ಅದರ ಸ್ಪೇಶಲ್ ರಿಪೇರಿಯು ಪಂಚರ ಸಹಾಯದಿಂದ ನೀವೇ ಮಾಡಿಸತಕ್ಕದ್ದೆಂದು ತಿಳಿದು ಬಂದು ಅಂದಾಜ ಪತ್ರಕವನ್ನು ತಯಾರಿಸಿರಿ.